ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕ್ರಿಕೆಟ್ ಕಾಶಿಯಲ್ಲಿ 2ನೇ ಶತಕ ದಿಗ್ಗಜರ ಸಾಲಿಗೆ ರಾಹುಲ್

ಕನ್ನಡಿಗ ಕೆ.ಎಲ್.ರಾಹುಲ್ ಅವರು ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಕ್ರಿಕೆಟ್ ಸರಣಿಯ ಮೂರನೇ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಶತಕದ ಸಂಭ್ರಮ ಆಚರಿಸಿದ್ದಾರೆ. ಅದರೊಂದಿಗೆ ಅವರು, ಕ್ರಿಕೆಟ್ ಕಾಶಿ ಲಾರ್ಡ್ಸ್‌ನಲ್ಲಿ ಎರಡು ಬಾರಿ ಮೂರಂಕಿ ಮೊತ್ತಗಳಿಸಿದ ಭಾರತದ ಪ್ರಥಮ ಆರಂಭಿಕ ಬ್ಯಾಟರ್ ಎಂಬ ಶ್ರೇಯಕ್ಕೆ ಭಾಜನರಾಗಿದ್ದಾರೆ. 177 ಎಸೆತಗಳಲ್ಲಿ 100 ರನ್ ಗಳಿಸಿದ ರಾಹುಲ್, ಇಂಗ್ಲೆಂಡ್‌ನಲ್ಲಿ ಗಳಿಸಿದ ನಾಲ್ಕನೇ ಶತಕವಿದು. ಒಟ್ಟಾರೆ ಅವರಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ 10ನೇಯದ್ದು.

ಸೊಂಪಾದ ಪುಟಗಳು

ಕೊನೆಗೂ ಗಡ್ಡ ಕೆರೆದ ನಂತರವೇ ಆತ ನೇಣಿಗೆ ಕೊರಳು ಕೊಟ್ಟ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್

6

ಮೋದಿಯನ್ನೂ ಮರೆಸುವವ ಸಿಗುವುದಾದರೆ ಸರಿ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ

7

ದಾರಿದೀಪೋಕ್ತಿ

ಬೇರೆಯವರು ನಮ್ಮ ಬಗ್ಗೆ ಏನು ಯೋಚಿಸುತ್ತಾರೆ ಎಂದು ಅನೇಕರು ಸದಾ ಯೋಚಿಸುತ್ತಿರುತ್ತಾರೆ. ಬೇರೆಯವರು ನಮ್ಮ ಬಗ್ಗೆ ಏನೇ ಯೋಚಿಸಿದರೂ ಅದರಿಂದ ನಮಗೆ ಏನೂ ಆಗುವುದಿಲ್ಲ. ನಾವು ನಮ್ಮ ಬಗ್ಗೆ ಯೋಚಿಸಿದಾಗ ಮಾತ್ರ ಅದರಿಂದ ನಮಗೆ ಪ್ರಯೋಜನ ಆಗಬಹುದು.

ವಕ್ರತುಂಡೋಕ್ತಿ

ಕೆಲವರನ್ನು ಬಣ್ಣಿಸಿದರೆ ಬೇಸರಿಸಿಕೊಳ್ಳುತ್ತಾರೆ. ಕಾರಣ ತಮ್ಮ ಕುರಿತು ಇದ್ದ ಹಾಗೆ ಹೇಳುವುದನ್ನು ಇಷ್ಟಪಡುವುದಿಲ್ಲ.

500% ಸುಂಕ: ಟ್ರಂಪ್ ಧಮ್ಕಿ

ವಾಷಿಂಗ್ಟನ್: ಇತ್ತೀಚೆಗೆ 14 ದೇಶಗಳ ಮೇಲೆ ಹೊಸ ಸುಂಕ ವಿಧಿಸಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇದೀಗ, ರಷ್ಯಾದ ಇಂಧನ ಆಮದುದಾರರ ಮೇಲಿನ 500% ತೆರಿಗೆ ಸೇರಿದಂತೆ ಹೊಸ ಸುಂಕಗಳು 2025ರ ಆಗಸ್ಟ್ 1ರಿಂದ ಜಾರಿಗೆ ಬರಲಿವೆ ಎಂದು ಹೇಳಿದ್ದಾರೆ. ರಷ್ಯಾದ ಇಂಧನ ಆದಾಯ ವನ್ನು ಕುಂಠಿತಗೊಳಿಸು ವುದು ಮತ್ತು ಉಕ್ರೇನ್‌ನಲ್ಲಿನ ಸಂಘರ್ಷವನ್ನು ಕೊನೆಗೊಳಿ ಸಲು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮೇಲೆ ಒತ್ತಡ ಹೇರುವ ಉದ್ದೇಶದಿಂದಾಗಿ ಟ್ರಂಪ್ ಈ ನಿರ್ಣಯಕ್ಕೆ ಮುಂದಾಗಿದ್ದಾರೆ. ಒಂದು ವೇಳೆ ಈ ನಿರ್ಣಯ ಅಂಗೀಕಾರವಾದರೆ, ಜಾಗತಿಕ ನಿರ್ಬಂಧಗಳ ಸಮಯದಲ್ಲಿ ರಷ್ಯಾದ ತೈಲ ಮತ್ತು ಅನಿಲದ ಆಮದನ್ನು ಹೆಚ್ಚಿಸಿರುವ ಭಾರತ ಮತ್ತು ಚೀನಾದಂತಹ ದೇಶಗಳು, ಅಮೆರಿಕದ ಮಾರುಕಟ್ಟೆಗೆ ಪ್ರವೇಶಿ ಸುವ ತಮ್ಮ ಉತ್ಪನ್ನಗಳ ಮೇಲೆ 500% ವರೆ ಗಿನ ಅಭೂತ ಪೂರ್ವ ಸುಂಕವನ್ನು ಎದುರಿ ಸಬೇಕಾಗುತ್ತದೆ. ಈ ಕ್ರಮವು ವ್ಯಾಪಾರ ಸಂಬಂಧಗಳಲ್ಲಿ, ವಿಶೇಷವಾಗಿ ಪ್ರಮುಖ ಕಾರ್ಯತಂತ್ರದ ಪಾಲುದಾರ ಭಾರತದೊಂದಿಗೆ ಉದ್ವಿಗ್ನತೆಯನ್ನು ಹೆಚ್ಚಿಸುವ ಸಾಧ್ಯತೆಯಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಆಪರೇಷನ್ ಮಾಡಿದಾಗ ಕೈದಿ ಹೊಟ್ಟೆಯಲ್ಲಿ ಸಿಕ್ತು ಮೊಬೈಲ್ ಸುದ್ದಿ



ಸಿಎಂ, ಡಿಸಿಎಂ ಆಪ್ತರು ಮೌನಕ್ಕೆ ಶರಣು, ಡಿಕೆಶಿ ದೇಗುಲ ಯಾತ್ರೆ
ಸಾರಥ್ಯ ಬದಲಾವಣೆ: ಉಭಯ ಬಣಗಳಿಂದ ವರಿಷ್ಠರಿಗೆ ದೂರು

ಸೊಲ್ಲೆತ್ತದಿರಿ: ಹೈಕಮಾಂಡ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಎದ್ದಿದ್ದ 'ಬಿರುಗಾಳಿ' ಏಕಾಏಕಿ 'ಬೂದಿ ಮುಚ್ಚಿದ ಕೆಂಡವಾಗಲು' ಹೈಕಮಾಂಡ್ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ನೀಡಿರುವ ಸ್ಪಷ್ಟ ಎಚ್ಚರಿಕೆಯೇ ಕಾರಣ ಎನ್ನುವುದು ಸ್ಪಷ್ಟ ವಾಗಿದೆ.

- ಬಿಹಾರ ವಿಧಾನಸಭಾ ಚುನಾವಣೆ ಸಮಯದಲ್ಲಿ ವಿವಾದ ಬೇಡ
- ಹೈಕಮಾಂಡ್ ಸೂಚನೆಯ ಬೆನ್ನಲ್ಲೇ ಮೌನಕ್ಕೆ ಶರಣಾದ ಡಿಕೆ

ಹೌದು, ದೆಹಲಿ ಪ್ರವಾಸದ ವೇಳೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ 'ಯಾವುದೇ ಒಪ್ಪಂದ ವಿಲ್ಲ; ಡಿಕೆಶಿಗೆ ಶಾಸಕರ ಬೆಂಬ ಲವಿಲ್ಲ' ಎನ್ನುವ ಹೇಳಿಕೆಯಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ಬಿರುಸಿನ ರಾಜಕೀಯ ಬೆಳವಣಿಗೆ ನಡೆಯುವ ಸಾಧ್ಯತೆಯಿದೆ ಎನ್ನಲಾಗಿತ್ತು. ಆದರೆ ಸಿಎಂ ಹೇಳಿಕೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಥವಾ ಅವರ ಬಣದವರಿಂದ ವಿರೋಧ ವ್ಯಕ್ತವಾ ಗದಿರುವುದು ಹಲವರ ಅಚ್ಚರಿಗೆ ಕಾರಣವಾಗಿದೆ.

ಸಿಎಂ ಬದಲಾವಣೆ ಕುರಿತು ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಸುರ್ಜೇವಾಲ ಅವರು ಯಾರೊಂದಿಗೂ ಚರ್ಚಿಸಿಲ್ಲ. ಸಿಎಂ ಬದಲಾಯಿಸುವ ಅಧಿಕಾರವಿರುವ ನಾಯಕರು ಸುಮ್ಮನಿದ್ದಾರೆ. ಹೀಗಾಗಿ ಆ ಕುರಿತು ಚರ್ಚಿಸುವುದು ಅಪ್ರಸ್ತುತ. ಕೆಪಿಸಿಸಿ ಅಧ್ಯಕರ ಬದಲಾವಣೆ ಕುರಿತು ಸಹ ಯಾವ ಚರ್ಚೆಗಳು ನಡೆದಿಲ್ಲ. ಎಲ್ಲವೂ ಹೈಕಮಾಂಡ್ ತೀರ್ಮಾನವಾಗಿದೆ.

- ಪ್ರಿಯಾಂಕ್ ಖರ್ಗೆ ಸಚಿವ

ಸಿದ್ದರಾಮಯ್ಯ ಅವರು 2 ವರ್ಷಗಳಿಂದ ಮುಖ್ಯಮಂತ್ರಿ ಹುದ್ದೆಯನ್ನು ವಹಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಶಿವಕುಮಾರ್ ಅವರದ್ದು ಬಲಾಬಲ ಪ್ರದರ್ಶನ ಮಾಡುವ ವ್ಯಕ್ತಿತ್ವವಿಲ್ಲ. ಶಿವಕುಮಾರ್ ಕಾಂಗ್ರೆಸ್ ಪಕ್ಷದ ಪ್ರಾಮಾಣಿಕ ಕಾರ್ಯಕರ್ತ. ಕಾಂಗ್ರೆಸ್ ವರಿಷ್ಠರಿಗೆ ಗೌರವ ನೀಡುವ ವ್ಯಕ್ತಿತ್ವ ಹೊಂದಿರುವವರು. ಅವರು ಬೇರೆಯವರಿಗೆ ಮಾರ್ಗದರ್ಶಕರಾಗಿ ಕೆಲಸ ಮಾಡುತ್ತಿದ್ದಾರೆ.

-ಡಿ.ಕೆ.ಸುರೇಶ್ ಬಮೂಲ್ ಅಧ್ಯಕ್ಷ

ಸಿಎಂ ಸ್ಥಾನದ ಮೇಲೆ ಕಣ್ಣಿಟ್ಟಿದ್ದರೂ ಡಿ.ಕೆ.ಶಿವಕುಮಾರ್ ಮೌನವಾಗಿರಲು ಕಾರಣ ಹೈಕಮಾಂಡ್‌ನ ಆ ಒಂದು ಸಂದೇಶವಂತೆ. ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಹಿಡಿದಿರುವ ಕರ್ನಾಟಕದಲ್ಲಿ ಅನವಶ್ಯಕ ಗೊಂದಲ ಗಳಿಂದ ಸರಕಾರ ಹಾಗೂ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗುತ್ತಿದೆ. ಕರ್ನಾಟಕದ ಈ ಗೊಂದಲ, ಬಿಹಾರ ವಿಧಾನಸಭಾ ಚುನಾವಣೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆಯಿದೆ. ಆದ್ದರಿಂದ ಬಿಹಾರ ಚುನಾವಣೆಯವರೆಗೆ 'ಡೋಂಟ್ ರಿಯಾಕ್ಟ್' ಎಂದು ಡಿ.ಕೆ.ಶಿವಕು ಮಾರ್ ಅವರಿಗೆ ಪಕ್ಷದ ವರಿಷ್ಠರು ಸ್ಪಷ್ಟ ಸಂದೇಶ ರವಾನಿಸಿದ್ದಾರೆ. ಆದ್ದರಿಂದ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ ಎನ್ನುವ ಮಾತುಗಳು ಕೇಳಿಬಂದಿವೆ.

ಡಿಸಿಎಂ ದಿಢೀರ್ ದೆಹಲಿಗೆ

ಪವರ್ ಶೇರಿಂಗ್ ಯಾವುದೇ ಪ್ರತಿಕ್ರಿಯೆ ನೀಡಬೇಡಿ ಎಂದು ಹೈಕಮಾಂಡ್ ಸೂಚನೆ ಬೆನ್ನಲ್ಲೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದಿಢೀರ್ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ. ಶಿರಡಿ ಸಾಯಿಬಾಬಾ ದರ್ಶನ ಪಡೆದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಪುಣೆಗೆ ತೆರಳಿ ಅಲ್ಲಿಂದ ವಿಮಾನ ಮಾರ್ಗವಾಗಿ ದೆಹಲಿಗೆ ತೆರಳಿದ್ದಾರೆ.

ಕರ್ನಾಟಕದಲ್ಲಿ ಕಳೆದ ಎರಡು ವರ್ಷಗಳಿಂದ ಮುಖ್ಯಮಂತ್ರಿ ಆಪ್ತರು ಹೇಳಿಕೆ ನೀಡುತ್ತಾ ರೆಂದು, ಉಪಮುಖ್ಯಮಂತ್ರಿ ಆಪ್ತರು ಪ್ರತಿಕ್ರಿ ಯಿಸು ತ್ತಿದ್ದಾರೆ. ಈ ರೀತಿ ಕ್ರಿಯೆಗೆ-ಪ್ರತಿಕ್ರಿಯೆ ನೀಡಲು ಶುರು ಮಾಡಿದರೆ ಪಕ್ಷದ ವರ್ಚಸ್ಸಿಗೆ ತೀವ್ರ ಧಕ್ಕೆಯಾಗುತ್ತದೆ. ಆದ್ದರಿಂದ ಮೊದಲು ನೀವು ಮೌನವಾಗಿ ಬಳಿಕ ಸಿದ್ದರಾಮಯ್ಯ ಆಪ್ತರನ್ನು ಸುಮ್ಮನಾಗಿಸುವ ಜವಾಬ್ದಾರಿ ಹೈಕಮಾ ಂಡ್‌ನದ್ದು ಎನ್ನುವ ಸಂದೇಶ ನೀಡಿದ್ದಾರೆ. → 4

ಪ್ರಾಥಮಿಕ ತನಿಖಾ ವರದಿ ಬಿಡುಗಡೆಗೊಳಿಸಿದ ಎಎಐಬಿ
ಇಂಧನ ಪೂರೈಕೆ ಸ್ಥಗಿತದಿಂದ ವಿಮಾನ ಅಪಘಾತ: ವರದಿ

ದೆಹಲಿ: ಅಹಮದಾಬಾದ್ ವಿಮಾನ ದುರಂತಕ್ಕೆ ಸಂಬಂಧಪಟ್ಟಂತೆ ವಿಮಾನ ಅಪಘಾತ ತನಿಖಾ ಸಂಸ್ಥೆ (ಎಎಐಬಿ) ಪ್ರಾಥಮಿಕ ತನಿಖಾ ವರದಿಯನ್ನು ಶುಕ್ರವಾರ ತಡರಾತ್ರಿ ಬಿಡುಗಡೆ ಮಾಡಿದೆ. 15 ಪುಟಗಳ ಈ ವರದಿಯಲ್ಲಿ ಹಲವು ಅಂಶಗಳನ್ನು ಉಲ್ಲೇಖಿಸಿದ್ದು, ವಿಮಾನದ ಎಂಜಿನ್‌ಗಳಿಗೆ ಇಂಧನ ಪೂರೈಕೆಯಾಗದೆ ಸ್ಥಗಿತಗೊಂಡಿರುವುದೇ ಪತನಕ್ಕೆ ಪ್ರಮುಖ ಕಾರಣವೆಂದು ವರದಿಯಿಂದ ತಿಳಿದುಬಂದಿದೆ.

ವಿಮಾನ ಟೇಕ್ ಆಫ್ ಆಗುವ ಸಮಯದಲ್ಲಿ ಸಹ ಪೈಲಟ್ ವಿಮಾನ ಚಲಾಯಿಸುತ್ತಿದ್ದು, ಕ್ಯಾಪ್ಟನ್ ಮೇಲ್ವಿಚಾರಣೆ ಮಾಡುತ್ತಿದ್ದರು. ಟೇಕಾಫ್ ಆದ ಕೆಲವೇ ಕ್ಷಣಗಳಿಗೆ ವಿಮಾನದ ಎರಡು ಎಂಜಿನ್‌ಗಳಿಗೆ ಇಂಧನ ಪೂರೈಕೆಯಾಗುವುದು ನಿಂತಿದೆ. ಪತನವಾಗುವ ಕೆಲವೇ ಸೆಕೆಂಡುಗಳ ಮೊದಲು 'ಮೇ ಡೇ' ಕೂಗಿದ್ದಾರೆ. ಈ ವೇಳೆ ಪೈಲಟ್‌ಗಳ ನಡುವಿನ ಸಂಭಾಷಣೆ ರೆಕಾರ್ಡ್ ಆಗಿದ್ದು, ಒಬ್ಬ ಪೈಲಟ್ ಇನ್ನೊಬ್ಬ ಪೈಲಟ್‌ಗೆ 'ಏಕೆ ಕಟ್ ಆಫ್ ಮಾಡಿದ್ದೀರಿ' ಎಂದು ಕೇಳಿದ್ದಾರೆ. ಆಗ ಇನ್ನೊಬ್ಬ ಪೈಲಟ್, 'ನಾನು ಹಾಗೆ ಮಾಡಿಲ್ಲ' ಎಂದು ಉತ್ತರಿಸಿದ್ದಾರೆ.

ಜೂನ್ 12ರಂದು ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಏರ್ ಇಂಡಿಯಾ-171 ವಿಮಾನವು ಅಹಮದಾಬಾದ್‌ನ ಮೇಘನಿನಗರದ ವೈದ್ಯಕೀಯ ಕಾಲೇಜಿನ ಸಂಕೀರ್ಣದ ಮೇಲೆ ಅಪ್ಪಳಿಸಿತ್ತು. ಈ ದುರಂತದಲ್ಲಿ ಏರ್ ಇಂಡಿಯಾ ವಿಮಾನ ಸಿಬ್ಬಂದಿ, ಪ್ರಯಾಣಿಕರು ಮತ್ತು ವಿಮಾನ ಬಿದ್ದ ಕಟ್ಟಡದಲ್ಲಿದ್ದವರು ಸೇರಿ 260ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು. ದುರಂತದಲ್ಲಿ ಭಾರತದ ಮೂಲದ ಬ್ರಿಟನ್ ಪ್ರಜೆ ಪವಾಡಸದೃಶವಾಗಿ ಬದುಕುಳಿದಿದ್ದರು. ಪ್ರಾಥಮಿಕ ತನಿಖೆಯನ್ನು ಆಧರಿಸಿ ಎಂಜಿನ್ ಹೇಗೆ ಸ್ಥಗಿತಗೊಂಡಿತು ಎಂಬುದರ ಕುರಿತು ಕುಲಂಕಷ ತನಿಖೆ ಮಾಡಲಾಗುವುದು ಎಂದು ವಿಮಾನ ಅಪಘಾತ ತನಿಖಾ ಸಂಸ್ಥೆ ತಿಳಿಸಿದೆ.

ಜೂನ್ 12 ರಂದು ಅಹಮದಾಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ಅಪಘಾತದ ಕಾರಣದ ಬಗ್ಗೆ ಆತುರದ ತೀರ್ಮಾನಗಳಿಗೆ ಸಾರ್ವಜನಿಕರು ಮತ್ತು ಮಾಧ್ಯಮಗಳು ಬರಬಾರದು. ವಿಮಾನ ಅಪಘಾತ ತನಿಖಾ ಬ್ಯೂರೋ ಬಿಡುಗಡೆ ಮಾಡಿದ ಪ್ರಾಥಮಿಕ ಸಂಶೋಧನಾ ವರದಿಗಳು ಸಂಕೀರ್ಣ ತನಿಖೆಯ ಆರಂಭ ಮಾತ್ರ.

-ರಾಮ್ ಮೋಹನ್ ನಾಯ್ಡು
ನಾಗರಿಕ ವಿಮಾನಯಾನ ಸಚಿವ

ಬನ್ನೇರುಘಟ್ಟದಲ್ಲಿ 3 ಹುಲಿಮರಿ ಸಾವು

ಬೆಂಗಳೂರು: ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟದ ಅರಣ್ಯ ಪ್ರದೇಶದಲ್ಲಿ 5 ಹುಲಿಗಳು ವಿಷಪ್ರಾಶನದಿಂದ ಮೃತಪಟ್ಟ ಘಟನೆ ಹಚ್ಚಹಸಿರಾಗಿರುವಾಗಲೇ

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 3 ಹುಲಿ ಮರಿಗಳು ಸಾವಿಗೀಡಾಗಿರುವುದು ತಡವಾಗಿ ಬೆಳಕಿಗೆ ಬಂದಿದೆ. ಕಳೆದ ಮೂರ್ನಾಲ್ಕು ದಿನದ ಹಿಂದೆ ಹಿಮ ಎಂಬ ಹೆಸರಿನ 7 ವರ್ಷದ ಹೆಣ್ಣು ಹುಲಿಯೊಂದು 2 ಗಂಡು ಹಾಗೂ 1 ಹೆಣ್ಣು ಸೇರಿ ಒಟ್ಟು 3 ಮರಿಗಳಿಗೆ ಜನ್ಮ ನೀಡಿತ್ತು. ಜನ್ಮ ನೀಡಿದ 3 ದಿನಗಳ ಅಂತರದಲ್ಲಿ ಮೂರೂ ಮರಿಗಳು ಮೃತಪಟ್ಟಿವೆ. ಆದರೆ, ಸಂಬಂಧಪಟ್ಟ ಅರಣ್ಯ ಅಧಿಕಾರಿಗಳು ಹುಲಿ ಮರಿಗಳ ಕಳೇಬರದ ಪಂಚನಾಮೆ ಹಾಗೂ ಮರಣೋತ್ತರ ಪರೀಕ್ಷೆ ನಡೆಸದೇ ಸುಟ್ಟು ಹಾಕಿದ್ದಾರೆ. ಈ ಮೂಲಕ ಹುಲಿ ಮರಿಗಳ ಸಾವಿನ ಸತ್ಯಾಂಶವನ್ನು ಮುಚ್ಚಿ ಹಾಕಲಾಗಿದೆ ಎಂಬ ದೂರುಗಳು ಕೇಳಿಬಂದಿವೆ.

ಶನಿವಾರ ಮಾರುಕಟ್ಟೆಗೆ ಬಿಡುಗಡೆಯಾಗಿರುವ 'ಪ್ರವಾಸಿ ಪ್ರಪಂಚ' ಪತ್ರಿಕೆಯ ಆರನೇ ಸಂಚಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಓದುತ್ತಿರುವುದು.

ಜು.15ರ ಸಭೆ ಬಳಿಕ ಅಂತಿಮ ನಿಲುವು ಪ್ರಕಟಿಸಲು ಸರಕಾರ ತೀರ್ಮಾನ
ದೇವನಹಳ್ಳಿ: ಭೂಮಿ ಕೊಡಲು ರೈತರ ಒಪ್ಪಿಗೆ

ಬೆಂಗಳೂರು: ದೇವನಹಳ್ಳಿಯ ಚನ್ನರಾಯಪಟ್ಟಣ ಹೋಬಳಿಯ ರೈತರ ಜಮೀನು ಸ್ವಾಧೀನ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರು ಹಾಗೂ ಕಾನೂನು ತಜ್ಞರೊಂದಿಗೆ ಶನಿವಾರ ಮಹತ್ವದ ಸಭೆ ನಡೆಸಿದ್ದು, ರೈತ ಮುಖಂಡರೊಂದಿಗೆ ಜು.15ರಂದು ಸಭೆ ನಡೆಸಿ ನಂತರ ಅಂತಿಮ ನಿಲುವು ಪ್ರಕಟಿಸಲು ಸರಕಾರ ತೀರ್ಮಾನಿದೆ. ಈ ಮಧ್ಯೆ, ಸ್ವಾಧೀನಕ್ಕೆ ತಮ್ಮ ಒಪ್ಪಿಗೆ ಇದೆ ಎಂದು ಕೆಲ ರೈತರು ಒಪ್ಪಿಕೊಂಡಿದ್ದಾರೆ.

ಮತ್ತೊಂದೆಡೆ ಬೆಳೆ ಬೆಳೆಯುವ ಫಲವತ್ತಾದ ಕೃಷಿ ಭೂಮಿ ಎಂಬ ಕಾರಣಕ್ಕೆ ಭೂಸ್ವಾಧೀನ ಕೈಬಿಡುವಂತೆ ರೈತರು ಒತ್ತಾಯಿಸುತ್ತಿರುವ ಹಿನ್ನೆಲೆಯಲ್ಲಿ ಭೂಸ್ವಾಧೀನ ಕೈಬಿಟ್ಟು ಹಸಿರು ವಲಯ ಎಂದು ಘೋಷಿಸುವ ಬಗ್ಗೆಯೂ ಚರ್ಚೆಯಾಗಿದೆ. ಒಂದೊಮ್ಮೆ ಹಸಿರು ವಲಯ ಎಂದು ಘೋಷಿಸಿದರೆ 25 ವರ್ಷಗಳವರೆಗೆ ಕೃಷಿ ಚಟುವಟಿಕೆ ಹೊರತುಪಡಿಸಿ ವಸತಿ ಬಡಾವಣೆ ನಿರ್ಮಾಣ, ಕೈಗಾರಿಕೆ, ವಾಣಿಜ್ಯ ಬಳಕೆಗೆ ಅವಕಾಶ ಇರುವುದಿಲ್ಲ. ಆಗ ಭೂಮಿ ಬೆಲೆ ಕುಸಿದು ರೈತರು ತನ್ನಿಂತಾನೇ ಸ್ವಾಧೀನಕ್ಕೆ ಕೊಡಲು ಮುಂದೆ ಬರಲಿದ್ದಾರೆ ಎಂಬ ಸಲಹೆಯೂ ಸಭೆಯಲ್ಲಿ ವ್ಯಕ್ತವಾಗಿದೆ. → 4

ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯಿಂದ ಆಗಮಿಸಿದ್ದ ವಿವಿಧ ರೈತ ಸಂಘಟನೆಗಳ ಪ್ರತಿನಿಧಿಗಳು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಭೂಮಿ ನೀಡಲು ಸಿದ್ಧವಿರುವುದಾಗಿ ತಿಳಿಸಿ, ಸ್ವಾಧೀನಪಡಿಸಿಕೊಳ್ಳುವ ಭೂಮಿಗೆ ನ್ಯಾಯಯುತವಾದ ಬೆಲೆ ನಿಗದಿಪಡಿಸಲು ಮನವಿ ಸಲ್ಲಿಸಿದರು.

ಈವರೆಗೂ ದೇಶದ 44 ತಾಣಗಳು ವಿಶ್ವ ಪಾರಂಪರಿಕ ಪಟ್ಟಿಗೆ
ಯುನೆಸ್ಕೋ ಪಟ್ಟಿ ಸೇರಿದ ಭಾರತದ 12 ಕೋಟೆಗಳು

ಮುಂಬೈ: ಮರಾಠ ಸಾಮ್ರಾಟ ಛತ್ರಪತಿ ಶಿವಾಜಿಯ ಜೀವನ ಹಾಗೂ ಅವರ ಕಾಲಘಟ್ಟಕ್ಕೆ ಸಂಬಂಧಿಸಿದ 12 ಐತಿಹಾಸಿಕ ಕೋಟೆಗಳು ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಈ ಮೂಲಕ ಭಾರತದ ಒಟ್ಟಾರೆ 44 ತಾಣಗಳು ವಿಶ್ವ ಪಾರಂಪರಿಕ ಪಟ್ಟಿ ಸೇರ್ಪಡೆಯಾದಂತಾಗಿದೆ.

ಕೇಂದ್ರ ಸರಕಾರವು, ದೇಶದ ಮರಾಠ ಸೇನಾ ಭೂಪ್ರದೇಶಗಳನ್ನು 2024-25ನೇ ಸಾಲಿನ ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ನಾಮನಿರ್ದೇಶನ ಮಾಡಿತ್ತು. ಮಹಾರಾಷ್ಟ್ರದಲ್ಲಿರುವ ಸಲ್ಹೇರ್ ಕೋಟೆ, ಶಿವನೇರಿ ಕೋಟೆ, ಲೋಹಗಢ ಕೋಟೆ, ಖಂಡೇರಿ ಕೋಟೆ, ರಾಯಗಢ ಕೋಟೆ, ರಾಜಗಢ ಕೋಟೆ, ಪ್ರತಾಪಗಢ ಕೋಟೆ, ಸುವರ್ಣ ದುರ್ಗ ಕೋಟೆ, ಪನ್ಹಾಲಾ ಕೋಟೆ, ವಿಜಯದುರ್ಗ ಕೋಟೆ, ಸಿಂಧುದುರ್ಗ ಕೋಟೆ ಮತ್ತು ತಮಿಳುನಾಡಿನಲ್ಲಿರುವ ಗಿಂಗಿ ಕೋಟೆ ಈ ಪಟ್ಟಿಯಲ್ಲಿವೆ.

ಇದು ಭಾರತದ ಸಾಂಸ್ಕೃತಿಕ ಪರಂಪರೆಗೆ ಸಂದ ವಿಶ್ವದ ಗೌರವವಾಗಿದೆ. ಈ ಐತಿಹಾಸಿಕ ಮೈಲಿಗಲ್ಲನ್ನು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಂಸ್ಕೃತಿ ಖಾತೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮತ್ತು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಶ್ಲಾಘಿಸಿದ್ದು, ದೇಶದ ಜನರಿಗೆ ಅಭಿನಂದನೆ ಸಲ್ಲಿಸಿದ್ದಾರೆ.



ಈ ಮನ್ನಣೆಯಿಂದ ಪ್ರತಿ ಭಾರತೀಯನೂ ಹರ್ಷಗೊಂಡಿದ್ದಾನೆ. ಈ ಮರಾಠ ಮಿಲಿಟರಿ ಭೂದೃಶ್ಯಗಳು 12 ಭವ್ಯ ಕೋಟೆಗಳನ್ನು ಒಳಗೊಂಡಿವೆ, ಅವುಗಳಲ್ಲಿ 11 ಮಹಾರಾಷ್ಟ್ರದಲ್ಲಿವೆ ಮತ್ತು 1 ತಮಿಳುನಾಡಿನಲ್ಲಿದೆ. ಈ ಕೋಟೆಗೆ ಭೇಟಿ ನೀಡಿ, ಮರಾಠ ಸಾಮ್ರಾಜ್ಯದ ಶ್ರೀಮಂತ ಇತಿಹಾಸ ಅರಿಯಬೇಕು ಎಂದು ಎಲ್ಲರಿಗೂ ಮನವಿ ಮಾಡುತ್ತೇನೆ.

-ನರೇಂದ್ರ ಮೋದಿ, ಪ್ರಧಾನಿ

ಮರಾಠ ಕೋಟೆಗಳ ವಿಶೇಷವೇನು?

17ರಿಂದ 19ನೇ ಶತಮಾನದ ಅವಧಿಯಲ್ಲಿ ಸುಧಾರಣೆಗೊಂಡ ಮರಾಠ ಸೇನಾ ನೆಲೆಗಳು, ಮರಾಠ ಆಡಳಿತಗಾರರು ಸೇನಾ ವ್ಯವಸ್ಥೆ ಹಾಗೂ ಕೋಟೆಗಳ ಬಗ್ಗೆ ಹೊಂದಿದ್ದ ಅಸಾಧಾರಣ ಕಲ್ಪನೆಗಳನ್ನು ಪ್ರತಿನಿಧಿಸುತ್ತವೆ. ವೈವಿಧ್ಯಮಯ ಭೌಗೋಳಿಕ ಪ್ರದೇಶಗಳಲ್ಲಿ ಹಂಚಿಕೆಯಾದ ಈ ಕೋಟೆಗಳು ಮರಾಠರ ಆಳ್ವಿಕೆಯ ಯುದ್ಧತಂತ್ರದ ಮಿಲಿಟರಿ ಶಕ್ತಿಯನ್ನು ಪ್ರದರ್ಶಿಸುತ್ತವೆ. 1630ರ ಫೆಬ್ರವರಿ 19ರಂದು ಜನಿಸಿದ್ದ ಶಿವಾಜಿ ಅವರ ಪಟ್ಟಾಭಿಷೇಕ ರಾಯಗಢ ಕೋಟೆಯಲ್ಲಿ 1674ರ ಜೂನ್ 6ರಂದು ನಡೆದಿತ್ತು. ಆ ಬಳಿಕ ಅವರು, 'ಹಿಂದವಿ-ಸ್ವರಾಜ್ಯ'ಕ್ಕೆ ಅಡಿಪಾಯ ಹಾಕಿದ್ದರು.

ಎಸ್‌ಎಂಪಿಎಸ್ ಅಭಿವೃದ್ಧಿ ಪೂರ್ಣ

ಬೆಂಗಳೂರು: ಗಗನಯಾನ ಯೋಜನೆಯ ನೌಕೆಗೆ ಅಳವಡಿಸಲಾಗುವ ಸರ್ವಿಸ್ ಮಾಡ್ಯೂಲ್ ಪ್ರೊಪಲ್ಷನ್ ಸಿಸ್ಟಮ್‌ನ (ಎಸ್‌ಎಂಪಿಎಸ್) ಅಭಿವೃದ್ಧಿ ಕಾರ್ಯವು ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಇಸ್ರೊ ಶನಿವಾರ ಮಾಹಿತಿ ನೀಡಿದೆ. ಎಸ್‌ಎಂಪಿಎಸ್‌ನ ಕಾರ್ಯಕ್ಷಮತೆಯ ಭಾಗವಾಗಿ 350 ಸೆಕೆಂಡ್ ನಷ್ಟು ಉಷ್ಣತೆ ಕ್ಷಮತೆಯ ಪರೀಕ್ಷೆಯನ್ನು ಶುಕ್ರವಾರ ನಡೆಸಲಾಯಿತು. ಈ ಸಂದರ್ಭದಲ್ಲಿ ಪ್ರೊಪಲ್ಷನ್ ಸಿಸ್ಟಮ್‌ನ ಒಟ್ಟಾರೆ ಕಾರ್ಯನಿರ್ವಹಣೆಯು ನಿರೀಕ್ಷೆಯಂತೆ ಇತ್ತು. ತಮಿಳುನಾಡಿನ ಮಹೇಂದ್ರಗಿರಿಯ ಇಸ್ರೊ ಪ್ರೊಪಲ್ಷನ್ ಕೇಂದ್ರದಲ್ಲಿ ಈ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ಇಸ್ರೋ ತಿಳಿಸಿದೆ.

ವಿಷಾನಿಲ ಸೋರಿಕೆ ಕಾರ್ಮಿಕರಿಬ್ಬರು ಸಾವು

ಮಂಗಳೂರು: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋ ಕೆಮಿಕಲ್ (ಎಂಆರ್‌ಪಿಎಲ್) ಘಟಕದಲ್ಲಿ ವಿಷಾನಿಲ ಸೋರಿಕೆಯಾಗಿ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ. ಪ್ರಯಾಗ್‌ರಾಜ್‌ನ ದೀಪ್ ಚಂದ್ರ (33) ಮತ್ತು ಕೇರಳದ ಬಿಜಿಲ್ ಪ್ರಸಾದ್ (33) ಮೃತಪಟ್ಟ ಕಾರ್ಮಿಕರು. ಇವ ರನ್ನು ರಕ್ಷಿಸಲು ಯತ್ನಿಸಿದ ಗದುಗಿನ ವಿನಾಯಕ ಅಸ್ವಸ್ಥಗೊಂಡಿದ್ದರು. ಚಿಕಿತ್ಸೆ ಬಳಿಕ ಚೇತರಿಸಿ ಕೊಂಡಿದ್ದಾರೆ. ದುರಂತ ನಡೆದ ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾಧಿಕಾರಿ ಸಂತೋಷ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆ ಸಿದ್ದು, ಘಟನೆಯ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲು ಸೂಚಿಸಿದ್ದಾರೆ.

ಒಎನ್‌ಒಸಿ: 30ಕ್ಕೆ ಜೆಪಿಸಿ ಸಭೆ ನಿರೀಕ್ಷೆ

ದೆಹಲಿ: ಒಂದು ರಾಷ್ಟ್ರ-ಒಂದು ಚುನಾವಣೆ ಕುರಿತು ಜುಲೈ 30ರಂದು ಮುಂದಿನ ಜಂಟಿ ಸಂಸದೀಯ ಸಮಿತಿ ಸಭೆ ನಡೆಯುವ ನಿರೀಕ್ಷೆಯಿದೆ ಎಂದು ಸಮಿತಿ ಅಧ್ಯಕ್ಷ ಪಿ.ಪಿ.ಚೌಧರಿ ತಿಳಿಸಿದ್ದಾರೆ. ಈ ಸಭೆಯಲ್ಲಿ ನ್ಯಾಯಮೂರ್ತಿ ರಾಜೇಂದ್ರ ಮಲ್ ಲೋಧಾ, ನ್ಯಾಯಮೂರ್ತಿ ಶರದ್ ಅರವಿಂದ್ ಬೋಗ್ಡೆ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಿದ್ದಾರೆ. ಮಸೂದೆಯ ಶಿಫಾರಸು ಸಿದ್ಧಪಡಿಸುವ ಸಂಬಂಧ ನ್ಯಾಯಮೂರ್ತಿಗಳು ಹಾಗೂ ಕಾನೂನು ತಜ್ಞರ ಅಭಿಪ್ರಾಯ ಸಂಗ್ರಹಿಸಲಾಗಿದೆ. ಶುಕ್ರವಾರದ ಸಭೆಯಲ್ಲಿ ನಿವೃತ್ತ ಸಿಜೆ ಜೆ.ಎಸ್.ಖೇಹರ್, ಡಿ.ವೈ. ಚಂದ್ರಚೂಡ್ ಕೂಡ ಅಭಿಪ್ರಾಯ ನೀಡಿದ್ದಾರೆ ಎಂದರು.

ಎಲ್ಲರೂ ಯಶಸ್ವಿ ರಾಜಕಾರಣಿಯಾಗಲು ಅಸಾಧ್ಯ: ಸಿಎಂ | ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗಲ್ಲ: ಡಿಸಿಎಂ
ಅಧಿಕಾರ ಭಾಗ್ಯದ ಬಗ್ಗೆ ಸಿಎಂ-ಡಿಸಿಎಂ ಟ್ವೀಟಾಟ

ಬೆಂಗಳೂರು: ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ಬಹಿರಂಗ ಹೇಳಿಕೆ, ಹೈಕಮಾಂಡ್ ಎಚ್ಚರಿಕೆಯ ಬಳಿಕ 'ಬೂದಿ ಮುಚ್ಚಿದ ಕೆಂಡ'ವಾಗಿರುವ ಕರ್ನಾಟಕ ಕಾಂಗ್ರೆಸ್‌ನಲ್ಲೀಗ ಟ್ವೀಟಾಟ ಶುರುವಾಗಿದೆಯೇ ಎನ್ನುವ ಅನುಮಾನಗಳು ಶುರುವಾಗಿವೆ.

ಹೌದು, ದೆಹಲಿಯಿಂದ ವಾಪಸಾದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಬ್ಬರೂ ದೆಹಲಿ ಭೇಟಿಗೆ ಸಂಬಂಧಿಸಿದಂತೆ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ. ಮುಖ್ಯಮಂತ್ರಿ ಬದಲಾವಣೆಯಿಲ್ಲ ಎಂದು ಸಿದ್ದರಾಮಯ್ಯ ಆಪ್ತರು ಹೇಳುತ್ತಿದ್ದರೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಣದವರು ಈ ಹೇಳಿಕೆಗಳಿಗೂ ಪ್ರತಿಕ್ರಿಯೆ ನೀಡದೇ 'ಮೌನ'ಕ್ಕೆ ಶರಣಾಗಿದ್ದಾರೆ. ಆದರೆ ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 'ಮಾರ್ಮಿಕ' ಟ್ವೀಟ್ ಒಂದು ಭಾರಿ ಕುತೂಹಲಕ್ಕೆ ಕಾರಣವಾಗಿದ್ದು, ಇದಕ್ಕೆ 'ಮಾರ್ಮಿಕ'ವಾಗಿಯೇ ಡಿ.ಕೆ. ಶಿವಕುಮಾರ್ ಸಹ ತಿರುಗೇಟು ನೀಡಿರುವುದು ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವ ಸ್ಪಷ್ಟ ಸಂದೇಶ ರವಾನೆಯಾಗಿದೆ.

ಎಲ್ಲರೂ ಯಶಸ್ವಿ ರಾಜಕಾರಣಿಯಾಗಲ್ಲ:

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿ ಪ್ರವಾಸದ ವೇಳೆ ಮಿಸ್ ಕರ್ನಾಟಕ ವಂಶಿ ಅವರನ್ನು ಭೇಟಿಯಾಗಿದ್ದ ವಿಡಿಯೊವೊಂದನ್ನು ಶೇರ್ ಮಾಡಿ, 'ರಾಜಕೀಯಕ್ಕೆ ಬರುವವರೆಲ್ಲ ಯಶಸ್ವಿ ರಾಜಕಾರಣಿಯಾಗಲು ಅಸಾಧ್ಯ' ಎನ್ನುವ ಮೂಲಕ ಪರೋಕ್ಷ ಸಂದೇಶ ರವಾನಿಸಿದ್ದಾರೆ ಎನ್ನುವ ವಿಶ್ಲೇಷಣೆಗಳು ಶುರುವಾಗಿದೆ.

ರಾಜಕೀಯ ರಂಗದಲ್ಲಿ ಮುನ್ನಡೆಯಬೇಕೆಂಬ ಹಂಬಲ ಎಷ್ಟು ಮುಖ್ಯವೋ, ಜನಸೇವೆ ಮಾಡಬೇಕೆಂಬ ಇಚ್ಛಾಶಕ್ತಿ, ಜನರ ಕಷ್ಟದ ಅರಿವು, ಜನರ ಆಶೋತ್ತರಗಳನ್ನು ಆಲಿಸುವ ತಾಳ್ಮೆ, ಸೋಲು-ಗೆಲುವು ಎರಡನ್ನೂ ಸ್ವೀಕರಿಸುವ ಸಮಚಿತ್ತ ಈ ಎಲ್ಲವೂ ಮುಖ್ಯ. ಅಧಿಕಾರ ಎನ್ನುವುದು ಜನರ ಸೇವೆ ಮಾಡಲು ದೊರೆತ ಅವಕಾಶ ಎಂದು ಅರಿತು ನಡೆಯುವುದೇ ನಿಜವಾದ ರಾಜಧರ್ಮ. ಇವು ನನ್ನ ಸುದೀರ್ಘ ರಾಜಕೀಯ ಬದುಕಿನಿಂದ ನಾನು ಕಲಿತ ಪಾಠಗಳು. → 4

ಪ್ರಾರ್ಥನೆ ವಿಫಲವಾಗಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಿಸ್ ಕರ್ನಾಟಕ ವಂಶಿ ಅವರ ಭೇಟಿಯನ್ನು ಮುಂದಿಟ್ಟುಕೊಂಡು ಮಾರ್ಮಿಕವಾಗಿ ಪೋಸ್ಟ್ ಮಾಡಿದ ಕೆಲವೇ ಗಂಟೆಗಳಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹ 'ಪ್ರತಿಕ್ರಿಯೆ' ನೀಡುವ ರೀತಿಯಲ್ಲಿಯೇ ಪೋಸ್ಟ್ ಮಾಡಿದ್ದಾರೆ. ಶಿರಡಿ ಸಾಯಿ ಬಾಬಾ ದೇವಾಲಯ ಭೇಟಿಯ ಫೋಟೋವನ್ನು ಹಾಕಿ, 'ನಂಬಿಕೆ ಹಾಗೂ ತಾಳ್ಮೆ'ಯಿಂದ ಎಲ್ಲವೂ ಸಾಧ್ಯ. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗಲ್ಲ ಎನ್ನುವ ಮೂಲಕ ರವಾನಿಸಬೇಕಿರುವ ಸಂದೇಶವನ್ನು ರವಾನಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸರಣಿ ಅಪಘಾತ, ಮೂರು ಕಾರು ಜಖಂ

ಚಿಂತಾಮಣಿ: ಮೂರು ಕಾರುಗಳು ಒಂದರ ಹಿಂದೆ ಒಂದರಂತೆ ಡಿಕ್ಕಿ ಹೊಡೆದುಕೊಂಡ ಪರಿಣಾಮ ಮೂರು ಕಾರುಗಳು ಸಂಪೂರ್ಣವಾಗಿ ಜಖಂ ಆಗಿ ಕಾರುಗಳಲ್ಲಿದ್ದ ಹಲವರಿಗೆ ಸಣ್ಣಪುಟ್ಟ ಗಾಯಗಳಾಗಿ ಆಸ್ಪತ್ರೆ ಸೇರಿರುವ ಘಟನೆ ಚಿಂತಾಮಣಿ ತಾಲೂಕು ಸಂತೇಕಲ್ಲಹಳ್ಳಿ ಗೇಟ್ ಬಳಿ ನಡೆದಿದೆ. ಕೈವಾರದಲ್ಲಿ ನಡೆದ ಗುರುಪೌರ್ಣಮಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಾಪಸ್ ತೆರಳುತ್ತಿದ್ದ ವೇಳೆ ಈ ಘಟನೆ ನಡೆದಿದೆ. ಸ್ಥಳಕ್ಕೆ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಡೆಗೂ ಸೆರೆ ಸಿಕ್ಕ ದಾಳಿಕೋರ ಚಿರತೆ

ಹೊಳೆನರಸೀಪುರ: ಸಾರ್ವಜನಿಕರಿಗೆ ಮತ್ತು ಜಾನುವಾರುಗಳ ಪ್ರಾಣಕ್ಕೆ ಕಂಟಕವಾಗಿ ಆತಂಕ ಸೃಷ್ಟಿ ಮಾಡಿದ್ದ ಒಂದೂವರೆ ವರ್ಷದ ಹೆಣ್ಣು ಚಿರತೆಯನ್ನು ಕೊನೆಗೂ ಸೆರೆ ಹಿಡಿಯಲಾಗಿದೆ. ತಾಲೂಕಿನ ಹಳೇಕೋಟೆ ಹೊಬಳಿಯ ಸಿಗರನಹಳ್ಳಿ ಗ್ರಾಮದ ಸುತ್ತಮುತ್ತ ಕಳೆದ ಹಲವು ದಿನಗಳಿಂದ ಈ ಚಿರತೆ ಸಾಕಷ್ಟು ಉಪಟಳ ನೀಡುತ್ತಿತ್ತು. ಇದು ನಿರಂತರ ದಾಳಿ ಮಾಡುತ್ತಾ ಜಾನುವಾರು, ಮೇಕೆ, ನಾಯಿಗಳನ್ನು ತಿಂದು ಹಾಕುತ್ತಿತ್ತು. ಎಷ್ಟೋ ಸಂದರ್ಭ ಹಗಲು ವೇಳೆಯಲ್ಲೇ ದಾಳಿ ಮಾಡುತ್ತಿದ್ದ ಚಿರತೆ, ಎದುರಿಗೆ ಸಿಕ್ಕ ಪ್ರಾಣಿಗಳನ್ನು ಕೊಂದು ರಕ್ತ ಕುಡಿಯುತ್ತಿತ್ತು. ಒಂದು ವಾರದಲ್ಲಿ ಏಳು ಜಾನುವಾರು, ಮೇಕೆ ಹಾಗೂ ನಾಯಿಗಳನ್ನು ತಿಂದು ಹಾಕಿತ್ತು. ಗ್ರಾಮದ ಸಮೀಪವೇ ಹಗಲು, ರಾತ್ರಿ ವೇಳೆ ಕಾಣಿಸಿಕೊಳ್ಳುವ ಮೂಲಕ ಸಾಕಷ್ಟು ಆತಂಕ ತಂದೊಡ್ಡಿತ್ತು. ಇದರಿಂದ ಆತಂಕಗೊಂಡಿದ್ದ ಸ್ಥಳೀಯರು, ಕೂಡಲೇ ಬೋನಿಟ್ಟು ಚಿರತೆ ಸೆರೆ ಹಿಡಿಯುವಂತೆ ಅರಣ್ಯ ಇಲಾಖೆಗೆ ಒತ್ತಾಯಿಸಿದ್ದರು.' ಅರಣ್ಯ ಇಲಾಖೆಯವರು ಬೋನು ಇಟ್ಟಿದ್ದರು. ಸಿಗರನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ನೆಮ್ಮದಿ ನಿಟ್ಟುಸಿರು ಬಿಟ್ಟಿದ್ದಾರೆ. ಸೆರೆ ಸಿಕ್ಕ ಚಿರತೆಯನ್ನು ಅರಣ್ಯ ಇಲಾಖೆಯವರು ಹಾಸನದ ಗೆಂಡೆಕಟ್ಟೆ ವನ್ಯಧಾಮದಲ್ಲಿ ರಕ್ಷಣೆ ಮಾಡಲಾಗಿದೆ.

44 ಕಿ.ಮೀ. ಉದ್ದನೆ ಹೊರ ವರ್ತುಲ ರಸ್ತೆ । ಸರ್ವೆ ಕಾರ್ಯ ತಡೆದು ಪ್ರತಿಭಟನೆ

ಭೂಮಿ ಕೊಡಲೊಪ್ಪದ ರೈತರು

ತುಮಕೂರು: ಹೊರವರ್ತುಲ ರಸ್ತೆ ನಿರ್ಮಾಣಕ್ಕೆ ಸ್ಥಳೀಯ ರೈತರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು, ಸ್ಥಳೀಯರ ಮಾತು ಕೇಳದೇ ಸರ್ವೇ ಕಾರ್ಯ ಆರಂಭ ಮಾಡಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ತಡೆದು ಪ್ರತಿಭಟನೆ ನಡೆಸಿದ್ದಾರೆ.

ತುಮಕೂರು ಹೊರ ವರ್ತುಲ 44 ಕಿ.ಮೀ. ಉದ್ದದ ಔಟರ್ ರಿಂಗ್ ರಸ್ತೆ ನಿರ್ಮಾಣ ಮಾಡಲು ಪ್ರಾಧಿಕಾರ ಮುಂದಾಗಿದ್ದು ಇದು 24 ಹಳ್ಳಿಗಳ ಮೇಲೆ ಹಾದು ಹೋಗುತ್ತದೆ, ಈಗಾಗಲೇ ಕೆಲವು ಗ್ರಾಮಗಳಲ್ಲಿ ಸರ್ವೇ ಕಾರ್ಯ ನೆರವೇರಿಸಿ ಅಧಿಕಾರಿಗಳು ಅಳತೆ ಕಲ್ಲುಗಳನ್ನು ಸಹ ಅಳವಡಿಸಿರುತ್ತಾರೆ. ಆದರೆ ಭೈರಸಂದ್ರ ಗ್ರಾಮದಲ್ಲಿ ಸರ್ವೇ ಕಾರ್ಯ ಮಾಡಿ ಕಲ್ಲು ಅಳವಡಿಸಲು ಆಗಮಿಸಿದ್ದ ಅಧಿಕಾರಿಗಳನ್ನು ತಡೆದಿರುವ ರೈತರು ಯಾವುದೇ ಕಾರಣಕ್ಕೂ ನಾವು ನಮ್ಮ ಜಮೀನು ಸ್ವಾಧೀನಕ್ಕೆ ಬಿಟ್ಟುಕೊಡುವುದೂ ಇಲ್ಲ, ಸರ್ವೇ ಕಾರ್ಯ ಮಾಡಲು ಅನುವು ಮಾಡಿಕೊಡುವುದಿಲ್ಲ ಎಂದು ಘೇರಾವ್ ಹಾಕಿದ್ದಾರೆ.

ಪ್ರತಿಭಟನೆಯ ಸುಳಿವು ಅರಿತಿದ್ದ ಅಧಿಕಾರಿಗಳು ಪೊಲೀಸರ ರಕ್ಷಣೆಯೊಂದಿಗೆ ಸರ್ವೇ ಕಾರ್ಯ ನಡೆಸಲು ಬಂದಿದ್ದರು. ಆದರೆ ರೈತರಿಂದ ತೀವ್ರ ಆಕ್ಷೇಪ ಬಂದ ಪರಿಣಾಮ ಘಟನೆಯು ಉಗ್ರ ಸ್ವರೂಪಕ್ಕೆ ಹೋಗುತ್ತಿತ್ತು. ಆದರೆ ಕೆಲವು ರೈತರು ಸದರಿ ವಿಷಯವನ್ನು ತಹಸೀಲ್ದಾರ್ ಗಮನಕ್ಕೆ ತಂದ ಪರಿಣಾಮ ಸ್ಥಳಕ್ಕೆ ದೌಡಾಯಿಸಿದ ತಹಸೀಲ್ದಾರ್ ರಾಜೇಶ್ವರಿ ಪರಿಸ್ಥಿತಿಯನ್ನು ತಿಳಿಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹೆದ್ದಾರಿ ಅಧಿಕಾರಿಗಳೊಂದಿಗೆ ಸ್ಥಳದಲ್ಲಿಯೇ ಚರ್ಚೆ ನಡೆಸಿ, ರೈತರ ಅಹ್ವಾಲುಗಳನ್ನು ಆಲಿಸಿ, ತದನಂತರ ಸರ್ವೇ ಕಾರ್ಯ ಮಾಡಿ ಕಲ್ಲುಗಳನ್ನು ಅಳವಡಿಸದಂತೆ 15 ದಿನಗಳ ಕಾಲವಕಾಶವನ್ನು ಕೊಡಿಸಿಕೊಟ್ಟಿದ್ದಾರೆ. ಸದರಿ ಸಮಸ್ಯೆ ಬಗ್ಗೆ ತಾವು ಗೃಹ ಸಚಿವರು, ಸ್ಥಳೀಯ ಶಾಸಕರು, ಜಿಲ್ಲಾಧಿಕಾರಿ, ಉಪ-ವಿಭಾಗಾಧಿಕಾರಿ ಹಾಗೂ ಮಾಜಿ ಶಾಸಕರಿಂದ ಸಭೆ ಮಾಡಿಸಿ, ತದ ನಂತರ ಮುಂದುವರೆವ ಭರವಸೆ ನೀಡಿದರು. ಈ ಭರವಸೆಗೆ ಅಧಿಕಾರಿಗಳು ಮತ್ತು ರೈತರು ಸಮ್ಮತಿಸಿದ್ದು ಸಮಸ್ಯೆ ಸದ್ಯಕ್ಕೆ ತಿಳಿಯಾಗಿರುತ್ತದೆ.

ಈ ಕುರಿತು ಸ್ಥಳೀಯ ರೈತರೊಬ್ಬರು ಮಾತನಾಡಿ, ಈ ಭಾಗದಲ್ಲಿ ಬಹುತೇಕ ರೈತರು ಸಣ್ಣ ಹಿಡುವಳಿದಾರರಾಗಿದ್ದು ನಮ್ಮಗಳಿಗೆ ಬಹಳ ಅನ್ಯಾಯವಾಗುತ್ತಿದೆ, ನಮಗೆ ಇಲ್ಲಿ ಉಳುಮೆ ಮಾಡಲು ಇರುವ ಜಾಗ ಬಹಳ ಸಣ್ಣ ಪ್ರಮಾಣದಾಗಿದ್ದು, ಅವುಗಳನ್ನೇ ನಾವು ಬಿಟ್ಟುಕೊಟ್ಟರೇ ನಮ್ಮಗಳ ಮುಂದಿನ ಜೀವನ ತುಂಬಾ ಕಷ್ಟ. ಹಾಗಾಗಿ ನಾವು ಜಮೀನು ನೀಡಲು ಸಿದ್ಧರಿಲ್ಲ, ದಾಬಸ್‌ಪೇಟೆಯಿಂದ ಗುಬ್ಬಿ ರಸ್ತೆಯು 80 ಅಡಿ ರಸ್ತೆಯಿದ್ದು ಅದನ್ನೇ ತಾವು ಅಭಿವೃದ್ಧಿಪಡಿಸಿಕೊಳ್ಳಬಹುದು. ಅದನ್ನು ಬಿಟ್ಟು ನಮ್ಮ ಜಮೀನುಗಳ ಮೇಲೆ ಏಕೆ ರಸ್ತೆ ಮಾಡುತ್ತೀರಿ ಎಂದು ಕೇಳಿದರು. ನಮಗೆ ನಮ್ಮ ಜಮೀನು ಮುಖ್ಯ ಹೆದ್ದಾರಿ ನಮಗೆ ಬೇಕಿಲ್ಲ ಎಂದು ಆಕ್ರೋಶ ಹೊರ ಹಾಕಿದರು.

ಈ ಸಂದರ್ಭದಲ್ಲಿ ನಂದಿಹಳ್ಳಿ, ಭೈರಸಂದ್ರ, ಪೆರಮ್ಮನಹಳ್ಳಿ, ದೇವರಹೊಸಹಳ್ಳಿ ರೈತರುಗಳಾದ ಜಿ.ಪಾಲನೇತ್ರಯ್ಯ, ಉದಯ್ ಕುಮಾರ್, ರಮೇಶ್, ಸಿದ್ಧಲಿಂಗಪ್ಪ, ಲಿಂಗರಾಜು, ಪ್ರಮೋದ್, ರಾಜಣ್ಣ, ಗೋವಿಂದರಾಜು, ಮತ್ತಿತರ ರೈತರು ಪಾಲ್ಗೊಂಡಿದ್ದರು.

ತುಮಕೂರು ತಹಸೀಲ್ದಾರ್ ರಾಜೇಶ್ವರಿ ಸ್ಥಳಕ್ಕೆ ಧಾವಿಸಿ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ರೈತರ ಆಹವಾಲು ಆಲಿಸಿದರು.

ನಂಜೇಗೌಡರು ಮುಂದೆ ಗೆದ್ದರೆ ಇತ್ತ ಕಡೆ ತಲೆ ಹಾಕಲ್ಲ: ನಿಖಿಲ್

ಕೋಲಾರ: ನಂಜೇಗೌಡರು ಮುಂದಿನ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾದರೆ ಮಾಲೂರಿನತ್ತ ತಲೆಯೇ ಹಾಕುವುದಿಲ್ಲ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಮಾಲೂರಿನಲ್ಲಿ ನಡೆದ ಜನರೊಂದಿಗೆ ಜನತಾದಳ ಹಾಗೂ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ನಂಜೇಗೌಡರು ಜೆಡಿಎಸ್‌ನಿಂದಲೇ ತಾಪಂ ಅಧ್ಯಕ್ಷರಾಗಿದ್ದು ಅವರ ಪತ್ನಿ ರತ್ನಮ್ಮ ಅವರು ದಳದಿಂದಲೇ ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿದ್ದನ್ನು ಮರೆತು ಇದೀಗ ಅಧಿಕಾರದ ಅಹಂನಿಂದ ಜೆಡಿಎಸ್ ರಾಜ್ಯದಲ್ಲಿ ಎಲ್ಲಿದೆ ಎಂದು ಪ್ರಶ್ನೆ ಮಾಡುತ್ತಿದ್ದು ಇಂತಹವರನ್ನು ಮತದಾರರು ತಿರಸ್ಕರಿಸಬೇಕೆಂದರು.

ಶಾಸಕ ನಂಜೇಗೌಡರ ಮೇಲೆ ಎಷ್ಟು ಕೇಸುಗಳಿವೆ ಎಂಬುದು ಎಲ್ಲರಿಗೂ ಗೊತ್ತಿದ್ದು ಕೋಮುಲ್‌ನಲ್ಲಿ ಪೋಸ್ಟಿಂಗ್‌ಗಳನ್ನು ಎಷ್ಟಕ್ಕೆ ಮಾರಾಟ ಮಾಡಿದ್ದಾರೆ ಎಂಬುದು ಜಗಜ್ಜಾಹೀರು ಆಗಿದೆ. ಇಡಿಯಿಂದ ಹಿಡಿದು ಕ್ರಿಮಿನಲ್ ಕೇಸ್ ವರೆಗೆ ಹತ್ತಾರು ಹಗರಣಗಳನ್ನು ಎದುರಿಸುತ್ತಿರುವ ನಂಜೇಗೌಡರಿಗೆ ಜೆಡಿಎಸ್ ಬಗ್ಗೆ ಮಾತನಾಡಲು ನೈತಿಕತೆ ಇಲ್ಲ ಎಂದು ಸವಾಲು ಹಾಕಿದರು. ಜನರೊಂದಿಗೆ ಜನತಾದಳ ಅಭಿಯಾನದಲ್ಲಿ 50 ಲಕ್ಷ ಜನರ ಸದಸ್ಯತ್ವದ ಗುರಿಯೊಂದಿಗೆ ಪ್ರವಾಸ ಆರಂಭಿಸಲಾಗಿದೆ ಎಂದು ನಿಖಿಲ್ ತಿಳಿಸಿದರು.

ಜೆಡಿಎಸ್ ಮುಖಂಡ ಮಾಲೂರು ರಾಮೇಗೌಡ ಮಾತನಾಡಿ, ತಾಲೂಕು-ಜಿಲ್ಲಾ ಪಂಚಾಯತಿಯಲ್ಲಿ ಸೋಲುತ್ತೇವೆ ಎಂದು ಕಾಂಗ್ರೆಸ್ ಚುನಾವಣೆಯನ್ನು ನಡೆಸದೆ ಕಾಲಹರಣ ಮಾಡುತ್ತಿದೆ ಎಂದರು.

ಜೆಡಿಎಸ್ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ರಶ್ಮಿರಾಮೇಗೌಡ, ಸಂಸದ ಮಲ್ಲೇಶ್ ಬಾಬು, ದಳಪತಿ ಸಿಎಂಆರ್ ಶ್ರೀನಾಥ್, ಬಣಕನಹಳ್ಳಿ ನಟರಾಜ್, ಕೋಮುಲ್ ನಿರ್ದೇಶಕ ವಡಗೂರುಹರೀಶ್,ಮಾಜಿ ಶಾಸಕ ಅನ್ನದಾನಿ, ವಕ್ಕಲೇರಿ ರಾಮು ಇದ್ದರು.

ಮಾಲೂರಿನಲ್ಲಿ ನಡೆದ ಜನರೊಂದಿಗೆ ಜನತಾದಳ ಕಾರ್ಯಕ್ರಮದಲ್ಲಿ ದಳಪತಿ ರಾಮೇಗೌಡರನ್ನು ಅಭಿನಂದಿಸಲಾಯಿತು.

ಕ್ರೀಡಾಕೂಟದ ಬಹುಮಾನಕ್ಕಿಂತ ಭಾಗವಹಿಸುವಿಕೆಯೇ ಮುಖ್ಯ

ಚಿಕ್ಕಬಳ್ಳಾಪುರ: ಯುವ ಜನತೆ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕಾದರೆ ಮೊಬೈಲ್ ಗೇಮ್ಸ್ ಬಿಟ್ಟು ಬೆವರು ಹರಿಸಿ ಆಡುವ ಭೌತಿಕ ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗುವುದು ಮುಖ್ಯ ಎಂದು ನಗರಠಾಣೆ ಸಬ್‌ಇನ್ಸ್‌ಪೆಕ್ಟರ್ ಅಮರ್ ಮೋಗ್ಲಿ ಸಲಹೆ ನೀಡಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಗೋಲ್ಡನ್ ಗ್ಲೀಮ್ಸ್ ಕಾಲೇಜಿನ ಪಿಯುಸಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಕ್ರೀಡಾಕೂಟಕ್ಕೆ ಚಾಳನೆ ನೀಡಿ ಅವರು ಮಾತನಾಡಿದರು.

ಕ್ರೀಡಾಕೂಟಗಳಲ್ಲಿ ಬಹುಮಾನಕ್ಕಿಂತಲೂ ಭಾಗವಹಿಸುವಿಕೆ ಮುಖ್ಯ.ಪ್ರತಿಯೊಬ್ಬ ಪೋಷಕರು ಕೂಡ ತಮ್ಮ ಮಕ್ಕಳನ್ನು ದಿನದಲ್ಲಿ 2 ಗಂಟೆ ಕ್ರೀಡಾಂಗಣಗಳಿಗೆ ಕರೆತರುವುದನ್ನು ಅಭ್ಯಾಸ ಮಾಡಿಕೊಳ್ಳಿ.ಇದಾದಲ್ಲಿ ಮೊಬೈಲ್ ಗೀಳಿನಿಂದ ಹೊರಬಂದು ಓದಿನಲ್ಲಿ ಆಸಕ್ತಿ ಬೆಳೆಯಲಿದೆ ಎಂದರು.

ಸಮಾಜ ಸೇವಕ ಕೋಡೆಸ್ ಶ್ರೀನಿವಾಸ್ ಮಾತನಾಡಿ, ನಗರ ಪಟ್ಟಣ ಹಳ್ಳಿಗಳೆಂಬ ಬೇಧವಿಲ್ಲದೆ ಆಧುನಿಕತೆಯ ಜಂಜಾಟದ ನಡುವೆ ಇಂದಿನ ಯುವಜನ ದಿಕ್ಕು ತಪ್ಪಿದ್ದಾರೆ ಎಂದು ಬೇಸರಿಸಿದರು.

ಕಾಲೇಜು ಪ್ರಾಂಶುಪಾಲ ಎಸ್.ಎಂ. ಮುನಿಕೃಷ್ಣ ಮಾತನಾಡಿ, ಪಠ್ಯೇತರ ಚಟವಟಿಕೆಗಳಾದ ಕ್ರೀಡೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಆದ್ಯತೆ ನೀಡಲಾಗಿದೆ. ವಿದ್ಯಾರ್ಥಿಗಳಲ್ಲಿರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಕ್ರೀಡಾಕೂಟ ಆಯೋಜಿಸಲಾಗಿದೆ ಎಂದರು.

ಈ ವೇಳೆ ವಕೀಲ ಮಂಜುನಾಥ್ ,ಉಪನ್ಯಾಸಕರಾದ ಮಂಜುನಾಥ್, ಪಾಟೀಲ್, ಶಿವು,ರಾಧ,ಮಂಜುಳ, ಅಶ್ವಿನಿ, ನಾಗಮಣಿ, ಲಾವಣ್ಯ ಕ್ರೀಡಾ ತರಬೇತುದಾರ ಲೋಕೇಶ್ ಮತ್ತಿತರರು ಇದ್ದರು.

ಶ್ರೀ ಚಾಮುಂಡೇಶ್ವರಿ ಕರಗ ಉತ್ಸವ ಜು.15ರಂದು

ರಾಮನಗರ: ನಗರದೇವತೆ ಶ್ರೀಚಾಮುಂಡೇಶ್ವರಿ ಅಮ್ಮನವರ ಕರಗ ಮಹೋತ್ಸವವನ್ನು ನಾಡಹಬ್ಬದಂತೆ ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ತಿಳಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರು, ಜುಲೈ 15ರ ಸಂಜೆ ಅದ್ದೂರಿ ರಸಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಖ್ಯಾತ ನಟರಾದ ವಿ.ರವಿಚಂದ್ರನ್, ಶ್ರೀಮುರುಳಿ, ಯುವ ರಾಜಕುಮಾರ್, ನಟಿಯರಾದ ರಾಗಿಣಿ, ಸಂಜನಾ, ಗಾಯಕರಾದ ರಾಜೇಶ್ ಕೃಷ್ಣನ್, ರಘು ದೀಕ್ಷಿತ್ ಇತರೆ ಖ್ಯಾತ ನಾಮರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಅಮ್ಮನವರ ಕರಗ ಮಹೋತ್ಸವದಲ್ಲಿ ಜನತೆ ಪಕ್ಷ ಬೇದವಿಲ್ಲದೆ, ಜಾತಿ ಬೇದವಿಲ್ಲದೆ ಭಾಗವಹಿಸುತ್ತಿದ್ದಾರೆ. ಅಮ್ಮನವರ ಕರಗ ದಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಈ ಬಾರಿಯೂ ಅದ್ದೂರಿ ರಸಸಂಜೆ ಕಾರ್ಯಕ್ರಮವಿದೆ. ಬೃಹತ್ ವೇದಿಕೆ ಈಗಾಗಲೆ ಸಿದ್ದವಾಗುತ್ತಿದೆ. ಸಾವಿರಾರು ಮಂದಿ ಪ್ರೇಕ್ಷಕರು ಆಗಮಿಸುವ ನಿರೀಕ್ಷೆ ಇದೆ ಎಂದರು.

ಸಂಗೀತ ಸಂಜೆಯನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸುವರು, ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ, ಚನ್ನಪಟ್ಟಣ ಸಿ.ಪಿ.ಯೋಗೇಶ್ವರ್, ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ, ಎಂಎಲ್ಸಿ ಎಸ್. ರವಿ, ಪುಟ್ಟಣ್ಣ, ರಾಮೋಜಿಗೌಡ, ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಶಾಸಕರಾದ ಬಳಿಕ 3ನೇ ಬಾರಿಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು ಕರಗ ಸಂಚರಿಸುವ ರಸ್ತೆಗಳ ದುರಸ್ತಿ ಕಾರ್ಯ ನಡೆಯುತ್ತಿದೆ. ಭಕ್ತರಿಗೆ ಯಾವುದೇ ಸಮಸ್ಯೆಗಳು ಆಗಬಾರದೆಂದು ಅಗತ್ಯ ವ್ಯವಸ್ಥೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಸಂಗೀತ ಸಂಜೆಗೆ ಆಗಮಿಸುವ ಪ್ರತಿಯೊಬ್ಬರಿಗೂ ಆಸನದ ವ್ಯವಸ್ಥೆ ಮಾಡಲಾಗುತ್ತದೆ. ವಿಶೇಷವಾಗಿ ಮಹಿಳಾ ಪ್ರೇಕ್ಷಕರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ. ಕಾರ್ಯಕ್ರಮದ ಎಲ್ಲಾ ವೆಚ್ಚಗಳನ್ನು ಅಭಿಮಾನಿಗಳು ಹಾಗೂ ತಮ್ಮ ವೈಯಕ್ತಿಕ ಹಣದಲ್ಲಿ ಭರಿಸುವುದಾಗಿ ಹೇಳಿದ ಅವರು, ನಾಗರೀಕರು ದೇಣಿಗೆ ಕೊಡಬಾರದು ಎಂದು ಶಾಸಕರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ. ರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ. ಚೇತನ್ ಕುಮಾರ್, ನಗರಸಭೆ ಉಪಾಧ್ಯಕ್ಷೆ ಆಯಿಷಾಬಾನು, ನಗರಸಭಾ ಸದಸ್ಯರು ಇತರರು ಇದ್ದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಮಾತನಾಡಿದರು.

'ಮನೆ ಮನೆಗೆ ಪೊಲೀಸ್' ಜನಜಾಗೃತಿ

ಮಧುಗಿರಿ: ತಾಲೂಕಿನ ಕೊಡಿಗೇನಹಳ್ಳಿ ಪೊಲೀಸ್ ಠಾಣೆಯ ಅಧಿಕಾರಿ, ಸಮುದಾಯ ಪೊಲೀಸ್ ವ್ಯವಸ್ಥೆ ಬಲಪಡಿಸುವ ದೃಷ್ಟಿಯಿಂದ ಹಾಗೂ ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಸದೃಢ ಗೊಳಿಸುವಲ್ಲಿ 'ಮನೆ ಮನೆಗೆ ಪೊಲೀಸ್' ಎಂಬ ಪರಿಕಲ್ಪನೆ ಜಾರಿಗೆ ತರಲಾಗಿದೆ. ಗ್ರಾಮಗಳಿಗೆ ಭೇಟಿ ನೀಡಿ ಕುಟುಂಬ ಸದಸ್ಯರಿಂದ ಅಗತ್ಯ ಮಾಹಿತಿ ಪಡೆದು ಮನೆ ಮನೆಗೆ ಪೊಲೀಸ್ ಕಾರ್ಯಕ್ರಮದ ಉದ್ದೇಶ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಯಾರೂ ಭಯ ಪಡಬಾರದು. ಭದ್ರತೆಯ ಜೀವನ ನಡೆಸುವಂತಹ ಸುವ್ಯವಸ್ಥೆ ಕಲ್ಪಿಸಲು ನಾವು ಸಿದ್ಧ ಎಂದು ಕೊಡಿಗೇನಹಳ್ಳಿ ಪಿಎಸ್ಐ ಶ್ರೀನಿವಾಸ್ ಪ್ರಸಾದ್ ಸಾರ್ವಜನಿಕರಿಗೆ ಧೈರ್ಯ ತುಂಬಿದರು.

ಕೊಡಿಗೇನಹಳ್ಳಿ ಗ್ರಾಮದಲ್ಲಿ ನಡೆದ ಮನೆ ಮನೆಗೆ ಪೊಲೀಸ್ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

ಜನ ಪ್ರತಿನಿಧಿ ಅಭಿನಂದನೆ ನಾಳೆ

ತುಮಕೂರು: ತರಕಾರಿ, ಹೂವು, ಹಣ್ಣು, ವಿಳ್ಯದೆಲೆ ವ್ಯಾಪಾರಿಗಳ ಸಂಘವತಿಯಿಂದ ಜುಲೈ 14 ರಂದು ಎಪಿಎಂಸಿ ಮಾರುಕಟ್ಟೆಯ ಪ್ರಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಹಾಗೂ ಜಿಲ್ಲೆಯ ಜನಪ್ರತಿನಿಧಿಗಳಿಗೆ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ. ಪರಮೇಶ್ವರ್ ಅವರು ಉದ್ಘಾಟಿಸಲಿದ್ದಾರೆ. ನಗರ ಶಾಸಕರಾದ ಜಿ.ಬಿ.ಜೋತಿಗಣೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಎಸ್. ಪಾಟೀಲ್,ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ,ಕೇಂದ್ರ ರೈಲ್ವೆ ರಾಜ್ಯ ಸಚಿವರಾದ ವಿ.ಸೋಮಣ್ಣ,ಗುಬ್ಬಿ ಶಾಸಕರಾದ ಎಸ್. ಆರ್.ಶ್ರೀನಿವಾಸ್, ಶಾಸಕರಾದ ಬಿ.ಸುರೇಶಗೌಡ, ವಿಧಾನ ಪರಿಷತ್ ಸದಸ್ಯರಾದ ಆರ್.ರಾಜೇಂದ್ರ ರಾಜಣ್ಣ,ಚಿದಾನಂದ ಎಂ.ಗೌಡ,ಜೆಡಿಎಸ್ ಮುಖಂಡರಾದ ರವೀಶ್ ಜಹಂಗೀರ್, ಟಿ.ಕೆ.ನರಸಿಂಹ ಮೂರ್ತಿ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಹಕ್ಕು ಪತ್ರ ಕಳೆದುಹೋಗಿದೆ

ತುಮಕೂರು ಜಿಲ್ಲೆ, ಕೊರಟಗೆರೆ ಪಟ್ಟಣ ಮತ್ತು ತಾಲ್ಲೂಕು ಹನುಮಂತಪುರದ ವಾಸಿಯಾದ ವೀರೇಶ್ .ಟಿ ರವರ ಹೆಂಡತಿ ಸುಮಾರು 35 ವರ್ಷ ವಯಸ್ಸಿನ ಶೃತಿ ಎಂಬ ಆದ ನಾನು ದಿನಾಂಕ: 12-05-2025 ರಂದು ಕೊರಟಗೆರೆಗೆ ಹೋಗಲು ಮಧುಗಿರಿ ಸಿವಿಲ್ ಬಸ್‌ಸ್ಟ್ಯಾಂಡ್‌ಗೆ ಬಂದಾಗ ನನ್ನ ನಿವೇಶನದ ಮೂಲ ಪತ್ರ (ಹಕ್ಕು ಪತ್ರ-ಸಂಖ್ಯೆ 688/143) ಕಳೆದು ಹೋಗಿರುತ್ತದೆ. ಪ್ರಸ್ತುತ ಹಕ್ಕುಪತ್ರ ಯಾರಿಗಾದರೂ ದೊರೆತರೆ ದಯವಿಟ್ಟು ಅದನ್ನು ನನಗೆ ತಲುಪಿಸಿ ಎಂದು ಕೋರುತ್ತೇನೆ.

IN THE COURT OF THE CIVIL JUDGE & JMFC AT KORATAGERE
C.MIS.No. 193/2025

Petitioner:- Ramanna S/o Late Bheemanna, A/a 72 years, R/o Mallekavu Village, C.N.Durga Hobli, Koratagere Taluk.

V/S

Respondent:- The-Deputy-Tahasildar The Registar of Birth & death, Thovinakere, Koratagere Taluk.

PUBLIC NOTIFICATION

Whereas the petitioner have filed the above petition to obtain the death certificate of the petitioner's Mother by name Thimmakka W/o Bheemanna died on 21-02-1973 at Koratagere Taluk, C.N.Durga Hobli, Mallekavu Village. It is hereby notify that whoever has interest or objection to obtain to the death certificate of the petitioner mther may appear in person your advocate on:- 06/09/2025 in the above case. Failing which the matter will be heard to be ex-parte.

BY ORDER OF THE COURT
Sherasthedar,
Civil Judge and J.M.F.C Court at Koratagere.
Advocate for petitioner,
B.H.Nagendrappa, Koratagere.

IN THE COURT OF THE CIVIL JUDGE AND J.M.F.C. AT KORATAGERE
C.MIS No.200/2025

PETITIONERS: 1) K.C. Nagaraju s/o Late Chikkadurappa Aged about 72 years, 2) Narasimhamurthy s/o Late Chikkadurappa Aged about 65 years, 3) K.N.Nataraju s/o K.C.Nagaraju Aged about 45 years, Petitioner no 1 to 3 are R/a Bodabandenahalli hamlet Kaadadasaiahnapalya village, Kasaba Hobli, Koratagere Taluk, Tumakuru District

V/s

RESPONDENT: The Tahasildhar The Birth and Death Register Koratagere, Koratagere taluk, Tumkur dist.

PUBLIC NOTIFICATION

Where as the petitioners have filed the above petition to obtain the death certificates of the 1 st and 2 nd petitioners Father and 3rd petitioner Grand Father by name deceased Chikkadurappa S/o Late Dasappa died on. 09/01/2016 Another at 1 st and 2 nd petitioners Mother and 3rd petitioner Grand Mother by name deceased Thimmakka w/o Late Chikkadurappa died on. 14/10/1976 Bodabandenahalli Hamlet, Kaadadasaiahnapalya Village, Kasaba Hobli, Koratagere Taluk, Tumkur District.It is hearby notify that whoever has interest or objection to obtain the death certificate of the Father may appear in person or through your advocate dated on: 20/09/2025 in the above case, failing which the matter will be herd and place in exparte.

BY ORDER OF THE COURT
Sherasthedar,
Civil Judge and J.M.F.C Court at Koratagere.
Advocate for petitioner,
K.B.Anil , Thimmesh R.H. Koratagere.

IN THE COURT OF THE CIVIL JUDGE AND J.M.F.C. AT KORATAGERE
C.MIS No.201/2025

PETITIONERS: 1) Narayanappa s/o Late Muddaiah Aged about 49 years, 2)Suresh s/o Late Muddaiah Aged about 45 years, 3) Kumara s/o Late Muddaiah Aged about 28 years, Petitioner no 1 to 3 are R/a Kaadadasaiahnapalya village, Kasaba Hobli, Koratagere Taluk, Tumakuru District.

V/s

RESPONDENT:
The Tahasildhar The Birth and Death Register Koratagere, Koratagere taluk, Tumkur dist.

PUBLIC NOTIFICATION

Where as the petitioners have filed the above petition to obtain the death certificate of the petitioners Father by name deceased Muddaiah S/o Late Dasappa died on. 10/02/1988 at Kaadadasaiahnapalya Village, Kasaba Hobli, Koratagere Taluk, Tumkur District.It is hearby notify that whoever has interest or objection to obtain the death certificate of the Father, may appear in person or through your advocate dated on: 20/09/2025 in the above case, failing which the matter will be herd and place in exparte.

BY ORDER OF THE COURT
Sherasthedar,
Civil Judge and J.M.F.C Court at Koratagere.
Advocate for petitioner,
K.B.Anil , Thimmesh R.H. Koratagere.

IN THE COURT OF THE CIVIL JUDGE & JMFC AT KORATAGERE
C.MIS.No. 188/2025

Petitioners:-1. K.jayanna S/o Late Kanuvappa, A/a 47 years 2. Puttamma W/o Late Kanuvappa, a/a 65 years, both are r/o Mallekavu, C.N.Durga Hobli, Koratagere taluk. Now r/o Kasappanahalli, Mttoda Hobli, Hosadurga taluk, Chitradurga Dist.

V/S

Respondent:- The Deputy-Tahasildar The Registar of Birth and death, Nadakacheri, Thovinakere, Koratagere taluk.

PUBLIC NOTIFICATION

Whereas the petitioners have filed the above petition to obtain the death certificate of the 1st petitioner Aunty by name Nagamma W/o Late Mallanna died on 20-04-1998 at Koratagere taluk, C.N.Durga Hobli, Mallekavu Village. It is hereby notify that whoever has interest or objection to obtain the death certificate of the 1st petitioner Aunty may appear in person or through your advocate on: 08/09/2025. in the above case. Failing which the matter will be herd written mined in your absence.

BY ORDER OF THE COURT
Sherasthedar,
Civil Judge and J.M.F.C Court at Koratagere.
Advocate for petitioner,
H.R.Ramachandraiah, Koratagere.

IN THE COURT OF THE CIVIL JUDGE & JMFC AT KORATAGERE
C.MIS.No. 198/2025

Petitioners:- 1. Jagadeesh.K.S. S/o Late Shivanna,a/a 45 years, 2. Mahadevamma w/o Late, Adavappa, a/a 65 years 3.Doddalakkamma W/o Late Henjerappa, a/a 75 years 4.Bhagyamma w/o Late Shivanna, a/a 70 years, 1,2 & 4th are r/o Kurihalli, C.N.Durga Hobli, Koratagere Taluk.

V/S

Respondent:- The Deputy-Tahasildar The Registar of Birth & death, Thovinakere, Koratagere Taluk.

PUBLIC NOTIFICATION

Whereas the petitioners have filed the above petition to obtain the death certificate of the 1st petitioner's Grand-father by name Siddappa S/o Siddappa died on 15-03-1952 at Koratagere Taluk, C.N.Durga Hobli, Kurihalli. It is hereby notify that whoever has interest or objection to obtain the death certificate of the 1st petitioner's Grand-father may appear in person or through your advocate on:- 20/9/2025 in the above case. Failing which the matter will be herd written tred in your absence.

BY ORDER OF THE COURT
Sherasthedar,
Civil Judge and J.M.F.C Court at Koratagere.
Advocate for petitioner,
H.V.Shivakumar, Koratagere.

IN THE COURT OF THE CIVIL JUDGE & JMFC AT KORATAGERE
C.MIS.No. 199/2025

Petitioners:- 1. Rangamma W/o Late Ramaswamy, A/a 50 years r/o Gundinapalya, Kasaba hobli, Koratagere taluk. 2. Ramakka w/o Late Siddagangamma a/a 60 years, R/o No.686/1, 8th cross, Kanteeravanagara, Bangalore Nort, Bangalore-560096.

V/S

Respondent:- The Tahasildar The Registar of Birth and death, Koratagere taluk.

PUBLIC NOTIFICATION

Whereas the petitioners have filed the above petition to obtain the death certificate of the 1st and 2nd petitioner Mother-in-law by name Ramakka W/o Late Doddaiah died on 2-06-2015 at Koratagere taluk, Kasaba Hobli, Gundinapalya Village. It is hereby notify that whoever has interest or objection to obtain the death certificate of the 1st petitioner Mother-in-law may appear in person or through your advocate on:- 20/09/2025in the above case. Failing which the matter will be herd written mined in your absence.

Advocate for petitioner,
H.R.Ramachandraiah, Koratagere.

IN THE COURT OF THE CIVIL JUDGE & JMFC AT KORATAGERE
C.MIS.No.98/2025

Petitioner:- Kenchappa S/o Late Veeramallappa, a/a 65 years r/o Gatlagollahalli Village, C.N.Durga Hobli, Koratagere taluk.

V/S

Respondent:- The Deputy-Tahasildar The Registar of Birth and Death, Thovinakere, C.N.Durga Hobli, Koratagere taluk.

PUBLIC NOTIFICATION

Whereas the petitioners have filed the above petition to obtain the death certificate of the petitioner's father by name Veeramallappa S/o Kenchappa died on 16-03-1964 at Koratagere taluk, C.N.Durga Hobli, Gatlagollahalli. It is hereby notify that whoever has interest or objection to obtain the death certificate of The petitioner father may appear in person or through your advocate on:- 06-09-2025 in the above case. Failing which the matter will be herd written mined in your absence.

BY ORDER OF THE COURT
Sherasthedar,
Civil Judge and J.M.F.C Court at Koratagere.
Adv.for. petitioner
Premalatha.B.L. GHR & Associates, Tumakuru.

IN THE COURT OF THE CIVIL JUDGE AND J.M.F.C. AT KORATAGERE
C.Mis.No. 82,12025

Petitioners: Siddappa & others

V/s

Respondent: The Registrar- Birth and Death/Thahasildar, Koratagere tq.

PUBLIC NOTIFICATION

WHERE AS, the petitioners have filed the above petition to obtain the death certificate petitioner's mother-in-law by name Malamma d/o Late. Veeranarasappa died on 28-08-1970 at Duggeenahalli village, Holavanahalli hobli, Koratagere Taluk, It is hereby notify that whoever has interest or objection to obtain the death certificate of the above, said persons appear in person or through your advocate on 14/08/2025 at 11.00 am in the above case, falling which the matter will be heard and written in your abence.
Given under my hand and seal of the court on this day at Koratagere .18/06/2025.

BY ORDER OF THE COURT
Sherasthedar,
Civil Judge and J.M.F.C Court at Koratagere.
Adv.for. petitioner
H.C.Vrushabendraswamy BAL, LLB

ಸ್ಥಾಪನೆ:1971
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗೌರಿಬಿದನೂರು-561208
E-mail: apmcgouribidnur@gmail.com, apmc gbn2@rediffmail.com
ಕ್ರಮ ಸಂಖ್ಯೆ :ಕೃಉಮಾಸ(ಗೌ):97:2025-26. ದಿನಾಂಕ:11-07-2025

ಪ್ರಕಟಣೆ

ಈ ಮೂಲಕ ರೈತರು ಹಾಗೂ ಇಲಾಖೆ/ಮಾರುಕಟ್ಟೆ ಸಮಿತಿಯಿಂದ ಲೈಸನ್ಸ್ ಪಡೆದ ಪೇಟೆಕಾರ್ಯಕರ್ತರು ಮತ್ತು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಲೀಸ್-ಕಂ-ಸೇಲ್ ಆಧಾರದ ಮೇಲೆ ನಿವೇಶನ ಸಂಖ್ಯೆ 28ನ್ನು ಹಂಚಿಕೆ ಪಡೆದು ಮಳಿಗೆ ನಿರ್ಮಿಸಿಕೊಂಡು ಶುದ್ಧಕ್ರಯ ಮಾಡಿಕೊಂಡಿರುವ ಪೇಟೆ ಕಾರ್ಯಕರ್ತರಾದ ಕೆ.ಎನ್.ಭಗವಂತ ಗುಪ್ತ ಮಾಲೀಕರು, ಮೆ:ಪ್ರಸಾದ್ ಸ್ಟೋರ್ಸ್, ಇವರು ದಿನಾಂಕ: 29-06-2015ರಂದು ನಿಧನ ಹೊಂದಿದ್ದು, ಅವರ ವಾರಸುದಾರರಾದ ಒಂದನೇ ಮಗ ಶ್ರೀ ಕೆ.ಬಿ.ಎಸ್.ಎನ್. ಪ್ರಸಾದ್ ಬಿನ್ ಲೇಟ್ ಕೆ.ಎನ್. ಭಗವಂತ ಗುಪ್ತ ಇವರ ಹೆಸರಿಗೆ ಸದರಿ ನಿವೇಶನ ಸಂಖ್ಯೆ28ರಲ್ಲಿ ನಿರ್ಮಿಸಿರುವ ಕಟ್ಟಡದೊಂದಿಗೆ ಫವತಿ ವಾರಸು ವರ್ಗಾವಣೆ ಮಾಡಿಕೊಡುವಂತೆ ಮೃತರ ಪತ್ನಿಯಾದ ಶ್ರೀಮತಿ ಅಚಮಂಬ ಕೋಂ ಲೇಟ್ ಕೆ.ಎನ್.ಭಗವಂತ ಗುಪ್ತ ಇವರು ದಿನಾಂಕ:10-07-2025ರಂದು ಸಮಿತಿಗೆ ಮನವಿ ಸಲ್ಲಿಸಿರುತ್ತಾರೆ. ಆದ ಕಾರಣ ಸದರಿ ನಿವೇಶನ ಸಂಖ್ಯೆ 28ರಲ್ಲಿ ನಿರ್ಮಿಸಿರುವ ಕಟ್ಟಡದೊಂದಿಗೆ ಅವರ ವಾರಸುದಾರರಿಗೆ ಫವತಿ ಖಾತೆ ವರ್ಗಾವಣೆ ಮಾಡಲು ತಮ್ಮಿಂದ ಯಾವುದೇ ಆಕ್ಷೇಪಣೆ, ಸಲಹೆ ಸೂಚನೆಗಳಿದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಮೂಲಕ ಕಾರ್ಯದರ್ಶಿ, ಕೃಉಮಾಸ, ಗೌರಿಬಿದನೂರು ಇವರಿಗೆ ಸಲ್ಲಿಸತಕ್ಕದ್ದು, ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.

ಸಹಿ/-
ಕಾರ್ಯದರ್ಶಿ,
ಕೃಉಮಾಸ, ಗೌರಿಬಿದನೂರು.

ಸ್ಥಾಪನೆ:1971
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗೌರಿಬಿದನೂರು-561208
E-mail: apmcgouribidnur@gmail.com, apmc gbn2@rediffmail.com
ಕ್ರಮ ಸಂಖ್ಯೆ :ಕೃಉಮಾಸ(ಗೌ): 93 :2025-26. ದಿನಾಂಕ:11-07-2025

ಪ್ರಕಟಣೆ

ಈ ಮೂಲಕ ರೈತರು ಹಾಗೂ ಇಲಾಖೆ/ಮಾರುಕಟ್ಟೆ ಸಮಿತಿಯಿಂದ ಲೈಸನ್ಸ್ ಪಡೆದ ಪೇಟೆಕಾರ್ಯಕರ್ತರು ಮತ್ತು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಲೀಸ್-ಕಂ-ಸೇಲ್ ಆಧಾರದ ಮೇಲೆ ನಿವೇಶನ ಸಂಖ್ಯೆ12ನ್ನು ಹಂಚಿಕೆ ಪಡೆದು ಮಳಿಗೆ ನಿರ್ಮಿಸಿಕೊಂಡು ಶುದ್ಧಕ್ರಯ ಮಾಡಿಕೊಂಡಿರುವ ಪೇಟೆ ಕಾರ್ಯಕರ್ತರಾದ ಕೆ.ಎ.ಚಿದಾನಂದ ಗುಪ್ತ ಮಾಲೀಕರು, ಮೆ:ಕೆ.ಎ.ಚಿದಾನಂದ ಗುಪ್ತ, ಇವರು ದಿನಾಂಕ: 22-11-2022ರಂದು ನಿಧನ ಹೊಂದಿದ್ದು, ಅವರ ವಾರಸುದಾರರಾದ ಎರಡನೇ ಮಗ ಶ್ರೀ ಅನಿಲ್ ಪಿ.ಸಿ. ಬಿನ್ ಲೇಟ್ ಕೆ.ಎ. ಚಿದಾನಂದ ಗುಪ್ತ ಇವರ ಹೆಸರಿಗೆ ಸದರಿ ನಿವೇಶನ ಸಂಖ್ಯೆ 12ರಲ್ಲಿ ನಿರ್ಮಿಸಿರುವ ಕಟ್ಟಡದೊಂದಿಗೆ ಫವತಿ ವಾರಸು ವರ್ಗಾವಣೆ ಮಾಡಿಕೊಡುವಂತೆ ಮೃತರ ಪತ್ನಿಯಾದ ಶ್ರೀಮತಿ ವಿಜಯಾ ಕೋಂ ಲೇಟ್ ಕೆ.ಎ.ಚಿದಾನಂದ ಗುಪ್ತ ಇವರು ದಿನಾಂಕ:10-07-2025ರಂದು ಸಮಿತಿಗೆ ಮನವಿ ಸಲ್ಲಿಸಿರುತ್ತಾರೆ. ಆದ ಕಾರಣ ಸದರಿ ನಿವೇಶನ ಸಂಖ್ಯೆ 12ರಲ್ಲಿ ನಿರ್ಮಿಸಿರುವ ಕಟ್ಟಡದೊಂದಿಗೆ ಅವರ ವಾರಸುದಾರರಿಗೆ ಫವತಿ ಖಾತೆ ವರ್ಗಾವಣೆ ಮಾಡಲು ತಮ್ಮಿಂದ ಯಾವುದೇ ಆಕ್ಷೇಪಣೆ, ಸಲಹೆ ಸೂಚನೆಗಳಿದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಮೂಲಕ ಕಾರ್ಯದರ್ಶಿ, ಕೃಉಮಾಸ, ಗೌರಿಬಿದನೂರು ಇವರಿಗೆ ಸಲ್ಲಿಸತಕ್ಕದ್ದು, ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.

ಸಹಿ/-
ಕಾರ್ಯದರ್ಶಿ,
ಕೃಉಮಾಸ, ಗೌರಿಬಿದನೂರು.

ಸ್ಥಾಪನೆ:1971
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗೌರಿಬಿದನೂರು-561208
E-mail: apmcgouribidnur@gmail.com, apmc gbn2@rediffmail.com
ಕ್ರಮ ಸಂಖ್ಯೆ :ಕೃಉಮಾಸ(ಗೌ):95:2025-26. ದಿನಾಂಕ:11-07-2025

ಪ್ರಕಟಣೆ

ಈ ಮೂಲಕ ರೈತರು ಹಾಗೂ ಇಲಾಖೆ/ಮಾರುಕಟ್ಟೆ ಸಮಿತಿಯಿಂದ ಲೈಸನ್ಸ್ ಪಡೆದ ಪೇಟೆಕಾರ್ಯಕರ್ತರು ಮತ್ತು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಲೀಸ್-ಕಂ-ಸೇಲ್ ಆಧಾರದ ಮೇಲೆ ನಿವೇಶನ ಸಂಖ್ಯೆ 22ನ್ನು ಹಂಚಿಕೆ ಪಡೆದು ಮಳಿಗೆ ನಿರ್ಮಿಸಿಕೊಂಡು ಶುದ್ಧಕ್ರಯ ಮಾಡಿಕೊಂಡಿರುವ ಪೇಟೆ ಕಾರ್ಯಕರ್ತರಾದ ಕೆ.ಎನ್. ರಾಜಗೋಪಾಲಯ್ಯ ಶೆಟ್ಟಿ ಮಾಲೀಕರು, ಮೆ:ಕೆ.ಎನ್.ರಾಜಗೋಪಾಲಯ್ಯ ಶೆಟ್ಟಿ ಇವರು ದಿನಾಂಕ: 23-10-2021ರಂದು ನಿಧನ ಹೊಂದಿದ್ದು, ಅವರ ವಾರಸುದಾರರಾದ ಏಕೈಕ ಮಗ ಶ್ರೀ ಕೆ.ಆರ್.ನವೀನ್ ಬಿನ್ ಲೇಟ್ ಕೆ.ಎನ್.ರಾಜಗೋಪಾಲಯ್ಯ ಶೆಟ್ಟಿ ಇವರ ಹೆಸರಿಗೆ ಸದರಿ ನಿವೇಶನ ಸಂಖ್ಯೆ 22ರಲ್ಲಿ ನಿರ್ಮಿಸಿರುವ ಕಟ್ಟಡದೊಂದಿಗೆ ಪವತಿ ವಾರಸು ವರ್ಗಾವಣೆ ಮಾಡಿಕೊಡುವಂತೆ ಮೃತರ ಪತ್ನಿಯಾದ ಶ್ರೀಮತಿ ನಾಗವಾಂಬ ಕೋಂ ಲೇಟ್ ಕೆ.ಎನ್.ರಾಜಗೋಪಾಲಯ್ಯ ಶೆಟ್ಟಿ ಇವರು ದಿನಾಂಕ:10-07-2025ರಂದು ಸಮಿತಿಗೆ ಮನವಿ ಸಲ್ಲಿಸಿರುತ್ತಾರೆ. ಆದ ಕಾರಣ ಸದರಿ ನಿವೇಶನ ಸಂಖ್ಯೆ 22ರಲ್ಲಿ ನಿರ್ಮಿಸಿರುವ ಕಟ್ಟಡದೊಂದಿಗೆ ಅವರ ವಾರಸುದಾರರಿಗೆ ಪವತಿ ಖಾತೆ ವರ್ಗಾವಣೆ ಮಾಡಲು ತಮ್ಮಿಂದ ಯಾವುದೇ ಆಕ್ಷೇಪಣೆ, ಸಲಹೆ ಸೂಚನೆಗಳಿದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಮೂಲಕ ಕಾರ್ಯದರ್ಶಿ, ಕೃಉಮಾಸ, ಗೌರಿಬಿದನೂರು ಇವರಿಗೆ ಸಲ್ಲಿಸತಕ್ಕದ್ದು, ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.

ಸಹಿ/-
ಕಾರ್ಯದರ್ಶಿ,
ಕೃಉಮಾಸ, ಗೌರಿಬಿದನೂರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ವೈದ್ಯಕೀಯ ಶಿಕ್ಷಣ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎಲ್ಲರಿಗೂ ಆರೋಗ್ಯ ಭರವಸೆಯನ್ನು ಸಾಕಾರಗೊಳಿಸುವತ್ತ ದಿಟ್ಟ ಹೆಜ್ಜೆ

ನಮ್ಮ ಸಾಧನೆಗೆ 2 ವರ್ಷಗಳು

ಡಾ. ಶರಣಪ್ರಕಾಶ್ ಆರ್. ಪಾಟೀಲ್
ಅವರ ಸಾಧನೆಗಳ ವೀಡಿಯೊ
ಲಿಂಕ್ ಅನ್ನು ಪ್ರವೇಶಿಸಲು

ಕ್ಯೂಆರ್ ಕೋಡ್ ಅನ್ನು
ಸ್ಕ್ಯಾನ್ ಮಾಡಿ

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸುವ ಮೂಲಕ ಕಲ್ಯಾಣ ಕರ್ನಾಟಕವನ್ನು ಆರೋಗ್ಯ ಹಬ್ ಆಗಿ ಪರಿವರ್ತಿಸುವುದು.

ವೈದ್ಯಕೀಯ ಸಂಸ್ಥೆಗಳ ಕೊರತೆಯಿರುವ ಜಿಲ್ಲೆಗಳಲ್ಲಿ 5 ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವೈದ್ಯಕೀಯ ಸಂಸ್ಥೆಗಳಿರುವುದನ್ನು ಖಚಿತಪಡಿಸುವುದು.

ಬೆಂಗಳೂರಿನಲ್ಲಿ 137 ಕೋಟಿ ರೂ. ವೆಚ್ಚದಲ್ಲಿ 450 ಹಾಸಿಗೆಯುಳ್ಳ ಅತ್ಯಾಧುನಿಕ ಆಸ್ಪತ್ರೆಯಾದ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸುವುದು.

ವೃತ್ತಿಪರತೆ ಮತ್ತು ಉದ್ಯೋಗಾರ್ಹತೆಯ ಮೇಲೆ ಗಮನ ಹರಿಸುವ ಹೊಸ ಸರ್ಕಾರಿ ನರ್ಸಿಂಗ್ ಕಾಲೇಜುಗಳು ಮತ್ತು ಸಂಬಂಧಿತ ಆರೋಗ್ಯ ವಿಜ್ಞಾನ ಕಾಲೇಜುಗಳನ್ನು ಸ್ಥಾಪಿಸುವುದು.

ಬೆಂಗಳೂರು ಸೇರಿದಂತೆ ಹೆಚ್ಚುವರಿಯಾಗಿ ಮೈಸೂರು, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಾನವ ಎದೆಹಾಲು ಕೇಂದ್ರಗಳನ್ನು ಸ್ಥಾಪಿಸುವುದು.

ರೂ. 300 ಕೋಟಿ ವೆಚ್ಚದಲ್ಲಿ ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ 10 ಅಂತಸ್ತಿನ, 500 ಹಾಸಿಗೆಗಳ ಸೌಲಭ್ಯವುಳ್ಳ ಹೊಸ ಕಟ್ಟಡಗಳ ಸ್ಥಾಪನೆ.

ಜಾಗತಿಕ ಉದ್ಯೋಗಾವಕಾಶವನ್ನು ಸಾಧಿಸುವ ನಿಟ್ಟಿನಲ್ಲಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಇಂಗ್ಲಿಷ್, ಜಪಾನೀಸ್, ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳಲ್ಲಿ ತರಬೇತಿ ನೀಡಲಾಗುವುದು.

ರೂ. 200 ಕೋಟಿ ವೆಚ್ಚದಲ್ಲಿ ಬೆಂಗಳೂರಿನಲ್ಲಿರುವ ನಿಮ್ಹಾನ್ಸ್ ಮಾದರಿಯ ಸಂಸ್ಥೆಗಳನ್ನು ಮತ್ತು ಇಂಡೋಕ್ರಿನೋಲಜಿ ಸಂಸ್ಥೆಗಳನ್ನು ಮೈಸೂರು ಹಾಗೂ ಕಲಬುರಗಿಯಲ್ಲಿ ಸ್ಥಾಪಿಸುವುದು.

ಕಿದ್ವಾಯಿ ಆಸ್ಪತ್ರೆಯು ರೋಬೋಟಿಕ್ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಮೊದಲ ಸರ್ಕಾರಿ ಸ್ವಾಮ್ಯದ ಕ್ಯಾನ್ಸರ್ ಆಸ್ಪತ್ರೆಯಾಗಿದ್ದು, ಇದುವರೆಗೂ 1,000 ರೋಬೋಟಿಕ್ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಮೂಲಕ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದೆ.

ಕರ್ನಾಟಕದಾದ್ಯಂತ ವೈದ್ಯಕೀಯ ಕಾಲೇಜುಗಳ ಆವರಣಗಳಲ್ಲಿ ಆರೋಗ್ಯ ಸಿಬ್ಬಂದಿಯ ಸುರಕ್ಷತೆಯನ್ನು ಸುಧಾರಿಸಲು ಮತ್ತು ಲಿಂಗಾಧಾರಿತ ದೌರ್ಜನ್ಯಗಳನ್ನು ತಡೆಗಟ್ಟಲು ಸಲಹಾ ದಾಖಲೆಯಾದ ವೈಲೆಟ್ ಬುಕ್ ಅನ್ನು ಬಿಡುಗಡೆ ಮಾಡಲಾಗಿದೆ.

ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯು ರೂ. 500 ಕೋಟಿ ವೆಚ್ಚದಲ್ಲಿ ಪ್ರೋಟಾನ್ ಚಿಕಿತ್ಸಾ ಘಟಕವನ್ನು ಸ್ಥಾಪಿಸಲು ಪ್ರಸ್ತಾಪಿಸಿರುವ ಭಾರತದ ಮೊದಲ ಸರ್ಕಾರಿ ಸ್ವಾಮ್ಯದ ಸಂಸ್ಥೆ ಇದಾಗಿದೆ. ಸಾಂಪ್ರದಾಯಿಕ ರೇಡಿಯೊಥೆರಪಿಗಿಂತ ಭಿನ್ನವಾಗಿದ್ದು, ಪ್ರೋಟಾನ್ ಚಿಕಿತ್ಸೆಯು ನಿಖರವಾದ, ಉದ್ದೇಶಿತ ಪ್ರಮಾಣದಲ್ಲಿ ಚಿಕಿತ್ಸೆ ನೀಡುವ ಮೂಲಕ ಆಗಬಹುದಾದ ಅಡ್ಡಪರಿಣಾಮಗಳು ಮತ್ತು ಪಾರ್ಶ್ವ ಹಾನಿಯನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ.

ಮಾನ್ಯ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ ಮತ್ತು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ **ಡಾ. ಶರಣಪ್ರಕಾಶ್ ಆರ್. ಪಾಟೀಲ್** ಅವರು ಪ್ರಧಾನ ಕಾರ್ಯದರ್ಶಿಗಳಾದ **ಶ್ರೀ ಮೊಹಮ್ಮದ್ ಮೋಶಿನ್** ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕಿ **ಡಾ. ಸುಜಾತಾ ರಾಥೋಡ್ ಬಿ.ಎಲ್.** ಅವರೊಂದಿಗೆ ಸಭೆಯೊಂದರಲ್ಲಿ ಭಾಗವಹಿಸಿರುವುದು.

ನಮ್ಮ ಕರ್ನಾಟಕ
ಗ್ಯಾರಂಟಿ ಕರ್ನಾಟಕ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸಮಾಚಾರ ಸಣ್ಣದಲ್ಲ

ಕಾಲ್ತುಳಿತ: ಕುನ್ಹಾ ವರದಿ ಒಪ್ಪಲು ಸಾಧ್ಯವಿಲ್ಲ

ಹುಬ್ಬಳ್ಳಿ: ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತಕ್ಕೆ ಪೊಲೀಸರ ವೈಫಲ್ಯವೇ ಕಾರಣ ಎಂದು ತನಿಖೆ ನಡೆಸಿದ್ದ ನಿವೃತ್ತ ನ್ಯಾಯಮೂರ್ತಿ ಮೈಕಲ್ ಕುನ್ಹಾ ವರದಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರನ್ನು ವಿಜಯೋತ್ಸವಕ್ಕೆ ಆಹ್ವಾನಿಸಿದ್ದು ಯಾರು? ಸಮಾರಂಭಕ್ಕೆ ಅನುಮತಿ ನೀಡಿದ್ದು ಯಾರು? ಪೊಲೀಸ್ ಅಧಿಕಾರಿಗಳು ವಿಜಯೋತ್ಸವ ಬೇಡ ಎಂದು ಹೇಳಿದ್ದರೂ, ಕಾಂಗ್ರೆಸ್ ಮುಖಂಡರು ತಮ್ಮ ಪ್ರತಿಷ್ಠೆಗಾಗಿ, ಒತ್ತಾಯಪೂರ್ವಕವಾಗಿ ಅದ್ದೂರಿ ಸಮಾರಂಭ ಮಾಡಲು ನಿರ್ಧರಿಸಿದರು. ಈಗ ಪೊಲೀಸರ ಮೇಲೆಯೇ ಆರೋಪದ ವರದಿ ಸಿದ್ಧವಾಗಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ತನಿಖೆಗೆ ಆಯೋಗ ರಚಿಸುವಪೂರ್ವ, ಸರಕಾರ ಹೈಕೋರ್ಟ್ ನ್ಯಾಯಮೂರ್ತಿ ಅವರಿಂದ ಅನುಮತಿ ಪಡೆದಿಲ್ಲ. ಹೀಗಾಗಿ ಈ ವರದಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂದು ಹೇಳಿದರು.

ಸಂತೆಬೆನ್ನೂರು: 3.5 ಲಕ್ಷ ಎಗರಿಸಿದ ಕಳ್ಳಿಯರು

ದಾವಣಗೆರೆ: ಬಂಗಾರದ ಲೋನ್ ರಿನಿವಲ್ ಮಾಡಲು ಬಂದಿದ್ದ ಮಹಿಳೆಯ ಹಣವನ್ನು ಕಳ್ಳಿಯರು ಎಗರಿಸಿರುವ ಘಟನೆ ಚನ್ನಗಿರಿ ತಾಲೂಕಿನ ಸಂತೆಬೆನ್ನೂರು ಕೆನರಾ ಬ್ಯಾಂಕ್‌ನಲ್ಲಿ ನಡೆದಿದೆ. ಚನ್ನಗಿರಿ ತಾಲೂಕಿನ ತಣಿಗೆರೆ ಗ್ರಾಮದ ಲತಾ ಎಂಬುವರು ಗೋಲ್ಡ್ ಲೋನ್ ನವೀಕರಣಕ್ಕೆ ಬಂದಿದ್ದರು. ಪೆನ್ ನೀಡುವ ನೆಪದಲ್ಲಿ ಲತಾ ಬಳಿ ಇದ್ದ ಮೂರುವರೆ ಲಕ್ಷ ಹಣವನ್ನು ಕಳ್ಳಿಯರು ಎಗರಿಸಿದ್ದರು. ಕಳ್ಳಿಯರ ಕೈಚಳಕ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹಣ ಕಳುವಾಗಿದೆ ಎಂದು ಅರಿತ ಲತಾ ದಂಪತಿ ಕೂಡಲೇ ಎಚ್ಚೆತ್ತುಕೊಂಡು ಮಧ್ಯ ಪ್ರದೇಶ ಮೂಲದ ಇಬ್ಬರನ್ನು ಹಿಡಿದು ಅವರ ಬಳಿ ಇದ್ದ ಎರಡೂವರೆ ಲಕ್ಷ ರು. ಹಣ ಪಡೆದು ಪೊಲೀಸರಿಗೆ ಒಪ್ಪಿಸಿದ್ದಾರೆ. ಒಂದು ಲಕ್ಷ ರು. ಹಣದೊಂದಿಗೆ ಮತ್ತೊಬ್ಬ ಕಳ್ಳಿ ಪರಾರಿಯಾಗಿದ್ದಾಳೆ. ಸಂತೆಬೆನ್ನೂರು ಪೊಲೀಸರು ಇಬ್ಬರು ಮಹಿಳೆಯರ ವಿಚಾರಣೆ ನಡೆಸುತ್ತಿದ್ದು, ಮತ್ತೊಬ್ಬಳಿಗಾಗಿ ಶೋಧ ನಡೆಸುತ್ತಿದ್ದಾರೆ. ಸಂತೆಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನವಜಾತ ಶಿಶು ಮಾರಾಟ: ಇಬ್ಬರ ಸೆರೆ

ಉತ್ತರ ಕನ್ನಡ: ಕೇವಲ 20 ದಿನಗಳ ಗಂಡು ಮಗುವನ್ನು 3.20 ಲಕ್ಷಕ್ಕೆ ಮಾರಾಟ ಮಾಡಿರುವ ಅಮಾನವೀಯ ಘಟನೆಯೊಂದು ದಾಂಡೇಲಿಯಲ್ಲಿ ಬೆಳಕಿಗೆ ಬಂದಿದೆ. ಈ ಸಂಬಂಧ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಇನ್ನೂ ಇಬ್ಬರಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಬೆಳಗಾವಿಯ ವಸೀಮ್ ಚಂಡು ಪಟೇಲ್ ಮತ್ತು ಮೋಹಿನ್ ಚಂಡು ಪಟೇಲ್ ದಂಪತಿಗೆ ಜೂನ್ 17 ರಂದು ದಾಂಡೇಲಿಯ ಸಾರ್ವಜನಿಕ ಸರಕಾರಿ ಆಸ್ಪತ್ರೆಯಲ್ಲಿ ಗಂಡು ಮಗು ಜನಿಸಿತ್ತು. ಮಗುವಿನ ಜನನದ ನಂತರ, ತಾಯಿ ಮೋಹಿನ್ ದಾಂಡೇಲಿಯ ದೇಶಪಾಂಡೆ ನಗರದಲ್ಲಿರುವ ತನ್ನ ತವರು ಮನೆಗೆ ಬಾಣಂತನಕ್ಕಾಗಿ ಬಂದಿದ್ದರು. ದಂಪತಿ ಸ್ವಸಹಾಯ ಸಂಘಗಳಿಂದ ಪಡೆದಿದ್ದ ಸಾಲವನ್ನು ಮರುಪಾವತಿಸಲು ಸಾಧ್ಯವಾಗದೆ ಆರ್ಥಿಕ ಸಂಕಷ್ಟದಲ್ಲಿದ್ದರು. ಸಾಲ ನೀಡಿದವರು ಮರುಪಾವತಿಗಾಗಿ ಒತ್ತಡ ಹೇರುತ್ತಿದ್ದರಿಂದಾಗಿ ದಂಪತಿ ತಮ್ಮ ನವಜಾತ ಶಿಶುವನ್ನೇ ಮಾರಾಟ ಮಾಡಲು ನಿರ್ಧರಿಸಿದ್ದರು. ಮಧ್ಯವರ್ತಿಗಳ ನೆರವಿನಿಂದ, ಅವರು ಮಗುವನ್ನು ಬೆಳಗಾವಿಯ ನೂರ್ ಅಹ್ಮದ್ ಮಜೀದ್ ಎಂಬುವವರಿಗೆ 3.20 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ. ಈ ವ್ಯವಹಾರವು ತಾಯಿಯ ತವರು ಮನೆಯಲ್ಲಿಯೇ ನಡೆದಿದೆ ಎಂದು ವರದಿಯಾಗಿದೆ.

ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗೆ ಭಾರಿ ಬೇಡಿಕೆ | 62 ಮಂದಿ ಬೆಂಗಳೂರಿನವರಿಂದಲೇ ಅರ್ಜಿ ಸಲ್ಲಿಕೆ

ಮೂರು ಹುದ್ದೆಗೆ 108 ಅರ್ಜಿ ಸಲ್ಲಿಕೆ

ಅಪರ್ಣಾ ಎ.ಎಸ್ ಬೆಂಗಳೂರು

ಪಾರದರ್ಶಕ ಆಡಳಿತವನ್ನು ನೀಡಬೇಕೆಂಬ ಉದ್ದೇಶದಿಂದ ಜಾರಿಯಾಗಿರುವ ಮಾಹಿತಿ ಹಕ್ಕು ಕಾಯಿದೆಯ ಹಿತಾಸಕ್ತಿ ಕಾಪಾಡಲು ರೂಪುಗೊಂಡಿರುವ ಆರ್‌ಟಿಐ ಆಯೋಗದ ಆಯುಕ್ತ ಸ್ಥಾನಕ್ಕೆ ಭಾರಿ ಬೇಡಿಕೆಯಿದ್ದು, ಖಾಲಿಯಿರುವ ಮೂರು ಸ್ಥಾನಕ್ಕೆ 108 ಮಂದಿ ಅರ್ಜಿ ಸಲ್ಲಿಸಿದ್ದಾರೆ.

ರಾಜ್ಯ ಸರಕಾರ ಮೊದಲ ಹಂತದಲ್ಲಿ ಏಳು ಮಂದಿಯನ್ನು ಆಯುಕ್ತರ ಸ್ಥಾನಕ್ಕೆ ಆಯ್ಕೆ ಮಾಡಿತ್ತು. ಆದರೀಗ ಖಾಲಿಯಿರುವ ಮೂರು ಸ್ಥಾನಕ್ಕೆ ನೂರಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದು, ಇವರಲ್ಲಿ ಯಾರನ್ನು ಆಯ್ಕೆ ಮಾಡಬೇಕು ಎನ್ನುವ ಗೊಂದಲ ಶುರುವಾಗಿದೆ. ಈ ಹಿಂದೆ ನ್ಯಾಯಾಂಗ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸಿದ ಹಾಗೂ ಆರ್‌ಟಿಐ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಿದ್ದವರು ಅರ್ಜಿ ಸಲ್ಲಿಸುತ್ತಿದ್ದರು. ಆದರೀಗ ಈ ಅನುಭವ ಇಲ್ಲದ ಅನೇಕರು ಅರ್ಜಿ ಸಲ್ಲಿಸಿದ್ದಾರೆ ಎಂದು ತಿಳಿದುಬಂದಿದೆ.

ಆರ್‌ಟಿಐ ಆಯುಕ್ತರ ಸ್ಥಾನಕ್ಕೆ ನಿರ್ದಿಷ್ಟ ಮಾರ್ಗಸೂಚಿಗಳಿಲ್ಲದಿದ್ದರೂ, ಮಾಹಿತಿ ಹಕ್ಕು ಕಾಯಿದೆ ಹಾಗೂ ಕಾನೂನಿನ ಬಗ್ಗೆ ಅರಿವಿರಬೇಕು. ಸಮಾಜ ಸೇವೆ, ಪತ್ರಿಕೋದ್ಯಮ, ನ್ಯಾಯಾಂಗ, ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಜ್ಞಾನವಿರುವ ಹಾಗೂ ಸಾಮಾಜಿಕ ಕಳಕಳಿಯಿರುವವರನ್ನು ಸರಕಾರ ನೇಮಿಸಬೇಕು ಹಾಗೂ 65 ವರ್ಷದೊಳಗಿನವರಿಗೆ ಅವಕಾಶ ನೀಡಬೇಕು ಎನ್ನುವ ನಿಯಮ ಕಾಯಿದೆಯಲ್ಲಿದೆ. ಆದರೆ ನಿರ್ದಿಷ್ಟ ಮಾನದಂಡಗಳಿಲ್ಲದೇ ಇರುವುದು, ಈ ಪ್ರಮಾಣದಲ್ಲಿ ಅರ್ಜಿ ಸಲ್ಲಿಸಲು ಕಾರಣ ಎನ್ನಲಾಗಿದೆ. ಇದರೊಂದಿಗೆ ಆರ್‌ಟಿಐ ಆಯುಕ್ತರ ಹುದ್ದೆ ಆಯಕಟ್ಟಿನ ಹುದ್ದೆಯಾಗಿರುವುದರಿಂದ ಆಕಾಂಕ್ಷಿಗಳ ಸಂಖ್ಯೆ ದೊಡ್ಡದೆ ಎನ್ನುವುದು ಹಲವರ ಅಭಿಪ್ರಾಯವಾಗಿದೆ.

ಬೆಂಗಳೂರಿನವರೇ ಅತಿಹೆಚ್ಚು: ಇನ್ನು ಆರ್‌ಟಿಐ ಆಯೋಗದ ಅಧ್ಯಕ್ಷರ ಸ್ಥಾನಕ್ಕೆ ಅರ್ಜಿಯೂ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಲ್ಲಿಕೆಯಾಗಿದ್ದರೂ, ಅತಿಹೆಚ್ಚು ಅರ್ಜಿ ಸಲ್ಲಿಕೆಯಾಗಿರುವುದು ರಾಜಧಾನಿ ಬೆಂಗಳೂರಿನಲ್ಲಿ. ಇರುವ ಮೂರು ಹುದ್ದೆಗಳಿಗೆ 108 ಜನರು ಆಸಕ್ತಿ ತೋರಿಸಿದ್ದು, ಇದರಲ್ಲಿ 64 ಅರ್ಜಿಗಳು ಬೆಂಗಳೂರಿನ ಅಭ್ಯರ್ಥಿಗಳು ಸಲ್ಲಿಸಿದ್ದಾರೆ. ಇನ್ನುಳಿದಂತೆ ಬೆಳಗಾವಿಯಿಂದ ಏಳು, ಮೈಸೂರಿನಿಂದ ಆರು ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅತಿ ಕಡಿಮೆ ಅಂದರೆ ಕೊಡಗು ಹಾಗೂ ದಕ್ಷಿಣ ಕನ್ನಡದಿಂದ ಒಬ್ಬರು ಅರ್ಜಿ ಸಲ್ಲಿಸಿದ್ದಾರೆ. 10ಕ್ಕೂ ಅಧಿಕ ಜಿಲ್ಲೆಗಳಿಂದ ಯಾವುದೇ ರೀತಿಯ ಅರ್ಜಿಗಳು ದಾಖಲಾಗಿಲ್ಲ ಎನ್ನುವು ಗಮನಾರ್ಹ ಅಂಶವಾಗಿದೆ.

ಯಾವ ಜಿಲ್ಲೆಯಿಂದ ಅತಿಹೆಚ್ಚು ಅರ್ಜಿ ಸಲ್ಲಿಕೆ

ಜಿಲ್ಲೆ	ಸಲ್ಲಿಕೆಯಾದ ಅರ್ಜಿ
ಬೆಂಗಳೂರು	64
ಬೆಳಗಾವಿ	07
ಮೈಸೂರು	06
ದಾವಣಗೆರೆ	05
ವಿಜಯಪುರ, ಕಲಬುರಗಿ	04

- ಆರ್‌ಟಿಐ ಅರ್ಜಿ ಸಲ್ಲಿಸದೇ ಇರುವ ಅನೇಕರಿಂದ ಆಯುಕ್ತ ಹುದ್ದೆಗೆ ಅರ್ಜಿ ಸಲ್ಲಿಕೆ
- ಆಯುಕ್ತ ಸ್ಥಾನಕ್ಕೆ ಅರ್ಜಿಯನ್ನೇ ಸಲ್ಲಿಸದ 10ಕ್ಕೂ ಅಧಿಕ ಜಿಲ್ಲೆಯ ಮಂದಿ
- ಪತ್ರಕರ್ತರ ಕೋಟಾದಲ್ಲಿ ಮತ್ತಷ್ಟು ಮಂದಿಯಿಂದ ಅರ್ಜಿ ಸಲ್ಲಿಕೆ
- ಆಯುಕ್ತರ ನೇಮಕಕ್ಕೆ ಸರಕಾರದ ಮೇಲೆ ಹೆಚ್ಚಿದ ರಾಜಕೀಯ ಲಾಭಿ

ಯಾರಿಗೆಲ್ಲ ಅವಕಾಶವಿಲ್ಲ?

- ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ಪರಿಷತ್‌ನ ಸದಸ್ಯರಾಗಿರಬಾರದು
- ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು
- ಯಾವುದೇ ರಾಜಕೀಯ ಪಕ್ಷದೊಂದಿಗೆ ಸಕ್ರಿಯವಾಗಿ ಕಾಣಿಸಿಕೊಂಡಿರಬಾರದು
- ಯಾವುದೇ ಉದ್ದಿಮೆ ಅಥವಾ ಯಾವುದೇ ರೀತಿಯ ಹುದ್ದೆಯಲ್ಲಿರಬಾರದು

ಆರ್‌ಟಿಐ ಅರ್ಜಿಯನ್ನೇ ಸಲ್ಲಿಸದ ಅನೇಕರಿಂದ ಅರ್ಜಿ ಸಲ್ಲಿಕೆ: ಆದರೆ ಆಯುಕ್ತರಾಗಲು ಅರ್ಜಿ ಸಲ್ಲಿಸಿರುವವರ ಸಂಖ್ಯೆ ದೊಡ್ಡದಾಗಿದ್ದರೂ, ಇವರಲ್ಲಿ ಬಹುತೇಕರು ಆರ್‌ಟಿಐ ಅರ್ಜಿ ಸಲ್ಲಿಸಿದ ಅಥವಾ ನ್ಯಾಯಾಂಗ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸಿದ ಹೆಸರು ಹೆಚ್ಚಾಗಿ ಕಾಣಿಸುತ್ತಿಲ್ಲ. ಆರಂಭದ ದಿನದಲ್ಲಿ ಈ ಹುದ್ದೆಗೆ ನಿವೃತ್ತ ನ್ಯಾಯಾಧೀಶರನ್ನು ಆಯ್ಕೆ ಮಾಡಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅರ್ಜಿ ಸಲ್ಲಿಸಿರುವ ಅನೇಕರು ಈವರೆಗೆ ಒಂದೇ ಒಂದು ಆರ್‌ಟಿಐ ಅರ್ಜಿ ಸಲ್ಲಿಸಿಲ್ಲ. ಈ ಹುದ್ದೆಯ ಮೌಲ್ಯವನ್ನೇ ಅರಿಯದ ಅನೇಕರು ಹುದ್ದೆಗೆ ಅರ್ಜಿ ಸಲ್ಲಿಸಿದ್ದಾರೆ ಎನ್ನುವ ಮಾತುಗಳನ್ನು ಆರ್‌ಟಿಐ ಕಾರ್ಯಕರ್ತರು ಹೇಳಿದ್ದಾರೆ.

ಸೊಲ್ಲೆತ್ತದಿರಿ: ಹೈಕಮಾಂಡ್

ಮೊದಲಪುಟದಿಂದ

ಈ ಎಚ್ಚರಿಕೆ ಸಂದೇಶ ಬೆನ್ನಲ್ಲೇ ಡಿ.ಕೆ.ಶಿವಕುಮಾರ್ ಹಾಗೂ ಡಿಕೆ ಆಪ್ತರು ಮೌನವಾಗಿರಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಹಾರ ಚುನಾವಣೆ ತನಕ ಸುಮ್ಮನಿರಿ: ವರ್ಷದಿಂದ ವರ್ಷಕ್ಕೆ ಒಂದೊಂದೇ ರಾಜ್ಯ ದಲ್ಲಿ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಕಾಂಗ್ರೆಸ್‌ಗೆ ಬಿಹಾರ ವಿಧಾನಸಭಾ ಚುನಾವಣೆ ಅತ್ಯಂತ ಪ್ರಮುಖವಾಗಿದೆ.

ಮೈತ್ರಿ ಪಕ್ಷಗಳೊಂದಿಗೆ ಚುನಾವಣೆ ಎದುರಿಸಿದರೂ, ಸಿಗುವಷ್ಟು ಕ್ಷೇತ್ರದಲ್ಲಾದರೂ ಉತ್ತಮ ಸಾಧನೆ ಮಾಡಬೇಕಾಗಿದೆ. ಆದ್ದರಿಂದ ಈ ಹಂತದಲ್ಲಿ ಕರ್ನಾಟಕದ ಗೊಂದಲಗಳನ್ನು ಬಗೆಹರಿಸಲು ಸಮಯವಿಲ್ಲ. ಬಿಹಾರ ವಿಧಾನಸಭಾ ಚುನಾವಣೆ ಮುಗಿದ ಬಳಿಕ ಕರ್ನಾಟಕದ ಕಾಂಗ್ರೆಸ್ ಗೊಂದಲಗಳ ಬಗ್ಗೆ ತಲೆಕೆಡಿಸಿಕೊಳ್ಳಲು ಹೈಕಮಾಂಡ್ ತೀರ್ಮಾನಿಸಿದ್ದು, ಇದೇ ಅಂಶವನ್ನು ಸಿಎಂ–ಡಿಸಿಎಂಗೂ ಹೈಕಮಾಂಡ್ ತಿಳಿಸಿದೆ ಎನ್ನಲಾಗಿದೆ.

ಹೈಗೆ ಬಣಗಳ ದೂರು

ಭಿನ್ನಾಭಿಪ್ರಾಯವನ್ನು ಬದಿಗಿಡಿ ಎನ್ನುವ ಹೈಕಮಾಂಡ್ ಸೂಚನೆಯ ಹೊರತಾಗಿಯೂ, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಆಪ್ತ ಬಣ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪ್ರತ್ಯೇಕ ದೂರುಗಳನ್ನು ದಾಖಲಿಸಿದ್ದಾರೆ. ಎರಡೂ ಕಡೆಯವರು 'ಬದಲಾವಣೆ'ಗೆ ಸಂಬಂಧಿಸಿದಂತೆಯೇ ದೂರುಗಳನ್ನು ನೀಡಿದ್ದಾರೆ ಎನ್ನಲಾಗಿದೆ.

ಸ್ಥಳೀಯರ ಸಹಾಯದಿಂದ ಬದುಕುಳಿದ ತಾತಪ್ಪ

ಪತಿಯನ್ನೇ ನದಿಗೆ ತಳ್ಳಿದ ಪತ್ನಿ

ರಾಯಚೂರು: ಫೋಟೊ ತೆಗೆಯುವ ನೆಪದಲ್ಲಿ ಪತ್ನಿ ತನ್ನ ಪತಿಯನ್ನೇ ನದಿಗೆ ತಳ್ಳಿದ ಘಟನೆ ರಾಯಚೂರಿನಲ್ಲಿ ನಡೆದಿದೆ.

ರಾಯಚೂರಿನ ಗುರ್ಜಾಪುರ ಬ್ರಿಡ್ಜ್ ಕಂ ಬ್ಯಾರೇಜ್ ಬಳಿ ನಡೆದಿದ್ದು, ಫೋಟೊ ಶೂಟ್ ನೆಪದಲ್ಲಿ ಪತ್ನಿಯೇ ತನ್ನ ಪತಿಯನ್ನು ನದಿಗೆ ತಳ್ಳಿದ್ದಾರೆ. ಇದನ್ನು ಕಂಡ ಸ್ಥಳೀಯರು ಕೂಡಲೇ ಹಗ್ಗಗಳ ಸಹಾಯದಿಂದ ಪತಿಯನ್ನು ರಕ್ಷಣೆ ಮಾಡಿದ್ದಾರೆ. ಈ ಕುರಿತ ವಿಡಿಯೊ ಇದೀಗ ವ್ಯಾಪಕ ವೈರಲ್ ಆಗಿದೆ.

ಇಷ್ಟಕ್ಕೂ ಆಗಿದ್ದೇನು?

ಯಾದಗಿರಿಯ ವಡಗೆರಾ ತಾಲೂಕಿನ ಗದ್ದೆಮ್ಮ ಹಾಗೂ ತಾತಪ್ಪ ಕಳೆದ ಏ.10 ರಂದು ಮದುವೆಯಾಗಿದ್ದರು. ಮದುವೆಯಾಗಿ ಮೂರು ತಿಂಗಳಲ್ಲೇ ಸಂಸಾರದಲ್ಲಿ ಬಿರುಕು ಮೂಡಿ, ಜಗಳವಾಡುತ್ತಿದ್ದರು. ಆ ಜಗಳವೇ ಈ ಘಟನೆಗೆ ಕಾರಣ ಎಂದು ತಾತಪ್ಪ ಆರೋಪಿಸಿದ್ದಾರೆ.

ರಾಯಚೂರಿನ ಶಕ್ತಿನಗರ ನಿವಾಸಿ ತಾತಪ್ಪ ನೀರಿಗೆ ಬಿದ್ದ ಪತಿಯಾಗಿದ್ದು, ಅವರ ಪತ್ನಿ ಗದ್ದೆಮ್ಮ ಅವರೇ ನೀರಿಗೆ ತಳ್ಳಿದ್ದಾರೆ. ನೀರಿಗೆ ಬಿದ್ದ ಕೂಡಲೇ ನದಿಯಲ್ಲಿ ಈಜಿ ಕಲ್ಲು ಬಂಡೆಯ ಮೇಲೆ ನಿಂತು ಕಾಪಾಡಿ ಅಂತ ಕೂಗಿಕೊಂಡಿದ್ದಾರೆ. ಈ ವೇಳೆ ಬ್ರಿಡ್ಜ್ ಕಂ ಬ್ಯಾರೇಜ್ ಮಾರ್ಗವಾಗಿ ಹೊರಟಿದ್ದ ಬುಲೆರೋ ವಾಹನದಲ್ಲಿದ್ದವರು ಹಾಗೂ ಕೆಬಿಜೆಎನ್‌ಎಲ್ ಸಿಬ್ಬಂದಿ, ಸ್ಥಳೀಯರು ನದಿಗೆ ಹಗ್ಗ ಎಸೆದು ತಾತಪ್ಪ ಅವರನ್ನು ರಕ್ಷಿಸಿದ್ದಾರೆ. ನದಿಯಿಂದ ಹೊರಗೆ ಬಂದ ಪತಿ ತನ್ನ ಪತ್ನಿಯ ವಿರುದ್ಧ ಗರಂ ಆಗಿದ್ದು, ಫೋನ್‌ನಲ್ಲಿ ಸಂಬಂಧಿಕರಿಗೆ ಮಾಹಿತಿ ನೀಡಿದ್ದಾರೆ. ಕಳೆದ ಎರಡು ದಿನಗಳ ಹಿಂದೆ ನಡೆದ ಘಟನೆಯ ವಿಡಿಯೊ ಈಗ ವೈರಲ್ ಆಗಿದೆ.

ಲೈಂಗಿಕ ದೌರ್ಜನ್ಯ: ಆರೋಪಿಗೆ ಜೀವಾವಧಿ ಶಿಕ್ಷೆ

ಮಂಡ್ಯ: ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಗ್ರಾಮದಲ್ಲಿ ಮೂರುವರೆ ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪಿಗೆ ಮಂಡ್ಯ 2ನೇ ಜಿಲ್ಲಾ ಸೆಷನ್ ಕೋರ್ಟ್ ಜೀವಾವಧಿ ಶಿಕ್ಷೆ ಹಾಗೂ 1 ಲಕ್ಷ ರು. ದಂಡ ವಿಧಿಸಿ ತೀರ್ಪು ನೀಡಿದೆ.

ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಗ್ರಾಮದ ಶಿವಣ್ಣ (59) ಜೀವಾವಧಿ ಶಿಕ್ಷೆಗೆ ಗುರಿಯಾದ ಆರೋಪಿಯಾಗಿದ್ದಾನೆ. 2023ರ ಡಿ.11 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ತನ್ನ ಮನೆಯ ಮುಂದೆ ಬಾಲಕಿ ಆಟವಾಡುತ್ತಿದ್ದಾಗ ಆರೋಪಿಯೂ ಬಾಲಕಿಯನ್ನು ಪುಸಲಾಯಿಸಿಕೊಂಡು ಪಕ್ಕದಲ್ಲೇ ಇರುವ ತನ್ನ ಮನೆಗೆ ಕರೆದುಕೊಂಡು ಹೋಗಿ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದ. ಅಮ್ಮನಿಗೆ ಹೇಳಬಾರದೆಂದು ಬೆದರಿಕೆ ಕೂಡ ಹಾಕಿದ್ದ. ನಂತರ ಮಗುವಿನ ತಾಯಿ ನೀಡಿದ ದೂರಿನ ಮೇರೆಗೆ ಕೃಷ್ಣರಾಜ ಸಾಗರ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆ 2012ರ ಅಡಿಯಲ್ಲಿ ದೂರು ದಾಖಲಾಗಿತ್ತು. ಅಂದಿನ ಪಿಎಸ್‌ಐ ಬಸವರಾಜು ಅವರು ಪ್ರಕರಣ ದಾಖಲು ಮಾಡಿಕೊಂಡಿದ್ದರು.

ಭೂಮಿಕೊಡಲು ರೈತರ ಒಪ್ಪಿಗೆ

ಮೊದಲಪುಟದಿಂದ

ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪತ್ರ ಬರೆದಿರುವ ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿ ರೈತ ಹೋರಾಟ ಸಮಿತಿಯು, ಕೆಐಎಡಿಬಿಗೆ ಜಮೀನು ನೀಡಲು ರೈತರ ಒಪ್ಪಿಗೆ ಇದೆ ಎಂದು ತಿಳಿಸಿದೆ. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿ ರೈತ ಹೋರಾಟ ಸಮಿತಿಯು ಪತ್ರ ಬರೆದಿದೆ. ಚನ್ನರಾಯಪಟ್ಟಣ ಹೋಬಳಿಯ 1,777 ಎಕರೆ ಜಮೀನನ್ನು ಕೆಐಎಡಿಬಿಗೆ ಕೊಡುವುದಕ್ಕೆ 13 ಗ್ರಾಮಗಳ ರೈತರ ಒಪ್ಪಿಗೆಯಿದೆ. ರಾಜ್ಯ ಸರಕಾರ ರೈತರ ಭೂಮಿಗೆ ಒಳ್ಳೆಯ ಬೆಲೆ ನಿಗದಿ ಪಡಿಸಬೇಕು. ಆ ಮೂಲಕ ಜಮೀನು ಖರೀದಿ ಮಾಡಬೇಕು ಎಂಬುದಾಗಿ ಸಿಎಂಗೆ ವಿನಂತಿಸಿದೆ. ಭೂಮಿ ಖರೀದಿಗೆ ನಾಲ್ಕು ಷರತ್ತುಗಳನ್ನು ರೈತ ಹೋರಾಟ ಸಮಿತಿ ವಿಧಿಸಿದ್ದು ಪ್ರತಿ ಎಕರೆಗೆ 3.50 ಕೋಟಿ ರು. ದರ ನಿಗದಿಪಡಿಸಬೇಕು. ಜಮೀನು ಕಳೆದುಕೊಂಡ ರೈತ ಮಕ್ಕಳಿಗೆ ವಿದ್ಯಾಭ್ಯಾಸದ ಅನುಗುಣವಾಗಿ ಉದ್ಯೋಗ ನೀಡುವುದು. ಯಾವುದೇ ಕಾರಣಕ್ಕೂ ಹಸಿರು ವಲಯವಾಗಿ ಪರಿವರ್ತಿಸಬಾರದು. ಗ್ರಾಮದ ಅಕ್ಕಪಕ್ಕ ಉಳಿದ ಜಮೀನುಗಳನ್ನು ಹಳದಿ ವಲಯವನ್ನಾಗಿ ಪರಿವರ್ತಿಸಬೇಕು ಎಂದು ಮನವಿ ಸಲ್ಲಿಸಿದೆ.

ಅಂತಿಮ ಅಧಿಸೂಚನೆ

ದೇವನಹಳ್ಳಿ ರೈತರ ಸುದೀರ್ಘ ಹೋರಾಟ ಹಾಗೂ ರಾಷ್ಟ್ರೀಯ ಮಟ್ಟದ ಚಳುವಳಿಗಾರರೂ ಹೋರಾಟಕ್ಕೆ ಕೈ ಜೋಡಿಸಿರುವ ಹಿನ್ನೆಲೆ ರಾಜ್ಯ ಸರಕಾರ ಜು.4 ರಂದು ರೈತ ಮುಖಂಡರೊಂದಿಗೆ ಸಭೆ ನಡೆಸಿತ್ತು. ಈ ವೇಳೆ ಈಗಾಗಲೇ ಜಮೀನು ಸ್ವಾಧೀನ ಸಂಬಂಧ ಪ್ರಾಥಮಿಕ ಅಧಿಸೂಚನೆ ಹಾಗೂ ಅಂತಿಮ ಅಧಿಸೂಚನೆ ಎರಡೂ ಹೊರಡಿಸಲಾಗಿದೆ. ಈ ಹಂತದಲ್ಲಿ ಸ್ವಾಧೀನದಿಂದ ಕೈಬಿಡಲು ಕಾನೂನು ತೊಡಕುಗಳು ಉಂಟಾಗಲಿವೆ. ಹೀಗಾಗಿ ಕಾನೂನು ತಜ್ಞರೊಂದಿಗೆ ಚರ್ಚಿಸಲು ಹತ್ತು ದಿನಗಳ ಕಾಲಾವಕಾಶ ಸಿದ್ದರಾಮಯ್ಯ ಕೋರಿದ್ದರು.

ವಿವಿಧ ಸಂಘಟನೆಗಳ ವಿರೋಧ: ಮತ್ತೊಂದೆಡೆ ಭೂಮಿ ನೀಡಲು ರೈತರ ಒಪ್ಪಿಗೆ ಎಂದಿರುವ ರೈತ ಹೋರಾಟ ಸಮಿತಿ ಮುಖಂಡರ ವಿರುದ್ಧ ವಿವಿಧ ಸಂಘಟನೆಗಳ ರೈತ ಮುಖಂಡರು ಆಕ್ರೋಶ ಹೊರಹಾಕಿದ್ದಾರೆ. ಭೂಸ್ವಾಧೀನ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 15ರಂದು ಸಭೆ ಕರೆದಿದ್ದಾರೆ. ಈ ಹಂತದಲ್ಲಿ ವಿರೋಧಾಭಾಸದ ಹೇಳಿಕೆ ನೀಡಿರುವುದು ಸರಿಯಲ್ಲ ಎಂದು ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಹಾಗೂ ವಿವಿಧ ಸಂಘಟನೆಗಳು ಖಂಡಿಸಿವೆ. ಅಲ್ಲದೆ, ಮುಖ್ಯಮಂತ್ರಿ ಸಭೆಗೆ ಇನ್ನೂ ನಾಲ್ಕು ದಿನ ಬಾಕಿ ಇರುವಾಗ ಬೆಂಗಳೂರಿನಲ್ಲಿ ರೈತರ ಹೆಸರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಗುಂಪೊಂದು ಶೇ.80ರಷ್ಟು ರೈತರು ಭೂಮಿ ಕೊಡಲು ಒಪ್ಪಿದ್ದಾರೆ ಎಂದು ತಿಳಿಸಿದ್ದಾರೆ. ಇದು ಸರಕಾರಿ ಪ್ರಾಯೋಜಿತ ಹೇಳಿಕೆ. ಸುದ್ದಿಗೋಷ್ಠಿಯಲ್ಲಿ ಇದ್ದವರೆಲ್ಲ ಕಾಂಗ್ರೆಸ್ ಮುಖಂಡರು ಎಂದು ಚನ್ನರಾಯಪಟ್ಟಣ ಭೂ ಸ್ವಾಧೀನ ವಿರೋಧಿ ಸಮಿತಿ ಆರೋಪಿಸಿದೆ.

ಪತ್ತೆ ಹಚ್ಚಿ ರಕ್ಷಿಸಿದ ಪೊಲೀಸರು | ದೇವರ ಪೂಜೆ, ಧ್ಯಾನಕ್ಕಾಗಿ ವಾಸ

ಗೋಕರ್ಣದ ಗುಹೆಯಲ್ಲಿ ರಷ್ಯಾ ಮಹಿಳೆ, ಮಕ್ಕಳ ವಾಸ

ಕಾರವಾರ: ಹಿಂದೂ ಧರ್ಮದ ಧಾರ್ಮಿಕತೆಗೆ ವಾಲಿದ ರಷ್ಯಾ ಮೂಲದ ಮಹಿಳೆಯೊಬ್ಬಳು ತನ್ನ ಇಬ್ಬರು ಪುಟ್ಟ ಮಕ್ಕಳೊಂದಿಗೆ ದಟ್ಟಾರಣ್ಯದಲ್ಲಿನ ಗುಹೆಯಲ್ಲಿ ಏಕಾಂತವಾಗಿ ವಾಸವಿದ್ದು ಇವರನ್ನು ರಕ್ಷಿಸಿದ ಘಟನೆ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಗೋಕರ್ಣದ ರಾಮತೀರ್ಥದ ಅರಣ್ಯದಲ್ಲಿ ನಡೆದಿದೆ. ಮೋಹಿ (40), ಅವರ ಪುಟ್ಟ ಮಕ್ಕಳಾದ ಪ್ರೆಯಾ (06) ಹಾಗೂ ಅಮಾ (4) ರಕ್ಷಣೆಗೊಳಗಾದ ರಷ್ಯಾ ಮೂಲದ ಪ್ರಜೆಗಳು. ರಷ್ಯಾದಿಂದ ಬಿಸಿನೆಸ್ ವೀಸಾ ದಡಿ ಗೋವಾಕ್ಕೆ ಬಂದಿದ್ದ ಈಕೆ ಗೋವಾ ಮೂಲಕ ಗೋಕರ್ಣಕ್ಕೆ ಬಂದು ಇಲ್ಲಿನ ದಟ್ಟ ಅರಣ್ಯವಾದ ರಾಮತೀರ್ಥ ಬಳಿಯ ಗುಹೆಯಲ್ಲಿ ತನ್ನ ಮಕ್ಕಳೊಂದಿಗೆ ವಾಸವಿದ್ದಳು. ಅಲ್ಲಿಯೇ ಚಿಕ್ಕ ರುದ್ರನ ಮೂರ್ತಿ ಇಟ್ಟುಕೊಂಡು ಪೂಜೆ ಮಾಡುತ್ತಾ ದಿನ ಕಳೆಯುತ್ತಿದ್ದಳು. ಸಿಪಿಐ ಶ್ರೀಧರ್ ನೇತೃತ್ವದ ತಂಡ ಈ ಭಾಗದಲ್ಲಿ ಗುಡ್ಡ ಕುಸಿತವಾದ್ದರಿಂದ ಗಸ್ತು ತಿರುಗುವಾಗ ಗುಹೆಯಲ್ಲಿ ಯಾರೋ ವಾಸವಾಗಿರುವು ದನ್ನು ಪತ್ತೆ ಮಾಡಿ ವಿದೇಶಿ ಮಹಿಳೆಯನ್ನು ರಕ್ಷಣೆ ಮಾಡಿದ್ದಾರೆ.

ರಷ್ಯಾಗೆ ಕಳುಹಿಸಲು ವ್ಯವಸ್ಥೆ

ರಷ್ಯಾದ ಮೋಹಿಗೆ ಆಧ್ಯಾತ್ಮದ ಕಡೆ ಹೆಚ್ಚು ಆಸಕ್ತಿ ಇರುವುದರಿಂದ ಪ್ರಕೃತಿಯಲ್ಲಿ ಇರಬೇಕು ಎಂದು ತನ್ನ ಮಕ್ಕಳೊಂದಿಗೆ ಏಕಾಂಗಿಯಾಗಿ ಗುಹೆ ಸೇರಿದ್ದಳು. ಗುಡ್ಡ ಕುಸಿತವಾಗಿರುವ ರಾಮತೀರ್ಥ ಗುಡ್ಡದ ಗುಹೆಯಲ್ಲಿ ತಮ್ಮ ಪುಟ್ಟ ಮಕ್ಕಳೊಂದಿಗೆ ಕತ್ತಲಲ್ಲೇ ಬದುಕು ಕಳೆಯುತಿದ್ದಳು.

ಎಸ್.ಪಿ ಎಂ ನಾರಾಯಣ್ ಸಲಹೆಯಂತೆ ಆಕೆಗೆ ಸ್ಥಳೀಯ ಎನ್‌ಜಿಒ ಮೂಲಕ ಆಪ್ತ ಸಮಾಲೋಚನೆ ನಡೆಸಿ ಬೆಂಗ ಳೂರಿಗೆ ಕಳುಹಿಸಿಕೊಡಲಾಗಿದ್ದು, ರಷ್ಯಾ ರಾಯ ಭಾರ ಕಚೇರಿಯನ್ನು ಸಂಪರ್ಕಿಸಲಾಗಿದ್ದು ಆಕೆಯನ್ನು ಆಕೆಯ ದೇಶಕ್ಕೆ ಪುನಃ ಕಳುಹಿಸಿಕೊಡಲು ವ್ಯವಸ್ಥೆ ಮಾಡಲಾಗಿದೆ.

ದೇವರ ದರ್ಶನದ ಸ್ಥಳದಲ್ಲಿ ಹುಂಡಿ ಇಟ್ಟ ಇಒ | ಭಕ್ತರ ದರ್ಶನಕ್ಕೆ ಅಡ್ಡಿ : ಬಾಬಾ ಆರೋಪ

ಅಂಜನಾದ್ರಿಯಲ್ಲಿ ಮತ್ತೆ ಹುಂಡಿ ಗಲಾಟೆ!

ಕೊಪ್ಪಳ: ಪೌರಾಣಿಕ ಪ್ರಸಿದ್ಧ ರಾಮ ಭಕ್ತ ಹನುಮಂತನ ಜನ್ಮಸ್ಥಳ ಅಂಜನಾದ್ರಿ ಬೆಟ್ಟದಲ್ಲಿ ದೇವಸ್ಥಾನದ ಇಒ ಪ್ರಕಾಶ ರಾವ್– ಅರ್ಚಕ ವಿದ್ಯಾದಾಸ ಬಾಬಾ ನಡುವಿನ ಹುಂಡಿ ಗಲಾಟೆ ಮುಂದುವರಿದಿದೆ.

ಬೆಟ್ಟದ ಮೇಲಿನ ದೇವಸ್ಥಾನಕ್ಕೆ ಶನಿವಾರ ಮತ್ತು ಮಂಗಳವಾರ ಹೆಚ್ಚಿನ ಭಕ್ತರು ದರ್ಶನಕ್ಕೆ ಬರುತ್ತಾರೆ. ಈ ಹಿನ್ನೆಲೆ ಶುಕ್ರವಾರ ಸಂಜೆಯೇ ದೇವಸ್ಥಾನಕ್ಕೆ ಆಗಮಿಸಿದ್ದ ಇಒ ಪ್ರಕಾಶರಾವ್, ಅರ್ಚಕರು ದೇವಸ್ಥಾನದ ಒಳಗೆ ಹೋಗುವ ದಾರಿ ಬಂದ್ ಮಾಡಿದ್ದಾರೆ. ಜತೆಗೆ ಆಂಜನೇಯ ದೇವಸ್ಥಾನದಲ್ಲಿ ದರ್ಶನ ಪಡೆದ ಭಕ್ತರು ಪಕ್ಕದ ಶ್ರೀರಾಮ ದೇವಸ್ಥಾನಕ್ಕೆ ಹೋಗುವ ದಾರಿ ಬಂದ್ ಮಾಡಿ, ಭಕ್ತರು ಅಲ್ಲೇ ಯೂ ಟರ್ನ್ ಹೊಡೆದು ವಾಪಾಸ್ ಬರುವ ವ್ಯವಸ್ಥೆ ಮಾಡಿದ್ದಾರೆ. ಇದಕ್ಕೆ ಅರ್ಚಕ ವಿದ್ಯಾದಾಸ ಬಾಬಾ ಆಕ್ಷೇಪಿಸಿದ್ದು ಗಲಾಟೆಗೆ ಕಾರಣವಾಗಿದೆ. ಪೂಜೆ ಹಕ್ಕು ಹಾಗೂ ಹುಂಡಿ ಇಡುವ ವಿಚಾರವಾಗಿ ಅಂಜನಾದ್ರಿ ಬೆಟ್ಟದಲ್ಲಿ ಕಳೆದ 1 ತಿಂಗಳಿನಿಂದ ಅರ್ಚಕ ಹಾಗೂ ಆಡಳಿತಾಧಿಕಾರಿ ನಡುವೆ ಗಲಾಟೆ ನಡೆಯುತ್ತಿದೆ. ಶುಕ್ರವಾರ ನಡೆದ ಗಲಾಟೆಯನ್ನೂ ವಿಡಿಯೊ ಮಾಡಿದ ವಿದ್ಯಾದಾಸ ಬಾಬಾ ವೈರಲ್ ಮಾಡಿದ್ದಾರೆ.

ವಿಡಿಯೊದಲ್ಲಿ ಏನಿದೆ?

ಶುಕ್ರವಾರ ಸಂಜೆ ನಡೆದ ಗಲಾಟೆಯ ವಿಡಿಯೊದಲ್ಲಿ, ಬಾಬಾ ಹಾಗೂ ಆಡಳಿತಾಧಿಕಾರಿ ಪ್ರಕಾಶ ರಾವ್ ನಡುವೆ ವಾಗ್ವಾದ ಆಗಿರುವ ಸಂಭಾಷಣೆ ದಾಖಲಾಗಿದೆ. ಸದ್ಯ ವಿಡಿಯೊ ವೈರಲ್ ಆಗಿದ್ದು, ಭಕ್ತರಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/42/2025–26 ದಿನಾಂಕ: 11–07–2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಗೋರಿನಬೆಲೆ ಮತ್ತು ಮಂಟನಕುರ್ಚಿ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀಮತಿ ಪ್ರಭಾಮಣಿ ಕೋಂ ವೆಂಕಟರಮಣ ಮತ್ತು ಇತರರ ಪರವಾಗಿ ಜಿ.ಪಿ.ಎ. ದಾರರಾದ ಶ್ರೀ ದೀಪಕ್ ಚಿದಂಬರ ಬೆಟಗೇರಿ, ನಿರ್ದೇಶಕರು ಮೇ॥ ಇಂಡಿಯಾ ವ್ಯಾಲಿ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು	ನೆಲಮಂಗಲ / ಕಸಬಾ / ಗೋರಿನಬೆಲೆ	126/1ಎ	08-21 (30ಗುಂಟೆ 'ಎ' ಖರಾಬು ಸೇರಿ)	ವ್ಯವಸಾಯ	ವಸತಿ
		126/2	09-31 (30ಗುಂಟೆ 'ಎ' ಖರಾಬು ಸೇರಿ)		
	ಮಂಟನಕುರ್ಚಿ	162/2	03-00		
		162/3	03-05		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/1784/ಅಡ್ವಟೋರ್/2025–26

ವಿರಾಮ
ಪ್ರತಿ ಭಾನುವಾರ

ಖಾಸಗಿ ಬಸ್ ಚಾಲಕ, ನರ್ಸಿಂಗ್ ಹೋಮ್ ಮಾಲೀಕ, ರೈತ ಬಲಿ

ಹೃದಯಾಘಾತದಿಂದ ಮೂವರು ಸಾವು

ಬೆಂಗಳೂರು: ರಾಜ್ಯದಲ್ಲಿ ಹೃದಯಾಘಾತದ ಸಾವಿನ ಸರಣಿ ಮುಂದುವರಿದಿದೆ. ಶನಿವಾರ ರಾಜ್ಯದ ವಿವಿಧೆಡೆ ಮೂವರು ಸಾವನ್ನಪ್ಪಿದ್ದಾರೆ.

ಖಾಸಗಿ ಬಸ್ ಚಾಲಕ ಸಾವು: ಹೃದಯಾಘಾತದಿಂದ ಖಾಸಗಿ ಬಸ್ ಚಾಲಕ ಮೃತಪಟ್ಟ ಘಟನೆ ಚಾಮರಾಜನಗರದಲ್ಲಿ ನಡೆದಿದೆ. ಚಾಮರಾಜನಗರ ತಾಲೂಕಿನ ಸಂತೇಮರಹಳ್ಳಿಯ ಗುರುತಿಸಿದ್ದು (55) ಮೃತ ದುರ್ದೈವಿ.

ಯಳಂದೂರಿನಿಂದ ಗುಂಡ್ಲು ಪೇಟೆಗೆ ತೆರಳುವ ಆರ್‌ಪಿಕೆ ಎಂಬ ಖಾಸಗಿ ಬಸ್ ಚಾಲಕರಾಗಿದ್ದ ಗುರುಸಿದ್ದು ಅವರಿಗೆ ಬಸ್ ಚಾಲನೆ ವೇಳೆಯೇ ಎದೆನೋವು ಕಾಣಿಸಿಕೊಂಡಿದೆ. ಕೂಡಲೇ ಬಸ್‌ನ ಸಿಬ್ಬಂದಿ ಚಾಮರಾಜನಗರ ಸಿಮ್ಸ್ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ ಪ್ರಾಥಮಿಕ ಚಿಕಿತ್ಸೆ ಫಲಿಸದೇ ಅಸುನೀಗಿದ್ದಾರೆ.

ನರ್ಸಿಂಗ್ ಹೋಮ್ ಮಾಲೀಕ ಸಾವು: ವಾಕಿಂಗ್ ಮಾಡುವಾಗ ಹೃದಯಾಘಾತಕ್ಕೆ ನರ್ಸಿಂಗ್ ಹೋಮ್ ಮಾಲೀಕ ಬಲಿಯಾಗಿರುವ ಘಟನೆ ಕನಕಪುರ ನಗರದಲ್ಲಿ ನಡೆದಿದೆ.

ಮಂಜುನಾಥ್ (50) ಹೃದಯಾಘಾತದಿಂದ ಸಾವನ್ನಪ್ಪಿದ ವ್ಯಕ್ತಿ. ಕನಕಪುರದ ಗಣೇಶ್ ನರ್ಸಿಂಗ್ ಹೋಮ್ ಹಾಗೂ ಗಣೇಶ್ ಮೆಡಿಕಲ್ ಮಾಲೀಕ ಮಂಜುನಾಥ್, ಶನಿವಾರ ಬೆಳಗ್ಗೆ ವಾಕಿಂಗ್‌ಗೆ ತೆರಳುವ ವೇಳೆ ಕುಸಿದು ಬಿದ್ದಿದ್ದಾರೆ.

ಕೂಡಲೇ ಕುಟುಂಬಸ್ಥರು ಖಾಸಗಿ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಿಸದೇ ಮಂಜುನಾಥ್ ಮೃತಪಟ್ಟಿದ್ದಾರೆ.

ಜಮೀನಿನಲ್ಲಿ ಕುಸಿದು ಬಿದ್ದು ರೈತ ಸಾವು

ಜಮೀನಿನಲ್ಲಿ ಹೃದಯಾಘಾತಕ್ಕೊಳಗಾಗಿ ಕುಸಿದು ಬಿದ್ದು ರೈತ ಸಾವನ್ನಪ್ಪಿರುವ ಘಟನೆ ರಾಯಚೂರು ಜಿಲ್ಲೆಯ ಡಿ.ರಾಂಪೂರ ಗ್ರಾಮದಲ್ಲಿ ನಡೆದಿದೆ. ಉಪ್ಪರ ವೆಂಕಟೇಶ್ (45) ಮೃತ ರೈತ. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ರೈತನಿಗೆ ಏಕಾಏಕಿ ಎದೆನೋವು ಕಾಣಿಸಿಕೊಂಡು ಕುಸಿದು ಬಿದ್ದಿದ್ದಾರೆ. ಕೂಡಲೇ ಸ್ಥಳದಲ್ಲಿದ್ದವರು ಆಸ್ಪತ್ರೆಗೆ ಸಾಗಿಸುತ್ತಿದ್ದ ಮಾರ್ಗ ಮಧ್ಯದಲ್ಲೇ ವೆಂಕಟೇಶ್ ಮೃತಪಟ್ಟಿದ್ದಾರೆ. ಆರೋಗ್ಯವಾಗಿದ್ದ ರೈತ ವೆಂಕಟೇಶ್ ಜಮೀನಿನ ಕೆಲಸಗಳನ್ನ ಮಾಡಿಕೊಂಡಿದ್ದರು. ಆದರೆ ಏಕಾಏಕಿ ಕುಸಿದುಬಿದ್ದು ಸಾವನ್ನಪ್ಪಿರುವುದು ಕುಟುಂಬಸ್ಥರು ಹಾಗೂ ಗ್ರಾಮಸ್ಥರಲ್ಲಿ ಅಚ್ಚರಿ ಮೂಡಿಸಿದೆ.

ಸಿಎಂ–ಡಿಸಿಎಂ ಟ್ವೀಟಾಟ

ಮೊದಲಪುಟದಿಂದ

ಮಿಸ್ ಯೂನಿವರ್ಸ್ ಕರ್ನಾಟಕ–2025 ಸ್ಪರ್ಧೆಯಲ್ಲಿ ವಿಜೇತರಾಗಿರುವ ಚಿಕ್ಕಮಗಳೂರಿನ ವಂಶಿ ಅವರು ದೆಹಲಿಯಲ್ಲಿ ನನ್ನನ್ನು ಭೇಟಿಯಾದ ವೇಳೆ ಸಾರ್ವಜನಿಕ ಬದುಕಿನಲ್ಲಿ ಸಕ್ರಿಯರಾಗಿರಬೇಕೆಂಬ ಆಸೆ ವ್ಯಕ್ತಪಡಿಸಿದರು. ಇಂತಹ ಆಸೆ, ಕನಸುಗಳು ಯುವಜನರಲ್ಲಿ ಬರಬೇಕೆಂಬುದು ನನ್ನ ಅಭಿಪ್ರಾಯವೂ ಹೌದು. ಅಂಥವರಿಗೆ ನನ್ನದೊಂದು ಕಿವಿಮಾತಿದೆ ರಾಜಕಾರಣಕ್ಕೆ ಬರುವ ಪ್ರತಿಯೊಬ್ಬರೂ ಯಶಸ್ವಿ ರಾಜಕಾರಣಿಯಾಗಲು ಅಸಾಧ್ಯ, ಆದರೆ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಲು ಸಾಧ್ಯವಿದೆ. ಆ ನಿಟ್ಟಿನಲ್ಲಿ ಪ್ರಯತ್ನ ನಿರಂತರವಾಗಿರಲಿ ಎನ್ನುವ ಮೂಲಕ ಡಿಕೆ ಬಣಕ್ಕೆ ಸಂದೇಶ ರವಾನಿಸಿದ್ದಾರೆ ಎನ್ನುವ ಮಾತುಗಳು ಕಾಂಗ್ರೆಸ್‌ನಲ್ಲಿ ಶುರುವಾಗಿದೆ.

ಸೀರಿಯಸ್ ರಾಜಕೀಯ ಮಾಡಿ

ಚಿಕ್ಕಮಗಳೂರು: ಕಾಗಕ್ಕ, ಗುಬ್ಬಕ್ಕ ಕತೆ ಬಿಟ್ಟು ಈಗಲಾದ್ರೂ ಸೀರಿಯಸ್ ರಾಜಕೀಯ ಮಾಡ್ರಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಸಂಸದ ತೇಜಸ್ವಿ ಸೂರ್ಯ ವಾಗ್ದಾಳಿ ನಡೆಸಿದ್ದಾರೆ. ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಈ ವೇಳೆ, ತಮ್ಮ ವಿರುದ್ಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದ ಪ್ರಿಯಾಂಕ್ ಖರ್ಗೆ ಅವರಿಗೆ ತಿರುಗೇಟು ನೀಡಿದರು.

ಸಮಾಚಾರ ಸಣ್ಣದಲ್ಲ

ಡಿಕೆಶಿಗೆ ಶಾಸಕರ ಬೆಂಬಲ ಇಲ್ಲ

ಚಿಕ್ಕಮಗಳೂರು: ಡಿಸಿಎಂ ಡಿ.ಕೆ ಶಿವಕುಮಾರ್ ಅವರಿಗೆ ಶಾಸಕರ ಬೆಂಬಲ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಈ ರೀತಿ ಅವಮಾನ ಮಾಡಿಸಿಕೊಂಡು ಡಿಕೆಶಿ ಹೇಗೆ ಸುಮ್ಮನೆ ಇರುತ್ತಾರೆ ಎಂದು ಮಾಜಿ ಸಚಿವ ಸಿ.ಟಿ ರವಿ ಕುಟುಕಿದ್ದಾರೆ.

ಡಿಸಿಎಂ ಡಿಕೆಶಿಗೆ ಶಾಸಕರ ಬೆಂಬಲ ಇಲ್ಲ ಎಂಬ ಸಿಎಂ ಹೇಳಿಕೆಗೆ ಅವರು ಪ್ರತಿಕ್ರಿಯಿಸಿದರು. ಅವರಿಗೆ ಶಾಸಕರ ಬೆಂಬಲವೇ ಇಲ್ಲ ಎಂದು ಹೇಳಿದ್ದಾರೆ. 136 ಶಾಸಕರು ಅವರ ಅಧ್ಯಕ್ಷತೆಯಲ್ಲೇ ಗೆದ್ದಿದ್ದು. ಇದು ಶಾಲಿನಲ್ಲಿ ಸುತ್ತಿ ಹೊಡೆಯೋದಲ್ಲ, ಹಾಗೇ ಹೊಡೆದಿರೋದು ಎಂದು ವ್ಯಂಗ್ಯವಾಡಿದ್ದಾರೆ. ಶಾಲಿನಲ್ಲಿ ಸುತ್ತಿ ಹೊಡುದ್ರೆ, ಶಾಲು ಅಂತ ಹೇಳ್ಬೋದು, ಇದು ಹಾಗಲ್ಲ, ಡೈರೆಕ್ಟ್ . ಇದನ್ನು ಡಿ.ಕೆ ಶಿವಕುಮಾರ್ ಸಹಿಸಿಕೊಂಡರೆ ಅವರ ವ್ಯಕ್ತಿತ್ವಕ್ಕೆ ಅಪಚಾರ ಎಂದು ಹೇಳಿಕೊಂಡಿದ್ದಾರೆ ಎಂದು ಮಾಜಿ ಸಚಿವ ಸಿ.ಟಿ ರವಿ ಹೇಳಿದರು.

ಹೆಣ್ಣು ಕೊಡಲ್ಲ ಎಂದಿದ್ದಕ್ಕೆ ಆತ್ಮಹತ್ಯೆ

ಹರಪನಹಳ್ಳಿ: ಪ್ರೇಯಸಿಯ ಮನೆಯವರ ಕೊಲೆ ಬೆದರಿಕೆಗೆ ಹೆದರಿದ ಪ್ರೇಮಿಯೊಬ್ಬ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಉದ್ದಗಟ್ಟಿ ದೊಡ್ಡತಾಂಡದಲ್ಲಿ (ಬಾಪೂಜಿ ನಗರ) ಗುರುವಾರ ಜರುಗಿದ್ದು, ಪ್ರೇಯಸಿ ಸೇರಿ ನಾಲ್ವರ ವಿರುದ್ಧ ಸ್ಥಳೀಯ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಾಪೂಜಿ ನಗರದ ಪಿ.ಟಿ.ಶಶಿಕುಮಾರ್ (26) ಮೃತ ಯುವಕ. ಈತ ಅದೇ ಗ್ರಾಮದ ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ, ಆಕೆಯನ್ನು ಮದುವೆಯಾಗಲು ನಿರ್ಧರಿಸಿದ್ದ. ಯುವತಿಯ ಮನೆಯವರಿಗೆ ವಿಷಯ ಗೊತ್ತಾಗಿ 'ನಾವು ನಿನಗೆ ಹೆಣ್ಣು ಕೊಡುವುದಿಲ್ಲ' ಎಂದು ಹೇಳಿ ಕೊಲೆ ಬೆದರಿಕೆ ಹಾಕಿದ್ದರು. ಇದರಿಂದ ಜೀವ ಭಯದಲ್ಲಿ ಶಶಿಕುಮಾರ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಮೃತನ ಅಣ್ಣ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಕೈದಿ ಹೊಟ್ಟೆಯಲ್ಲಿ ಮೊಬೈಲ್ ಪತ್ತೆ

ಶಿವಮೊಗ್ಗ: ನಗರದ ಸೋಗಾನೆಯ ಕೇಂದ್ರ ಕಾರಾಗೃಹದಲ್ಲಿದ್ದ ಕೈದಿಯೊಬ್ಬನ ಹೊಟ್ಟೆಯಲ್ಲಿ ಮೊಬೈಲ್ ಫೋನ್ ಪತ್ತೆಯಾಗಿದೆ. ದೌಲತ್ ಅಲಿಯಾಸ್ ಗುಂಡ (30) ಎಂಬಾತನ ಹೊಟ್ಟೆಯಲ್ಲಿ ಒಂದು ಇಂಚು ಅಗಲದ, ಮೂರು ಇಂಚು ಉದ್ದದ ಮೊಬೈಲ್ ಫೋನ್ ಪತ್ತೆಯಾಗಿದೆ.

ಪ್ರಕರಣವೊಂದರಲ್ಲಿ ದೌಲತ್‌ಗೆ ಶಿವಮೊಗ್ಗದ ನ್ಯಾಯಾಲಯ 10 ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಬಳಿಕ ಈತನನ್ನು ಜೈಲಿಗೆ ಕಳುಹಿಸಲಾಗಿತ್ತು. ಜೂ.24 ರಂದು ಜೈಲಿನ ಆಸ್ಪತ್ರೆಗೆ ಬಂದು, ಕಲ್ಲು ನುಂಗಿದ್ದೇನೆ ಎಂದು ವೈದ್ಯರಿಗೆ ಗುಂಡ ತಿಳಿಸಿದ್ದ. ಪರೀಕ್ಷಿಸಿದ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಮೆಗ್ಗಾನ್ ಆಸ್ಪತ್ರೆಗೆ ರವಾನಿಸಿದ್ದರು. ಎಕ್ಸ್ ರೇ ಮಾಡಿದಾಗ ದೌಲತ್‌ನ ಹೊಟ್ಟೆಯಲ್ಲಿ ವಸ್ತುವೊಂದು ಇರುವುದು ಗೊತ್ತಾಗಿತ್ತು. ಶಸ್ತ್ರಚಿಕಿತ್ಸೆ ನಡೆಸಿದಾಗ ಮೊಬೈಲ್ ಫೋನ್ ಪತ್ತೆಯಾಗಿದೆ. ನಿಷೇಧವಿದ್ದರೂ ಜೈಲಿನೊಳಗೆ ಮೊಬೈಲ್ ಫೋನ್ ತಲುಪಿರುವ ಕುರಿತು ತನಿಖೆ ನಡೆಸುವಂತೆ ಕೇಂದ್ರ ಕಾರಾಗೃಹದ ಅಧೀಕ್ಷಕ ರಂಗನಾಥ್.ಪಿ ಅವರು ತುಂಗಾ ನಗರ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ತನಿಖೆ ನಡೆಯುತ್ತಿದೆ

ಆತ್ಮಹತ್ಯೆಗೆ ಯತ್ನಿಸಿದ್ದ ಎಫ್‌ಡಿಎ ಸಾವು

ಕೊಪ್ಪಳ: ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ಶಿಕ್ಷಣ ಇಲಾಖೆಯ ಎಫ್‌ಡಿಎ ಚಿಕಿತ್ಸೆ ಫಲಿಸದೇ ಕೊನೆಯುಸಿರೆಳೆದಿದ್ದಾರೆ. ಎಫ್ಡಿಎ ಸುಂಕಪ್ಪ ಕೊರವರ ಮೃತ ವ್ಯಕ್ತಿ. ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಸಾವನ್ನಪ್ಪಿದರು.

ಜು.8 ರಂದು ಕೊಪ್ಪಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿಯೇ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕಳೆದ 7 ತಿಂಗಳಿಂದ ಸುಂಕಪ್ಪ ಕೊರವರ ಕೆಲಸಕ್ಕೆ ಗೈರಾಗಿದ್ದರು. ಈ ಹಿನ್ನೆಲೆ ಶಿಕ್ಷಣ ಇಲಾಖೆಯಿಂದ ಸಂಬಳ ಆಗಿರಲಿಲ್ಲ. ಸಂಬಳ ಆಗದ ಹಿನ್ನೆಲೆ ಮದ್ಯವ್ಯಸನಿಯಾಗಿದ್ದರು. ಕಳೆದ 8ರಂದು ಸಂಬಳ ಆಗದ ಹಿನ್ನೆಲೆ ಮನನೊಂದು ಆತ್ಮಹತ್ಯೆಗೆ ಯತ್ನಿಸಿದ್ದರು. ಶನಿವಾರ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

4 ವರ್ಷದ ಮಗುವಿನ ಮೇಲೆ ರೇಪ್

ಮಂಡ್ಯ: ಚಾಕೊಲೇಟ್ ಕೊಡಿಸುವುದಾಗಿ ಹೇಳಿ 4 ವರ್ಷದ ಮಗುವಿನ ಮೇಲೆ ಕಾಮುಕನೊಬ್ಬ ಅತ್ಯಾಚಾರವೆಸಗಿರುವ ಘಟನೆ ಮಂಡ್ಯದಲ್ಲಿ ನಡೆದಿದೆ. ಈ ಸಂಬಂಧ 21 ವರ್ಷದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.



ಚಾಕೋಲೇಟ್ ಕೊಡಿಸುವುದಾಗಿ ಹೇಳಿ ಮಗುವನ್ನು ಪುಸಲಾಯಿಸಿ ಕರೆದೊಯ್ದ ಕಾಮುಕ, ಅತ್ಯಾಚಾರವೆಸಗಿದ್ದ. ಸಂತ್ರಸ್ತ ಮಗುವಿನ ಪೋಷಕರು ಬಿಹಾರ ಮೂಲದವರೆಂದು ತಿಳಿದುಬಂದಿದೆ. ಪ್ಲೈವುಡ್ ಫ್ಯಾಕ್ಟರಿಯಲ್ಲಿ ಕಳೆದೊಂದು ವರ್ಷದಿಂದ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಈ ಸಂಬಂಧ ಹೆಚ್ಚಿನ ವಿಚಾರಣೆ ನಡೆಯುತ್ತಿದೆ.

ಹೈಕಮಾಂಡ್ ಮುಂದೆ ದೂರಿತ್ತ ಬಣಗಳು

ಸಿಎಂ, ಡಿಸಿಎಂ ಬಣ ನಾಯಕರಿಂದ ಸುರ್ಜೇವಾಲ, ಖರ್ಗೆಗೆ ದೂರು | ಪರಸ್ಪರ ಟೀಕೆಯಿಂದ ಪಕ್ಷಕ್ಕೆ ಸಮಸ್ಯೆಯಾಗುತ್ತಿದೆ | ಬದಲಾವಣೆಯ ಬಗ್ಗೆ ಮಾತನಾಡದಂತೆ ಸೂಚನೆ ನೀಡಬೇಕೆಂದು ಆಗ್ರಹ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಹಲವು ಗೊಂದಲಗಳ ನಡುವೆ ಇದೀಗ ಎರಡೂ ಬಣದವರು ಪರಸ್ಪರ ದೂರುಗಳನ್ನು ಹೈಕಮಾಂಡ್ ಮುಂದೆ ಮಂಡಿಸುವ ಕೆಲಸವನ್ನು ಮಾಡಿದ್ದಾರೆ.

ಹೌದು, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ದೆಹಲಿ ಪ್ರವಾಸದಲ್ಲಿರುವ ವೇಳೆ ಬೆಂಗಳೂರಿ ನಲ್ಲಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಯಾಗಿರುವ ಎರಡೂ ಬಣದ ನಾಯಕರು ಪರಸ್ಪರ ದೂರುಗಳನ್ನು ನೀಡಿದ್ದಾರೆ. ಪಕ್ಷದ ಇಂದಿನ ಗೊಂದಲಗಳಿಗೆ ಇನ್ನೊಂದು ಬಣವೇ ಕಾರಣ ಎನ್ನುವ ಆರೋಪವನ್ನು ಮಾಡಿದ್ದಾರೆ ಎಂದು ತಿಳಿದುಬಂದಿದೆ.

ದೆಹಲಿಯಲ್ಲಿ ಸಿದ್ದರಾಮಯ್ಯ ಅವರು 'ನಾನೇ ಐದು ವರ್ಷ ಸಿಎಂ' ಎನ್ನುವ ಹೇಳಿಕೆ ನೀಡಿದ ಬೆನ್ನಲ್ಲೇ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿದ್ದ ಸಿದ್ದು ಆಪ್ತ ಸಚಿವರುಗಳು ಬದಲಾವಣೆಯ ಮಾತುಗಳಿಗೆ ಬ್ರೇಕ್ ಹಾಕಬೇಕು ಎಂದು ಒತ್ತಡ ಹೇರಿದ್ದರು. ಸಚಿವರಾದ ಸತೀಶ್ ಜಾರಕಿಹೊಳಿ, ಎಸ್.ಸಿ. ಮಹದೇವಪ್ಪ, ಜಮೀರ್ ಅಹ್ಮದ್ ಅವರು ಭೇಟಿಯಾಗಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಮಾತನಾಡುತ್ತಿರುವ ನಾಯಕರ ವಿರುದ್ಧ ದೂರು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇನ್ನು ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ನಡೆದ ಪ್ರತ್ಯೇಕ ಸಭೆಯಲ್ಲಿ ಡಿಕೆಶಿ ಆಪ್ತ ಶಾಸಕರು ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಅನಗತ್ಯ ಹೇಳಿಕೆಗಳನ್ನು ನೀಡಲಾಗುತ್ತಿದೆ ಎಂದು ದೂರಿದ್ದರು. ಇದೇ ರೀತಿ ಕೆಲ ಸಚಿವರು, ಖರ್ಗೆ ಅವರನ್ನು ಭೇಟಿಯಾಗಿ, ಸಿದ್ದರಾಮಯ್ಯ ಆಪ್ತರಿಂದ ಈ ರೀತಿಯ ಹೇಳಿಕೆಗಳು ಪಕ್ಷದ ಸಂಘಟನೆಗೆ ಹಿನ್ನಡೆಯನ್ನು ಉಂಟು ಮಾಡುತ್ತಿದೆ. ಆದ್ದರಿಂದ ಮುಂದಿನ ದಿನದಲ್ಲಿ ಈ ರೀತಿಯ ಹೇಳಿಕೆ ನೀಡದಂತೆ ಎಚ್ಚರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಎರಡೂ ಬಣದ ನಾಯಕರು ಪರಸ್ಪರ ನೀಡಿರುವ ದೂರಗಳನ್ನು ಆಲಿಸಿರುವ ಖರ್ಗೆ ಹಾಗೂ ಸುರ್ಜೇವಾಲ ಅವರು, ಎರಡೂ ಬಣದವರಿಗೆ ಮೌನವಾಗಿರುವಂತೆ ಸೂಚನೆ ನೀಡುತ್ತೇವೆ. ಒಂದು ಬಣದವರು ಮೌನವಾದರೆ, ಇನ್ನೊಂದು ಕಡೆಯೂ ಸರಿ ಹೋಗುತ್ತದೆ. ಆದ್ದರಿಂದ ನೀವು ಮಾತನಾಡಬೇಡಿ ಎಂದು ಸೂಚನೆ ನೀಡಿ ಕಳುಹಿಸಿದ್ದಾರೆ ಎಂದು ತಿಳಿದುಬಂದಿದೆ.

ಸಿದ್ದು ಆಪ್ತರ ವಾದವೇನು?

- ಪದೇಪದೆ ಮುಖ್ಯಮಂತ್ರಿ ಬದಲಾವಣೆ ಹೇಳಿಕೆಯಿಂದ ಸರಕಾರದ ವರ್ಚಸ್ಸಿಗೆ ಧಕ್ಕೆ
- ಸಿಎಂ ಬದಲಾವಣೆ ಮಾತುಗಳನ್ನು ನಿರಂತರವಾಗಿ ಹೇಳಿದರೆ, ಅಧಿಕಾರಿಗಳು ಮಾತು ಕೇಳಲ್ಲ
- ಸಿದ್ದರಾಮಯ್ಯ ಬದಲಾವಣೆಯಿಲ್ಲವೆಂದು ಹೈಕಮಾಂಡ್ ಹೇಳಿದ ಬಳಿಕವೂ ಹೇಳಿಕೆಯಿಂದ ಗೊಂದಲ
- ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಹೇಳಿರುವಂತೆ ಡಿಕೆಶಿಗೆ ಶಾಸಕರ ಬೆಂಬಲವಿಲ್ಲ

ಡಿಕೆ ಆಪ್ತರ ವಾದವೇನು?

- ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ನಿತ್ಯ ಹೇಳಿಕೆ ನೀಡುತ್ತಿರುವ ಕೆಲ ಸಿದ್ದು ಆಪ್ತರು
- ಮುಖ್ಯಮಂತ್ರಿ ಸ್ಥಾನ ನೀಡದೇ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಬೇರೆಯವರನ್ನು ತರಬೇಡಿ
- ಸಿದ್ದರಾಮಯ್ಯ ಆಪ್ತರನ್ನು 'ಮೌನ'ವಾಗಿರಿಸುವಂತೆ ಹೈಕಮಾಂಡ್ ಸೂಚನೆ ನೀಡಬೇಕು.
- ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಡಿಕೆ ಪಾತ್ರವಿದೆ; ಆದರೆ ಸೂಕ್ತ ಸ್ಥಾನಮಾನ ನೀಡುತ್ತಿಲ್ಲ.

ಕ್ರಾಂತಿ ಯಾವಾಗ ಬೇಕಾದ್ರೂ ಆಗ್ಬಹುದು

ಅಧಿಕಾರ ಶಾಶ್ವತ ಅಲ್ಲ: ತನ್ವೀರ್ ಸೇಠ್

ಮೈಸೂರು: ಕ್ರಾಂತಿ ಯಾವಾಗ ಬೇಕಾದರೂ ಆಗಬಹುದು ಎಂದು ಶಾಸಕ ತನ್ವೀರ್ ಸೇಠ್ ಸೂಚ್ಯವಾಗಿ ತಿಳಿಸಿದ್ದಾರೆ.

ರಾಜ್ಯ ರಾಜಕಾರಣದಲ್ಲಿ ಸೆಪ್ಟಂಬರ್‌ಗೆ ಕ್ರಾಂತಿ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಸಿಎಂ ಬದಲಾವಣೆ ವಿಚಾರ ಮಾಧ್ಯಮದ ಮುಂದೆ ಮಾತಾಡೋದಲ್ಲ. ಐದು ವರ್ಷ ಸುಭದ್ರ ಸರಕಾರ ಕೊಡಬೇಕಾದದ್ದು ನಮ್ಮ ಜವಾಬ್ದಾರಿ. ಯಾರಿಗೂ ಅಧಿಕಾರ ಶಾಶ್ವತ ಅಲ್ಲ. ನಾನು ನೂರು ವರ್ಷ ಬದುಕಬೇಕು ಅಂದುಕೊಂಡರೂ ನನ್ನಿಂದ ಸಾಧ್ಯನಾ ಅಂತ ನೋಡಬೇಕು.

ಮಾರನೇ ದಿನ ಬೆಳಗ್ಗೆ ನನಗೇನು ಆಗುತ್ತೋ ಗೊತ್ತಿಲ್ಲ. ಸಿದ್ದರಾಮಯ್ಯ ಎಲ್ಲಿಯವರಗೆ ಮುಖ್ಯಮಂತ್ರಿಯಾಗಿ ಇರುತ್ತಾರೋ ಅಲ್ಲಿಯವರೆಗೆ ಅವರೇ ನಮ್ಮ ಮುಖ್ಯಮಂತ್ರಿ. ಬದಲಾವಣೆ ಇಲ್ಲ ಅಂತ ಎಲ್ಲೂ ಇಲ್ಲ. ಅದು 5 ವರ್ಷಗಳ ಕಾಲ ಇರಬಹುದು. ಅಧಿಕಾರ ಬದಲಾವಣೆ ಸೂತ್ರ ನಮಗೆ ಗೊತ್ತಿಲ್ಲ. ವರಿಷ್ಠರ ತೀರ್ಮಾನಕ್ಕೆ ನಾವು ಬದ್ಧ ಎಂದು ತಿಳಿಸಿದರು.ಡಿ.ಕೆ.ಶಿವಕುಮಾರ್‌ಗೆ ಶಾಸಕರ ಬೆಂಬಲ ಇಲ್ಲ ಎಂಬ ವಿಚಾರಕ್ಕೆ, ಎಲ್ಲಾ ಶಾಸಕರ ಬೆಂಬಲ ಪಕ್ಷಕ್ಕೆ ಇದೆ. ಯಾರೋ ಮಾತನಾಡಿದ್ದಕ್ಕೆ ಪ್ರತಿಕ್ರಿಯೆ ಕೊಡುತ್ತಾ ಹೋದರೆ ಅದಕ್ಕೆ ಕೊನೆಯೇ ಇಲ್ಲ. ಯಾರು ಯಾವ ಸನ್ನಿವೇಶದಲ್ಲಿ ಮಾತನಾಡಿದ್ದಾರೋ ನನಗೆ ಗೊತ್ತಿಲ್ಲ. ಇದು ರಾಜಕಾರಣ. ಜನರಿಗೆ ಸ್ಪಂದಿಸುವ ಸರಕಾರ ಕೊಡಿ ಅಂತ ನಾವು ಹೇಳೋದು ಎಂದರು.

> ಸಿದ್ದರಾಮಯ್ಯ ಅವರಿಗೆ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಕೇಳಿಕೊಳ್ಳುತ್ತೇನೆ. ನಾವು ಬೇರೆ ಇನ್ನೇನು ಹೇಳಲ್ಲ. ಏನು ಬೇಕಾದರೂ ಆಗಬಹುದು. ಸಂಪುಟ ಪುನರ್ ರಚನೆ ಯಾವಾಗ ಬೇಕಾದರೂ ಆಗಬಹುದು.ಆಗೋವರೆಗೂ ಪಕ್ಷದ ಮೇಲೆ ನಂಬಿಕೆ ಇಟ್ಟು ಕಾಯುತ್ತೇನೆ. ನನಗೆ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆ ಇಟ್ಟುಕೊಂಡಿದ್ದೇನೆ. ನಾನು ಕೂಡ ಸನ್ಯಾಸಿ ಅಲ್ಲ, ನಿರೀಕ್ಷೆ ಎಲ್ಲರಿಗೂ ಇದೆ.
>
> – ತನ್ವೀರ್ ಸೇಠ್ ಶಾಸಕ

ಸಿಎಂ ಹೇಳಿದ ಮೇಲೆ ಎಲ್ಲಾ ಮುಗಿಯಿತು

ಸಿಎಂ ಪರ ಮಹದೇವಪ್ಪ ಬ್ಯಾಟಿಂಗ್

ಮೈಸೂರು: ಐದು ವರ್ಷ ನಾನೇ ಸಿಎಂ ಆಗಿ ಇರುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ ಮೇಲೆ ಅಲ್ಲಿಗೆ ಎಲ್ಲಾ ಮುಗಿಯಿತು ಎಂದು ಸಿದ್ದರಾಮಯ್ಯ ಪರ ಸಚಿವ ಡಾ.ಎಚ್.ಸಿ. ಮಹದೇವಪ್ಪ ಬ್ಯಾಟಿಂಗ್ ಮಾಡಿದರು.

ಡಿ.ಕೆ.ಶಿವಕುಮಾರ್ ಗೆ ಶಾಸಕರ ಬೆಂಬಲ ಇಲ್ಲ, ನಾನೇ 5 ವರ್ಷ ಸಿಎಂ ಆಗಿರುತ್ತೇನೆಂಬ ಸಿಎಂ ಸಿದ್ದರಾಮಯ್ಯ ಹೇಳಿಕೆ ವಿಚಾರ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾಗಂತ ಹೇಳಿದ ಮೇಲೆ ಮುಗೀತಲ್ಲ ಬಿಡಿ ಎಂದರು.

ಸಿಎಂ, ಸುರ್ಜೇವಾಲ ಸ್ಪಷ್ಟಪಡಿಸಿದ ಮೇಲೆ ಯಾಕೆ ಮತ್ತೆ ಮತ್ತೆ ಪ್ರಶ್ನೆ ಕೇಳ್ತೀರಿ ? ಸಂಕ್ರಾಂತಿಯಂತೂ ನಡೆದೇ ನಡೆಯುತ್ತದೆ ಎಂದು ಸೂಚ್ಯವಾಗಿ ತಿಳಿಸಿದರು. ಖರ್ಗೆ, ಪರಮೇಶ್ವರ್, ದಿನೇಶ್‌ಗುಂಡೂರಾವ್, ಆರ್.ವಿ. ದೇಶಪಾಂಡೆ ಪಾತ್ರ ಇಲ್ವಾ ? ಯಾರು ಯಾರಿಗೆ ಪಕ್ಷ ಜವಾಬ್ದಾರಿ ಕೊಟ್ಟಿದೆಯೊ ಆಗ ಅವರು ಕೆಲಸ ಮಾಡಿದ್ದಾರೆ. ಪ್ರಸ್ತಾಪಗಳು ಬೇಜಾನ್ ಬರುತ್ತವೆ. ಅಂತಿಮವಾಗಿ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ಈಗಾಗಲೇ ತೀರ್ಮಾನ ತೆಗೆದುಕೊಂಡಿದೆ ಎಂದರು.

ಎಲ್ಲರೂ ಸೇರಿ ಪಕ್ಷ ಕಟ್ಟಿದ್ದಾರೆ

ಡಿಕೆಶಿ ಪಕ್ಷ ಕಟ್ಟಿದ್ದಾರೆ, ಅಧಿಕಾರಕ್ಕೆ ತರಲು ಶ್ರಮಿಸಿದ್ದಾರೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಪಕ್ಷ ಕಟ್ಟಿದರು ಅಂದರೆ, ಎಲ್ಲರೂ ಸೇರಿದರೆ ಅಲ್ವಾ ಅಣೆಕಟ್ಟು ಕಟ್ಟೋದು. ಅಣೆಕಟ್ಟನ್ನು ಕಲ್ಲು, ಮಣ್ಣು, ಜೆಲ್ಲಿ ಎಲ್ಲ ಸೇರಿಸಿ ಕಟ್ಟುತ್ತೇವೆ. ಹನಿ ಹನಿ ಗೂಡಿದರೆ ಹಳ್ಳ ಎಂಬಂತೆ ಎಲ್ಲರೂ ಸೇರಿ ಪಕ್ಷ ಕಟ್ಟಿದ್ದಾರೆ. ಅದರಲ್ಲಿ ಶಿವಕುಮಾರ್ ಪ್ರಮುಖ ಪಾತ್ರ ವಹಿಸಿದ್ದಾರೆ. ಅದನ್ನು ನಾವು ಇಲ್ಲ ಅನ್ನೋಕಾಗುತ್ತಾ? ಎಂದು ಪ್ರಶ್ನಿಸಿದರು.

ನಾನು ಸಹ ಸಚಿವ ಸ್ಥಾನದ ಆಕಾಂಕ್ಷಿ

ಅಕ್ಟೋಬರ್‌ನಲ್ಲಿ ಬದಲಾವಣೆ: ಅಜಯ್

ಕಲಬುರಗಿ: ಎರಡೂವರೆ ವರ್ಷದ ಬಳಿಕ ಸಂಪುಟ ಬದಲಾವಣೆ ಆಗಲಿದೆ ಎಂದು ಹೇಳಲಾಗಿತ್ತು. ಅಕ್ಟೋಬರ್ ತಿಂಗಳಲ್ಲಿ ಸಚಿವ ಸಂಪುಟ ಪುನಾರಚನೆ ಆಗುವ ನಿರೀಕ್ಷೆ ಇದ್ದು ನಾನು ಸಹ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೇನೆ. ಈ ಬಾರಿ ಸಚಿವ ಸ್ಥಾನ ಸಿಗುವ ನಂಬಿಕೆ ಇದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯ್ ಧರ್ಮಸಿಂಗ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2018ರಿಂದ ಸಚಿವ ಸ್ಥಾನದ ಆಕಾಂಕ್ಷಿ ಆಗಿದ್ದೇನೆ. ಈ ಬಾರಿ ಸಚಿವ ಸ್ಥಾನ ಸಿಗುವ ಸಾಧ್ಯತೆಯಿದೆ. ಕೆಕೆಆರ್ ಡಿಬಿಯಲ್ಲಿ ಕಳೆದ ಎರಡು ವರ್ಷದಿಂದ ನಡೆದಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಹೈಕಮಾಂಡಗೂ ಮಾಹಿತಿಯಿದೆ. ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿದ್ದು, ಬಹಿರಂಗವಾಗಿ ಎಲ್ಲಿಯೂ ಹೇಳಿಕೆ ನೀಡಿಲ್ಲ. ಸಚಿವ ಸ್ಥಾನ ದೊರೆತರೆ, ಸಮರ್ಥವಾಗಿ ನಿಭಾಯಿಸಲು ಸಿದ್ಧ ಎಂದು ಹೇಳಿದರು.

ರಾಜ್ಯ ಉಸ್ತುವಾರಿ ಸುಜೇವಾಲ ಅವರು ಭೇಟಿ ಆಗಿದ್ದೇನೆ. ಅಲ್ಲಿ ಯಾವುದೇ ವಿಚಾರ ಚರ್ಚೆ ಆಗಿಲ್ಲ. ಬದಲಾಗಿ ಗ್ಯಾರಂಟಿ ಯೋಜನೆಗಳ ಬಗ್ಗೆ ಹಾಗೂ ಕೆಕೆಆರ್‌ಡಿಬಿ ಅನುದಾನ, ಕೆಲಸಗಳ ಬಗ್ಗೆ ಚರ್ಚೆ ಮಾಡಲಾಗಿದೆ. ಯಾರಿಗೆ ಬೆಂಬಲ ಎನ್ನುವ ಬಗ್ಗೆ ಏನು ಮಾತುಕತೆ ನಡೆದಿಲ್ಲ ಎಂದು ಸಷ್ಟಪಡಿಸಿದರು.

> ಮುಖ್ಯಮಂತ್ರಿ ಬದಲಾವಣೆ ಮಾಡುವುದು, ಬಿಡುವುದು ಪಕ್ಷದ ಹೈಕಮಾಂಡ್ ತಿರ್ಮಾನಕ್ಕೆ ಬಿಟ್ಟ ವಿಚಾರವಾಗಿದೆ. ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧವಾಗಿದ್ದೇವೆ. ಖುದ್ದು ಮುಖ್ಯಮಂತ್ರಿಗಳೇ 5 ವರ್ಷ ನಾನೇ ಸಿಎಂ ಎಂದು ಹೇಳಿದ್ದಾರೆ. ಉನ್ನತ ಮಟ್ಟದ ಚರ್ಚೆ ಆಗಿದ್ದಾಗಲೇ, ಹಾಗೆ ಹೇಳಿರಬೇಕು. ಮುಖ್ಯಮಂತ್ರಿ ಬದಲಾವಣೆ ಮಾಡುವುದು, ಬಿಡುವುದು ಹೈಕಮಾಂಡ್ ತೀರ್ಮಾನವಾಗಿದೆ.
>
> -ಡಾ.ಅಜಯ್ ಧರ್ಮಸಿಂಗ್ ಶಾಸಕ

ಸಿಎಂ ಕುರ್ಚಿ ಖಾಲಿ ಇಲ್ಲ

ನಾಯಕತ್ವ ಬದಲಾವಣೆ ಕುರಿತು ಚರ್ಚೆ ಆಗಿಲ್ಲ: ಖರ್ಗೆ

ಹುಬ್ಬಳ್ಳಿ: ಸಿಎಂ ಬದಲಾವಣೆ ವಿಚಾರ ಅಪ್ರಸ್ತುತ. ಮಾರ್ಕ್ಸ್ ಕೊಡುವವರೇ ಸುಮ್ಮನಿದ್ದಾರೆ. ನಾವು-ನೀವು ಚರ್ಚೆ ಮಾಡಿದರೆ ಅದು ಮೌಲ್ಯಯುತವಲ್ಲ, ಎಲ್ಲವೂ ಅಪ್ರಸ್ತುತ ಎಂದು ಸಚಿವ ಪ್ರಿಯಾಂಕ ಖರ್ಗೆ ಹೇಳಿದರು.

ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಬದಲಾವಣೆ ಮಾಡುವ ಅಧಿಕಾರವಿರುವ ಪಕ್ಷದ ಹೈಕಮಾಂಡ್ ನಾಯಕರು, ಮಲ್ಲಿಕಾರ್ಜುನ ಖರ್ಗೆ, ಸುರ್ಜೇವಾಲ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರೇ ಈ ಬಗ್ಗೆ ಮಾತನಾಡುತ್ತಿಲ್ಲ. ಇನ್ನು ನಾವು-ನೀವು ಮಾತನಾಡುವುದು ಅಪ್ರಸ್ತುತ ಎಂದರು.

ಸುರ್ಜೇವಾಲ ಸಭೆಯ ವಿಚಾರವಾಗಿ ಪ್ರತಿಕ್ರಿಯಿಸಿ, ಸಭೆಯಲ್ಲಿ ಸರಕಾರದ ಯೋಜನೆಗಳು, ನಮ್ಮ ಭರವಸೆ ಈಡೇರಿಸುವ ಜತೆಗೆ ಜನರಿಗೆ ಯೋಜನೆಯ ಲಾಭ ಜನರಿಗೆ ತಲುಪಿಸುವ ಕಾರ್ಯ ಮಾಡಿ ಎಂದು ಹೇಳಿದ್ದಾರೆ. ಸಿಎಂ ಬದಲಾವಣೆ, ಅಧಿಕಾರ ಹಂಚಿಕೆ ವಿಚಾರ ಅಪ್ರಸ್ತುತ ಎಂದರು.

ರಾಹುಲ್ ಗಾಂಧಿಯವರು ಸಿಎಂ ಭೇಟಿಯಾಗದ ಕುರಿತು ಮಾತನಾಡಿದ ಅವರು, ಸಮಯ ಸಂದರ್ಭದಲ್ಲಿ ಭೇಟಿಯಾಗಲು ಅವಕಾಶ ಸಿಗುತ್ತದೆ. ಆದರೆ ಪ್ರತಿಯೊಬ್ಬರಿಗೂ ಕೆಲವೊಂದು ಸಂದರ್ಭ ಸನ್ನಿವೇಶ ಇರಬೇಕಲ್ಲ. ಬಿಹಾರ ಪ್ರವಾಸದಲ್ಲಿರುವ ಕಾರಣದಿಂದ ಭೇಟಿಯಾಗಲು ಆಗಿಲ್ಲ. ಈ ಕಾರಣದಿಂದ ರಾಜ್ಯ ನಾಯಕರು ದುರ್ಬಲ ಇದ್ದಾರೆ ಎಂದು ಹೇಳಲು ಆಗುವುದಿಲ್ಲ ಎಂದರು.

ಹೈಕಮಾಂಡ್ ತೀರ್ಮಾನ: ಕೆಪಿಸಿಸಿ ಅಧ್ಯಕ್ಷ ಪಟ್ಟ ಬದಲಾವಣೆ ಕುರಿತು ಪ್ರಸ್ತಾಪಿಸಿದ ಅವರು, ಈ ಬಗ್ಗೆ ಯಾವುದೇ ಚರ್ಚೆಗಳು ನಡೆದಿಲ್ಲ, ಎಲ್ಲವನ್ನೂ ಪಕ್ಷದ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಯಾವುದೇ ಕುರ್ಚಿ ಯಾರಿಗೂ ಶಾಶ್ವತವಲ್ಲವೆಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಈ ಬಗ್ಗೆ ಯಾವುದೇ ಚರ್ಚೆಗಳು ನಡೆದಿಲ್ಲ ಎಂದು ಸಚಿವ ಪ್ರಿಯಾಂಕ ಖರ್ಗೆ ಹೇಳಿದರು.

ಮಹಾರಾಷ್ಟ್ರದ ಶಿರಡಿ ಸಾಯಿ ಬಾಬ ದರ್ಶನ ಪಡೆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್.

ಜಿಎಸ್‌ಟಿ ಸಾಹುಕಾರರಿಗೆ ಅನುಕೂಲ

ಚಿತ್ರದುರ್ಗ: ಸುಡುಗಾಡಿಗೆ ಹೋಗಿ ತೆಂಗಿನಕಾಯಿ ಒಡೆದರೂ ಜಿಎಸ್‌ಟಿ ಅನ್ವಯಿಸುತ್ತೆ ಎಂದು ಕಾರ್ಮಿಕ ಇಲಾಖೆ ಸಂತೋಷ್ ಲಾಡ್ ಕಿಡಿಕಾರಿದ್ದಾರೆ. ಚಿತ್ರದುರ್ಗದಲ್ಲಿ ಗ್ರಾಹಕರು ಸಣ್ಣ ವ್ಯಾಪಾರ ವಹಿವಾಟಿಗೆ ಬಳಸಿದ ಗೂಗಲ್ ಪೇ ಹಾಗೂ ಫೋನ್ ಪೇ ಆಧರಿಸಿ, ಜಿಎಸ್‌ಟಿ ಕಟ್ಟುವಂತಿರುವ ನಿಯಮದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈಗ ಹಾಲು, ಮೊಸರು, ಅರಶಿಣ ಸೇರಿ ಎಲ್ಲದರ ಮೇಲೂ ಜಿಎಸ್‌ಟಿ ಇದೆ. ಶೇ. 60% ನಿಂದ 70% ಜನರು ಜಿಎಸ್‌ಟಿ ಭರಿಸಬೇಕಾಗಿದೆ. ಈ ಜಿಎಸ್‌ಟಿಯಿಂದ ದೇಶದಲ್ಲಿ ಸಾಹುಕಾರರಿಗೆ ಅನುಕೂಲವಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ಅಲ್ದೇ ಸುಮಾರು ಹದಿನಾರುವರೆ ಲಕ್ಷ ಕೋಟಿ ರು. ಮಾಫಿ ಆಗಿದೆ. ಇದರಿಂದ ರೈತರು, ಬಡವರು ಹಾಗು ಮಧ್ಯಮ ವರ್ಗಕ್ಕೆ ಯಾವ್ದೇ ಅನುಕೂಲವಾಗಿಲ್ಲ. ಈ ಬಗ್ಗೆ ಜನರು ಅರ್ಥ ಮಾಡಿಕೊಳ್ಳಬೇಕಿದೆ ಎಂದು ಸಲಹೆ ನೀಡಿದ್ದಾರೆ.

ಸುಳ್ಳು ಹರಡುವ ಬದಲು ಕನ್ನಡಿಗರ ಪ್ರಶ್ನೆಗೆ ಉತ್ತರಿಸಲಿ

ಅಮಿತ್ ಮಾಳವೀಯ ವಿರುದ್ಧ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಕಿಡಿ

ಬೆಂಗಳೂರು: ಕರ್ನಾಟಕದಲ್ಲಿ ರಾಜ್ಯಾಧ್ಯಕ್ಷರನ್ನು ನೇಮಿಸಲಾಗದ, ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡಲು ಹೆಣಗಾಡುತ್ತಿರುವ ಬಿಜೆಪಿ ಪಕ್ಷದ ಅಮಿತ್ ಮಾಳವೀಯ ಅವರ ವಿಕೃತ, ನೀಚ ಸ್ವಭಾವಕ್ಕೆ ಮಿತಿಯೇ ಇಲ್ಲದಂತಾಗಿದೆ. ಸುಳ್ಳು ಹರಡುವ ಬದಲಿಗೆ ಕನ್ನಡಿಗರ ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕರ್ನಾಟಕ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಕಿಡಿಕಾರಿದ್ದಾರೆ.

ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರ ಭೇಟಿಗೆ ಅವಕಾಶ ನಿರಾಕರಿಸಿ ರಾಷ್ಟ್ರ ರಾಜಧಾನಿಯಲ್ಲಿ ಸಿದ್ದರಾಮಯ್ಯ ಅವರಿಗೆ ಅವಮಾನ ಮಾಡಲಾಗಿದೆ ಎಂದು ಅಮಿತ್ ಮಾಳವೀಯ ಅವರು ತಮ್ಮ ಎಕ್ಸ್‌ನಲ್ಲಿ ಮಾಡಿರುವ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಸುರ್ಜೇವಾಲ, ಕರ್ನಾಟಕದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರನ್ನು ನಿರ್ಧರಿಸಲಾಗದೆ ಬಿಜೆಪಿ ಸಹೋದರರ ನಡುವಿನ ಹತ್ಯಾಯುದ್ಧದಿಂದ ನುಣುಚಿಕೊಳ್ಳಲು ಅಮಿತ್ ಮಾಳವೀಯ ರಾಹುಲ್‌ಗಾಂಧಿ ಅವರ ಬಗ್ಗೆ ಟೀಕಿಸಿ ವಿಕೃತಿ ಮೆರೆದಿದ್ದಾರೆ. ಇದಕ್ಕೂ ಮೊದಲು ಕೇಂದ್ರ ಸರಕಾರ ಕರ್ನಾಟಕಕ್ಕೆ ಮಾಡುತ್ತಿರುವ ಅನ್ಯಾಯ ಹಾಗೂ ಕನ್ನಡಿಗರ ಮೇಲೆ ತೋರುತ್ತಿರುವ ದ್ವೇಷದ ಬಗ್ಗೆ ಉತ್ತರಿಸಲಿ. ವಾಸ್ತವವಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ಬಂದು 7 ಕೋಟಿ ಕನ್ನಡಿಗರ ಮೇಲಿನ ಬಿಜೆಪಿ ಸರಕಾರ ಮಾಡುತ್ತಿರುವ ದ್ವೇಷ ನಿಲ್ಲಿಸುವಂತೆ ಒತ್ತಾಯಿಸಿದ್ದಾರೆ. ರಾಜಧರ್ಮದ ಬಗ್ಗೆ ನೆನಪಿಸಲು ಹಲವಾರು ಕೇಂದ್ರ ಸಚಿವರನ್ನು ಭೇಟಿಯಾಗಿದ್ದಾರೆ. ಇದನ್ನು ಮರೆಮಾಚಿ ಸುಳ್ಳು ಹೇಳುತ್ತಿರುವ ಬಿಜೆಪಿಯವರು ಕನ್ನಡಿಗರು ಕೇಳುತ್ತಿರುವ ಪ್ರಶ್ನೆಗಳಿಗೆ ಉತ್ತರಿಸಲಿ ಎಂದು ಸವಾಲು ಹಾಕಿದ್ದಾರೆ.

ಜಿಎಸ್‌ಟಿಯಲ್ಲಿ ಕರ್ನಾಟಕದ ನ್ಯಾಯಯುತ ಪಾಲು ನೀಡದೆ 1 ರು. ಸಂಗ್ರಹಿಸಿ ಕೇವಲ 13 ಪೈಸೆ ನೀಡುತ್ತಿರುವುದು ಏಕೆ?, 2023-24 ರ ಕೇಂದ್ರ ಬಜೆಟ್‌ನಲ್ಲಿ 5,300 ಕೋಟಿ ರು. ವಿಶೇಷ ಅನುದಾನ ಭರವಸೆ ನೀಡಿ ಏಕೆ ಒಂದು ರುಪಾಯಿ ಕೂಡ ಬಿಡುಗಡೆ ಮಾಡಲಿಲ್ಲ?. ಉತ್ತರ ಕರ್ನಾಟಕದ ಲಕ್ಷಾಂತರ ಜನರಿಗೆ ಅನುಕೂಲವಾಗುವ ಕೃಷ್ಣಾ ಜಲವಿವಾದ ನ್ಯಾಯಾಧೀಕರಣ-2 ತೀರ್ಮಾನದ ಬಗ್ಗೆ ಯಾಕೆ ಅಧಿಸೂಚನೆ ಹೊರಡಿಸಿಲ್ಲ?. ಎತ್ತಿನಹೊಳೆ ಮತ್ತು ಕಳಸಾ-ಬಂಡೂರಿ ಯೋಜನೆಗಳಿಗೆ ಯಾಕೆ ಅನುಮೋದನೆ ನೀಡುತ್ತಿಲ್ಲ. ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ದಾವಣಗೆರೆ ಸೇರಿ ಮಧ್ಯ ಕರ್ನಾಟಕದ 2.25 ಲಕ್ಷ ಹೆಕ್ಟೇರ್‌ಗೆ ನೀರುಣಿಸಬಹುದಾದ ಭದ್ರಾ ಮೇಲ್ದಂಡೆ ಯೋಜನೆಗೆ ಯಾಕೆ ಅನುಮತಿ ನೀಡುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ.

ರಾಜ್ಯದ ಜನತೆ ಪ್ರಶ್ನೆಗಳಿಗೆ ಉತ್ತರಿಸಿ

ಬೆಂಗಳೂರಿಗೆ ಕುಡಿಯುವ ನೀರು ಒದಗಿಸುವ ಮೇಕೆದಾಟು ಅಣೆಕಟ್ಟು ಯೋಜನೆಗೆ ಕೇಂದ್ರ ಸರಕಾರದ ಜಲಶಕ್ತಿ ಸಚಿವಾಲಯ ನಿರಾಕರಿಸಲು ಕಾರಣವೇನು?. 15 ನೇ ಹಣಕಾಸು ಆಯೋಗದಲ್ಲಿ ಕರ್ನಾಟಕ ರಾಜ್ಯಕ್ಕೆ ನ್ಯಾಯಯುತವಾಗಿ ಸಲ್ಲಬೇಕಾಗಿದ್ದ 1.87 ಲಕ್ಷ ಕೋಟಿ ರು. ಯಾಕೆ ನೀಡಿಲ್ಲ. ನೆರೆ, ಬರ ನಷ್ಟಕ್ಕೆ ಕೇಂದ್ರ ವಿಪತ್ತು ಪರಿಹಾರ ನಿಧಿಯಿಂದ ಪರಿಹಾರಕ್ಕೆ ಪದೇ ಪದೇ ಗೋಗರೆದರೂ ಯಾಕೆ ಬಿಡುಗಡೆ ಮಾಡಲಿಲ್ಲ. ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ನಿತ್ಯವೂ ಕನ್ನಡಿಗರಿಗೆ ಅವಮಾನ ಮಾಡುತ್ತಿರುವ ಬಗ್ಗೆ ಹಲವು ನಿದರ್ಶನಗಳಿವೆ. ಹೀಗಾಗಿ ಸುಳ್ಳುಗಳ ಮರೆಯಲ್ಲಿ ಅವಿತುಕೊಳ್ಳುವುದನ್ನು ನಿಲ್ಲಿಸಿ ಕರ್ನಾಟಕದ ಜನತೆಯ ಪ್ರಶ್ನೆಗಳಿಗೆ ಉತ್ತರಿಸಿ ಎಂದು ರಣದೀಪ್ ಸುರ್ಜೇವಾಲ ಆಗ್ರಹಿಸಿದ್ದಾರೆ.

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್ ವಿಸಿಟ್ ಮಾಡಿ
www.pravasiprapancha.com

ಕೊನೆಗೂ ಗಡ್ಡ ಕೆರೆದ ನಂತರವೇ ಆತ ನೇಣಿಗೆ ಕೊರಳು ಕೊಟ್ಟ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com
vveditoped@gmail.com

1990ರ ಜೂನ್ 16. ನಾನು ಪತ್ರಿಕೋದ್ಯಮದಲ್ಲಿ ಕಣ್ಣು ಬಿಡುತ್ತಿದ್ದ ದಿನಗಳವು. ಬಿಳಿಗಿರಿರಂಗನ ಬೆಟ್ಟದ ಸನಿಹವಿರುವ ಕೆ.ಗುಡಿ (ಕ್ಯಾತದೇವರಾಯ ಗುಡಿ) ವನ್ಯಧಾಮ ಕ್ಯಾಂಪ್‌ನಲ್ಲಿ ಉಳಿದುಕೊಂಡಿದ್ದೆ. ನನ್ನ ಜತೆಗೆ ಮತ್ತೊಬ್ಬರು ಪತ್ರಕರ್ತರೂ ಇದ್ದರು. ನಮ್ಮ ದೇಖರೇಖಿ ನೋಡಿಕೊಳ್ಳಲು ಎನ್.ಗೋಪಾಲ ಪೂಜಾರಿ ಎಂಬ ಅರಣ್ಯ ಇಲಾಖೆ ಅಧಿಕಾರಿ ಇದ್ದರು. ಪೂಜಾರಿಯವರು ಕಾರ್ಕಳ ಸನಿಹದ ನಾರಾವಿ ಗ್ರಾಮದವರು. ಬಹಳ ಕಟ್ಟುನಿಟ್ಟಿನ ಅಧಿಕಾರಿ. ತಮಗನಿಸಿದ್ದನ್ನು ನೇರಾನೇರ ಹೇಳುವ ಖಡಕ್ ಮನುಷ್ಯ (ಮೊದಲ ಭೇಟಿಯಲ್ಲಿಯೇ ನನಗೆ ಆಪ್ತರಾದ ಪೂಜಾರಿಯವರು ನನಗೆ ಬಹಳ ವರ್ಷ ತಪ್ಪದೇ ಪತ್ರ ಮುಖೇನ ಸಂಪರ್ಕದಲ್ಲಿದ್ದರು).

ಅಂದು ಬೆಳಗಿನ ಉಪಾಹಾರ ಸೇವಿಸುವಾಗ, ನನ್ನ ಸ್ನೇಹಿತ ಹಿಡಿದ ಚಮಚ, ಪ್ಲೇಟಿಗೆ ತಾಕಿ ಸದ್ದು ಮಾಡುತ್ತಿತ್ತು. ನನಗೂ ಆ ಸದ್ದು ತುಸು ಕಿರಿಕಿರಿ ಅನಿಸುತ್ತಿತ್ತು. ಪೂಜಾರಿಯವರು ನನ್ನ ಸ್ನೇಹಿತನನ್ನುದ್ದೇಶಿಸಿ, ''ನೀವು ಪತ್ರಕರ್ತರು. ಗಣ್ಯವ್ಯಕ್ತಿಗಳ ಜತೆ ಊಟ ಮಾಡುವ ಅವಕಾಶ ನಿಮಗೆ ಮೇಲಿಂದ ಮೇಲೆ ಸಿಗುತ್ತದೆ. ಹೀಗಾಗಿ ಟೇಬಲ್ ಮ್ಯಾನರ್ಸ್ ಬಹಳ ಮುಖ್ಯ. ನಾವು ಆಹಾರ ಸೇವಿಸುವಾಗ, ಬಾಯಿ ಮುಚ್ಚಿ ತಿನ್ನಬೇಕು. ಇಲ್ಲದಿದ್ದರೆ ನಾಯಿ ತಿನ್ನುವಾಗ 'ಪಚಪಚ' ಅಂತ ಸಪ್ಪಳವಾಗುತ್ತದಲ್ಲ, ಅಂಥ ಸಪ್ಪಳ ಬರುತ್ತದೆ. ಹಾಗೆಯೇ ಆಹಾರ ಸೇವಿಸುವಾಗ ಚಮಚ ಪ್ಲೇಟಿಗೆ ತಾಕಿ ಸದ್ದು ಬರುವ ಹಾಗೆ ತಿನ್ನಬಾರದು. ಚಮಚವನ್ನು ಆಹಾರಕ್ಕೆ ತಾಗಿಸಬೇಕೇ ಹೊರತು ಪ್ಲೇಟಿಗಲ್ಲ'' ಎಂದು ಹೇಳಿದರು. ನನ್ನ ಸ್ನೇಹಿತ ಆ ಕ್ಷಣ ಅಂಥ ಪ್ರತಿಕ್ರಿಯೆ ನಿರೀಕ್ಷಿಸಿರಲಿಲ್ಲ. ಆತ ಒಂದು ಕ್ಷಣ ಪೆಚ್ಚಾದರು.

ಪೂಜಾರಿ ಅವರು ಹೇಳಿದ್ದು ಸರಿಯಾಗಿತ್ತು. ಆದರೆ ಹೇಳಿದ ರೀತಿ ಖಡಕ್ ಮತ್ತು ತೀರಾ ಒರಟಾಗಿತ್ತು. ನನ್ನ ಸ್ನೇಹಿತ ಮರು ಮಾತಾಡಲಿಲ್ಲ. ನಾನು ಹೇಳಬೇಕಾದ ಮಾತನ್ನು ಪೂಜಾರಿಯವರು ಹೇಳಿದರಲ್ಲ ಎಂದು ನನಗೆ ಒಳಗೊಳಗೇ ಖುಷಿಯಾಯಿತು. ನನ್ನ ಆ ಸ್ನೇಹಿತ ಆಹಾರ ಸೇವಿಸುವಾಗ ಮಾಡುತ್ತಿದ್ದ ಬಾಯಿಸದ್ದು ಮತ್ತು ಪ್ಲೇಟಿನಿಂದ ಹೊಮ್ಮುತ್ತಿದ್ದ 'ಪಕ್ಕವಾದ್ಯ' ಸಹಿಸಿಕೊಳ್ಳುವುದು ಕಷ್ಟವಾಗಿತ್ತು. ನಾನು ಒಮ್ಮೆ ಈ ಬಗ್ಗೆ ಅವನಿಗೆ ಹೇಳಿದಾಗ ಅಷ್ಟಕ್ಕೇ ಆತ ವ್ಯಗ್ರನಾಗಿ ಪ್ರತಿಕ್ರಿಯಿಸಿದ್ದ. ಪೂಜಾರಿ ಅವರು ಯಾಕೆ ಹಾಗೆ ಆಹಾರ ಸೇವಿಸಬೇಕು ಎಂಬ ಬಗ್ಗೆ ಸಣ್ಣ 'ಬೌದ್ಧಿಕ್' ನೀಡಿದ್ದರು.

ಮುಂದಿನ ಸರದಿ ನನ್ನ ಮೇಲೆ. ''ಭಟ್ರೇ, ನೀವು ಪತ್ರಕರ್ತರು. ಗಣ್ಯವ್ಯಕ್ತಿಗಳನ್ನು ಭೇಟಿಯಾಗುವ ಅವಕಾಶ ನಿಮಗೂ ಮೇಲಿಂದ ಮೇಲೆ ಸಿಗುತ್ತಿರುತ್ತವೆ. ಯಾವತ್ತೂ ನಾವು ನಮ್ಮನ್ನು ಅತ್ಯಂತ ಶಿಸ್ತಿನಿಂದ, ಅಚ್ಚುಕಟ್ಟಾಗಿ ಪ್ರಸೆಂಟ್ ಮಾಡಿಕೊಳ್ಳಬೇಕು. ಯಾಕೋ ನಿಮ್ಮ ಮುಖದಲ್ಲಿರುವ ಕುರುಚಲು ಗಡ್ಡ ನನಗೆ ಸರಿ ಕಾಣುತ್ತಿಲ್ಲ. ಅದು ನಿಮ್ಮ ವೈಯಕ್ತಿಕ ವಿಷಯವೇ ಆಗಿರಬಹುದು. ಆದರೂ ಹೇಳುತ್ತೇನೆ. ನೀವು ನಿತ್ಯವೂ ಶೇವ್ ಮಾಡಬೇಕು. Shaving says a lot about a man. ಕ್ಲೀನ್ ಶೇವ್ ಮಾಡಿಕೊಳ್ಳುವುದು ಒಂದು ಅತ್ಯುತ್ತಮ ಸಂಸ್ಕಾರ. ನಿಮಗೆ ನಿಮ್ಮ ಮುಖದ ಬಗ್ಗೆಯೇ ಕಾಳಜಿ ಇಲ್ಲದಿದ್ದರೆ, ಬೇರೆ ವಿಷಯಗಳ ಬಗ್ಗೆ ಎಷ್ಟು ಕಾಳಜಿ ಹೊಂದಬಲ್ಲಿರಿ? ದಿನವೂ ಬೆಳಗ್ಗೆ ಹಲ್ಲುಜ್ಜುವಂತೆ, ಮುಖ ತೊಳೆಯುವಂತೆ, ಕ್ಲೀನಾಗಿ ಶೇವ್ ಕೂಡ ಮಾಡಿಕೊಳ್ಳಬೇಕು. ಅದಕ್ಕೆ ಸಮಯ ಇಲ್ಲದಿದ್ದರೆ, ನಿಮ್ಮ ಟೈಮ್ ಮ್ಯಾನೇಜ್ಮೆಂಟ್ ಸರಿ ಇಲ್ಲ ಎಂದರ್ಥ. ಯಾವತ್ತೂ ಕ್ಲೀನ್ ಶೇವ್ ಮಾಡಿಕೊಂಡು ಗರಿಗರಿಯಾಗಿರಬೇಕು, ಅದು ಲಕ್ಷಣ'' ಎಂದು ಪೂಜಾರಿಯವರು ನನ್ನ ಮೇಲೆ ಉಪದೇಶಗಳ ಅರ್ಚನೆಗೈದಿದ್ದರು.

ನನ್ನ ತಂದೆಯವರು ಸಹ ನಿತ್ಯವೂ ಶೇವ್ ಮಾಡುತ್ತಿದ್ದರು. ಅವರು ನನಗೆ ಅನೇಕ ಸಲ ನಿತ್ಯ ಶೇವಿಂಗ್ ಮಹತ್ವದ ಬಗ್ಗೆ ಹೇಳಿದ್ದಿದೆ. ಆದರೂ ನಾನು ಅವರ ಮಾತನ್ನು ನೂರಕ್ಕೆ ನೂರು ಜಾರಿಗೆ ತಂದಿರಲಿಲ್ಲ. ಆದರೆ ಆ ಕ್ಷಣದಲ್ಲಿ ನನಗೆ ಏನನಿಸಿತೋ ಏನೋ, ಪೂಜಾರಿಯವರು ಹೇಳಿದ್ದು ಸರಿ ಎಂದೆನಿಸಿಬಿಟ್ಟಿತು. ಪೂಜಾರಿಯವರ ಮಾತಿನಲ್ಲಿ ಅದೆಂಥ ಮಾಂತ್ರಿಕ ಶಕ್ತಿಯಿತ್ತೋ, ಆದೇಶದ ಆಜ್ಞೆಯಿತ್ತೋ ಗೊತ್ತಿಲ್ಲ, ನಾನು ಅಲ್ಲಿಯೇ ನಿರ್ಧಾರ ಮಾಡಿದೆ, ಇನ್ನು ಮುಂದೆ ಪ್ರತಿದಿನ ಶೇವ್ ಮಾಡಬೇಕೆಂದು. ಕೋವಿಡ್ ಕಾಲದಲ್ಲಿ ಒಂದು ವಾರ ತಮಾಷೆಗೆಂದು ಗಡ್ಡ ಬಿಟ್ಟಿದ್ದನ್ನು ಹೊರತುಪಡಿಸಿದರೆ, 1990ರ ಜೂನ್ 16ರಿಂದ ಇಂದಿನ ತನಕ ಪ್ರತಿದಿನ ಶೇವ್ ಮಾಡುತ್ತಾ ಬಂದಿದ್ದೇನೆ.

ಮಳೆಯಿರಲಿ, ಚಳಿಯಿರಲಿ, ರಜಾ ಇರಲಿ, ಇಲ್ಲದಿರಲಿ, ಜ್ವರ ಬರಲಿ, ಕಾಯಿಲೆ ಬಿದ್ದಿರಲಿ, ಆಸ್ಪತ್ರೆ ಸೇರಿರಲಿ, ಆದರೆ ಶೇವ್ ಮಾಡದ ದಿನ ಇಲ್ಲವೇ ಇಲ್ಲ. ಉಪವಾಸ ಇರಬಲ್ಲೆ, ಆದರೆ ಶೇವ್ ಮಾಡದೇ ಇರಲಾರೆ. ಲಘು ಹೃದಯಾಘಾತವಾಗಿ ಒಂದು ವಾರ ಆಸ್ಪತ್ರೆಯಲ್ಲಿದ್ದಾಗಲೂ ಶೇವ್ ಮಾಡುವುದನ್ನು ತಪ್ಪಿಸಿದವನಲ್ಲ. ಪ್ರವಾಸ ಹೋಗುವಾಗ ಪರ್ಸ್ ಬಿಟ್ಟು ಹೋದೇನು, ಆದರೆ ಶೇವಿಂಗ್ ಕಿಟ್ ಬಿಟ್ಟು ಹೋಗಲಾರೆ. ಬೆಳಗ್ಗೆ ಹಲ್ಲುಜ್ಜಿದ ನಂತರ ಶೇವ್ ಮಾಡಲೇಬೇಕು. ಅದಾದ ಬಳಿಕವೇ ಉಳಿದ ಕೆಲಸ. ಒಂದು ದಿನ ಶೇವ್ ಮಾಡದಿದ್ದರೆ ಏನಾಗುತ್ತದೆ ಎಂದು ಯಾರಾದರೂ ಕೇಳಿದರೆ ನನ್ನ ಬಳಿ ಉತ್ತರವಿಲ್ಲ. ಕಾರಣ ಆ ದಿನ ಹೇಗಿರುತ್ತದೆ ಮತ್ತು ಏನಾಗುತ್ತದೆ ಎಂಬುದು ನನಗೆ ಗೊತ್ತೇ ಇಲ್ಲ.

ಪಾಕಿಸ್ತಾನದ ದಿವಂಗತ ಪ್ರಧಾನಿ ಜುಲ್ಫಿಕರ್ ಅಲಿ ಭುಟ್ಟೋ ಸಹ ನಿತ್ಯವೂ ಶೇವ್ ಮಾಡುತ್ತಿದ್ದರು. ಅವರು ಒಂದು ಸಲ ಅಲ್ಲ, ದಿನಕ್ಕೆ ಎರಡು ಸಲ ಶೇವ್ ಮಾಡುತ್ತಿದ್ದರು. ನಂತರ ಅದು ಮೂರು ಹಾಗೂ ನಾಲ್ಕು ಬಾರಿಗೆ ಹೋಯಿತು. ಶೇವ್ ಮಾಡಲು ಅವರಿಗೆ ಬಂಗಾರದ ರೇಜರ್ ಸೆಟ್ ಬೇಕಿತ್ತು. ಅವರನ್ನು ಪದಚ್ಯುತಗೊಳಿಸಿ ಅಧಿಕಾರಕ್ಕೆ ಬಂದ ಜನರಲ್ ಜನರಲ್ ಜಿಯಾ-ಉಲ್-ಹಕ್, ಭುಟ್ಟೋನನ್ನು ಜೈಲಿಗೆ ಹಾಕಿದ. ಭುಟ್ಟೋ ಶೇವಿಂಗ್ ಖಯಾಲಿ ಗೊತ್ತಿದ್ದ ಜಿಯಾ, ''ಯಾವ ಕಾರಣಕ್ಕೂ ಭುಟ್ಟೋಗೆ ರೇಜರ್ ಕೊಡಬಾರದು'' ಎಂದು ಆದೇಶಿಸಿದ್ದ.

ಭುಟ್ಟೋಗೆ ಜೈಲು ಶಿಕ್ಷೆಗಿಂತ ಶೇವಿಂಗ್ ಮಾಡಿಕೊಳ್ಳದೇ ಇರುವುದು ಘನಘೋರ ಶಿಕ್ಷೆಯಾಯಿತು. ದಿನಕ್ಕೆ ನಾಲ್ಕು ಸಲ ಶೇವ್ ಮಾಡಿಕೊಳ್ಳುತ್ತಿದ್ದವನ ಮುಖದ ಮೇಲೆ ಪೊದೆ ಗಾತ್ರದ ಗಡ್ಡ ಬೆಳೆದಿತ್ತು. ಜಿಯಾ ಆದೇಶದ ಮೇರೆಗೆ, ಭುಟ್ಟೋ ಮುಖಕ್ಕೆ ಕನ್ನಡಿ ಹಿಡಿಯುವಂತೆ ಜೈಲರ್‌ಗೆ (ಜಿಯಾ) ಆದೇಶಿಸಿದ್ದ.

ಭುಟ್ಟೋ ಇರುವ ಕಾರಾಗೃಹದ ಕೋಣೆಗೆ ಹೋಗಿ ಜೈಲರ್ ಕನ್ನಡಿ ಹಿಡಿದರೆ, ತನ್ನ ಮುಖ ನೋಡಿ ಭುಟ್ಟೋ ಕಿಟಾರನೆ ಕಿರುಚುತ್ತಿದ್ದ. ಭುಟ್ಟೋ ತನ್ನ ಜೀವನದಲ್ಲೇ ಒಂದು ದಿನದ ಗಡ್ಡವಿರುವ ತನ್ನ ಮುಖವನ್ನು ನೋಡಿಕೊಂಡವನಲ್ಲ. ತನ್ನ ಸ್ಫುರದ್ರೂಪ ಕ್ಲೀನ್ ಶೇವಿಂಗ್‌ನಲ್ಲಿದೆ ಎಂದು ಆತ ಬಲವಾಗಿ ನಂಬಿದವ. ಪ್ರತಿದಿನ ಭುಟ್ಟೋಗೆ ಊಟ ನೀಡುವಾಗ ಜೈಲರ್ ಕನ್ನಡಿ ಜತೆಗೆ ಹೋಗುತ್ತಿದ್ದ. ನನ್ನ ಮುಖಕ್ಕೆ ಕನ್ನಡಿ ಹಿಡಿದರೆ, ಊಟ ಮಾಡುವುದಿಲ್ಲ ಎಂದು ಭುಟ್ಟೋ ರಗಳೆ ತೆಗೆಯುತ್ತಿದ್ದ. ಕನ್ನಡಿಯಲ್ಲಿ ಮುಖ ನೋಡಿಕೊಂಡರೆ ಚಿಕ್ಕ ಮಗುವಿನಂತೆ ಅಳುತ್ತಿದ್ದ ಭುಟ್ಟೋ, ಊಟ ಮಾಡುತ್ತಿರಲಿಲ್ಲ. ತನ್ನ ಗಡ್ಡವನ್ನು ನೇವರಿಸುತ್ತಾ ತನ್ನಷ್ಟಕ್ಕೆ ಬಿಕ್ಕಳಿಸುತ್ತಿದ್ದ.

ಭುಟ್ಟೋಗೆ ಶೇವಿಂಗ್ ಎನ್ನುವುದು ಊಟ-ತಿಂಡಿಗಿಂತ ಮಿಗಿಲಾದ ಕ್ರಿಯೆಯಾಗಿತ್ತು. ಊಟವಾದರೂ ಬಿಟ್ಟಾನು, ಆದರೆ ಶೇವಿಂಗ್ ಬಿಡುತ್ತಿರಲಿಲ್ಲ. ಶೇವಿಂಗ್ ಮಾಡದ ತನ್ನ ಸ್ಥಿತಿಯಿಂದ ಭುಟ್ಟೋ ಮಾನಸಿಕವಾಗಿ ತನ್ನಷ್ಟಕ್ಕೆ ಕುಸಿದು ಹೋಗಿದ್ದ!

ಭುಟ್ಟೋನನ್ನು ಗಲ್ಲಿಗೇರಿಸುವ ದಿನ ಬಂತು. ಜೈಲರ್ ಬಂದು, ''ನಿಮ್ಮ ಕೊನೆಯ ಆಸೆ ಏನು?'' ಎಂದು ಕೇಳಿದ. ಅದಕ್ಕೆ ಭುಟ್ಟೋ, ''ನನಗೆ ನನ್ನ ಬಂಗಾರದ ರೇಜರ್ ಬೇಕು. ನಾನು ಕೊನೆ ಬಾರಿಗೆ ಶೇವ್ ಮಾಡಿಕೊಳ್ಳಬೇಕು. ನಂತರ ನನ್ನ ಮುಖವನ್ನೊಮ್ಮೆ ನೋಡಿಕೊಳ್ಳಬೇಕು. ನಂತರ ಗಲ್ಲಿಗೇರಿಸಿ'' ಎಂದು ಬೇಡಿಕೊಂಡ. ಗಲ್ಲು ಶಿಕ್ಷೆ ಶಿಷ್ಟಾಚಾರದಂತೆ, ಕೊನೆಯ ಆಸೆ ಈಡೇರಿಸಲು ಭುಟ್ಟೋ ಬಳಸುತ್ತಿದ್ದ ಬಂಗಾರದ ರೇಜರ್ ಅನ್ನು ಜೈಲರ್ ತರಿಸಿಕೊಟ್ಟ. ಭುಟ್ಟೋ ಸುಮಾರು ಒಂದು ಗಂಟೆ ಕಾಲ ಗಡ್ಡ ಕೆರೆದುಕೊಂಡ. ಸಮಾಧಾನವಾಗಲಿಲ್ಲ. ಮತ್ತೊಮ್ಮೆ ಶೇವ್ ಮಾಡಿಕೊಂಡ. ಮೂರ್ನಾಲ್ಕು ಬಾರಿ ಶೇವ್ ಮಾಡಿಕೊಂಡ. ನಂತರ ಕನ್ನಡಿಯಲ್ಲಿ ಮುಖ ನೋಡಿಕೊಂಡ. ಆಗಲೇ ಬಡಜೀವ ಸಂತೃಪ್ತವಾಯಿತು. ನಂತರ ಆತ ನೇಣುಗಂಬದತ್ತ ಹೆಜ್ಜೆ ಹಾಕಿದ್ದು!

ಶೇವಿಂಗ್ ವಿಚಾರದಲ್ಲಿ ನಾನು ಭುಟ್ಟೋನಷ್ಟು ಅಲ್ಲದಿದ್ದರೂ, ಅವನ ಗಾಳಿ ಸೋಂಕಿದವನ ಹಾಗೆ ವರ್ತಿಸುವುದುಂಟು.

ದಿವಂಗತ ಸಂಪಾದಕ ವೈಯೆನ್ಕೆ, ನನಗೆ ಆಪ್ತರಾಗಿದ್ದ ದಿವಂಗತ ಅಣು ವಿಜ್ಞಾನಿ ಡಾ.ರಾಜಾರಾಮಣ್ಣ ಕೂಡ ಶೇವಿಂಗ್ ವಿಚಾರದಲ್ಲಿ ಭುಟ್ಟೋ ಥರ ವರ್ತಿಸುತ್ತಿದ್ದುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಒಮ್ಮೆ ನಾನು ಡಾ.ರಾಜಾರಾಮಣ್ಣ ಅವರ ಜತೆಗೆ ಲೇಹ್‌ಗೆ ಹೋಗಿದ್ದೆ. ಆಗ ಅವರು ನರಸಿಂಹರಾಯರ ಸರಕಾರದಲ್ಲಿ ರಕ್ಷಣಾ ಖಾತೆಯ ರಾಜ್ಯ ಸಚಿವರಾಗಿದ್ದರು. ಅಂದು ಬೆಳಗ್ಗೆ ಹತ್ತು ಗಂಟೆಗೆ ಅವರು ರಕ್ಷಣಾ ಅಧಿಕಾರಿಗಳ ಜತೆ ಮಾತುಕತೆ ಇಟ್ಟುಕೊಂಡಿದ್ದರು.

ಆದರೆ ದಿಲ್ಲಿಯಿಂದ ಬರುವಾಗ ಅವರು ತಮ್ಮ ಶೇವಿಂಗ್ ಕಿಟ್ ಮರೆತು ಬಂದಿದ್ದರು. ನನ್ನ ರೂಮು ಡಾ.ರಾಜಾರಾಮಣ್ಣ ಅವರ ರೂಮಿನಿಂದ ಮೂರನೆಯದು. ನಾನು ಅವರ ಉಗ್ರಕೋಪವನ್ನು ನೋಡಿದ್ದು ಅದೇ ಮೊದಲು ಹಾಗೂ ಕೊನೆ. ತಮ್ಮ ಪಿಎಯನ್ನು ಕರೆದು ಹಿಗ್ಗಾಮುಗ್ಗಾ ಬೈದರು. ಯುದ್ಧಭೂಮಿಗೆ ಶಸ್ತ್ರಾಸ್ತ್ರ ಮರೆತುಹೋದರೂ ಅವರು ಏನೂ ಅನ್ನುತ್ತಿರಲಿಲ್ಲವೇನೋ? ಆದರೆ ತಮ್ಮ ಶೇವಿಂಗ್ ಕಿಟ್ ಪ್ಯಾಕ್ ಮಾಡದ ಪಿಎ ಮೇಲೆ ಅವರ ಕೋಪ ಅರ್ಧ ಗಂಟೆಯಾದರೂ ತಣಿದಿರಲಿಲ್ಲ. ಈ ಮಧ್ಯೆ ಅಧಿಕಾರಿಗಳು ಓಡಿ ಹೋಗಿ, ಎಲ್ಲಿಂದಲೋ ಒಳ್ಳೆಯ ಶೇವಿಂಗ್ ಕಿಟ್ ತಂದರು. ಆದರೂ ಅವರಿಗೆ ಸಮಾಧಾನ ಆಗಿರಲಿಲ್ಲ.

''ಭಟ್ರೇ, If Rilke cut himself shaving, he would bleed poetry ಎಂಬ ಮಾತಿದೆ. ನಾನು ಶೇವ್ ಮಾಡದಿದ್ದರೂ ನನ್ನನ್ನು ಕತ್ತರಿಸಿಕೊಂಡಂತೆ, ಗೊತ್ತಾ?'' ಎಂದು ಅಣುವಿಜ್ಞಾನಿ ಉದ್ಗರಿಸಿದ್ದರು. ನಾನು ನುಣುಪಾದ ಅವರ ಗಡ್ಡವನ್ನು ದಿಟ್ಟಿಸುತ್ತಾ ಸುಮ್ಮನೆ ನಿಂತಿದ್ದೆ.

ಈ ವಿಷಯದಲ್ಲಿ ವೈಯೆನ್ಕೆ ಕೂಡ ಹಾಗೇ. ಅವರ ಬಳಿ ಫಿಲಿಪ್ಸ್ ಕಂಪನಿಯ ಇಲೆಕ್ಟ್ರಿಕ್ ಶೇವರ್ ಇತ್ತು. ಬೆಳಗ್ಗೆ ಪತ್ರಿಕೆಯನ್ನು ಓದುತ್ತಾ ಅವರು ಶೇವರ್ ಮೂಲಕ ಗಡ್ಡವನ್ನು ಉಜ್ಜಿಕೊಳ್ಳುತ್ತಿದ್ದರು. ಮಾಲ್, ವಿಮಾನ ನಿಲ್ದಾಣದಲ್ಲಿ ನೆಲ ಒರೆಸುವ ಯಂತ್ರದಂತೆ ಅವರು ಉಜ್ಜಿದ ಕಡೆಯೇ ಹತ್ತಾರು ಸಲ ಶೇವರ್ ಅನ್ನು ಆಡಿಸುತ್ತಿದ್ದರು. ಮೈಕೆಲ್ ಏಂಜೆಲೋ ಕೆತ್ತಿದ ಶಿಲ್ಪಕಲಾಕೃತಿಯಷ್ಟೇ ನುಣುಪಾಗುವ ತನಕ ಬಿಡುತ್ತಿರಲಿಲ್ಲ. ಅವರು ಶೇವ್ ಮಾಡದ ದಿನವೇ ಇರಲಿಲ್ಲ. ಅವರ ನುಣುಪು ಕೆನ್ನೆ ನೋಡಿ, ''ಸರ್, ನೀವು ನಾಳೆಗೂ ಶೇವ್ ಮಾಡಿದಂತಿದೆ'' ಎಂದು ತಮಾಷೆ ಮಾಡುತ್ತಿದ್ದೆ.

''ನನಗೆ ಇಷ್ಟ ಅಂತ ಎಲ್ಲರೂ ಗುಂಡು ಬಾಟಲಿಯನ್ನು ಪ್ರಸೆಂಟ್ ಮಾಡ್ತಾರೆ. ನನಗೆ ಅದಕ್ಕಿಂತ ಇಷ್ಟ ಇಲೆಕ್ಟ್ರಿಕ್ ಶೇವರ್'' ಎಂದು ಅವರು ತಮ್ಮ 'wonder-ಕಣ್ಣು' ಅಂಕಣದಲ್ಲಿ ಬರೆದುಕೊಂಡಿದ್ದಾರೆ. 'ಪಂಡಿತ ಭೀಮಸೇನ ಜೋಶಿ ಎಂಬ ತಬಲಾವಾದಕ' ಎಂದು ಯಾರಾದರೂ ಹೇಳಿದರೆನ್ನಿ, ಹಾಗೆ ಹೇಳಿದವರ ಕೆನ್ನೆಗೆ ಹೊಡೆಯಬೇಕು ಎಂದು ಅನಿಸುವುದೋ, ಹಾಗೇ 'ವೈಯೆನ್ಕೆ ಎಂಬ ಗಡ್ಡಧಾರಿ' ಎಂದು ಯಾರಾದರೂ ಹೇಳಿದರೆ ಬಲವಾಗಿ 'ಕೆನ್ನೆ' ಸವರಬೇಕು ಎಂದು ಅನಿಸದಿರದು. ಶೇವಿಂಗ್ ವಿಷಯದಲ್ಲಿ ಅವರು ಅಷ್ಟು ರೇಜರ್ ಶಾರ್ಪ್! ವೈಯೆನ್ಕೆ ಅವರ ತೀಕ್ಷ್ಣಮತಿತ್ವ ಗೊತ್ತಿರುವವರು, ''ಅವರದು ರೇಜರ್ ಶಾರ್ಪ್ ಮೆಮರಿ'' ಎಂದು ಬಣ್ಣಿಸುತ್ತಿದ್ದುದು ಕಾಕತಾಳೀಯವಷ್ಟೇ.

ಗೋಪಾಲ ಪೂಜಾರಿ ಅವರು ಮೂವತ್ತೈದು ವರ್ಷಗಳ ಹಿಂದೆ ಹೇಳಿದ ಆ ಮಾತು ನನ್ನ ಮನಸ್ಸಿನಲ್ಲಿ ಈಗಲೂ ಗಡ್ಡ ಕಟ್ಟಿಬಿಟ್ಟಿದೆ!

ತಲೆಗೂದಲು ಮತ್ತು ಗಡ್ಡದ ಕುರಿತು

ಇದು ವೈಯೆನ್ಕೆ ಹೇಳುತ್ತಿದ್ದ ಜೋಕ್.

ಕೋಲ್ಯ ಆಫೀಸಿಗೆ ಆಗಾಗ ತಡವಾಗಿ ಬರುತ್ತಿದ್ದ. ಪ್ರತಿ ಸಲ ತಡವಾಗಿ ಬಂದಾಗಲೂ ಒಂದೊಂದು ಕಾರಣ ಕೊಡುತ್ತಿದ್ದ. ಒಂದು ದಿನ ಬಾಸ್ ಕೋಲ್ಯನನ್ನು ಕರೆದು ''ಇಂದೇಕೆ ತಡ?'' ಎಂದು ಕೇಳಿದ.

''ಸರ್, ಇಂದು ತಲೆಗೂದಲು ಕಟ್ ಮಾಡಿಸಿಕೊಳ್ಳಲು ಹೋಗಿದ್ದೆ. ಸೆಲೂನ್‌ನಲ್ಲಿ ಬಹಳ ಜನ ಇದ್ದರು. ಹೀಗಾಗಿ ಲೇಟಾಯ್ತು'' ಎಂದ. ಹೋಗಲಿ ಎಂದು ಬಾಸ್ ಸುಮ್ಮನಾದ.

ಅದಾಗಿ ಎರಡು ದಿನಗಳ ನಂತರ ಕೋಲ್ಯ ಮತ್ತೆ ಆಫೀಸಿಗೆ ತಡವಾಗಿ ಹೋದ. ಬಾಗಿಲಲ್ಲಿಯೇ ನಿಂತಿದ್ದ ಬಾಸ್, ''ಇಂದೇಕೆ ತಡ?'' ಎಂದು ಕೇಳಿದ.

ಅದಕ್ಕೆ ಕೋಲ್ಯ, ''ಇಂದು ಶೇವ್ ಮಾಡಿಸಿಕೊಳ್ಳಲು ಹೋಗಿದ್ದೆ'' ಎಂದ. ಆಗ ಬಾಸ್, ''ಆಫೀಸ್ ಟೈಮಲ್ಲಿ ತಲೆಗೂದಲು ಕತ್ತರಿಸಿಕೊಳ್ಳಲು ಹೋಗಬಾರದು ಮತ್ತು ಶೇವ್ ಮಾಡಿಸಿಕೊಳ್ಳಲು ಹೋಗಬಾರದು ಎಂಬ ಜ್ಞಾನ ಇಲ್ಲವಾ?'' ಎಂದು ಗದರಿದ.

ಅದಕ್ಕೆ ಕೋಲ್ಯ, ''ಸರ್, ಆಫೀಸ್ ಟೈಮಲ್ಲೂ ತಲೆಗೂದಲು ಮತ್ತು ಗಡ್ಡ ಬೆಳೆಯುತ್ತದಲ್ಲ?'' ಎಂದ.

ಬಾಸ್ ಮರುಮಾತಾಡಲಿಲ್ಲ.

ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣಿಃ...

ತಿಳಿರು ತೋರಣ
ಶ್ರೀವತ್ಸ ಜೋಶಿ
vveditoped@gmail.com
srivathsajoshi@yahoo.com

ಅಜಿತ್ ಕಡಕಡೆ ಅವರು ಹಾಡಿ ಜನಪ್ರಿಯವಾಗಿರುವ ಪ್ರಸಿದ್ಧ ಮರಾಠಿ ಅಭಂಗವೊಂದರಲ್ಲಿ ಸಂತ ಭಾನುದಾಸರು ಹೀಗೆ ಬಣ್ಣಿಸಿದ್ದಾರೆ: ''ವೃಂದಾವನದಲ್ಲಿ ಕೃಷ್ಣನ ವೇಣುಗಾನ ಕೇಳಿಬರುತ್ತಿದೆ. ಯಾರಿಗಾಗಿ ನುಡಿಸುತ್ತಿರುವುದೋ ತಿಳಿಯದು. ಗೋವರ್ಧನ ಗಿರಿಯ ತುಂಬೆಲ್ಲ ಅದು ಅನುರಣಿಸುತ್ತಿದೆ. ವೇಣುಗಾನದಿಂದ ಉಂಟಾದ ಸಂತಸಕ್ಕೆ ನವಿಲು ಗರಿಗೆದರಿ ನರ್ತಿಸುತ್ತಿದೆ. ಆಗ ಯಾದವರಾಜ ಕೃಷ್ಣನೇ ನನ್ನತ್ತ ಪ್ರೀತಿಯಿಂದ ನೋಡುತ್ತಿದ್ದಾನೇನೋ ಎಂದೆನಿಸುತ್ತದೆ. ಎಲ್ಲರೂ ಭಾವಪರವಶರಾಗಿದ್ದಾರೆ. ಮಗುವಿಗೆ ಹಾಲೂಡಿಸುವುದನ್ನು ಮರೆತ ತಾಯಿಯು ಗಾನಾಮೃತವನ್ನು ಸವಿಯುವುದರಲ್ಲಿ ಮಗ್ನಳಾಗಿದ್ದಾಳೆ. ಹುಲ್ಲು ಮೇಯುವುದನ್ನು ಮರೆತ ಹಸು ಸಂಗೀತಕ್ಕೆ ಕಿವಿಯಾನಿಸಿ ನಿಂತಿದೆ. ಅದರ ಪಕ್ಕದಲ್ಲೇ ಹುಲಿಯೂ ಇದೆ, ಹಸುವಿನ ಮೇಲೆ ಆಕ್ರಮಣ ಮಾಡಲಿಕ್ಕಲ್ಲ, ಸುಮ್ಮನೆ ಕುಳಿತುಕೊಂಡು ಕೊಳಲದನಿ ಆಲಿಸಲಿಕ್ಕೆ! ಪಕ್ಷಿಗಳೆಲ್ಲ ಸ್ತಬ್ಧವಾಗಿ ವಿರಮಿಸುತ್ತಿರುವಂತೆ ಕಾಣುತ್ತಿದೆ. ಜೀವಿಗಳಲ್ಲಿ ಸಹಜವಾಗಿರುವ ಪರಸ್ಪರ ವೈರತ್ವಭಾವವೇ ಮಾಯವಾಗಿದೆ. ಶೇಷ, ಕೂರ್ಮ, ವರಾಹರೆಲ್ಲ ಚಕಿತರಾಗಿ ನಿಂತಿದ್ದಾರೆ. ಯಮುನೆಯಲ್ಲಿ ನೀರಿನ ಪ್ರವಾಹ ನಿಶ್ಚಲವಾಗಿದೆಯೇನೋ ಎನ್ನುವಷ್ಟು ನಿಧಾನವಾಗಿದೆ. ಅಷ್ಟೇಕೆ, ಸಮಗ್ರ ಸೌರಮಂಡಲದ ಚಲನೆಯೇ ನಿಂತುಹೋಗಿರುವಂತೆ ಕಾಣುತ್ತಿದೆ. ಇದೆಲ್ಲದಕ್ಕೆ ಕಾರಣವಾದ ಮುರಲಿಯ ಮಧುರ ಮಂಜುಳ ನಿನಾದವು ಅಲೆಅಲೆಯಾಗಿ ತೇಲಿಬರುತ್ತಿದೆ. ಜತೆಯಲ್ಲಿ ಪ್ರಕೃತಿಯೇ ತಲೆದೂಗುತ್ತ ಹೆಜ್ಜೆಹಾಕುತ್ತಿರುವಂತೆ ರುಣುಝುಣು ಗೆಜ್ಜೆನಾದ. ವಿಮಾನದಲ್ಲಿ ಕುಳಿತ ದೇವತೆಗಳು ಇದನ್ನೆಲ್ಲ ಆಕಾಶದಿಂದಲೇ ನೋಡಿ ಸ್ತುತಿಸುತ್ತಿದ್ದಾರೆ. ಭಾನುದಾಸನಿಗೆ ಪ್ರೇಮಭಕ್ತಿಯ ಆಶೀರ್ವಾದವಾಗಿದೆ!''.

ಸಂತರು ಭಗವಂತನ ಲೀಲೆಗಳನ್ನು ಬಣ್ಣಿಸುವುದೇ ಹಾಗೆ. ನಮಗದು ಉತ್ಪ್ರೇಕ್ಷೆಯಾಗಿ ತೋರಬಹುದು, ಆದರೆ ಅವರು ಅನುಭವ ಮತ್ತು ಅನುಭಾವಗಳಿಗೆ ದಕ್ಕಿದ್ದನ್ನೇ ಹೇಳಿರುತ್ತಾರೆ. ಕೃಷ್ಣನ ವೇಣುಗಾನವು ಸಕಲ ಚರಾಚರ ಜೀವಜಗತ್ತಿನ ಮೇಲೆ ಅಂಥದೊಂದು ಪರಿಣಾಮ ಬೀರಿದ್ದಿರಬಹುದು. ಅದು ನಮ್ಮ ಅನುಭವಕ್ಕೆ ದಕ್ಕಲಿಲ್ಲ ಅಂದಮಾತ್ರಕ್ಕೇ ಅಲ್ಲಿ ಹಾಗೆ ಆಗಿರಲಿಕ್ಕೇ ಸಾಧ್ಯವಿಲ್ಲವೆಂದುಕೊಳ್ಳುವುದು ತಪ್ಪಾಗುತ್ತದೆ. ಆಶ್ಚರ್ಯವೆಂದರೆ ಕೃಷ್ಣನ ವೇಣುಗಾನದ ಮೋಡಿಯನ್ನು ಬಣ್ಣಿಸುವ 'ವೃಂದಾವನೀ ವೇಣು ವಾಜೆ...' ಅಭಂಗವನ್ನು ಅಜಿತ್ ಕಡಕಡೆಯವರ ಧ್ವನಿಯಲ್ಲಿ ಕೇಳುವಾಗ ನಮಗೂ ಒಂದು ರೀತಿಯ ಭಾವಪರವಶತೆ ಉಂಟಾಗಿರುತ್ತದೆ. ವೃಂದಾವನದಲ್ಲಾದಷ್ಟು ಅಲ್ಲದಿದ್ದರೂ ಸೊನ್ನೆಯಂತೂ ಖಂಡಿತ ಅಲ್ಲ. ನಾವು ಏಕಾಗ್ರತೆ ಕೊಟ್ಟಷ್ಟೂ ನಮಗೆ ಹೆಚ್ಚು ಸಿದ್ಧಿಸಿರುತ್ತದೆ. ಮತ್ತು ಇದು ಅಜಿತ್ ಕಡಕಡೆ ಎಂಬ ಒಬ್ಬ ಗಾಯಕನಿಗಾಗಲೀ ಭಾನುದಾಸ ವಿರಚಿತ ಆ ಒಂದು ಅಭಂಗಕ್ಕಾಗಲೀ ಸೀಮಿತವಾದ ಮಾತಲ್ಲ. ಸಂಗೀತಕ್ಕಿರುವ ದಿವ್ಯಶಕ್ತಿಯೇ ಅದು.

ನಾವು ಅಷ್ಟಿಷ್ಟು ವಿದ್ಯೆಬುದ್ಧಿ ಕಲಿತು ಪ್ರೌಢರೆನಿಸಿಕೊಂಡವರಾದರೋ ನಾವು ಕೇಳುವ ಸಂಗೀತದ ರಾಗವನ್ನು ಗುರುತಿಸಿ ಆಸ್ವಾದಿಸುವುದನ್ನೋ, ಹಾಡುಗಾರಿಕೆ ಅಂತಾದರೆ ಸಾಹಿತ್ಯದ ಅರ್ಥ ಮತ್ತು ಭಾವಗಳನ್ನು ಗ್ರಹಿಸುವುದನ್ನೋ ಮಾಡಿ ಇನ್ನೂ ಹೆಚ್ಚಿನ ಆನಂದ ತಂದುಕೊಳ್ಳುತ್ತೇವೆ ಅಂದುಕೊಳ್ಳೋಣ. ಆದರೆ ಏನೂ ಅರಿಯದ ಮುಗ್ಧ ಕಂದಮ್ಮಗಳು, ಪಶು-ಪಕ್ಷಿಗಳು, ಸರೀಸೃಪಗಳು, ಕೊನೆಗೆ ಸಸ್ಯಗಳು ಕೂಡ ಸಂಗೀತದ ಮೋಡಿಗೆ ಒಳಗಾಗುತ್ತವೆಂದರೆ ಅದು ಸಂಗೀತದ ದಿವ್ಯಶಕ್ತಿಯಲ್ಲದೆ ಮತ್ತಿನ್ನೇನು! ಸಂಗೀತದ ಮಾಧುರ್ಯವನ್ನು ಶಿಶುಗಳು ಪಶುಗಳು ಸರ್ಪಗಳು ಕೂಡ ಸವಿಯಬಲ್ಲವು ಎಂಬರ್ಥದ 'ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣಿಃ' ಸಂಸ್ಕೃತ ಸೂಕ್ತಿಯೇ ಇದೆ. ಸಂಗೀತಪ್ರಧಾನ 'ಶಂಕರಾಭರಣಂ' ಚಿತ್ರದ ಆರಂಭದಲ್ಲಿ ನಿರ್ದೇಶಕ ಕೆ.ವಿಶ್ವನಾಥ್ ಅದನ್ನು ಪ್ರಾಸಂಗಿಕವಾಗಿ ತೆಲುಗು ಅನುವಾದದ ಸಹಿತ ಪ್ರಸ್ತಾವಿಸಿದ್ದೂ ಇದೆ.

ಶಿಶುರ್ವೇತ್ತಿ ಎಂದೊಡನೆ ನನಗೆ ಎರಡು ಸ್ವಾರಸ್ಯಕರ ಘಟನೆಗಳು ನೆನಪಾಗುತ್ತವೆ. ಶಿಶುಗಳಿಗೆ ಸಂಬಂಧಿಸಿದವೇ. ಮೊದಲನೆಯದು, ನನ್ನ ಅಣ್ಣನ ಮಗಳು ದೀಪಿಕಾ ಎರಡು ಅಥವಾ ಮೂರು ವರ್ಷದವಳಿದ್ದಾಗ ದೂರದರ್ಶನದಲ್ಲಿ ಆಗಿನ ಕಾಲದಲ್ಲಿ ಹಿಂದಿ ಮತ್ತು ಇಂಗ್ಲಿಷ್ ರಾಷ್ಟ್ರೀಯ ವಾರ್ತೆಗಳ ಆರಂಭದ ಸಿಗ್ನೇಚರ್ ಟ್ಯೂನ್ ಕೇಳಿ ಮಂತ್ರಮುಗ್ಧಳಾಗುತ್ತಿದ್ದ ಪರಿ. ನನ್ನಣ್ಣನ ಕುಟುಂಬದವರು ಆಗ ದೆಹಲಿವಾಸಿಗಳಾಗಿದ್ದರು ಮತ್ತು ನನ್ನ ಮೊದಲ ಉದ್ಯೋಗದ ನಿಮಿತ್ತ ಕೆಲ ಕಾಲ ನಾನೂ ಅವರ ಮನೆಯಲ್ಲಿದ್ದುಕೊಂಡೇ ಕೆಲಸಕ್ಕೆ ಹೋಗುತ್ತಿದ್ದೆ. ಅಂದಹಾಗೆ ಅದು ಟಿವಿಯಲ್ಲಿ ದೂರದರ್ಶನದ ಎರಡು ಚಾನೆಲ್‌ಗಳು ಮಾತ್ರ ಬರುತ್ತಿದ್ದ ಜಮಾನಾ. ದೀಪಿಕಾ ಸಂಜೆ ಹೊತ್ತು ಏನೇ ಹಠ ಮಾಡುತ್ತಿದ್ದರೂ, ಅಥವಾ ರಾತ್ರಿ ಊಟ ಮಾಡಿಸಬೇಕಿದ್ದರೆ ರಂಪ ಮಾಡುತ್ತಿದ್ದರೂ ದೂರದರ್ಶನದಲ್ಲಿ ವಾರ್ತೆಗಳ ಸಿಗ್ನೇಚರ್ ಟ್ಯೂನ್ ಆರಂಭವಾದೊಡನೆ ಒಮ್ಮೆಲೇ ಗಪ್‌ಚುಪ್ ಆಗುವಳು. ಎಲ್ಲೇ ಇದ್ದರೂ ಟಿವಿಯ ಮುಂದೆ ಬಂದು ನಿಲ್ಲುವಳು. 15-20 ಸೆಕೆಂಡುಗಳ ಆ ಸಂಗೀತವನ್ನು ಮುಖದಲ್ಲಿ ಮಂದಹಾಸದೊಡನೆ, ಕಣ್ಣುಗಳನ್ನು ಅರಳಿಸಿಕೊಂಡು ತಲ್ಲೀನಳಾಗಿ ಕೇಳುವಳು. ಇಷ್ಟರವರೆಗೆ ಹಠ ರಂಪ ಮಾಡುತ್ತಿದ್ದ ಹುಡುಗಿ ಇವಳೇನಾ ಎಂದು ನಮಗೇ ಬೆರಗಾಗುತ್ತಿತ್ತು. ಸಿಗ್ನೇಚರ್ ಟ್ಯೂನ್ ಮುಗಿದೊಡನೆ ಮತ್ತೆ ಅಳು ರಂಪ ನಖ್ರಾಗಳು ಮುಂದುವರಿಯುತ್ತಿದ್ದವು. ಒಂದೆರಡು ದಿನವಲ್ಲ, ಇದು ಅವಳ ನಿತ್ಯದ ಪರಿಪಾಠವೇ ಆಗಿತ್ತು. ಬಹುಶಃ ಇಂಥದನ್ನು ನೀವೂ ನಿಮ್ಮ ಅಥವಾ ಬಂಧುಮಿತ್ರರ ಮನೆಗಳಲ್ಲಿ ಪುಟ್ಟ ಮಕ್ಕಳ ವಿಷಯದಲ್ಲಿ, ರೇಡಿಯೊ/ಟಿವಿ ಕಾರ್ಯಕ್ರಮಗಳ ಶೀರ್ಷಿಕೆ ಸಂಗೀತದ ವಿಷಯದಲ್ಲಿ, ಗಮನಿಸಿರಬಹುದು.

ಎರಡನೆಯದು ಇನ್ನೂ ಸ್ವಾರಸ್ಯಕರ. ಇದು ನಾನು ಪ್ರತ್ಯಕ್ಷ ಕಂಡಿದ್ದಲ್ಲವಾದರೂ ಸ್ವಲ್ಪ ಮಟ್ಟಿಗೆ ನನ್ನ ಪಾತ್ರವೂ ಇದರಲ್ಲಿದೆ. ಸುಮಾರು 15 ವರ್ಷಗಳ ಹಿಂದಿನ ಸಂಗತಿ. ಡಾ.ಕದ್ರಿ ಗೋಪಾಲನಾಥ್ ಅವರ ಸ್ಯಾಕ್ಸೊಫೋನ್ ಮತ್ತು ಪ್ರವೀಣ ಗೋಡ್ಖಿಂಡಿಯವರ ಕೊಳಲು ಜುಗಲ್ಬಂದಿಯಲ್ಲಿ 'ಭಾಗ್ಯದ ಲಕ್ಷ್ಮಿ ಬಾರಮ್ಮ...' ಕೀರ್ತನೆಯ ವಿಡಿಯೊವನ್ನು ನಾನೊಮ್ಮೆ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದೆ. ಬೆಂಗಳೂರಲ್ಲಿ ಈಹಿಂದೆ ನಡೆದಿದ್ದ 'ರಾಗ-ರಂಗ್' ಸಂಗೀತಕಾರ್ಯಕ್ರಮದ ಸಮಾರೋಪ ಪ್ರಸ್ತುತಿ ಅದು. ಆಬಾಲವೃದ್ಧರನ್ನೂ ಆಕರ್ಷಿಸುವ, ಎಂಥವರಿಗೂ ಮೈನವಿರೇಳುವಂತೆ ಮಾಡುವ ಅಮೋಘ ಸಂಗೀತ. ಆ ಫೇಸ್‌ಬುಕ್ ಪೋಸ್ಟನ್ನು ಗಮನಿಸಿದ ಬೆಂಗಳೂರಿನ ಕನ್ನಡತಿ ಸುಮಾ ಅಮೃತೇಶ್ ತಮ್ಮ ಲ್ಯಾಪ್‌ಟಾಪನ್ನು ಟಿವಿಗೆ ಕನೆಕ್ಟ್ ಮಾಡಿ ಆ ವಿಡಿಯೊ ಪ್ಲೇ ಮಾಡಿದರಂತೆ. ಅವರ ಮಗ ಪ್ರಣವ, ಆಗಿನ್ನೂ ಎರಡು ವರ್ಷಗಳ ತುಂಟ, ಅದೆಲ್ಲಿದ್ದನೋ ಟಿವಿ ಮುಂದೆ ಬಂದು ಪದ್ಮಾಸನ ಹಾಕಿ ಕುಳಿತನಂತೆ. ತದೇಕಚಿತ್ತದಿಂದ ಆ ವಿಡಿಯೊವನ್ನು ನೋಡಿದನಂತೆ. ಆ ಕ್ಷಣದಲ್ಲೇ ಅವನು ಕದ್ರಿ ಮ್ಯಾಜಿಕ್‌ಗೆ (ಮ್ಯೂಸಿಕ್‌ಗೆ) ಫಿದಾ ಆಗಿಬಿಟ್ಟ! ಆಮೇಲೆ ದಿನಾ ಆ ವಿಡಿಯೊವನ್ನು ಮತ್ತೆಮತ್ತೆ ಪ್ಲೇ ಮಾಡುವಂತೆ ಅಮ್ಮನಿಗೆ ಒತ್ತಾಯ. ಊಟದ ಹೊತ್ತಿಗಂತೂ ಬೇಕೇಬೇಕು. ಆಮೇಲೆ ಅವನಿಗೆ ಒಂದು ಸ್ಯಾಕ್ಸೊಫೋನ್ ಆಟಿಕೆಯನ್ನೂ ತಂದುಕೊಟ್ಟರಂತೆ. ಹಾಲಿನವನ ಲೆಕ್ಕಾಚಾರದ ಪ್ಲಾಸ್ಟಿಕ್ ಬಿಲ್ಲೆಗಳು ಮನೆಯಲ್ಲಿದ್ದುದರಲ್ಲಿ ಕೆಂಪಗಿನದೊಂದನ್ನು ಹಣೆಗೆ ಹಚ್ಚಿಕೊಂಡು ಪ್ರಣವ ತಾನೇ ಕದ್ರಿ ಗೋಪಾಲನಾಥ್ ಎಂದು ನಟಿಸುತ್ತ ಸ್ಯಾಕ್ಸೊಫೋನ್ ಆಟಿಕೆಯನ್ನು ಊದುತ್ತಿದ್ದನಂತೆ. ಅಮ್ಮನಿಂದ ಟಿವಿಯಲ್ಲಿ ಕದ್ರಿ ಗೋಪಾಲನಾಥ್ ಸ್ಯಾಕ್ಸೊಫೋನ್ ವಾದನದ ಬೇರೆಬೇರೆ ವಿಡಿಯೊಗಳನ್ನು ಪ್ಲೇ ಮಾಡಿಸಿ ತಾನು ಟಿವಿಯ ಎದುರಿಗೆ ಪದ್ಮಾಸನ ಹಾಕಿ ಕುಳಿತು ಅಭ್ಯಾಸ ಮಾಡುತ್ತಿದ್ದನಂತೆ. ಟಿವಿಯಲ್ಲಿ ಆಗದಿದ್ದರೆ ಐಪ್ಯಾಡ್‌ನಲ್ಲಾದರೂ ಹಾಕಿಕೊಡು ಎಂದು ದುಂಬಾಲುಬೀಳುತ್ತಿದ್ದನಂತೆ. ದ್ರೋಣಾಚಾರ್ಯರಿಗೊಬ್ಬ ಏಕಲವ್ಯನಿದ್ದಂತೆ ಕದ್ರಿಯವರಿಗೆ ಒಬ್ಬ ಪ್ರಣವ. ಅಂಥದೊಂದು ಹೆಸರಿರುವುದಕ್ಕೂ ಈ ಪರಿಯಲ್ಲಿ ನಾದೋಪಾಸಕ ಆಗಿರುವುದಕ್ಕೂ ಸರಿಯಾಯ್ತು.

ಪ್ರಣವನ 'ಕದ್ರಿ-ಕ್ರೇಜ್' ಬಗ್ಗೆ ಸುಮಾ ಆಗಾಗ ನನಗೆ ತಿಳಿಸುತ್ತಿದ್ದರು. ''ಆ ಒಂದು ವಿಡಿಯೋದಿಂದಾಗಿ ಎಷ್ಟು ಊಟಗಳು ಯಾವೊಂದು ರಂಪ ಇಲ್ಲದೆ ಅವನ ಹೊಟ್ಟೆ ಸೇರಿವೆ!'' ಎಂದು ನೆನಪಿಸಿಕೊಳ್ಳುತ್ತಿದ್ದರು. ಸಾಧ್ಯವಾದರೆ ಒಮ್ಮೆ ಪ್ರಣವನನ್ನು ಕದ್ರಿ ಗೋಪಾಲನಾಥರ ಲೈವ್ ಸಂಗೀತಕಛೇರಿಗೆ ಕರೆದುಕೊಂಡು ಹೋಗಬೇಕು, ಭೇಟಿ ಮಾಡಿಸಬೇಕು ಎಂದು ಅವರ ಆಕಾಂಕ್ಷೆಯಿತ್ತು. ಕದ್ರಿಯವರ ಸಂಪರ್ಕ ವಿವರವನ್ನು ನನ್ನಿಂದ ಪಡೆದುಕೊಂಡಿದ್ದರು. ಮುಂದೊಂದು ದಿನ ಆ ಸಂದರ್ಭವೂ ಬಂತು. ಆ ವರ್ಷ ಗಣೇಶೋತ್ಸವ ಸಮಯದಲ್ಲಿ ಅವರ ಮನೆಯ ಹತ್ತಿರವೇ ಕದ್ರಿ ಗೋಪಾಲನಾಥ್ ಮತ್ತು ಪ್ರವೀಣ ಗೋಡ್ಖಿಂಡಿ ಜುಗಲ್‌ಬಂದಿ ಕಾರ್ಯಕ್ರಮ ಇತ್ತು. ಆವತ್ತು ಸಂಗೀತಕಛೇರಿಗೆ ಮುನ್ನವೇ ಡಾ.ಕದ್ರಿಯವರು ಪ್ರಣವನ ಮನೆಗೆ ಭೇಟಿಕೊಡುವ ಏರ್ಪಾಡೂ ಆಯ್ತು. ಯಾರ ಸಂಗೀತಕ್ಕೆ ಭಾವಪರವಶನಾಗಿ ಆ ಕಲಾವಿದನನ್ನು ಆರಾಧ್ಯದೈವವೆಂದು ಪೂಜಿಸುತ್ತಿದ್ದನೋ ಆ ದೇವರು ಕಣ್ಮುಂದೆ ಪ್ರತ್ಯಕ್ಷ! 'ಕದ್ರಿಯವರ ಜತೆಗೆ ಮೂಕವಿಸ್ಮಿತ ಪ್ರಣವ್' ಎಂದು ಬರೆದು ಸುಮಾ ಒಂದು ಫೋಟೊ ಕಳುಹಿಸಿದರು. ಆ ದೃಶ್ಯವನ್ನು ನೋಡಿ ನನಗೆ ತುಂಬ ಖುಷಿಯಾಯ್ತು. ಆ ಪುಟ್ಟ ಪೋರನ ಮನಸ್ಸಿಗೆ ಅದೆಂಥ ರೋಮಾಂಚನ ಆಗಿರಲಿಕ್ಕಿಲ್ಲ! ಮಗುವಿನಂಥದೇ ಮನಸ್ಸಿನ ಡಾ.ಕದ್ರಿಯವರಿಗೂ ಬಹುಶಃ ಅಷ್ಟೇ ರೋಮಾಂಚನ ಆಗಿರಬಹುದು. ನಾಲ್ಕು ವರ್ಷಗಳ ಚಿಕ್ಕ ಹುಡುಗ, ಮುಗ್ಧತೆಯ ಮುದ್ದು ಮೂರ್ತಿ, ಅಭಿಮಾನಿಯಾಗಿ ಕೈಕುಲುಕುತ್ತಿದ್ದಾನೆ ಎಂದರೆ ಬಹುಶಃ ಅದಕ್ಕಿಂತ ದೊಡ್ಡ ಸಮ್ಮಾನ ಸಂತೃಪ್ತಿ ಒಬ್ಬ ಕಲಾವಿದನಿಗೆ ಬೇರೆ ಸಿಗಲಿಕ್ಕಿಲ್ಲ.

ಇನ್ನು, 'ಪಶುರ್ವೇತ್ತಿ'ಗೆ ತಾಜಾ ಉದಾಹರಣೆಯೊಂದನ್ನು ಕೊಡುತ್ತೇನೆ, ಅದೂ ಅಮೆರಿಕದಿಂದ! ಯುವಿ ಅಗರವಾಲ್ ಎಂಬೊಬ್ಬ ಅಮೆರಿಕವಾಸಿ (ಭಾರತೀಯ ಮೂಲದ) ಬಾಲಕನ ವಿಶಿಷ್ಟವಾದೊಂದು ಪ್ರಯೋಗ ಮತ್ತದರ ಫಲಿತಾಂಶದ ಸುದ್ದಿಯಿದು. ಹೃದಯಸ್ಪರ್ಶಿಯಾಗಿದೆ, ನಾವೆಲ್ಲ ಹೆಮ್ಮೆಪಡುವಂಥದೂ ಆಗಿದೆ.

ಅಮೆರಿಕದಲ್ಲಿ ಟೆಕ್ಸಸ್ ಸಂಸ್ಥಾನದ ಹ್ಯೂಸ್ಟನ್ ನಗರದಲ್ಲಿ ವಾಸಿಸುತ್ತಿರುವ ಪ್ರಿಯಾಂಕಾ-ನಿತಿನ್ ಅಗರವಾಲ್ ದಂಪತಿಯ ಮಗ ಯುವಿ. ಈಗ ಅವನಿಗೆ 12 ವರ್ಷ ವಯಸ್ಸು. ಯುವಿ ಪುಟ್ಟ ಮಗು ಆಗಿದ್ದಾಗಲೇ ಸಂಗೀತಕ್ಕೆ ಕಿವಿಗೊಡುತ್ತಿದ್ದನಂತೆ, ಮತ್ತು ಪ್ರಾಣಿಗಳೆಂದರೆ ವಿಶೇಷ ಪ್ರೀತಿಯುಳ್ಳವನಾಗಿದ್ದನಂತೆ. ಅವರ ಮನೆಯಲ್ಲೇ ಒಂದು ನಾಯಿ- ಗೋಲ್ಡನ್ ಡೂಡಲ್ ತಳಿಯದು- ಸಾಕಿದ್ದರು. 'ಬೊರ್ಝೊ' ಎಂದು ಅದರ ಹೆಸರು. ಯುವಿ ನಾಲ್ಕು ವರ್ಷದವನಿದ್ದಾಗ ಪಿಯಾನೊ ನುಡಿಸಲಿಕ್ಕೆ ಆರಂಭಿಸಿದನು. ಅವನು ಪಿಯಾನೊ ನುಡಿಸುವಾಗೆಲ್ಲ ಬೊರ್ಝೊ ಅವನ ಹತ್ತಿರ ಬಂದು ಕುಳಿತು ಕುತೂಹಲದಿಂದ ನೋಡುತ್ತಿತ್ತಂತೆ. ಬೇರೆ ಸಮಯದಲ್ಲಿ ಕುಂಯ್ ಕುಂಯ್ ರಾಗವೆಳೆಯುತ್ತ ತನ್ನ ಅತೃಪ್ತಿ ಅಸಮಾಧಾನಗಳ ಚಡಪಡಿಕೆ ವ್ಯಕ್ತಪಡಿಸುತ್ತ ಮನೆಮಂದಿಯ ಗಮನ ಸೆಳೆಯುತ್ತಿದ್ದದ್ದು, ಯುವಿ ಪಿಯಾನೊ ನುಡಿಸತೊಡಗಿದನೆಂದರೆ ಹತ್ತಿರ ಬಂದು ಕುಳಿತು ಶಾಂತಚಿತ್ತದಿಂದ ಕೇಳುತ್ತಿತ್ತಂತೆ. ಯುವಿಗೂ ಅವನ ಹೆತ್ತವರಿಗೂ ಇದೊಂದು ಕೌತುಕದ ಸಂಗತಿಯೇ ಆಯ್ತು. ಬೊರ್ಝೊಗೆ ನಿಜವಾಗಿಯೂ ಸಂಗೀತದಲ್ಲಿ ಆಸಕ್ತಿ ಹುಟ್ಟಿಕೊಂಡಿದೆಯೇ, ಸಂಗೀತ ಅದಕ್ಕೆ ಅರ್ಥವಾಗುತ್ತದೆಯೇ, ಸಂಗೀತವು ಅದರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರುತ್ತದೆಯೇ ಎಂದು ವೈಜ್ಞಾನಿಕ ಅಧ್ಯಯನದಂತೆ ಸಾಧಿಸಿ ತೋರಿಸಲಾಗದಿದ್ದರೂ ಅವರೆಲ್ಲರೂ ಬೊರ್ಝೊನ ಈ ವಿಶಿಷ್ಟ ವರ್ತನೆಯನ್ನು ಗಮನಿಸಿದ್ದಂತೂ ಹೌದು.

ಯುವಿ ಮತ್ತು ಅವನ ಹೆತ್ತವರಿಗೆ ಇದರಿಂದ ಒಂದು ಆಲೋಚನೆ ಹೊಳೆಯಿತು. ಯುವಿ ಪಿಯಾನೊ ನುಡಿಸುವುದು ಬೊರ್ಝೊನನ್ನು ಶಾಂತಗೊಳಿಸುತ್ತದಾದರೆ ಹ್ಯೂಸ್ಟನ್‌ನ ಅನಿಮಲ್ ಶೆಲ್ಟರ್‌ಗಳಲ್ಲಿರುವ ಬೇರೆ ನಾಯಿ-ಬೆಕ್ಕು ಮತ್ತಿತರ ಪ್ರಾಣಿಗಳ ಮೇಲೂ ಸಂಗೀತವು ಪ್ರಭಾವ ಬೀರುವುದೇ ಎಂದು ಪ್ರಯೋಗ ಮಾಡಿ ನೋಡಬಹುದೇ? ಯುವಿಯ ಪ್ರಾಣಿಪ್ರೇಮದಿಂದಾಗಿ ಅವರು ಅನಿಮಲ್ ಶೆಲ್ಟರ್‌ಗಳಿಗೆ ಆಗಾಗ ಭೇಟಿ ಕೊಡುವುದು ಇದ್ದೇ ಇತ್ತು. ಒಮ್ಮೆ ಪ್ರಸ್ತಾವಿಸಿ ನೋಡೋಣ ಎಂದುಕೊಂಡರು. ಯುವಿಯೇ ಒಂದು ಯೋಜನೆ ಸಿದ್ಧಪಡಿಸಿ ಅದಕ್ಕೆ ಬೇಕಾದ ವಿವರಣೆ ಎರಡು ಪುಟಗಳಷ್ಟು ಬರೆದಿಟ್ಟುಕೊಂಡನು. Wild Tunesಎಂದು ಆ ಕ್ಷಣಕ್ಕೆ ತನಗೆ ಹೊಳೆದ ಹೆಸರನ್ನೂ ಯೋಜನೆಗೆ ಇಟ್ಟನು. ಹೆತ್ತವರೊಂದಿಗೆ ಒಂದೆರಡು ಶೆಲ್ಟರ್‌ಗಳಿಗೆ ಹೋಗಿ ಕೇಳಿದನು. ಶೆಲ್ಟರ್‌ನ ಅಧಿಕಾರಿಗಳಿಂದ ಅಂಥದೇನೂ ಉತ್ತೇಜನಕಾರಿ ಪ್ರತಿಕ್ರಿಯೆ ಸಿಗಲಿಲ್ಲ. ಹೆತ್ತವರ ಸ್ನೇಹಿತರಾರೋ ಹ್ಯೂಸ್ಟನ್ ಪೆಟ್ಸ್ ಎಲೈವ್ ಎಂಬ ಇನ್ನೊಂದು ಶೆಲ್ಟರ್‌ನಲ್ಲಿ ವಿಚಾರಿಸಿನೋಡಿ ಎಂದು ಸಲಹೆಯಿತ್ತರು. ಅದರಂತೆ ಅಲ್ಲಿಗೆ ಹೋಗಿ ಕೇಳಿದಾಗ ಸಕಾರಾತ್ಮಕ ಸ್ಪಂದನ ಸಿಕ್ಕಿತು! ಅಧಿಕಾರಿಗಳಷ್ಟೇ ಅಲ್ಲ, ಶೆಲ್ಟರ್‌ನಲ್ಲಿದ್ದ ನಾಯಿ-ಬೆಕ್ಕುಗಳೂ ಸಕಾರಾತ್ಮಕವಾಗಿ ಸ್ಪಂದಿಸಿ ಯುವಿಯ ಪಿಯಾನೊ ಸಂಗೀತವನ್ನು ಸ್ವಾಗತಿಸಿದವು. ಪ್ರತಿ ವಾರಾಂತ್ಯದಲ್ಲಿ ಯುವಿ ಆ ಶೆಲ್ಟರ್‌ಗೆ ಹೋಗಿ ಸ್ವಲ್ಪ ಹೊತ್ತು ಪಿಯಾನೊ ನುಡಿಸಿ ಅಲ್ಲಿರುವ ನಾಯಿ-ಬೆಕ್ಕುಗಳ ಮನತಣಿಸುವುದು ಎಂದಾಯಿತು. ಕೆಲವು ಪ್ರಾಣಿಗಳು ತದೇಕಚಿತ್ತದಿಂದ ಕೇಳುವವು; ಕೆಲವು ನಾಯಿಗಳು ತಾವೂ ರಾಗಬದ್ಧವಾಗಿ ಬೊಗಳುತ್ತ ದನಿಗೂಡಿಸುವವು. ಅಂತೂ ಅವು ಯುವಿಯ ಸಂಗೀತವನ್ನು ಆನಂದಿಸುವುದು ಮತ್ತು ತನ್ಮೂಲಕ ತಮ್ಮ ಚಡಪಡಿಕೆಯನ್ನು ತಾತ್ಕಾಲಿಕವಾಗಿಯಾದರೂ ಕಡಿಮೆ ಮಾಡಿಕೊಳ್ಳುವುದು ಹೌದೆಂದು ಶೆಲ್ಟರ್‌ನ ಅಧಿಕಾರಿಗಳಿಗೆ, ಪಶುವೈದ್ಯರಿಗೆ ಮನವರಿಕೆಯಾಯ್ತು.

ಯುವಿಯ ಹೆತ್ತವರ ಮಿತ್ರವರ್ಗ ಒಳ್ಳೆಯದಿರುವುದರಿಂದ, ಇಬ್ಬರಿಗೂ ವೃತ್ತಿಯಲ್ಲಿ ಮಾರ್ಕೆಟಿಂಗ್ ಹಿನ್ನೆಲೆ ಇರುವುದರಿಂದ ಈ ಯೋಜನೆಯನ್ನು ವಿಸ್ತರಿಸುವುದು ಸಾಧ್ಯವಾಯಿತು. ಹ್ಯೂಸ್ಟನ್‌ನ ಬೇರೆ ಕೆಲವು ಅನಿಮಲ್ ಶೆಲ್ಟರ್‌ಗಳೂ ಆಸಕ್ತಿ ತೋರಿದುವು. ಆದರೆ ಎಲ್ಲ ಕಡೆಯೂ ಯುವಿಯೇ ಹೋಗಿ ಸಂಗೀತ ನುಡಿಸುವುದು ಸಾಧ್ಯವಾಗದಷ್ಟೆ? ಆಗ ಹೊಳೆದ ಯೋಜನೆಯೇ Wild Tunesಅನ್ನು ಒಂದು ಲಾಭರಹಿತ ಪ್ರಾಣಿದಯಾ ಸಂಸ್ಥೆಯಾಗಿ ನೋಂದಾಯಿಸುವುದು ಮತ್ತು ಸಮಾನಮನಸ್ಕರನ್ನು ಅದರಲ್ಲಿ ಸೇರಿಸಿಕೊಳ್ಳುವುದು. ವೃತ್ತಿಯಲ್ಲಿ ಅನುಭವವಿದ್ದ ಪ್ರಿಯಾಂಕಾ ಅಗರವಾಲ್ ಆ ಸಂಸ್ಥೆಯ ನಿರ್ದೇಶಕಿಯಾದರು. ಹವ್ಯಾಸಿ ಸಂಗೀತಗಾರರು ಒಂದಷ್ಟು ಮಂದಿ ಸೇರಿಕೊಂಡರು. ಪಿಯಾನೊ ಮಾತ್ರವಲ್ಲದೆ ವಯಲಿನ್, ಗಿಟಾರ್, ಕೊಳಲು, ಸ್ಯಾಕ್ಸೊಫೋನ್ ಮುಂತಾದ ವಾದ್ಯಗಳನ್ನು ನುಡಿಸಬಲ್ಲ ಸ್ವಯಂಸೇವಕರು ತಮ್ಮತಮ್ಮ ವ್ಯಾಪ್ತಿಯ ಅನಿಮಲ್ ಶೆಲ್ಟರ್‌ಗಳಲ್ಲಿ ನಿಯತವಾಗಿ ಒಂದಷ್ಟು ಹೊತ್ತು ಸಂಗೀತಸೇವೆ ಒದಗಿಸಲಿಕ್ಕೆ ಮುಂದಾದರು. ಶೆಲ್ಟರ್‌ನ ಪ್ರಾಣಿಗಳ ಮನತಣಿಸುವಿಕೆಯ ಜತೆಜತೆಗೇ ಈ ಹವ್ಯಾಸಿ/ಅಭ್ಯಾಸಿ ಸಂಗೀತಗಾರರಿಗೆ ಪ್ರಾಕ್ಟೀಸ್ ಮಾಡಿದ ಹಾಗೂ ಆಯ್ತು, ಪ್ರದರ್ಶನದ ಅನುಭವವೂ ಸಿಕ್ಕಿತು, ವಿದ್ಯಾರ್ಥಿಗಳಾಗಿದ್ದರಂತೂ ಹೈಸ್ಕೂಲ್‌ಗಳಲ್ಲಿ ಅಪೇಕ್ಷಿಸುವ 'ಸಮಾಜಸೇವೆಯಲ್ಲಿ ಸಮಯದ ಸದುಪಯೋಗ' ಗಂಟೆಗಳನ್ನು ದಾಖಲಿಸಿ ಕ್ರೆಡಿಟ್ ಗಳಿಸುವುದಕ್ಕಾಯ್ತು. ಈಗ ನೂರಕ್ಕೂ ಹೆಚ್ಚು ಸ್ವಯಂಸೇವಕರು ವೈಲ್ಡ್ ಟ್ಯೂನ್ಸ್ ಯೋಜನೆಯನ್ನು ಸೇರಿಕೊಂಡಿದ್ದಾರೆ. ಹ್ಯೂಸ್ಟನ್ ಮಾತ್ರವಲ್ಲ ಅಮೆರಿಕದ ಬೇರೆ ಸಂಸ್ಥಾನಗಳಲ್ಲಿ- ನ್ಯೂಜೆರ್ಸಿ, ಕೊಲರಾಡೊ ಮುಂತಾದೆಡೆಗಳಲ್ಲಿ- ಅನಿಮಲ್ ಶೆಲ್ಟರ್‌ಗಳು ಈ ಯೋಜನೆಯನ್ನು ಅಳವಡಿಸಿಕೊಂಡಿವೆ. ಕೆಲವೊಮ್ಮೆ ಯುವಿಯೇ ಅಲ್ಲಿಗೆ ವಿಸಿಟಿಂಗ್ ಮ್ಯುಸಿಷಿಯನ್ ಆಗಿ ಹೋಗುತ್ತಾನೆ. ಬೀಟಲ್ಸ್‌ನ ಪ್ರಖ್ಯಾತ 'ಹೇ ಜ್ಯೂಡ್' ಹಾಡು, ಎಡ್ ಶೀರನ್‌ನ ಪ್ರಸಿದ್ಧ 'ಶೇಪ್ ಆಫ್ ಯು' ಹಾಡು, ಕೆಲವೊಮ್ಮೆ ಹಿಂದಿ ಚಿತ್ರಗೀತೆಗಳನ್ನೂ, ತನ್ನ ಪಿಯಾನೊದಲ್ಲಿ ನುಡಿಸಿ ಚತುಷ್ಪದಿ ಪ್ರೇಕ್ಷಕರನ್ನು ಮುದಗೊಳಿಸುತ್ತಾನೆ. ಬೇರೆ ಸಂಗೀತಗಾರರೂ ಮೊಝಾರ್ಟ್, ಬಾಖ್ ಮುಂತಾದ ಜಗತ್ಪ್ರಸಿದ್ಧರ ಟ್ರ್ಯಾಕ್‌ಗಳನ್ನು ನುಡಿಸಿ ತಾವೂ ಪುಳಕಿತರಾಗುತ್ತಾರೆ, ಪ್ರಾಣಿಗಳನ್ನೂ ಸಂಪ್ರೀತಗೊಳಿಸುತ್ತಾರೆ. ಯುವಿಯ ಈ ಸೇವೆ-ಸಾಧನೆಗಳನ್ನು ಗುರುತಿಸಿ ಹ್ಯೂಸ್ಟನ್‌ನ ಬೆಂಡ್ ಕೌಂಟಿ ಕಮಿಷನರರು ವಿಶೇಷ ಮಾನಪತ್ರ ನೀಡಿ ಗೌರವಿಸಿದ್ದಾರೆ. ಹ್ಯೂಸ್ಟನ್‌ನ ಸ್ಥಳೀಯ ಸುದ್ದಿವಾಹಿನಿಗಳಷ್ಟೇ ಅಲ್ಲದೆ ಎಬಿಸಿ ವರ್ಲ್ಡ್ ನ್ಯೂಸ್‌ನಂಥ ರಾಷ್ಟ್ರೀಯ ಮಾಧ್ಯಮಗಳೂ ಯುವಿ ಅಗರವಾಲ್ ಮತ್ತು ಅವನ ವೈಲ್ಡ್ ಟ್ಯೂನ್ಸ್ ಯೋಜನೆಯನ್ನು ಪ್ರೇರಣಾದಾಯಕ ಎಂದು ಕೊಂಡಾಡಿವೆ. ಈಗಿನ್ನು ಇದು ಅಮೆರಿಕದ ಐವತ್ತೂ ಸಂಸ್ಥಾನಗಳಿಗೆ ಹರಡಿಕೊಂಡರೆ ಆಶ್ಚರ್ಯವಿಲ್ಲ.

ನನಗನಿಸುತ್ತದೆ, ಜಿ.ಪಿ.ರಾಜರತ್ನಂ ಅವರ ಪದ್ಯದಲ್ಲಿ ನಾಯಿಮರಿಯು ''ತಿಂಡಿ ಬೇಕು ತೀರ್ಥ ಬೇಕು ಎಲ್ಲ ಬೇಕು'' ಎಂದಿತ್ತಲ್ಲ, 'ಎಲ್ಲ'ದಲ್ಲಿ ಹತ್ತು ಹಲವು ಬೇಡಿಕೆಗಳು, ಆಡಲಿಕ್ಕೆ ಆಟಿಕೆ, ಓದಲಿಕ್ಕೆ ಪುಸ್ತಕ, ಕೇಳಿ ಆನಂದಿಸುವುದಕ್ಕೆ ಸಂಗೀತ... ಎಲ್ಲವೂ ಇತ್ತು. ನಾವು ಅರ್ಥಮಾಡಿಕೊಳ್ಳಲಿಲ್ಲ ಅಷ್ಟೇ. ಯುವಿ ಅಗರವಾಲ್‌ನಂಥ ಜಾಣ ಮಕ್ಕಳು ಅರ್ಥಮಾಡಿಕೊಂಡರು; ಪಶುರ್ವೇತ್ತಿ ಗಾನರಸಂ ಎಂಬುದನ್ನು ಸಾಬೀತುಪಡಿಸಿದರು!

ಮೋದಿಯನ್ನೂ ಮರೆಸುವವ ಸಿಗುವುದಾದರೆ ಸರಿ



ವಿದ್ಯಮಾನ

ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com
vinayakavbhat@autoaxle.com

ಬದಲಾವಣೆ ಜಗದ ನಿಯಮ. ಅದು ಅಪೇಕ್ಷಿತವಲ್ಲದಿದ್ದರೂ ಬದಲಾವಣೆಯನ್ನು ತಡೆದುನಿಲ್ಲಿಸಲಂತೂ ಸಾಧ್ಯವಿಲ್ಲ, ನದಿಯ ನೀರಿನಂತೆ ಚಲನಶೀಲತೆಯೇ ಅದರ ಧರ್ಮವಾಗಿರುತ್ತದೆ. ನಾವಿದ್ದ ಜಾಗದಿಂದ ಹಳೆನೀರು ಹೋಗಿ ಹೊಸನೀರು ಬರುತ್ತಲೇ ಇರುತ್ತದೆ.

ಒಬ್ಬ ಗೃಹಸ್ಥನ ದೇಹದ ಮೇಲೆ ಸುಕ್ಕುಗಳು ಕಾಣಲು, ಕೂದಲು ಬಿಳಿ ಬಣ್ಣಕ್ಕೆ ಹೊರಳಲು ಶುರುವಾದಾಗ, ಮೊಮ್ಮಕ್ಕಳು ಮನೆಯಲ್ಲಿ ಆಡುತ್ತಿರುವುದನ್ನು ಆತ ಕಂಡಾಗ, ತನ್ನ ಕರ್ತವ್ಯಗಳು ಮುಗಿದವು ಎಂದುಕೊಂಡು, ಜವಾಬ್ದಾರಿಗಳನ್ನು ಮಕ್ಕಳಿಗೆ ವಹಿಸಿ ಅವನು ಕಾಡಿನ ದಾರಿಯನ್ನು ನೋಡಿಕೊಳ್ಳಬೇಕು, ವಾನಪ್ರಸ್ಥಾಶ್ರಮಿಯಾಗಿ ಶೇಷಾಯುಷ್ಯವನ್ನು ಶಾಂತಿಯಿಂದ ಕಳೆಯಬೇಕು ಎಂಬುದು ಮನುಮುಂತಾದ ಪ್ರಾಚೀನ ಸ್ಮೃತಿಕಾರರು ನಮಗೆ ವಿಧಿಸಿದ ಕಟ್ಟಳೆಯಾಗಿದೆ. 'ಇಲ್ಲ, ನಾನು ಈ ಕುಟುಂಬಕ್ಕೆ ಅನಿವಾರ್ಯವಾಗಿದ್ದೇನೆ, ನನ್ನನ್ನು ಬಿಟ್ಟರೆ ಈ ಕುಟುಂಬ ಅನಾಥವಾಗಿಬಿಡುತ್ತದೆ' ಎನ್ನುವ ಭ್ರಮೆಯಿಂದ, ಯಜಮಾನಿಕೆಯ ಕೀಲಿಕೈಯನ್ನು ಮಕ್ಕಳಿಗೆ ನಿಸ್ಪೃಹತೆಯಿಂದ ಹಸ್ತಾಂತರಿಸದೇ ತನ್ನಲ್ಲೇ ಉಳಿಸಿಕೊಂಡು ಸಾಗಿದರೆ, ಸಂಸಾರದಲ್ಲಿ ಆತ ತಿರಸ್ಕೃತನಾಗುತ್ತಾನೆ ಎನ್ನುವ ಪಾಠವನ್ನು ನಮ್ಮ ಪ್ರಾಚೀನರು ಹೇಳಿದ್ದಾರೆ.

ಆದರೆ, ಕುಟುಂಬದ ಒಬ್ಬ ಯಜಮಾನನಿಂದ ಹಿಡಿದು, ಪೀಠಾಧಿಪತಿಗಳು, ಸಿನಿತಾರೆಯರು, ಕ್ರೀಡಾಲೋಕದ ದಿಗ್ಗಜರು ಹಾಗೂ ಅಧಿಕಾರದಲ್ಲಿರುವ ರಾಜಕಾರಣಿಗಳವರೆಗೆ ಎಲ್ಲರಿಗೂ ತಮಗಿಂತ ಮೊದಲು ಈ ಜಾಗದಲ್ಲಿ ಬೇರೆಯವರಿದ್ದರು, ಸಮಯಸಂದಾಗ ತಾವೂ ಬೇರೆಯವರಿಗೆ ಅವಕಾಶ ನೀಡುವ ಮೂಲಕ ತಮಗಿರುವ ಅಧಿಕಾರವನ್ನು ಸುಗಮವಾಗಿ ಬಿಟ್ಟುಕೊಟ್ಟು ನಿರಾಳರಾಗಬೇಕು ಎನ್ನುವ ಮನಸ್ಸೇ ಬರುವುದಿಲ್ಲ ಎನ್ನುವುದು ವಾಸ್ತವ.

ಈ ವಿಷಯವನ್ನು ಈಗ ಹೇಳುತ್ತಿರುವುದೇಕೆಂದರೆ, ಭಾರತದ ಅತ್ಯಂತ ಸಕ್ರಿಯ ರಾಜಕಾರಣಿಗಳಲ್ಲಿ ಒಬ್ಬರಾದ ಅಮಿತ್ ಶಾ ಅವರು ತಮ್ಮ ನಿವೃತ್ತಿಜೀವನದ ಕನಸುಗಳನ್ನು ಬಿಚ್ಚಿಡುತ್ತಾ, ''ವೇದೋಪನಿಷತ್ತುಗಳ ಅಧ್ಯಯನ ಮತ್ತು ಸಾವಯವ ಕೃಷಿಗೆ ನನ್ನ ಸಮಯವನ್ನು ಮೀಸಲಿಡಲು ಬಯಸುತ್ತೇನೆ'' ಎಂದಿದ್ದರು. ಆದರೆ ತಾವು ಯಾವಾಗ ನಿವೃತ್ತರಾಗುವುದು ಎಂಬುದನ್ನು ಅವರು ಸ್ಪಷ್ಟಪಡಿಸಲಿಲ್ಲ. ಅದೇ ರೀತಿ, ಕಳೆದ ಬುಧವಾರ ನಾಗ್ಪುರದಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸಿದ್ಧಾಂತವಾದಿಯಾಗಿದ್ದ ದಿವಂಗತ ಮೋರೋಪಂತ ಪಿಂಗಳೆಯವರ ಕುರಿತಾದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್, ''75 ವರ್ಷ ತುಂಬಿದಾಗ, ಜೀವಮಾನದ ಸಾಧನೆಗಾಗಿ ನಿಮಗೆ ಶಾಲು ಹೊದಿಸಿ ಸನ್ಮಾನಿಸಿದರು ಅಂತಾದರೆ, ನಿಮ್ಮ ಕೆಲಸವಾಯಿತು, ಇನ್ನು ಇತರರಿಗೆ ದಾರಿ ಮಾಡಿಕೊಡಬೇಕು ಎಂದು ತಿಳಿದುಕೊಳ್ಳಬೇಕು ಎಂದು ಪಿಂಗಳೆಯವರು ಹೇಳುತ್ತಿದ್ದರು'' ಎಂದು ಉಲ್ಲೇಖಿಸಿ, ಪಿಂಗಳೆಯವರ ಅಭಿಪ್ರಾಯವನ್ನು ಸಮರ್ಥಿಸಿದ್ದರು.

75 ವರ್ಷ ತುಂಬಿದ ರಾಜಕಾರಣಿಗಳು ಸಾರ್ವಜನಿಕ ಜೀವನದಿಂದ ನಿವೃತ್ತರಾಗಬೇಕು ಎಂಬ ಮೋಹನ್ ಭಾಗವತ್ ಮಾತು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನೇ ಟಾರ್ಗೆಟ್ ಮಾಡಿ ಆಡಿರುವಂಥದ್ದು ಎಂದು ವಿಶ್ಲೇಷಿಸಲಾಗುತ್ತಿದೆ. ಏಕೆಂದರೆ ಈ ವರ್ಷದ ಸೆಪ್ಟೆಂಬರ್‌ಗೆ ಮೋದಿಯವರು 75 ವರ್ಷ ಪೂರೈಸಲಿದ್ದಾರೆ. ಭಾಗವತ್ ಅವರ ಹೇಳಿಕೆಯು ಬಿಜೆಪಿಯ '75 ವರ್ಷದ ನಿವೃತ್ತಿ ಸೂತ್ರ'ವನ್ನು ಮತ್ತೆ ಚರ್ಚೆಗೆ ತಂದಿದೆ. ಮೋದಿಯವರಿಗೆ ಆರೆಸ್ಸೆಸ್ ನೀಡಿರುವ ಸೂಕ್ಷ್ಮ ಸಂದೇಶವಿದು ಎಂದೇ ಬಣ್ಣಿಸಲಾಗುತ್ತಿದೆ. ಮೋದಿಯವರು ಮೊದಲ ಬಾರಿಗೆ ಪ್ರಧಾನಿಯಾಗುವ ಹೊತ್ತಿಗೆ, ಎಲ್.ಕೆ. ಆಡ್ವಾಣಿ, ಮುರಳಿ ಮನೋಹರ್ ಜೋಶಿ ಮತ್ತು ಜಸ್ವಂತ್ ಸಿಂಗ್ ಅವರಂಥ ನಾಯಕರು 75 ವರ್ಷದ ಆಸುಪಾಸಿನಲ್ಲಿದ್ದರು. ವಯಸ್ಸಿನ ಕಾರಣ ನೀಡಿ ಅವರನ್ನು ಮೋದಿಯವರು ಮಾರ್ಗದರ್ಶಕ ಮಂಡಳಿಗೆ ಸೇರಿಸಿ, ಸಕ್ರಿಯ ರಾಜಕಾರಣದಿಂದ ನಿವೃತ್ತಿಯಾಗುವಂತೆ ಮಾಡಿದ್ದರು. ಈಗ ತಾವೂ ಅದೇ ನಿಯಮವನ್ನು ಪಾಲಿಸುತ್ತಾರೋ ಎಂದು ಕುತೂಹಲದಿಂದ ಕಾದು ನೋಡುತ್ತಿರುವವರಿದ್ದಾರೆ. ಮೋದಿ 2029ರವರೆಗೆ ಸರಕಾರವನ್ನು ಮುನ್ನಡೆಸಲಿದ್ದಾರೆ. ಮಧ್ಯದಲ್ಲಿ ನಿವೃತ್ತಿ ಹೊಂದುತ್ತಾರೆ ಎನ್ನುವ ವದಂತಿಗಳಲ್ಲಿ ಯಾವುದೇ ಸತ್ಯವಿಲ್ಲ. ಬಿಜೆಪಿಯ ಸಂವಿಧಾನದಲ್ಲಿ ನಿವೃತ್ತಿಯ ಷರತ್ತು ಇಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಹಿಂದೆ ಸ್ಪಷ್ಟಪಡಿಸಿದ್ದನ್ನು ನೆನಪಿಸಿಕೊಳ್ಳಬಹುದು. ಇದು ಮೋದಿಯವರಿಗೆ ಮೋಹನ್ ಭಾಗವತರು ಪರೋಕ್ಷವಾಗಿ ನೀಡುತ್ತಿರುವ ಸಂದೇಶ ಎಂದು ಬಣ್ಣಿಸುವವರು, ಸ್ವತಃ ಮೋಹನ್ ಭಾಗವತ್ ಅವರು ಕೂಡ ಬರುವ ಸೆಪ್ಟೆಂಬರ್‌ಗೆ 75 ವರ್ಷಗಳನ್ನು ಪೂರೈಸಲಿದ್ದಾರೆ ಎನ್ನುವುದನ್ನು ನೆನಪಿನಲ್ಲಿಡಬೇಕು.

ಕಳೆದ ಒಂದೂ ಕಾಲು ದಶಕದಿಂದ ದೇಶವನ್ನು ಅತ್ಯಂತ ದಕ್ಷತೆಯಿಂದ, ಪ್ರಧಾನಿಯಾಗಿ ಮುನ್ನಡೆಸಿ ಮಿಂಚಿದ ಮೋದಿಯವರು ನಾಳೆಯಿಂದ ಆ ಸ್ಥಾನದಲ್ಲಿ ಇರುವುದಿಲ್ಲ ಎನ್ನುವುದು, ನಮ್ಮ ಊಹೆಗೂ ನಿಲುಕದ ಹಾಗೂ ಥಕ್ಕನೆ ದಕ್ಕಿಸಿಕೊಳ್ಳಲಾಗದ ಸಂಗತಿಯಾಗಿರುವುದು ಸ್ವಾಭಾವಿಕವೇ ಆಗಿದೆ. ಏಕೆಂದರೆ, 'ಪ್ರಧಾನಿ ಎಂದರೆ ಮೋದಿ' ಎನ್ನುವಂತೆ ಅವರು ನಡೆದುಕೊಂಡಿದ್ದಾರೆ. ಅವರ ಸ್ವಾರ್ಥರಹಿತ, ಸೇವಾಭಾವದ ಜೀವನ ಮತ್ತು ಕಾರ್ಯಶೈಲಿಗಳು ದೇಶದಲ್ಲಷ್ಟೇ ಅಲ್ಲ, ಜಾಗತಿಕವಾಗಿ ಕೂಡ ಭಾರತದ ಪ್ರಧಾನಮಂತ್ರಿಗಳ ಸ್ಥಾನವನ್ನು ಅತ್ಯಂತ ಗೌರವದಿಂದ ನೋಡುವ ಹಾಗೆ ಮಾಡಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಹಾಗಾಗಿ, ಮೋದಿಯವರಂಥ ವರ್ಚಸ್ವಿ ನಾಯಕನನ್ನು ಕಳೆದುಕೊಳ್ಳಲು ಯಾವ ದೇಶವಾಸಿಯೂ ಬಯಸುವುದಿಲ್ಲ. ಕಾರಣ, ಇಂಥವರು ಇನ್ನೊಬ್ಬರು ಸಿಗಬಹುದು ಎನ್ನುವ ಭರವಸೆಯಿಲ್ಲ. ಆದರೆ, ಕಾಲಾಘಾತಕ್ಕೆ ಎಲ್ಲರೂ ಮಣಿಯಲೇಬೇಕಲ್ಲವೇ? ಜತೆಗೆ ಅವರನ್ನೂ ಮೀರಿಸುವ ಉತ್ತಮಿಕೆ ಹೊಂದಿರುವವನೊಬ್ಬ ಸಿಗುವ ಸಾಧ್ಯತೆಯನ್ನು ತಳ್ಳಿಹಾಕುವಂತೆಯೂ ಇಲ್ಲ ತಾನೆ?

ನಮಗೆಲ್ಲ ತಿಳಿವಳಿಕೆ ಬರುವ ಹೊತ್ತಿಗೆ, ಕ್ರಿಕೆಟ್ ದಂತಕಥೆ ಸುನಿಲ್ ಗಾವಸ್ಕರ್ ಅವರು ನಿವೃತ್ತಿಯ ಅಂಚಿನಲ್ಲಿದ್ದರು. ಇನ್ನು ಭಾರತಕ್ಕೆ ಕ್ರಿಕೆಟ್‌ನಲ್ಲಿ ಭವಿಷ್ಯವಿಲ್ಲ ಎಂತಲೇ ಆಗ ಜನ ಭಾವಿಸಿದ್ದರು. ಆದರೆ, ಮೂರು ಗಾವಸ್ಕರ್‌ಗೆ ಸಮನಾಗಬಲ್ಲ, ಕ್ರಿಕೆಟ್ ಲೋಕಕ್ಕೆ ದೇವರೆನಿಸಿಕೊಳ್ಳಬಲ್ಲ ಸಚಿನ್ ತೆಂಡೂಲ್ಕರ್ ಎಂಬ ದೈತ್ಯಪ್ರತಿಭಾವಂತ, ಗಾವಸ್ಕರ್ ಅವರ ಪಕ್ಕದ ಮನೆಯಲ್ಲೇ ಹುಟ್ಟಿದ್ದ. ಸಚಿನ್ ನಂತರ ಭಾರತದ ಕ್ರಿಕೆಟ್ ಭವಿಷ್ಯ ಉಡುಗಿಹೋಯಿತಾ? ಇಲ್ಲ. ಮೂರೂ ಸ್ತರಗಳಲ್ಲಿ ಪ್ರಶಸ್ತಿ ಗೆಲ್ಲುವಂತೆ ಮಾಡಿದ, ಮಹೇಂದ್ರ ಸಿಂಗ್ ಧೋನಿ ಎಂಬ ಜಗದೇಕಮಲ್ಲ ಸಿಕ್ಕ, ಆಮೇಲೆ ವಿರಾಟ್, ಮತ್ತೆ ರೋಹಿತ್. ಈಗ, ಮೊನ್ನೆ ಮೊನ್ನೆ ತಾನೇ ಕಣ್ಣುಬಿಟ್ಟ ಶುಭಮನ್ ತನ್ನ ನಾಯಕತ್ವದಲ್ಲಿ, ಹಿರಿಯರಿಲ್ಲದ ತಂಡವನ್ನು ಮುನ್ನಡೆಸಿ ಇಂಗ್ಲೆಂಡಿನಲ್ಲಿ ವಿಜಯಪತಾಕೆ ಹಾರಿಸುವ ಮೂಲಕ ಭಾರತದ ಕ್ರಿಕೆಟ್ ಭವಿಷ್ಯ ಉಜ್ವಲವಾಗಿದೆ ಎನ್ನುವುದರ ಜತೆಗೆ ಇಲ್ಲಿ ಯಾರೂ ಅನಿವಾರ್ಯವಲ್ಲ ಎನ್ನುವ ಸಂದೇಶವಿತ್ತ. ಭೀಮ್‌ಸೇನ್ ಜೋಶಿ, ಲತಾ ಮಂಗೇಶ್ಕರ್ ಅವರಂಥ ದಿಗ್ಗಜರು ಹಾಡುವುದನ್ನು ನಿಲ್ಲಿಸಿದಾಗ, ಸಂಗೀತಲೋಕ ಸ್ತಬ್ಧವಾಗಲಿಲ್ಲ. ಅವರ ಹೆಸರು ಹೇಳಿಕೊಂಡು ಸಾವಿರಾರು ಯುವಗಾಯಕರು ಮುನ್ನೆಲೆಗೆ ಬರುವಂತಾಯ್ತು. ಧೀರೂಭಾಯಿ ಅಂಬಾನಿಯವರೊಂದಿಗೆ ರಿಲಯನ್ಸ್ ಸಂಸ್ಥೆ ಕಳೆದು ಹೋಗಲಿಲ್ಲ, ಹೊಸ ನಾಯಕತ್ವದಲ್ಲಿ ಇನ್ನೂ ಹೆಚ್ಚಿನದಾಗಿ ಬೆಳೆಯಿತು.

ಇಂದಿರಾ ಗಾಂಧಿಯವರು ಪ್ರಧಾನಿಯಾಗಿದ್ದ ಕಾಲವನ್ನೊಮ್ಮೆ ನೆನಪಿಸಿಕೊಳ್ಳಿ. ಇಂದಿರಾರನ್ನು ಬಿಟ್ಟರೆ ದೇಶವನ್ನು ಮುನ್ನಡೆಸಬಲ್ಲ ವ್ಯಕ್ತಿ ಇನ್ನಾರಿಲ್ಲ ಎನ್ನುವ ಪರಿಸ್ಥಿತಿ ಅದಾಗಿತ್ತು. ಆ ಮಟ್ಟದ ಪ್ರಶ್ನಾತೀತ ನಾಯಕಿಯಾಗಿದ್ದವರು ಇಂದಿರಾ. ಇಡೀ ದೇಶದಲ್ಲಿ, ಅವರಿಗೆ ಹತ್ತಿರದ ಸ್ಪರ್ಧಿಯೂ ಇರಲಿಲ್ಲ. ದೇಶಕ್ಕೆ ಇಂದಿರಾ ಬಿಟ್ಟರೆ ಇನ್ನಾರಿಲ್ಲ ಎನ್ನುವಷ್ಟು ಅನಿವಾರ್ಯವಾಗಿದ್ದರು. ನಿಮಗೆ ವಯಸ್ಸಾಯಿತು, ಈಗ ಬೇರೆಯವರನ್ನು ಈ ಹುದ್ದೆಗೇರಿಸೋಣ ಎನ್ನುವ ಧೈರ್ಯ ಆ ಪಕ್ಷದಲ್ಲಿ ಯಾರಿಗೂ ಇರಲಿಲ್ಲ. ಆದರೆ, ಅವರು ದುರದೃಷ್ಟವಶಾತ್ ಅಂಗರಕ್ಷಕರ ಗುಂಡಿನ ದಾಳಿಗೆ ಬಲಿಯಾದಾಗ, ರಾಜೀವ್ ಗಾಂಧಿಯವರು ಆಕಸ್ಮಿಕವಾಗಿ ಪ್ರಧಾನಿಯಾಗಿ ದೇಶವನ್ನು ಮುನ್ನಡೆಸಬೇಕಾಗಿ ಬಂತಲ್ಲವೇ? ಒಂದು ಮಟ್ಟದಲ್ಲಿ ಇಂದಿರಾರಿಗಿಂತ ಪಾರದರ್ಶಕ, ಸ್ವಚ್ಛ ಹಾಗೂ ಜನಮೆಚ್ಚುವ

ಆಡಳಿತವನ್ನೇ ಅವರು ನೀಡಿದರು, ವಿವಿಧ ಆಯಾಮಗಳಲ್ಲಿ ಜನರ ನಿರೀಕ್ಷೆಗೂ ಮೀರಿ ದೇಶವು ಮುನ್ನಡೆ ಸಾಧಿಸುವಂತೆ ಮಾಡಿ ತೋರಿಸಿದರು ಕೂಡಾ. ರಾಜೀವರೂ ಅನಿರೀಕ್ಷಿತವಾಗಿ ಉಗ್ರದಾಳಿಯಲ್ಲಿ ಹತರಾದಾಗ, ಪಿ.ವಿ.ನರಸಿಂಹರಾಯರಿಗೆ ದೇಶವನ್ನು ಮುನ್ನಡೆಸುವ ಅವಕಾಶ ಒದಗಿತು. ಆರ್ಥಿಕವಾಗಿ ಅತ್ಯಂತ ದುರ್ಭರ ಸ್ಥಿತಿಯಲ್ಲಿದ್ದ ಭಾರತವನ್ನು, ತಮ್ಮ ವಿಚಕ್ಷಣತೆಯಿಂದ ಸದೃಢ ಶಕ್ತಿಯನ್ನಾಗಿಸಿದ ಕೀರ್ತಿ ಗಳಿಸಿದರು ರಾಯರು. ಮುಂದೆ, ಅಷ್ಟಾಗಿ ರಾಜಕೀಯ ಅನುಭವವಿಲ್ಲದ ಮನಮೋಹನ ಸಿಂಗರಿಗೆ ಈ ಅವಕಾಶ 2 ಬಾರಿ ದೊರೆಯಿತು. ಅವರೂ ಒಂದು ಮಟ್ಟದ ಯಶಸ್ಸನ್ನೇ ಗಳಿಸಿದರು ಎನ್ನಬಹುದು. ಅಂತೂ, 'ಇಂದಿರಾ ಅನಿವಾರ್ಯವಲ್ಲ' ಎಂಬುದನ್ನು ಈ ಎಲ್ಲ ನಾಯಕರು ಸಾಬೀತುಪಡಿಸಿ ತೋರಿಸಿದಂತಾಯಿತು. ಕಾಲಪ್ರವಾಹದಲ್ಲಿ ಇಂದಿರಾ ಮರೆತುಹೋದರು.

ಇನ್ನು, ಅಟಲ್ ಬಿಹಾರಿ ವಾಜಪೇಯಿಯವರ ವಿಷಯಕ್ಕೆ ಬರೋಣ. ಅವರನ್ನು ಬಿಟ್ಟರೆ ಪ್ರಧಾನಿ ಸ್ಥಾನಕ್ಕೆ ಹೊಂದುವ ವ್ಯಕ್ತಿಯೇ ಇನ್ನೊಬ್ಬನಿಲ್ಲ ಎನ್ನುವಷ್ಟು ಎಲ್ಲರೊಂದಿಗೂ ಹೊಂದಿಕೊಂಡು ಅಧಿಕಾರ ನಡೆಸಿದವರು ಅಟಲ್‌ಜಿ. ತಮ್ಮ ಭಾಷಣ ಹಾಗೂ ಕವಿತ್ವದಿಂದ ಜನಪ್ರಿಯತೆಯ ಉತ್ತುಂಗವನ್ನು ಕಂಡ ಅವರು, ಸರ್ವಾಂಗೀಣ ಅಭಿವೃದ್ಧಿಗೆ ಶ್ರೀಕಾರ ಬರೆದು ದೇಶವು ಪ್ರಕಾಶಿಸುವಂತೆ ಮಾಡಿದರು. ಮುಂದಿನ ಚುನಾವಣೆಯಲ್ಲಿ ಅವರ ನೇತೃತ್ವದ ಬಿಜೆಪಿಯ ಗೆಲುವು ನಿಶ್ಚಿತ, ಅವರು ಮತ್ತೆ ಪ್ರಧಾನಿಯಾಗುವುದನ್ನು ನೋಡಲಿದ್ದೇವೆ ಎಂದು ಭಾವಿಸಿದ್ದ ದೇಶದ ಜನರಿಗೆ ನಿರಾಸೆಯಾಯಿತು. 'ವಾಜಪೇಯಿ-ಆಡ್ವಾಣಿ ಜೋಡಿಗೆ ವಯಸ್ಸಾಯಿತು, ಪಕ್ಷ ಸಂಘಟನೆ ಮಾಡಿ ಮತ್ತೆ ಅಧಿಕಾರಕ್ಕೆ ತರುವ ಹುಮ್ಮಸ್ಸು ಅವರಲ್ಲಿ ಉಳಿದಿಲ್ಲ; ಇನ್ನು ಬಿಜೆಪಿಯನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತರಬಲ್ಲ ಸಮರ್ಥ ನಾಯಕ ಆ ಪಕ್ಷದಲ್ಲಿ ಯಾರೂ ಕಾಣುತ್ತಿಲ್ಲ' ಎಂದೇ ಆ ಕಾಲಕ್ಕೆ ಭಾವಿಸಲಾಗಿತ್ತು. ಆದರೆ ಆಗಿದ್ದೇ ಬೇರೆ. ಪಕ್ಷಕ್ಕಿಂತ ಹೆಚ್ಚಾಗಿ, ತನ್ನ ಸ್ವಂತ ಹೆಸರು ಹಾಗೂ ಚಾರಿತ್ರ್ಯದ ಬಲದಿಂದ, ಹೆಚ್ಚು ಕಡಿಮೆ ಇಡೀ ದೇಶದ ರಾಜಕೀಯ ಭೂಪಟವನ್ನು ಕೇಸರಿಮಯವನ್ನಾಗಿಸಿದ ಧೀರ ನರೇಂದ್ರ ಮೋದಿ ಉದಯಿಸಿದರು. ಈ ವ್ಯಕ್ತಿಯಿಂದ ಬಿಜೆಪಿ ಹಾಗೂ ದೇಶ ತನ್ನ ಸುವರ್ಣಕಾಲವನ್ನು ಕಾಣಬಹುದು ಎಂದು ಯಾರೂ ನಿರೀಕ್ಷಿಸಿರಲಿಕ್ಕಿಲ್ಲ. ಇದು ಯಾರೂ ನಿರೀಕ್ಷಿಸಿರದ ಬದಲಾವಣೆಯ ಫಲಪೂರ್ಣತೆ ಎನ್ನಬಹುದೇನೋ. ಲೋಕದಲ್ಲಿ ಯಾರೂ ಅನಿವಾರ್ಯವಲ್ಲ, ತನ್ನನ್ನು ಬಿಟ್ಟರೆ ಮುಗಿದುಹೋಯಿತು ಎನ್ನುವಂತೆಯೂ ಇಲ್ಲ. ಇದು ಸಾಮಾನ್ಯ ಮನೆಯೊಂದರ ಯಜಮಾನನಿಂದ ಹಿಡಿದು, ದೇಶದ ಪ್ರಧಾನಿಯವರೆಗೂ ಅನ್ವಯಿಸುವ ಮಾತು ಎನ್ನಲು ಇಷ್ಟು ಉದಾಹರಣೆ ಸಾಕು ಎನಿಸುತ್ತದೆ.

ಹಾಗೆ, ಇಂದು ದೇಶದ ಜನಪ್ರಿಯ ಹಾಗೂ ಹೆಮ್ಮೆಯ ಪ್ರಧಾನಿಯಾದ ಮೋದಿಯವರು ತೆರೆಮರೆಗೆ ಸರಿಯುವುದು ಯಾರಿಗೂ ಇಷ್ಟವಿಲ್ಲದಿದ್ದರೂ, ಇಂದೋ ನಾಳೆಯೋ ಆ ದಿನ ಬಂದೇ ಬರುತ್ತದೆಯಲ್ಲವೇ? 75ರ ವಯಸ್ಸು ಎನ್ನುವುದು ಸಣ್ಣ ಸಂಖ್ಯೆಯಲ್ಲ. ಅದರಲ್ಲೂ, ದಿನದ 18 ತಾಸು ಕೆಲಸ ಮಾಡಬಯಸುವ ಮೋದಿಯಂಥವರಿಗಂತೂ ಅದು ಪ್ರಯಾಸದಾಯಕವೇ ಆಗಿರುತ್ತದೆ. ದೇಹಾಯಾಸ ಎನ್ನುವುದು ಅವರಿಗೂ ಸಹಜವೇ ತಾನೆ? ಅವರು ವೈಯಕ್ತಿಕವಾಗಿ ಇನ್ನೂ ಏನೇನು ಆಧ್ಯಾತ್ಮಿಕ ಸಾಧನೆಗಳನ್ನು ಮುಂದೆ ಮಾಡಲಿಕ್ಕೆ ಯೋಜಿಸಿದ್ದಾರೋ! ಅವರು ತಮ್ಮ ವ್ಯಕ್ತಿಗತ ಜೀವನವನ್ನು ಗೌರವಿಸುವುದಕ್ಕೂ ಅವಕಾಶವಾಗಬೇಕಲ್ಲವೆ?

ಬಹುಕಾಲ ದೇಶವನ್ನಾಳಿದ ದಶರಥ ಮಹಾರಾಜ, ಹಿರಿಯ ಮಗ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡುವುದೆಂದು ತೀರ್ಮಾನಿಸಿದನಂತೆ. ಅದನ್ನು ಅಯೋಧ್ಯೆಯ ಪ್ರಮುಖರಿಗೆಲ್ಲ ತಿಳಿಸಲೆಂದು ಆತ ಸಭೆ ಕರೆದ. ಶ್ರೀರಾಮನನ್ನು ಉತ್ತರಾಧಿಕಾರಿಯಾಗಿ ನೇಮಿಸುವ ಆತನ ನಿರ್ಧಾರದಿಂದ ಪುರಜನರೆಲ್ಲ ಪುಳಕಿತರಾಗಿ ಕುಣಿದು ಕುಪ್ಪಳಿಸಿದರಂತೆ. ಈ ಸಂತೋಷವನ್ನು ಕಂಡ ದಶರಥನಿಗೆ, ತನ್ನ ನಿರ್ಧಾರವನ್ನು ಪ್ರಜೆಗಳು ಒಪ್ಪಿಕೊಂಡಿದ್ದಾರೆ ಎನ್ನುವ ಸಮಾಧಾನವೇನೋ ಆಯಿತು. ಆದರೆ, ಬಹುಕಾಲ ರಾಜ್ಯವನ್ನು ಅತ್ಯಂತ ಸತ್ಯ ಧರ್ಮದಿಂದ ನಡೆಸಿಕೊಂಡು ಬಂದಿದ್ದ ತನ್ನ ನಿವೃತ್ತಿಯ ಕುರಿತು, ತಾನು ಮಕ್ಕಳಂತೆ ಪಾಲಿಸಿಕೊಂಡುಬಂದಿದ್ದ ಒಬ್ಬ ಪ್ರಜೆಯೂ, ದುಃಖ ವ್ಯಕ್ತಪಡಿಸಲಿಲ್ಲ; 'ಮಹಾರಾಜರೇ, ನಮಗೇ ನೀವೇ ಮುಂದುವರಿಯಬೇಕು' ಎಂದು ಉಪಚಾರಕ್ಕೂ ಅಳಲುತೋಡಿಕೊಳ್ಳಲಿಲ್ಲ. ಹಾಗಾದರೆ, ತಾನು ಅಷ್ಟು ಕೆಟ್ಟ ರಾಜನಾಗಿದ್ದೆನಾ? ನಾನು ಹೋಗುವುದನ್ನೇ ಪ್ರಜೆಗಳು ಬಯಸಿದ್ದರಾ? ಎನಿಸಿತಂತೆ ದಶರಥನಿಗೆ. ಆತನಿಗೆ ಹಾಗನಿಸಿದರೆ ತಪ್ಪಲ್ಲ ತಾನೆ? ಆದರೆ ಪ್ರಜೆಗಳು ಹಾಗೆ ನಡೆದುಕೊಳ್ಳಲು ದಶರಥ ಕೆಟ್ಟ ರಾಜನಾಗಿದ್ದ ಎನ್ನುವುದು ಕಾರಣವಾಗಿರಲಿಲ್ಲ, ಬದಲಿಗೆ ಮುಂದೆ ಬರುವ ರಾಜ ಇನ್ನೂ ಒಳ್ಳೆಯ ರಾಜನಾಗಬಲ್ಲವ ಎಂಬುದು ಅವರಿಗೆ ಗೊತ್ತಿತ್ತು. ಬದಲಾವಣೆ ಎನ್ನುವುದು ಉತ್ತಮಿಕೆಯ ಕಡೆಗಿರಬೇಕು ತಾನೆ?

ಹಾಗಾಗಿ, ಮೋದಿಯವರ ಉತ್ತಮ ಅಧಿಕಾರಾವಧಿಯೂ ಒಂದಲ್ಲಾ ಒಂದು ದಿನ ಕಾಲಪ್ರವಾಹದಲ್ಲಿ ತೇಲಿ ಹೋಗುವ ಸಂದರ್ಭ ಬರಲಿಕ್ಕಿದೆ. ದೇಶದ ಜನರು, ಪ್ರಧಾನಿಯಾಗಿ ಮೋದಿಯವರನ್ನೂ ಮರೆಯುವ ಕಾಲ ಬರಲಿಕ್ಕಿದೆ. ಅವರನ್ನು ಮರೆಸುವಂಥ ಸಮರ್ಪಣಾಭಾವದ ವ್ಯಕ್ತಿಯೊಬ್ಬ ಆ ಸ್ಥಾನಕ್ಕೆ ಬರುವುದಾದರೆ, ಈ ಬದಲಾವಣೆಯೂ ದೇಶದ ಜನರಿಗೆ ಸ್ವಾಗತಾರ್ಹವಾಗಬಹುದು. ಯಾರಿಗೆ ಗೊತ್ತು, ಮೋದಿಯವರನ್ನೂ ಮೀರಿಸುವ-ಮರೆಸುವ 'ಯೋಗಿ'ಯೊಬ್ಬ, ದೇಶದ ಯಾವ 'ಪ್ರದೇಶ'ದಲ್ಲಿ ಅಡಗಿದ್ದಾನೋ ಏನೋ! ಕಾಲದ 'ಉತ್ತರ'ಕ್ಕೆ ಕಾಯಬೇಕಷ್ಟೇ...

ಅಬಲೆಗೆ ಆತ್ಮಬಂಧುವಾದರಾ ಅವಧೂತರು..?



ರಸದೌತಣ

ಯಗಟಿ ರಘು ನಾಡಿಗ್
vveditoped@gmail.com
naadigru@gmail.com

ಅವಧೂತರ ಸೂಚನೆಯಂತೆ ಮಧ್ಯರಾತ್ರಿಯಲ್ಲಿ ನಿದ್ರೆಗೆ ಜಾರಿದ ಶಿಷ್ಯರ ಮನದಲ್ಲಿ 'ಎಷ್ಟು ಬೇಗ ಬೆಳಗಾಗುವುದೋ?' ಎಂಬ ನಿರೀಕ್ಷೆಯೇ ಕೆನೆಗಟ್ಟಿತ್ತು. ಕಾರಣ, ತಾವೆಲ್ಲರೂ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಧ್ಯಾನ, ಸಾಧನೆ ಮಾಡಿದ ನಂತರ ಶಾರದೆಯ ಕಥೆ ಮುಂದುವರಿಯುತ್ತಲ್ಲಾ ಎಂಬ ಪುಳಕ. ಬಹುತೇಕ, ಅವರು ಅಂದುಕೊಂಡಂತೆಯೇ ನಡೆಯಿತು, ಒಂದು ಅಂಶವನ್ನು ಬಿಟ್ಟು. ಅದೆಂದರೆ, ಬೆಳಗ್ಗೆ 7 ಗಂಟೆಯಾದರೂ ಅವಧೂತರು ಶಿಷ್ಯರ ಕೋಣೆಯೆಡೆಗೆ ಸುಳಿಯಲಿಲ್ಲ, ಅಥವಾ ತಾವಿದ್ದ ಕಡೆಗೆ ಅವರನ್ನು ಕರೆಯಲಿಲ್ಲ. ಹೀಗಾಗಿ ಶಾರದೆಯ ಕಥೆ ಮುಂದುವರಿಯುವ ಲಕ್ಷಣ ಶಿಷ್ಯರಿಗೆ ಕಾಣಲಿಲ್ಲ.

ಅವಧೂತರು ಕೊಟ್ಟ ಮಾತಿಗೆ ತಪ್ಪುವವರಲ್ಲ, ಆದರೂ ಹೀಗೇಕೆ ತಮ್ಮನ್ನು ಆಟವಾಡಿಸುತ್ತಿದ್ದಾರೆ ಎಂದು ಶಿಷ್ಯರು ಗೊಂದಲದಲ್ಲಿ ಮುಳುಗಿದರು. ಮುಂಜಾನೆಯ ಪೂಜೆ-ಪುನಸ್ಕಾರಗಳ ನಂತರ ಅವಧೂತರು ಹಜಾರದ ಉಯ್ಯಾಲೆಯಲ್ಲಿ ಕೂರುವುದು ವಾಡಿಕೆಯಾಗಿತ್ತು. ಆದರೆ ಅಂದು ಅದೂ ಖಾಲಿಖಾಲಿ. ಇದೇನಾಗುತ್ತಿದೆ ಎಂದು ಶಿಷ್ಯರೆಲ್ಲರೂ ಅಂದುಕೊಳ್ಳುತ್ತಿರುವಾಗಲೇ ಅಡುಗೆಮನೆಯಲ್ಲಿ ಪಾತ್ರೆಗಳ ಸಪ್ಪಳವಾಯಿತು. ಮನೆಯ ಹೆಂಗಸರು ಬೆಳಗ್ಗೆ ಕಾಫಿ-ತಿಂಡಿಯ ತಯಾರಿಯಲ್ಲಿರುವಾಗ ಹೀಗೆ ಆಗೀಗ ಲೋಟ-ತಟ್ಟೆ-ಪಾತ್ರೆಗಳ ಸದ್ದಾಗುವುದು ಸಹಜವೇ; ಆದರೆ ಅಂದು ಕೇಳಿಬಂದ ಸದ್ದು ವಿಲಕ್ಷಣವಾಗಿತ್ತು. ಕೆಲ ಕ್ಷಣದ ನಂತರ, ''ಅಯ್ಯೋ ಮಹಾರಾಯಾ, ಇಲ್ಲಿಗೂ ನುಗ್ಗಿಬಿಟ್ಯಾ? ಏನಪ್ಪಾ ಮಾಡ್ತಾ ಇದ್ದೀಯಾ ನೀನೂ?'' ಎಂಬ, ಮಹಿಳೆಯೊಬ್ಬರ ಹುಸಿಮುನಿಸು ಬೆರೆತ ದನಿ ಕೇಳಿತು. ''ಹೆದರಬೇಡಮ್ಮಾ, ತಿಂಡಿ ಮಾಡ್ತಾ ಇದ್ದೀನಿ'' ಎಂಬ ಸಮಜಾಯಿಷಿಯ ದನಿ ಒಂದು ಗಂಡಿನ ಕಂಠದಿಂದ ಹೊಮ್ಮಿತು. ಮೊದಲ ದನಿ 'ಗುರುಮಾತೆ'ಯದ್ದಾದರೆ, ಎರಡನೆಯದು ಸಾಕ್ಷಾತ್ ಅವಧೂತರದ್ದಾಗಿತ್ತು!

''ಅದೇನು ತಿಂಡಿ ಬೇಕು ಅಂತ ಹೇಳಿದ್ರೆ, ನಾವೇ ಮಾಡಿಕೊಡೋಲ್ವೇ? ಗಂಡಸಿಗ್ಯಾಕೆ ಗೌರಿ ದುಃಖ? ನೀನ್ಯಾಕಪ್ಪಾ ಹೀಗೆ ಮೈ-ಕೈ ಮಸಿ ಮಾಡಿಕೊಳ್ಳೋಕೆ ಹೋದೆ..?'' ಎಂಬ ವಾತ್ಸಲ್ಯಭರಿತ ದನಿಯುಕ್ಕಿಸಿದ ಗುರುಮಾತೆಯು, ಅವಧೂತರ ಮೈ-ಕೈಗಳಿಗೆ ಮೆತ್ತಿಕೊಂಡಿದ್ದ ಸೌದೆ ಒಲೆಯ ಮಸಿಯನ್ನು ತಮ್ಮ ಸೀರೆ ಸೆರಗಿನ ಅಂಚಿನಿಂದ ಒರೆಸಲು ಮುಂದಾದರು. ''ಅಯ್ಯೋ ಬಿಡಮ್ಮಾ, ಪರವಾಗಿಲ್ಲಾ...'' ಎಂದು ಅವಧೂತರು ಅಮ್ಮನಿಂದ ಬಿಡಿಸಿಕೊಳ್ಳುವ ವಿಫಲ ಯತ್ನದಲ್ಲಿದ್ದರು. ಆದರೆ ಅಮ್ಮ ಬಿಡಬೇಕಲ್ಲ?! ಮಗನು ಅಧ್ಯಾತ್ಮ ಸಿಂಹಾಸನದ ಸಾಮ್ರಾಟನೇ ಆಗಿದ್ದಿರಬಹುದು, ಆದರೆ ಅಮ್ಮನ ಕಣ್ಣಿನಲ್ಲಿ ಆತನಿನ್ನೂ ತುಂಟಪೋರನೇ, ಬಾಲಕೃಷ್ಣನೇ! ಅಷ್ಟೂ ಮಸಿಯನ್ನು ಒರೆಸಿದ ನಂತರ, ಅವಧೂತರನ್ನು ಒಂದೆಡೆ ನಿಲ್ಲಿಸಿ ಮಕ್ಕಳಿಗೆ ತೆಗೆಯುವಂತೆ ದೃಷ್ಟಿ ತೆಗೆದು ಕೈಬೆರಳುಗಳನ್ನು ಒಮ್ಮೆ ತಲೆಯ ಎರಡೂ ಬದಿಯಲ್ಲಿ ಮಡಿಸಿ ಪಟಗುಟ್ಟಿಸಿದರು ಗುರುಮಾತೆ. ವಾತ್ಸಲ್ಯದ ಖನಿಯೇ ಆಗಿದ್ದ ಅಮ್ಮನ ಕಾಲಿಗೆರಗಿದರು ಅವಧೂತರು.

ನಂತರ ಶಿಷ್ಯರಿದ್ದ ಕೋಣೆಗೆ ಬಂದ ಅವಧೂತರು, ''ಎಲ್ಲರೂ ರಾತ್ರಿ ಸರಿಯಾಗಿ ನಿದ್ರೆ ಮಾಡಿದಿರಾ? ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಸಾಧನೆ ಮಾಡಿದಿರಾ?'' ಎಂದು ಕೇಳಿದರು, ಆ ಕುರಿತು ತಮಗೇನೂ ಗೊತ್ತಿಲ್ಲವೇನೋ ಎಂಬಂತೆ! ನಂತರ ಶಿಷ್ಯರಿಬ್ಬರನ್ನು ಅಡುಗೆಮನೆಗೆ ಕರೆತಂದು, ಒಬ್ಬನ ಕೈಗೆ ಮುತ್ತುಗದ ಎಲೆಗಳ ಕಟ್ಟನ್ನು ಕೊಟ್ಟು, ಇನ್ನೊಬ್ಬ ದಢೂತಿ ಆಸಾಮಿಗೆ ದೊಡ್ಡ ಹಿತ್ತಾಳೆ ಕೊಳದಪ್ಪಲೆ ನೀಡಿ, ತಾವು ಒಂದು ಕ್ಯಾರಿಯರ್ ಹಿಡಿದು, ಅಮ್ಮನೆಡೆಗೆ ಒಮ್ಮೆ ತಿರುಗಿ ನೋಡಿ, ''ಎಲ್ಲರೂ ಊಟದ ಹೊತ್ತಿಗೆ ಬರ್ತೀವಿ. ಅನ್ನದ ಜತೆಗೆ ಎಳೆಯ ಹಲಸಿನಕಾಯಿಯ ಹುಳಿ, ಸುಟ್ಟಿರುವ ಹುರುಳಿ ಹಪ್ಪಳ, ಕಳಲೆಯ ಉಪ್ಪಿನಕಾಯಿ ಸಿದ್ಧವಾಗಿರಲಿ'' ಎಂದು ತುಂಟದನಿಯಲ್ಲಿ ಹೇಳಿ ಹುಬ್ಬು ಕುಣಿಸಿದರು. ಗುರುಮಾತೆ ಹಣೆ ಚಚ್ಚಿಕೊಂಡು ನಸುನಕ್ಕರು...

ಇಷ್ಟೂ ಚರ್ಯೆಗೆ ಸಾಕ್ಷಿಯಾಗಿದ್ದ ಶಿಷ್ಯರಿಬ್ಬರಿಗೆ ಎಲ್ಲವೂ ಅಯೋಮಯ. ಮಿಕ್ಕ ಶಿಷ್ಯರನ್ನೂ ಕರೆದ ಅವಧೂತರು, ''ನಡೀರಯ್ಯಾ, ಹೊಳೆ ದಂಡೆಯಲ್ಲಿ ಕೂತು ಕಥೆಯನ್ನು ಮುಂದುವರಿಸೋಣ'' ಎಂದರು. ಭಾರವಿದ್ದ ಹಿತ್ತಾಳೆ ಕೊಳದಪ್ಪಲೆಯನ್ನು ಹೊರಲಾರದೆ ಹೊತ್ತಿದ್ದ ಶಿಷ್ಯರು ಕುತೂಹಲವನ್ನು ತಡೆಯಲಾಗದೆ ಅದರ ಮುಚ್ಚಳವನ್ನು ಹಾಗೇ ಸುಮ್ಮನೆ ಸರಿಸಿ ನೋಡಿದರೆ- ಘಮಗುಡುತ್ತಿರುವ ಬಿಸಿಬಿಸಿ ತರಕಾರಿ ಉಪ್ಪಿಟ್ಟು! ಶಿಷ್ಯರೆಲ್ಲರೂ ಧ್ಯಾನ ಮುಗಿಸುವ ಹೊತ್ತಿಗೆ ಅವಧೂತರು, ಮನೆಯ ಹೆಂಗಸರಿಗೂ ಸುಳಿವು ನೀಡದೆ ಸ್ವತಃ ಅಡುಗೆಮನೆ ಸೇರಿ ಶಿಷ್ಯರಿಗೆಂದು ಉಪ್ಪಿಟ್ಟನ್ನು ತಯಾರಿಸಿದ್ದರು. ತಯಾರಿಯ ವೇಳೆ, ಹುರಿಯುವ ಜಾಲರಿ ಕೈಗೆ ಸಿಗದ ಕಾರಣಕ್ಕೆ ತೆಳ್ಳಗಿನ ಪುಟ್ಟ ತಟ್ಟೆಯನ್ನೇ ಎತ್ತಿಕೊಂಡು ರವೆಯನ್ನು ಹುರಿದಿದ್ದರು. ಒಗ್ಗರಣೆಗೆ ಖಾದ್ಯತೈಲ-ಕಡಲೇಬೇಳೆ-ಉದ್ದಿನಬೇಳೆಯ ಬದಲಿಗೆ ಸೌಟುಗಟ್ಟಲೆ ತುಪ್ಪ ಸುರಿದು, ಮೂರ್ನಾಲ್ಕು ಮುಷ್ಟಿ ದ್ರಾಕ್ಷಿ-ಗೋಡಂಬಿಗಳನ್ನು ಅದರಲ್ಲಿ ಹೊರಳಾಡಿಸಿ ಹುರಿದಿದ್ದರು. ಇದು ಅವರಲ್ಲಿ ಕೆನೆಗಟ್ಟಿದ್ದ ಮಾತೃವಾತ್ಸಲ್ಯಕ್ಕೊಂದು ಪುರಾವೆ. ಅಡುಗೆಮನೆಯಿಂದ ಕೇಳಿಬಂದ ಪಾತ್ರೆ-ಪರಿಕರಗಳ ಸದ್ದು ವಿಲಕ್ಷಣವಾಗಿದ್ದುದು ಈ ಕಾರಣಕ್ಕೇ! ಮಗನ ಇಷ್ಟೂ ಸಾಹಸಗಳನ್ನು ಗುರುಮಾತೆ ಬಿಡಿಸಿ ಬಿಡಿಸಿ ಹೇಳಿದಾಗ, ಶಿಷ್ಯರ ಕಂಗಳು ನೀರಾಡಿದ್ದವು. 'ಸಾಧನೆಯಿಂದ ವಿಮುಖರಾದಾಗ ತಮ್ಮನ್ನು ದಂಡಿಸುವ ಇದೇ ಅವಧೂತರು, ಸತ್ಕರಿಸುವಾಗ ಅನ್ನಪೂರ್ಣೆಯೇ ಆಗಿ ಅಮೃತವನ್ನು ಧಾರೆಯೆರೆಯುತ್ತಾರಲ್ಲಾ' ಎಂಬ ಧನ್ಯತಾಭಾವವೇ ಅದಕ್ಕೆ ಕಾರಣ...

ಭಾಗ-9

ಆದರೆ, ಅವಧೂತರು ಹಿಡಿದಿದ್ದ ಕ್ಯಾರಿಯರ್‌ನಲ್ಲಿರೋದೇನು? ಎಂಬ ಸಂಶಯ ಶಿಷ್ಯರೊಬ್ಬರನ್ನು ಕಾಡಿತು. ಅದನ್ನು ಲಪಕ್ಕನೆ ಗ್ರಹಿಸಿದ ಅವಧೂತರು, ''ತರಕಾರಿ ಉಪ್ಪಿಟ್ಟಿನ 'ಆಸ್ವಾದನಾ ಕಛೇರಿ'ಯನ್ನು ಹಾಗೇ ನಡೆಸೋಕ್ಕಾಗುತ್ತಾ ರಾಯರೇ? ಜತೆಗೆ ತೆಂಗಿನಕಾಯಿ ಚಟ್ನಿಯ 'ಪಕ್ಕವಾದ್ಯ' ಇದ್ರೆ, ಸೊಗಸಲ್ಲವೇ? ಚಟ್ನಿ ಇದರಲ್ಲಿದೆ'' ಎಂದು ವರದಿ ಒಪ್ಪಿಸಿದರು. ಪಾರಮಾರ್ಥಿಕ ಸಾಧನೆಯು ಅಂತಿಮ ಗುರಿಯಾಗಿದ್ದರೂ, ಲೌಕಿಕ ಬದುಕಿನ ಯಾವ ಆರೋಗ್ಯಕರ ಸಂಭ್ರಮವನ್ನೂ ಶಿಷ್ಯರು ತಪ್ಪಿಸಿಕೊಳ್ಳುವಂತಾಗಬಾರದು ಎಂಬುದು ಅವಧೂತರ ಆಶಯವಾಗಿತ್ತು. ಅದರ ಪ್ರತಿಫಲವೇ ದ್ರಾಕ್ಷಿ-ಗೋಡಂಬಿ-ತುಪ್ಪಭರಿತ ತರಕಾರಿ ಉಪ್ಪಿಟ್ಟು, ತೆಂಗಿನಕಾಯಿ ಚಟ್ನಿ!

ಎಲ್ಲರ ಸವಾರಿ ಹೊಳೆದಂಡೆಯತ್ತ ಹೊರಟಿತು. ದಾರಿಯಲ್ಲಿ ಸಾಗುವಾಗ, ಶ್ರೀ ಆದಿಶಂಕರಾಚಾರ್ಯರು ರಚಿಸಿದ 'ಶ್ರೀ ಅನ್ನಪೂರ್ಣಾ ಸ್ತೋತ್ರಂ'ನ 'ನಿತ್ಯಾನಂದಕರೀ ವರಾಭಯಕರೀ ಸೌಂದರ್ಯ ರತ್ನಾಕರೀ, ನಿರ್ಧೂತಾಖಿಲ ಘೋರ ಪಾವನಕರೀ ಪ್ರತ್ಯಕ್ಷ ಮಾಹೇಶ್ವರೀ। ಪ್ರಾಲೇಯಾಚಲ ವಂಶ ಪಾವನಕರೀ ಕಾಶೀಪುರಾಧೀಶ್ವರೀ, ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ' ಎಂಬ ಸಾಲುಗಳನ್ನು ಅವಧೂತರು ಗುನುಗುನಿಸುತ್ತಿದ್ದರು, ಅದಕ್ಕೆ ಶಿಷ್ಯರೂ ದನಿಗೂಡಿಸುತ್ತಿದ್ದರು. ಹೊಳೆದಂಡೆಯನ್ನು ತಲುಪುತ್ತಿದ್ದಂತೆ ಬಂಡೆಯ ಮೇಲೆ ಕೊಳದಪ್ಪಲೆಯನ್ನು ಇರಿಸುವಂತೆ ಅವಧೂತರು ಶಿಷ್ಯರಿಗೆ ಸೂಚಿಸಿದರು. ಅಷ್ಟು ಹೊತ್ತಿಗೆ 'ಶ್ರೀ ಅನ್ನಪೂರ್ಣಾ ಸ್ತೋತ್ರಂ' ಮುಗಿದಿತ್ತು, ಎಲ್ಲರಿಗೂ ಹೊಟ್ಟೆ ತಾಳ ಹಾಕುತ್ತಿತ್ತು. ಮುತ್ತುಗದ ಎಲೆಗೆ ಉಪ್ಪಿಟ್ಟು ಹಾಕಿ ಶಿಷ್ಯರಿಗೆ ನೀಡಿದ ಅವಧೂತರು, ತಾವೂ ಒಂದು ಎಲೆಯನ್ನು ಕೈಗೆತ್ತಿಕೊಂಡರು.

ಆದರೆ ಶಿಷ್ಯರು ತಿಂಡಿ ತಿನ್ನದೆ ತಮ್ಮನ್ನೇ ದಿಟ್ಟಿಸುತ್ತಿದ್ದುದನ್ನು ಕಂಡ ಅವಧೂತರು ಅಮಾಯಕರಂತೆ, ''ಯಾಕ್ರಯ್ಯಾ, ತಿಂಡಿ ತಿನ್ನೋಲ್ವೇ...?'' ಎಂದು ಹುಬ್ಬು ಕುಣಿಸಿದರು. ಶಿಷ್ಯರೊಬ್ಬರು ಧೈರ್ಯಮಾಡಿ, ''ಕಥೆ ಮುಂದುವರಿಸಿ ಗುರುಗಳೇ..'' ಎಂದು ಗೋಗರೆದಿದ್ದಕ್ಕೆ, ''ಕಥೆ? ಯಾವ ಕಥೆ?'' ಎಂದು ನಗುತ್ತಲೇ ನಾಟಕವಾಡಿದರು. ನಂತರ ಗಂಟಲು ಸರಿಮಾಡಿಕೊಂಡು ಶಾರದೆಯ ಕಥೆಯನ್ನು ಮುಂದುವರಿಸತೊಡಗಿದರು...

''ಇದುವರೆಗೆ ನಾನು ಹೇಳಿಕೊಂಡು ಬಂದ ಹಾಗೂ ನೀವೇ ಸಾಕ್ಷಿಯಾದ ಒಂದಷ್ಟು ಪ್ರಸಂಗಗಳಿಂದಾಗಿ ಶಾರದೆಯ ಕಥನವು ನಿಮಗೆ ಚದುರಿದ ಚಿತ್ರಗಳಂತೆ ಗೋಚರಿಸಿದೆ. ಇನ್ನು ಮುಂದೆ ಆ ಎಲ್ಲ ಚಿತ್ರಗಳನ್ನೂ ಒಂದು ನೇಯ್ಗೆಯಲ್ಲಿ ಹೆಣೆದು ನಿಮ್ಮ ಮುಂದಿಡುವೆ. ಗಮನವಿಟ್ಟು ಕೇಳಿಸಿಕೊಳ್ಳಿ. ಇದು ಬರೀ ಕಥೆಯಷ್ಟೇ ಅಲ್ಲ. ಇದು ನಮ್ಮ ಸಮಾಜ, ಅದರ ಸಹಭಾಗಿಗಳು ಲೋಕಾರೂಢಿಯಂತೆ ಸಾಗದೆ ತಪ್ಪುಹೆಜ್ಜೆಯನ್ನಿಟ್ಟರೆ ಪರಿಣಾಮ ಏನಾಗುತ್ತದೆ ಎಂಬುದರ ಸಂಗ್ರಹರೂಪವೂ ಹೌದು. ಅಷ್ಟೇಕೆ, ನನ್ನ ಶಿಷ್ಯರಾದ ನೀವು ಇಂಥ ತಪ್ಪುಹಾದಿಯಲ್ಲಿ ಕನಸಿನಲ್ಲೂ ಹೆಜ್ಜೆ ಹಾಕಬಾರದು ಅನ್ನೋದಕ್ಕೆ ಇದೊಂದು ಎಚ್ಚರಿಕೆಯ ಗಂಟೆಯೂ ಹೌದು. 'ವಿದ್ಯೆಯ ಹಸಿವು' ನೀಗಬೇಕಿದ್ದ ತಾಣದಲ್ಲಿ ಹೆಣ್ಣಿನ ಹಸಿಮಾಂಸದ ಮೇಲೆ ಕಣ್ಣುಹಾಕಿ 'ಕಾಮದ ಹಸಿವು' ನೀಗಿಸಿಕೊಳ್ಳುವ ರಣಹದ್ದು ಕೂಡ ಇರುವುದನ್ನು ಕಂಡ ಅಮಾಯಕಿ ಶಾರದೆ ಅಕ್ಷರಶಃ ಕುಸಿದಳು. ಆದರೆ ತಾನಿದ್ದ ಸಾಮಾಜಿಕ-ಆರ್ಥಿಕ ದುಸ್ಥಿತಿಯಿಂದಾಗಿ, ಹೆತ್ತವರ ಅಸಹಾಯಕತೆಯಿಂದಾಗಿ ಅದನ್ನು ಆಕೆ ಹೊರಗೆಲ್ಲೂ ಹೇಳಿಕೊಳ್ಳುವಂತಿರಲಿಲ್ಲ. ಹಾಗಂತ, ಉಚಿತವಾಗಿ ಅನ್ನ-ಅಕ್ಷರ-ಆಶ್ರಯ ಪಡೆಯುತ್ತಿರುವ ಕಾರಣಕ್ಕೆ ತನ್ನ ದೇಹವನ್ನು ಮೈಲಿಗೆ ಮಾಡಿಕೊಳ್ಳಲೂ ಆಕೆ ಸಿದ್ಧಳಿರಲಿಲ್ಲ. ಏಕೆಂದರೆ ಅವಳೊಂದು ಉದಾತ್ತ ಚೇತನ, ಅನುಪಮ ಆತ್ಮ. ಹೀಗಾಗಿ, ವಾರ್ಷಿಕ ಪರೀಕ್ಷೆ ಮುಗಿದು, ಬೇಸಗೆ ರಜೆಯಲ್ಲಿ ಹುಟ್ಟೂರಿಗೆ ಹೋಗಿಬರುವ ಅವಕಾಶ ಸಿಕ್ಕಿದಾಗ, ಸಂಸ್ಥೆಯ ಆವರಣದಲ್ಲಿನ ಈ 'ಅಸಹಜ' ಪ್ರವೃತ್ತಿಯ ಕುರಿತು ಹೆತ್ತವರಲ್ಲಿ ಹೇಳಿಕೊಂಡು, ಶಿಕ್ಷಣವನ್ನು ಅಲ್ಲಿಗೇ ಮೊಟಕುಗೊಳಿಸಲೂ ಶಾರದೆ ನಿರ್ಧರಿಸಿದ್ದುಂಟು. ಮನೆಯನ್ನು ತಲುಪಿದ ಮಾರನೆಯ ದಿನ ಅಪ್ಪ-ಅಮ್ಮನ ಬಳಿ, 'ನಿಮ್ಮ ಹತ್ತಿರ ಸ್ವಲ್ಪ ಮಾತಾಡುವುದಿದೆ' ಎಂದು ಪೀಠಿಕೆ ಹಾಕಿದ್ದೂ ಉಂಟು...

''ಆದರೆ, ಅವಳು ಮಾತು ಮುಂದುವರಿಸುವುದಕ್ಕೂ ಮೊದಲೇ ಅಪ್ಪ-ಅಮ್ಮ, 'ಏನೇ ತೊಂದರೆ ಎದುರಾದರೂ ನೀನು ಆ ಸಂಸ್ಥೆಯ ಆಶ್ರಯದಲ್ಲಿದ್ದು ಚೆನ್ನಾಗಿ ಓದಿ, ಮುಂದೆ ಒಳ್ಳೆಯ ಕೆಲಸಕ್ಕೆ ಸೇರಿ ನಮ್ಮಿಬ್ಬರನ್ನೂ ಸಲಹಬೇಕು ಕಣವ್ವಾ' ಎಂದು ಸಹಜದನಿಯಲ್ಲಿ ಹೇಳಿಬಿಟ್ಟರು. ಹೆತ್ತವರು ತನ್ನಲ್ಲಿ ಇಂಥದೊಂದು ನಿರೀಕ್ಷೆಯಿಟ್ಟುಕೊಂಡಿರುವುದು ಅರಿವಾಗುತ್ತಿದ್ದಂತೆ, 'ಅತ್ತ ದರಿ, ಇತ್ತ ಪುಲಿ' ಎಂಬ ಗೊಂದಲದಲ್ಲಿ ಸಿಲುಕಿದ ಶಾರದೆ, ಎದೆಯಾಳದ ಅಳಲನ್ನು ಹಾಗೇ ಅದುಮಿಟ್ಟುಕೊಂಡು, 'ನನ್ನ ಬಗ್ಗೆ ನೀವೇನೂ ಚಿಂತಿಸದೆ ನೆಮ್ಮದಿಯಾಗಿರಿ. ನಾನು ಚೆನ್ನಾಗಿ ಓದುತ್ತಿದ್ದೇನೆ. ಸಂಸ್ಥೆಯಲ್ಲಿ ನನಗಾವ ತೊಂದರೆಯೂ ಇಲ್ಲ, ಸ್ವಂತ ಮಗಳಂತೆ ನೋಡಿಕೊಳ್ಳುತ್ತಿದ್ದಾರೆ' ಎಂದು ನಾಲಗೆ ಹೊರಳಿಸಿಬಿಟ್ಟಳು! ಹೆತ್ತವರು ಹಿಗ್ಗಿದರು....

''ರಜೆ ಮುಗಿದು ವಿದ್ಯಾರ್ಥಿ ನಿಲಯಕ್ಕೆ ಮರಳುವ ದಿನ ಬಂದಾಗ, ಹೇಳಬೇಕಾದ್ದನ್ನು ಹೇಳಲಾಗದ ದುಃಖದಲ್ಲಿ ಶಾರದೆಯ ಅಮ್ಮನನ್ನು ಬಿಗಿಯಾಗಿ ತಬ್ಬಿ ರೋದಿಸತೊಡಗಿದಳು. ಆದರೆ ಅಮ್ಮ ಅಂದುಕೊಂಡಿದ್ದೇ ಬೇರೆ! ಹೆತ್ತವರನ್ನು ಬಿಟ್ಟಿರಲಾಗದ ನೋವಿಗೆ ಅಳುತ್ತಿದ್ದಾಳೆ ಎಂದು ಭಾವಿಸಿದ ಅಮ್ಮ, 'ಓದು ಮುಗಿದ ಮೇಲೆ ಮನೆಗೇ ಮರಳುತ್ತೀಯಲ್ಲ ಮಗಾ, ಇನ್ನೊಂದೇ ವರ್ಷ ತಾನೇ?' ಎಂದು ಸಮಾಧಾನಿಸಲು ಯತ್ನಿಸಿದಳು. ಆದರೆ ಮಗಳ ಅಳು ತೀವ್ರವಾದಾಗ, ತನ್ನ ಹಸುಬೆ ಚೀಲದಟ್ಟುಕೊಂಡಿದ್ದ ಅಂಗೈಯಗಲದ ಚಿತ್ರಪಟವನ್ನು ಶಾರದೆಗೆ ನೀಡಿದ ಅಮ್ಮ, 'ನಿನಗೆ ತುಂಬಾ ನೋವಾದಾಗಲೆಲ್ಲಾ, ಈ ಪಟದಲ್ಲಿರುವವರನ್ನು ಪ್ರಾರ್ಥಿಸು, ಅವರು ಪರಿಹಾರ ಕೊಡ್ತಾರೆ' ಎಂದಳು...'' ಎಂದು ಹೇಳಿ ಕಥೆಯನ್ನು ಅರೆಕ್ಷಣ ನಿಲ್ಲಿಸಿದರು ಅವಧೂತರು.

ಆಗ ಶಿಷ್ಯರೊಬ್ಬರು, ''ಅದು ಯಾರ ಚಿತ್ರಪಟ ಗುರುಗಳೇ?'' ಎಂದು ಪ್ರಶ್ನಿಸಿದಾಗ, ''ನಿಮ್ಮ ಬಾಯಿಗೆ ತರಕಾರಿ ಉಪ್ಪಿಟ್ಟನ್ನೂ, ಕಿವಿಗೆ ಕಥಾಹೂರಣವನ್ನೂ ಉಣಬಡಿಸುತ್ತಿರುವವರದು'' ಎನ್ನುತ್ತಾ ನಕ್ಕರು ಅವಧೂತರು.

''ಅಂದರೆ... ನಿಮ್ಮ ಚಿತ್ರಪಟವಾ?!'' ಎಂದು ಉದ್ಗರಿಸುತ್ತಾ ಅಪ್ರತಿಭರಾದ ಆ ಶಿಷ್ಯರು, ''ಕಥೆಯಲ್ಲಿ ಈಗ ನಿಮ್ಮ ಪ್ರವೇಶವೂ ಆಯಿತಲ್ಲಾ ಗುರುಗಳೇ?'' ಎಂದರು. ಅವಧೂತರು ನಿಗೂಢವಾಗಿ ನಕ್ಕರು...

(ಮುಂದುವರಿಯುವುದು)

ಅಕ್ಕಸಾಲಿಗ: ಹೊಳೆವುದೆಲ್ಲಾ ಚಿನ್ನವಲ್ಲ ಲೇಖಕ: ಹೊಳೆವುದೆಲ್ಲಾ ಐಡಿಯಾ ಅಲ್ಲ

ಸಿನಿಗನ್ನಡ

ತುಂಟರಗಾಳಿ

ಹರಿ ಪರಾಕ್
vveditoped@gmail.com

ಫೇಸ್‌ಬುಕ್‌ನಲ್ಲಿ ಯಾರೋ ಪೋಸ್ಟ್ ಹಾಕಿದ್ರು, ಅವರು ಪ್ರತಿದಿನ ಮಾಲ್‌ಗೆ ಸಿನಿಮಾ ನೋಡೋಕೆ ಹೋಗೋದ್ ನೋಡಿ, ಅಲ್ಲಿನ ಸೆಕ್ಯುರಿಟಿ, ''ಸರ್, ನೀವು ಇಲ್ಲೇ ಕೆಲಸ ಮಾಡೋದಾ?'' ಅಂತ ಕೇಳಿದ್ನಂತೆ. ಕೇಳೋಕೆ ತಮಾಷೆಯಾಗಿದ್ದರೂ ಇದು ಸತ್ಯ. ಸಿನಿಮಾ ಪ್ರಿಯರ ಬಳಿ ಈಗ ನೋಡ್ಬೇಕು ಅಂತಿರೋ ಸಿನಿಮಾಗಳ ಪಟ್ಟಿಗಿಂತ, ನೋಡಿ ರುವ ಸಿನಿಮಾಗಳ ಪಟ್ಟಿಗಿಂತ, ನೋಡಬೇಕಾಗಿತ್ತು ಆದ್ರೆ ಆಗ್ಲಿಲ್ಲ ಅನ್ನೋ ಸಿನಿಮಾಗಳ ಪಟ್ಟಿಯೇ ದೊಡ್ಡದಾಗಿದೆ. ಪ್ರತಿವಾರ ಏಳೆಂಟು ಚಿತ್ರಗಳ ಬಿಡುಗಡೆ. ಅದರಲ್ಲಿ ನೋಡುವಂಥವು ಕಮ್ಮಿ ಇದ್ದರೂ, ಹಲವು ಚಿತ್ರಗಳು ಇನ್ನೂ ನೋಡಬೇಕು ಅಂತ ಅಂದುಕೊಳ್ಳುತ್ತಿರುವಾಗಲೇ ಚಿತ್ರಮಂದಿರ ಗಳಿಂದ ಮಾಯವಾಗುತ್ತಿವೆ. ಹೋಗ್ಲಿ, ಒಟಿಟಿಯಲ್ಲಿ ನೋಡೋಣ ಅಂದ್ರೆ ಅರಳಿದ ಎಲ್ಲ ಹೂವೂ ಭಗವಂತನ ಪಾದ ಸೇರೊಲ್ಲ, ಬಿಡುಗಡೆ ಆದ ಎಲ್ಲ ಚಿತ್ರಗಳೂ ಒಟಿಟಿಗೆ ಬರಲ್ಲ. ಹಾಗಾಗಿ ಅಪ್ಪಟ ಚಿತ್ರಪ್ರೇಮಿಗಳು, ''ಅಯ್ಯೋ, ಆ ಸಿನಿಮಾ ನೋಡೋಕಾಗ್ಲಿಲ್ಲ, ಈ ಸಿನಿಮಾ ನೋಡೋಕಾಗ್ಲಿಲ್ಲ'' ಅಂತ ಕೊರಗೋದು ತಪ್ಪುತ್ತಿಲ್ಲ. ಬರೀ ಸಿನಿಮಾ ಪ್ರೇಮಿಗಳು ಯಾಕೆ, ಸ್ವತಃ ಸಿನಿಮಾ ಪತ್ರಕರ್ತರು ಮತ್ತು ವಿಮರ್ಶಕರಿಗೇ ಎಲ್ಲ ಸಿನಿಮಾಗಳನ್ನು ನೋಡೋಕೆ ಆಗ್ತಿಲ್ಲ. ಹಾಗೊಂದು ವೇಳೆ ಹಠಕ್ಕೆ ಬಿದ್ದು ದಿನಕ್ಕೆರಡು ಸಿನಿಮಾ ನೋಡಿದರೂ ಕೊನೆಯ ಸಿನಿಮಾ ವಿಮರ್ಶೆ ಮಾಡುವ ಹೊತ್ತಿಗೆ ಮುಂದಿನ ವಾರದ ಸಿನಿಮಾಗಳು ಬಿಡುಗಡೆ ಆಗಿರುತ್ತವೆ. ಒಟ್ಟಿನಲ್ಲಿ ಕೆಲವು ಸಿನಿಮಾಗಳು ತಮ್ಮ ಕಳಪೆ ಕ್ವಾಲಿಟಿಯಿಂದ ಜನರನ್ನು ತಲುಪಲು ವಿಫಲವಾಗುತ್ತಿದ್ದರೆ, ಹಲವು ಸಿನಿಮಾಗಳು ಎಲ್ಲಾ ಇದ್ದರೂ ಓವರ್ ಕಾಂಪಿಟೇಶನ್‌ನಿಂದ ಜನರಿಗೆ ತಲುಪುತ್ತಿಲ್ಲ ಅನ್ನೋದಂತೂ ನಿಜ.

ಲೂಸ್ ಟಾಕ್ ▸▸ ರಶ್ಮಿಕಾ ಮಂದಣ್ಣ

- **ಎನ್ರೀ, ಕೊಡವರ ಊರಿಗೆ ನಾನೊಬ್ಳೇ ಪದ್ಮಾವತಿ ಅಂತ ಹೇಳಿ ವಿವಾದ ಮೈಮೇಲೆ ಎಳೆದುಕೊಂಡ್ರಲ್ಲಾ?**

– ರೀ, ನಾನು ಊರಿನ ಬಗ್ಗೆ ಮಾತಾಡೇ ಇಲ್ಲ, ನಾನು ಮಾತಾಡಿದ್ದು ಕೇರಿ ಬಗ್ಗೆ, ಮಡಿಕೇರಿ ಬಗ್ಗೆ

- **ಅಯ್ಯೋ, ಅದೇ ಕಣ್ರೀ.. ನಮ್ ಕೇರಿಯಿಂದ ಸಿನಿಮಾಗೆ ಬಂದಿದ್ದು ನಾನೇ ಫಸ್ಟ್ ಅಂದು ಮುಖ ಕೆಡಿಸಿಕೊಂಡ್ರಲ್ಲ ಬೇಕಿತ್ತಾ?**

– ಹಂಗಾ, ಇರ್ಲಿ, ಈ ಕೊಡವ ಅನ್ನೋ ವಿವಾದಗಳೆಲ್ಲ ನನಗೆ ಯಾವ ಲೆಕ್ಕ, ಸುಲಭವಾಗಿ ಕೊಡವಿಕೊಂಡು ಮೇಲೆದ್ದು ಬರ್ತೀನಿ ಬಿಡಿ.

- **ಸರಿ, ಈಗ್ಲಾದ್ರೂ ನಿಮ್ಮ ಕೇರಿಯಿಂದ, ಐ ಮೀನ್ ಮಡಿಕೇರಿಯಿಂದ ಯಾರ್‍ಯಾರು ಚಿತ್ರರಂಗಕ್ಕೆ ಬಂದಿದ್ದಾರೆ ಅಂತ ಗೊತ್ತಾಯ್ತಾ?**

– ಹೋಗ್ರೀ ನಾನ್ ಅದಕ್ಕೆಲ್ಲಾ ಕೇರ್ ಮಾಡಲ್ಲ. ಚಿತ್ರರಂಗಕ್ಕೆ ಬರೋದು ಮುಖ್ಯ ಅಲ್ಲ, ನನ್ ಥರ ಪ್ಯಾನ್ ಇಂಡಿಯಾ ಸ್ಟಾರ್ ಆಗೋದು ಮುಖ್ಯ

- **ಓ ಸಮಾಧಾನ, ನಿಮ್ ಥರ ಪ್ಯಾನ್ ಇಂಡಿಯಾ 'ಸ್ಟಾರ್' ಆದೋರೆಲ್ಲಾ ಪಾನ್ ಇಂಡಿಯಾ ಸ್ಟಾರ್‌ಗಳ ಥರ ವಿಮಲ್, ಸ್ಟಾರ್ ಮಾರ್ತಾ ಇದ್ದಾರೆ ಗೊತ್ತಾ?**

– ಮಾರ್ಲಿ ಬಿಡಿ. ನಂಗೆ ಅವಕಾಶ ಸಿಕ್ರೆ ನಾನೂ ಮಾರ್ತೀನಿ. 'ನಾರಿ ಮುನಿದರೆ ಮಾರಿ' ಗೊತ್ತಲ್ಲ

- **ಮಾರಿದ್ರೂ ಮಾರ್ತೀರಾ ಬಿಡಿ. ಆದ್ರೆ ಆಗಾಗ ನೀವು ಕನ್ನಡತಿ ಅನ್ನೋದನ್ನ ಮರೀತೀರಲ್ಲ ಯಾಕೆ?**

– ಏನ್ ಮಾಡೋದು, ನಾನು ಒಂಥರಾ ಸೇಂಟ್ ಜೋಸೆಫ್ ಹುಡುಗಿ ಇದ್ದಂಗೆ, ಜತೆಗೆ ಮೊದಲನೇ ಸಿನಿಮಾದಲ್ಲಿ ಸಾನ್ವಿ ಜೋಸೆಫ್ ಅಂತ ಬೇರೆ ಹೆಸರಿಟ್ಟುಬಿಟ್ಟಿದ್ರು. ಅದಕ್ಕೇ ಈಗ 'ಕನ್ನಡ ರಕ್ಷತಿ ರಕ್ಷಿತಃ' ಅನ್ನೋದು ಮರೆತುಹೋಗಿದೆ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಟ್ರೈನಲ್ಲಿ ಟಿಸಿ ಆಗಿದ್ದ. ಅವತ್ತು ಟ್ರೈನ್ ಫುಲ್ ರಷ್ ಇತ್ತು. ಟ್ರೈನ್ ತುಂಬಾ ಗಿಜಿಗುಡುವಷ್ಟು ಜನ. ಹೇಗೋ ಟ್ರೈನ್ ಒಳಗೆ ಹತ್ತಿ ಬಂದು ತನ್ನ ಸೀಟಿನಲ್ಲಿ ಕೂರುವಷ್ಟರಲ್ಲಿ ಖೇಮು ಫುಲ್ ಸುಸ್ತು. ಖೇಮು ಪಕ್ಕದಲ್ಲಿ ಒಬ್ಬ ಸರ್ದಾರ್ಜಿ ಕೂತಿದ್ದ. ಟಿಸಿ ತನ್ನ ಪಕ್ಕದಲ್ಲೇ ಬಂದು ಕೂತಿದ್ದನ್ನು ನೋಡಿದ ಸರ್ದಾರ್ಜಿ ಖುಷಿಯಾಗಿ, ಸದ್ಯ ಅಂದುಕೊಂಡು, ''ಸರ್, ನಾನು ಜಲಂಧರ್‌ನಲ್ಲಿ ಇಳಿಯಬೇಕು, ಈಗ ನಿದ್ದೆ ಬರ್ತಿದೆ. ನಾನು ಮಲಗಿರ್ತೀನಿ. ಜಲಂಧರ್ ಬಂದ ಕೂಡ್ಲೇ ಎಬ್ಬಿಸ್ತೀರಾ?'' ಅಂತ ಕೇಳಿದ. ಅದಕ್ಕೆ ಖೇಮು, ''ಆಯ್ತು ಬಿಡಿ, ಅದಕ್ಕೇನು ಎಬ್ಬಿಸ್ತೀನಿ'' ಅಂದ. ಅಲ್ಲಿಗೇ ಸುಮ್ಮನಾಗದ ಸರ್ದಾರ್ಜಿ, ''ಸರ್, ಇನ್ನೊಂದು ಮಾತು, ನಾನು ಪೂರ್ತಿ ನಿದ್ದೆಯಲ್ಲಿದ್ದಾಗ ಯಾರಾದ್ರೂ ಎಚ್ಚರಿಸಿದ್ರೆ ಸ್ವಲ್ಪ ಕೋಪ ಬರುತ್ತೆ, ನಾನು ಏನೇ ಅಂದ್ರೂ, ಬೇಜಾರು ಮಾಡ್ಕೋಬೇಡಿ, ನಾನು ಇಳಿಯಲ್ಲ ಅಂತ ಏನೇ ಹಠ ಮಾಡಿದ್ರೂ, ಬಲವಂತವಾಗಿಯಾದ್ರೂ ನನ್ನನ್ನ ಜಲಂಧರ್‌ನಲ್ಲಿ ಇಳಿಸಿ'' ಅಂದ. ಸರಿ, ಟ್ರೈನ್ ಹೊರಟಿತು. ಖೇಮು ತನ್ನ ಕೆಲಸದಲ್ಲಿ ಬ್ಯುಸಿ ಆದ. ಎಲ್ಲರೂ ನಿದ್ದೆ ಹೋದರು. ಸರ್ದಾರ್ಜಿ ಎದ್ದು ನೋಡುವಾಗ ಬೆಳಗಾಗಿತ್ತು. ಇನ್ನೂ ಜಲಂಧರ್ ಬಂದಿಲ್ವಾ ಅಂತ ಹೊರಗೆ ನೋಡಿದಾಗ, ಅದು ಆಗ್ಲೇ ಹಿಂದೆ ಹೋಗಿದೆ ಅಂತ ಗೊತ್ತಾಗಿ ಅವನಿಗೆ ಬೇಜಾರು, ಸಿಟ್ಟು ಎರಡೂ ಬಂತು. ಟಿಸಿ ಖೇಮು ಹತ್ರ ಸೀದಾ ಬಂದವನೇ, ''ನಾನು ಜಲಂಧರ್‌ನಲ್ಲಿ ಇಳಿಸಿ ಅಂತ ಹೇಳಿರಲಿಲ್ವಾ ನಿಮಗೆ, ಆಗಲ್ಲ ಅಂದ್ರೆ, ಮೊದ್ಲೇ ಹೇಳಬೇಕಿತ್ತು. ನಾನು ಬೇರೆಯವರಿಗೆ ಹೇಳ್ತಾ ಇದ್ದೆ. ಹಿಂಗಾ ನೀವು ಕೆಲ್ಸ ಮಾಡೋದು?'' ಅಂತ ಕೆಟ್ಟ ಕೆಟ್ಟ ಪದಗಳನ್ನೆಲ್ಲಾ ಪ್ರಯೋಗಿಸಿ ಹಿಗ್ಗಾಮುಗ್ಗಾ ಝಾಡಿಸತೊಡಗಿದ. ಅವನನ್ನು ನೋಡಿ ಖೇಮು ಗರಬಡಿದವನಂತೆ ನಿಂತಿದ್ದನೇ ಹೊರತು ಒಂದು ಮಾತೂ ಆಡಲಿಲ್ಲ. ಪಕ್ಕದಲ್ಲಿದ್ದ ಜನ ಖೇಮುವನ್ನು ನೋಡಿ ''ಅಲ್ರೀ, ಅವನು ನಿಮಗೆ ಅಷ್ಟೊಂದು ಬಯ್ತಾ ಇದ್ದಾನೆ. ಸ್ವಲ್ಪ ಸಮಾಧಾನ ಮಾಡೋದ್ ಬಿಟ್ಟು ಏನ್ ಯೋಚ್ನೆ ಮಾಡ್ತಾ ಇದ್ದೀರ?'' ಅಂತ ಕೇಳಿದ್ರು. ಅದಕ್ಕೆ ಖೇಮು ಮೆಲ್ಲಗೆ ಹೇಳಿದ ''ಇವಂದು ಹೋಗ್ಲಿ ಬಿಡಿ, ಆವಾಗ್ಲೇ ನಾನು ಜಲಂಧರ್‌ನಲ್ಲಿ ಒಬ್ಬ ಸರ್ದಾರ್ಜಿಯನ್ನ, 'ಬೇಡ ನಾನ್ ಇಳಿಯಲ್ಲ, ಇಳಿಸಬೇಡಿ' ಅಂತ ಆತ ಎಷ್ಟು ಬೇಡಿಕೊಂಡ್ರೂ ಕೇಳದೆ, ಒದ್ದು ಒದ್ದು ಟ್ರೈನಿಂದ ಕೆಳಗೆ ಇಳಿಸಿದ್ದೆ. ಆಕ್ಚುಯಲಿ ನಾನು ಅವನ ಪರಿಸ್ಥಿತಿ ಬಗ್ಗೆ ಯೋಚನೆ ಮಾಡ್ತಾ ಇದ್ದೀನಿ''.

ಲೈನ್‌ಮ್ಯಾನ್

- **ಇಂದಿನ ಸರಕಾರಗಳಲ್ಲಿ ಚೀಫ್ ಮಿನಿಸ್ಟರ್ ಆಗೋಕೆ ಬರೀ ಸಜ್ಜನ ಆಗಿದ್ರೆ ಆಗಲ್ಲ**

– ಅವ್, 'ಯಾವ್ ಜನ' ಅನ್ನೋದೂ ಮುಖ್ಯ ಆಗುತ್ತೆ.

- **ನಗರದ ಹೊರವಲಯದಲ್ಲಿ ಸೈಟ್ ತಗೊಂಡೋರು ಆಗಾಗ ಹೋಗಿ ನೋಡ್ಕಂಡ್ ಬರೋದು**

– ಸೈಟ್ ಸೀಯಿಂಗ್

- **ಮಕ್ಕಳ ಭಾಷೆ**

ಖೇಮು: ಕೋಳಿ ಕೊಯ್ದರೇನೋ?
ಮರಿಖೇಮು: ಇನ್ನೂ ಇಲ್ಲಾ ಪಪ್ಪಾ, ಬರೀ ಡ್ರೆಸ್ ಬಿಚ್ಚವ್ರೇ

- **ಕೆಲವು ನಾಯಿಗಳನ್ನ ಓನರ್‌ಗಳು ಯಾವ್ ರೇಂಜ್‌ಗೆ ಸಾಕಿರ್ತಾರೆ ಅಂದ್ರೆ, ಅವಕ್ಕೆ ತಾನು ನಾಯಿ ಅನ್ನೋದೇ ಮರೆತುಹೋಗಿರುತ್ತೆ. ಮೊನ್ನೆ ಹಿಂಗೇ ಫ್ರೆಂಡ್ ಜತೆ ಕಾರಲ್ಲಿ ಹೋಗ್ತಾ ಇದ್ದೆ. ಜತೆಗೆ ಅವನ ನಾಯಿನೂ ಇತ್ತು. ಬೀದಿನಾಯಿಗಳು ಅದನ್ನ ನೋಡಿ ಬೊಗಳ್ತಾ ಇದ್ರೆ, ಇದು ಮಾತ್ರ ಗಂಭೀರವಾಗಿ ಕೂತಿತ್ತು. 'ಯಾಕಪ್ಪಾ, ಅವು ನಿನ್ನ ನೋಡಿ ಬೊಗಳ್ತಾ ಇವೆ, ನೀನ್ ಬೊಗಳಲ್ವಾ?' ಅಂದಿದ್ದಕ್ಕೆ ಏನ್ ಹೇಳ್ತು ಗೊತ್ತಾ?**

– ''ಅಯ್ಯೋ, ಹೋಗ್ಲಿ ಬಿಡಿ, ನಾಯಿ ಬೊಗಳಿದ್ರೆ, ದೇವಲೋಕ ಹಾಳಾಗುತ್ತಾ?''

- **ಆಧುನಿಕ ಹೋಲಿಕೆ**

ಬುದ್ಧಿ ಇಲ್ಲದೇ ಇರೋ ಸೌಂದರ್ಯ, ರೆಸಲ್ಯೂಶನ್ ಇಲ್ದೇ ಇರೋ ಫೋಟೋ, ವಿಡಿಯೋ ಎರಡೂ ಒಂದೇ.. Uninteresting

- **ಅನುಭವದ ಮಾತು**

ಅಕ್ಕಸಾಲಿಗ: ಹೊಳೆಯುವುದೆಲ್ಲಾ ಚಿನ್ನವಲ್ಲ
ಬರಹಗಾರ: ಹೊಳೆಯುವುದೆಲ್ಲಾ ಐಡಿಯಾ ಅಲ್ಲ

- **ಬೋರಿಂಗ್ ವಿಷ್ಯ**

''ನಮ್ ಹೊಲದಲ್ಲಿ 3 ಸಲ ಬೋರ್ ಹಾಕಿಸಿದೆ, ಆದ್ರೂ ನೀರ್ ಬೀಳಲಿಲ್ಲ, ಇನ್ನೊಂದ್ಸಲ ಹಾಕಿಸ್ಬೇಕು''.
''3 ಸಲ ಹಾಕ್ಸಿನೂ ಬೋರ್ ಆಗಿಲ್ವಾ''.

- **ಪ್ರಶ್ನೋತ್ತರ**

''ನಿಮ್ಮತ್ರ ಕಾರಿಲ್ವಾ ಸರ್?''
''ಇಲ್ಲಪ್ಪ, ಲೈಫಲ್ಲಿ ಇನ್ನೂ ಸೈಕಲ್ ಹೊಡೀತಾ ಇದೀನಿ''.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 180

ಸಮಾಚಾರ ಸಣ್ಣದಲ್ಲ

ಬೌದ್ಧ ಮಠ ಮೇಲೆ ದಾಳಿ: 23 ಸಾವು

ಬ್ಯಾಂಕಾಕ್: ಮ್ಯಾನ್ಮಾರ್ ಸಾಗೈಂಗ್ ಪಟ್ಟಣದ ಲಿನ್ ಟಾ ಲು ಗ್ರಾಮದಲ್ಲಿನ ಬೌದ್ಧ ಮಠದ ಮೇಲೆ ಶುಕ್ರವಾರ ನಸುಕಿನ 1 ಗಂಟೆಗೆ ಮ್ಯಾನ್ಮಾರ್ ಸೇನಾಪಡೆ ಗುಂಡಿನ ದಾಳಿ ನಡೆಸಿದೆ. ಪರಿಣಾಮ, ಮಠದಲ್ಲಿ ಆಶ್ರಯ ಪಡೆದಿದ್ದವರಲ್ಲಿ 4 ಮಕ್ಕಳು ಸೇರಿದಂತೆ ಒಟ್ಟು 23 ಜನರು ಸಾವನ್ನಪ್ಪಿದ್ದಾರೆ. 30 ಮಂದಿ ಗಾಯಗೊಂಡಿದ್ದು, ಅವರಲ್ಲಿ 10 ಜನರ ಸ್ಥಿತಿ ಗಂಭೀರವಾಗಿದೆ. ಇತ್ತೀಚೆಗೆ ಈ ಪ್ರದೇಶದಲ್ಲಿ ಸಂಘರ್ಷ ನಡೆಯುತ್ತಿದ್ದು, ಸಮೀಪದ ಹಳ್ಳಿಗಳ 150 ಜನರು ಮಠದಲ್ಲಿ ಆಶ್ರಯ ಪಡೆದಿದ್ದರು.

ಮಿಜೋರಾಂ: 112 ಕೋಟಿ ರು. ಡ್ರಗ್ಸ್ ವಶ

ಐಜ್ವಾಲ್: ಮಿಜೋರಾಂ ರಾಜ್ಯದ ಚಂಪೈ ಜಿಲ್ಲೆಯಲ್ಲಿ ಮ್ಯಾನ್ಮಾರ್ ಗಡಿಗೆ ಸಮೀಪದ ಪ್ರದೇಶದಲ್ಲಿ 112 ಕೋಟಿ ರು. ಮಾದಕದ್ರವ್ಯ ವಶವಾಗಿದೆ. ಅಸ್ಸಾಂ ರೈಫಲ್ಸ್‌ನ ಯೋಧರು ಜೋಖಾವ್ತಾರ್ ಗ್ರಾಮದಲ್ಲಿ ಗಸ್ತು ನಡೆಸಿದ್ದಾಗ ಇಬ್ಬರು ಭಾರೀ ಗಾತ್ರದ ಬ್ಯಾಗ್‌ಗಳನ್ನು ಹೊತ್ತೊಯ್ಯುತ್ತಿದ್ದರು. ಅನುಮಾನಗೊಂಡ ಯೋಧರು ಪರಿಶೀಲಿಸಿದಾಗ ಬ್ಯಾಗ್‌ಗಳಲ್ಲಿ ನಿಷೇಧಿತ ಮಾದಕ ದ್ರವ್ಯವಾದ ಮಿಥೇಲ್ ಡಯಾಕ್ಸಿ ಮೆಥಾಂಫೆಟಮೈನ್(ಎಂಡಿಎಂಎ) 3.33 ಲಕ್ಷ ಮಾತ್ರೆಗಳು ಪತ್ತೆಯಾಗಿವೆ. ಈ ಸಂದರ್ಭ ಆರೋಪಿಗಳಿಬ್ಬರೂ ಪಕ್ಕದಲ್ಲೇ ಹರಿಯುತ್ತಿದ್ದ ಟಿಯಾವು ನದಿಗೆ ಜಿಗಿದು ಈಜಿಕೊಂಡು ಹೋಗಿ ಪರಾರಿಯಾಗಿದ್ದಾರೆ ಎಂದು ಅಸ್ಸಾಂ ರೈಫಲ್ಸ್ ಯೋಧರು ತಿಳಿಸಿದ್ದಾರೆ.

ಟೆನ್ನಿಸ್‌ಪಟು ಹಂತಕ ನ್ಯಾಯಾಂಗ ವಶಕ್ಕೆ

ಚಂಡೀಗಢ: ರಾಜ್ಯ ಮಟ್ಟದ ಟೆನ್ನಿಸ್ ಆಟಗಾರ್ತಿಯಾಗಿದ್ದ ಪುತ್ರಿ ರಾಧಿಕಾಳನ್ನು(25) ಗುರುಗ್ರಾಮದ ಮನೆಯಲ್ಲಿ ಜು.10ರಂದು 5 ಬಾರಿ ಗುಂಡಿಕ್ಕಿ ಹತ್ಯೆ

ಮಾಡಿದ ತಂದೆ ದೀಪಕ್ ಯಾದವ್‌ನನ್ನು ಗುರುಗ್ರಾಮ ನ್ಯಾಯಾಲಯ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ವಜೀರಾ ಬಾದ್ ಮೂಲದ ದೀಪಕ್, ಇತ್ತೀಚೆಗೆ ಗ್ರಾಮಕ್ಕೆ ತೆರಳಿದ್ದಾಗ ಸಂಬಂಧಿಕರು 'ಮಗಳ ದುಡಿಮೆ ಹಣದಲ್ಲಿ ಬದು ಕುತ್ತಿದ್ದಾನೆ' ಎಂದು ಛೇಡಿಸಿದ್ದರು. ಇದರಿಂದಾಗಿ ದೀಪಕ್ 15 ದಿನಗಳಿಂದ ಖಿನ್ನತೆಗೆ ಒಳಗಾಗಿದ್ದ. ದೆಹಲಿಗೆ ಮರಳಿದಾಗ 'ಟೆನಿಸ್ ಅಕಾಡೆಮಿ ಮುಚ್ಚುವಂತೆ' ಮಗಳಿಗೆ ಒತ್ತಾಯಿಸಿದ್ದ. ಆದರೆ, ಮಗಳು ಒಪ್ಪಿರಲಿಲ್ಲ. ಇದರಿಂದ ಮಗಳ ಮೇಲೆ ಕೋಪಗೊಂಡ ದೀಪಕ್ ಮಗಳ ಜತೆ ಜಗಳವಾಡಿ ಗುಂಡು ಹಾರಿಸಿ ಕೊಲೆ ಮಾಡಿದ್ದಾನೆ' ಎಂದು ಪೊಲೀಸರು ಹೇಳಿದ್ದಾರೆ.

ಇತಿಹಾಸ ಪಠ್ಯಕ್ಕೆ ರಾಜಸ್ಥಾನ ನಿಷೇಧ

ಜೈಪುರ: ರಾಜಸ್ಥಾನದಲ್ಲಿ 12ನೇ ತರಗತಿಯ ಇತಿಹಾಸ ಪಠ್ಯಪುಸ್ತಕ 'ಆಜಾದಿ ಕೆ ಬಾದ್ ಕಾ ಸ್ವರ್ಣಿಮ್ ಭಾರತ್'(ಸ್ವಾತಂತ್ರ್ಯ ನಂತರದ ಸುವರ್ಣ ಭಾರತ) ನಿಷೇಧಕ್ಕೊಳಗಾಗಿದೆ. ಆಧುನಿಕ ಭಾರತದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಕೊಡುಗೆಗಳ ಕುರಿತು ಪ್ರಕಟಿಸುವುದನ್ನು ಪಠ್ಯದಲ್ಲಿ ನಿರ್ಲಕ್ಷಿಸಲಾಗಿದೆ. ಬದಲಾಗಿ ಕಾಂಗ್ರೆಸ್ ನಾಯಕರನ್ನು ವಿಪರೀತ ವೈಭವೀಕರಿಸಲಾಗಿದೆ ಎಂದು ಅಸಮಧಾನಗೊಂಡಿರುವ ಶಿಕ್ಷಣ ಸಚಿವ ಮದನ್ ದಿಲಾವರ್ ಪಠ್ಯಪುಸಕವನ್ನು ನಿಷೇಧಿಸಿ ಆದೇಶ ಹೊರಡಿಸಿದ್ದಾರೆ. ಪುಸ್ತಕದಲ್ಲಿ ಪ್ರಧಾನಿ ಮೋದಿ ಅವರ ಕೊಡುಗೆಗಳ ಬಗ್ಗೆ ಸಣ್ಣ ಉಲ್ಲೇಖವಷ್ಟೇ ಇದೆ. ದೇಶಕ್ಕಾಗಿ ಎಲ್ಲವನ್ನೂ ಕಾಂಗ್ರೆಸ್ ಮಾಡಿದೆ ಎಂಬಂತೆ ಬಿಂಬಿಸಲಾಗಿದೆ ಎಂದು ಕಿಡಿಕಾರಿದ್ದಾರೆ.

ಕುನೋ ವನದಲ್ಲಿನ ಚೀತಾ ನಭಾ ಸಾವು

ಭೋಪಾಲ್: ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನವನದಲ್ಲಿರುವ ನಮೀಬಿಯಾ ದೇಶದಿಂದ ಆಮದಾಗಿದ್ದ 8 ವರ್ಷದ ಹೆಣ್ಣು ಚಿರತೆ ನಭಾ ಶನಿವಾರ ಸಾವನ್ನಪ್ಪಿದೆ. ವಾರದ ಹಿಂದೆ ಬೋಮಾ ಅರಣ್ಯ ಭಾಗದಲ್ಲಿ ಆಹಾರಕ್ಕಾಗಿ ಬೇಟೆಯಾಡುವಾಗ ನಭಾ ಗಾಯಗೊಂಡಿತ್ತು. ಚಿಕಿತ್ಸೆ ಫಲಕಾರಿಯಾಗದೆ ಶನಿವಾರ ಸಾವನ್ನಪ್ಪಿತು. ನಭಾ ದೇಹದ ಎಡಭಾಗದಲ್ಲಿ ಮೂಳೆ ಮುರಿದಿತ್ತು. ಅಂತರಿಕವಾಗಿಯೂ ಗಾಯಗಳಾಗಿದ್ದವು. ಪರಿಣಾಮ ಉದ್ಯಾನವನದಲ್ಲಿ ಈಗ ಆಫ್ರಿಕನ್ ಚೀತಾಗಳ ಸಂಖ್ಯೆ 26ಕ್ಕೆ ಇಳಿದಿದೆ. ಆಮದಾಗಿದ್ದ ಚೀತಾಗಳಲ್ಲಿ 6 ಹೆಣ್ಣು, 3 ಗಂಡು ಉಳಿದಿದ್ದರೆ, ಭಾರತದಲ್ಲಿ ಜನಿಸಿದ 17 ಮರಿಗಳು ಇದರಲ್ಲಿ ಸೇರಿವೆ.

{ ನರೇಂದ್ರ ಮೋದಿ } ಪ್ರಧಾನಿ

ಎಲ್ಲಾ ಕ್ಷೇತ್ರಗಳಲ್ಲೂ ಆತ್ಮನಿರ್ಭರ ಭಾರತ ಪರಿಕಲ್ಪನೆ ಕಾಣಬರುತ್ತಿದ್ದು, ಬಹಳ ವ್ಯಾಪಕವಾಗುತ್ತಿದೆ. ಮುಖ್ಯವಾಗಿ ಎಲೆಕ್ಟ್ರಾನಿಕ್ಸ್ ಮತ್ತು ಸ್ಮಾರ್ಟ್‌ಫೋನ್‌ಗಳ ತಯಾರಿಕೆ ಹಾಗೂ ರಕ್ಷಣಾ ಸಲಕರಣೆಗಳ ವಿಭಾಗದಲ್ಲಿನ ತಯಾರಿಕೆ ವೇಗ ಪಡೆದಿದೆ. ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿಗತಿ ಜೋರಾ ಗಿದೆ. ಹಾಗಾಗಿ ಸದ್ಯದಲ್ಲೇ ಭಾರತ ವಿಶ್ವದ 3ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಲಿದೆ.

ವಿಮಾನ ಟೇಕಾಫ್ ಆದ ಕೆಲ ಸೆಕೆಂಡ್‌ಗಳಲ್ಲೇ 2 ಎಂಜಿನ್‌ಗೂ ಇಂಧನ ಸ್ಥಗಿತ | ಎಎಐಬಿ 15 ಪುಟಗಳ ಪ್ರಾಥಮಿಕ ತನಿಖಾ ವರದಿಯಲ್ಲಿ ಲೋಪ ಬಹಿರಂಗ | ಇದು ಪ್ರಾಥಮಿಕ ವರದಿ ಅಷ್ಟೇ, ಈಗಲೇ ನಿಲುವಿಗೆ ಬರುವುದು ಸಲ್ಲ: ಸಚಿವ ನಾಯ್ಡು

ಎಐ-171 ಹಠಾತ್ ಪತನಕ್ಕೆ ಇಂಧನ ಪೂರೈಕೆ ಸ್ಥಗಿತ ಕಾರಣ

ಅಹಮದಾಬಾದ್: ಭಾರತದ ಏರ್ ಇಂಡಿಯ ವಿಮಾನಯಾನ ಸಂಸ್ಥೆಯ 'ಎಐ-171 ಬೋಯಿಂಗ್ 787-8 ಡ್ರೀಮ್‌ಲೈನರ್' ವಿಮಾನ ಜೂ.12ರಂದು ಗುಜರಾತ್‌ನ ಅಹಮದಾಬಾದ್‌ನಲ್ಲಿನ ಸರದಾರ್ ವಲ್ಲಭಬಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಲಂಡನ್ ಪ್ರಯಾಣ ಆರಂಭಿಸಿದ ಕೆಲವೇ ಸೆಕೆಂಡ್‌ಗಳಲ್ಲಿ ವೈದ್ಯ ಕಾಲೇಜು ಹಾಸ್ಟೆಲ್ ಕಟ್ಟಡದ ಮೇಲೆ ಪತನಗೊಂಡು 261 ಜೀವಬಲಿ ಪಡೆದಿತ್ತು. ಒಬ್ಬ ಪ್ರಯಾಣಿಕ ಮಾತ್ರ ಸಣ್ಣ ಗಾಯಗಳೊಂದಿಗೆ ಪಾರಾಗಿದ್ದಾರೆ.

ಎಐ-171 ವಿಮಾನದ ಎರಡೂ ಎಂಜಿನ್‌ಗಳಿಗೆ ಇದ್ದಕ್ಕಿದ್ದಂತೆ ಇಂಧನ ಪೂರೈಕೆ ಸ್ಥಗಿತಗೊಂಡಿದ್ದೇ ವಿಮಾನ ಪತನಕ್ಕೆ ಕಾರಣ ಎಂದು ವಿಮಾನ ಅಪಘಾತ ತನಿಖಾ ಬ್ಯೂರೊ (ಎಎಐಬಿ)ದ 15 ಪುಟಗಳ ಪ್ರಾಥಮಿಕ ವರದಿ ಬೊಟ್ಟು ಮಾಡಿದೆ. ತನಿಖೆಯಲ್ಲಿನ ಮಹತ್ವದ ಈ ಅಂಶವನ್ನು ದೃಢೀಕರಿಸಲು ವಿಮಾನ ಅಪಘಾತ ತನಿಖಾ ಬ್ಯೂರೊ ತನ್ನ ವರದಿಯಲ್ಲಿ ವಿಮಾನದ ಪೈಲಟ್‌ಗಳಿಬ್ಬರ ನಡುವಿನ 'ಕಾಕ್‌ಪಿಟ್ ಧ್ವನಿ ರೆಕಾರ್ಡಿಂಗ್' ದತ್ತಾಂಶವನ್ನು ಉಲ್ಲೇಖಿಸಿದೆ.

ವಿಮಾನ ರನ್‌ವೇಯಿಂದ ಗಾಳಿಗೆ ಜಿಗಿದ ಕೆಲ ಸೆಕೆಂಡ್‌ಗಳಲ್ಲೇ ವಿಮಾನದ ಎರಡೂ ಎಂಜಿನ್ ಸ್ಥಗಿತಗೊಂಡವು. ಅದಕ್ಕೆ ದಿಢೀರ್ ಎಂಬಂತೆ ಇಂಧನ ಪೂರೈಕೆ ಸ್ಥಗಿತಗೊಂಡಿದ್ದೇ ಕಾರಣ. ಪೈಲಟ್‌ಗಳು 'ಮೇ ಡೇ ಮೇ ಡೇ' ಸಂದೇಶವನ್ನು ವಿಮಾನ ನಿಯಂತ್ರಣ ಕೊಠಡಿಗೆ ರವಾನಿಸುವ ಕೆಲವೇ ಸೆಕೆಂಡ್‌ಗಳಿಗೂ ಮುಂಚಿನ ಕಾಕ್‌ಪಿಟ್ ಧ್ವನಿಮುದ್ರಿಕೆಯಲ್ಲಿ ಪೈಲಟ್‌ಗಳು 'ಇಂಧನ ಸ್ಥಗಿತ' ಕುರಿತು ಮಾತನಾಡಿರುವುದು ಕೇಳಿಬರುತ್ತದೆ. ಎಐ-171 ಬೋಯಿಂಗ್ ವಿಮಾನ 8 ಡಿಗ್ರಿ ಕೋನದಲ್ಲಿ ಮೂತಿಯನ್ನು ಗಾಳಿಯಲ್ಲಿ ಮೇಲಕ್ಕೆತ್ತಿದ ಸ್ಥಿತಿಯಲ್ಲಿದ್ದಾಗಲೇ ಎರಡೂ ಎಂಜಿನ್‌ಗಳು ಸ್ಥಗಿತಗೊಂಡಿದ್ದವು. ಇದರಿಂದಾಗಿಯೇ ವಿಮಾನಕ್ಕೆ ನಿಗದಿತ ವೇಗದಲ್ಲಿ ಮೇಲೇರಲು ಸಾಧ್ಯವಾಗಲಿಲ್ಲ ಎಂದು ವರದಿ ತಿಳಿಸಿದೆ.

ವರದಿಯ ಮುಖ್ಯಾಂಶಗಳು

ಎಐ-171 ಬೋಯಿಂಗ್ 787 ವಿಮಾನದ ಪೈಲಟ್‌ಗಳಿಬ್ಬರೂ ಬಹಳ ಅನುಭವಿಗಳೇ ಆಗಿದ್ದರು. ಮುಖ್ಯ ಪೈಲಟ್ ಆಗಿದ್ದವರು 56 ವರ್ಷದ ಕ್ಯಾಪ್ಟನ್ ಸುಮೀತ್ ಸಭರ್ವಾಲ್. ಅವರು 15 ಸಾವಿರ ಗಂಟೆಗಳಿಗೂ ಹೆಚ್ಚು ಅವಧಿಯ ಹಾರಾಟದ ಅನುಭವ ಹೊಂದಿರುವ ಭಾರೀ ಅನುಭವಿ ಪೈಲಟ್. ಸಹ-ಪೈಲಟ್ 32 ವರ್ಷದ ಕ್ಲೈವ್ ಕುಂದರ್ ಅವರಿಗೂ 3,403 ಗಂಟೆಗಳ ಕಾಲ ವಿಮಾನ ಹಾರಾಟ ನಡೆಸಿದ ಅನುಭವವಿದೆ. ಇಬ್ಬರೂ ಪೈಲಟ್‌ಗಳು ಮಾನ್ಯತೆ ಹೊಂದಿದವರಾಗಿದ್ದಾರೆ. ವಿಮಾನ ಚಾಲನೆ ವೇಳೆ ಇಬ್ಬರೂ ಆರೋಗ್ಯದಿಂದಿದ್ದರು. ಅಗತ್ಯ ಪ್ರಮಾಣದ ವಿಶ್ರಾಂತಿ ಪಡೆದಿದ್ದರು.

ಎಂಜಿನ್ ಸ್ಥಗಿತ: ಟೇಕಾಫ್ ಬಳಿಕ ಕೆಲವೇ ಸೆಕೆಂಡ್‌ಗಳಲ್ಲಿ ಎರಡೂ ಎಂಜಿನ್ ಸ್ಥಗಿತ. ಇಂಧನ ಕಟ್ ಆಫ್ ಸ್ವಿಚ್‌ಗಳು ಒಂದೇ ಸೆಕೆಂಡ್‌ನಲ್ಲಿ 'ರನ್'ನಿಂದ 'ಕಟ್ ಆಫ್'ಗೆ ಬದಲಾಗಿವೆ. ಪರಿಣಾಮ ಥಟ್ಟನೆ ಇಂಧನ ಪೂರೈಕೆ ನಿಂತು ಹೋಗಿದೆ. ಆದರೆ, ಇಂಧನ ಗುಣಮಟ್ಟದಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ. ವಿಮಾನದಲ್ಲಿ 54,200 ಕೆ.ಜಿ. ಇಂಧನ ಇತ್ತು, ವಿಮಾನ ಒಟ್ಟು ತೂಕ 2,13,401 ಕೆ.ಜಿ.ಗಳಷ್ಟಿದ್ದು, ಅದು 2,18,183 ಕೆ.ಜಿ. ಗರಿಷ್ಠ ಮಿತಿಯ ನಿಯಮ ಪ್ರಕಾರವೇ ಇದ್ದಿತು. ವಿಮಾನದೊಳಗೆ ಅಪಾಯಕಾರಿ ವಸ್ತುಗಳೂ ಇರಲಿಲ್ಲ ಎಂದು ವರದಿ ತಿಳಿಸಿದೆ.

ವಿಮಾನ ಹಾರಾಟ: ವಿಮಾನ 32 ಸೆಕೆಂಡ್‌ಗಳ ಕಾಲವಷ್ಟೇ ಹಾರಾಟ ನಡೆಸಿದೆ. ರನ್‌ವೇಯಿಂದ 0.9 ನಾಟಿಕಲ್ ಮೈಲ್ ದೂರದಲ್ಲಿದ್ದ ಹಾಸ್ಟೆಲ್ ಕಟ್ಟಡ ಮೇಲೆ ಪತನಗೊಂಡಿದೆ.



ವಿಮಾನದ ಕಾಕ್‌ಪಿಟ್‌ನಲ್ಲಿನ ಇಂಧನ ನಿರ್ವಹಣೆ ಸ್ವಿಚ್‌ಗಳು.

ಆ 3 ಸೆಕೆಂಡ್‌ಗಳು!

ಟೇಕ್ ಆಫ್ ಆದ 3 ಸೆಕೆಂಡ್‌ಗಳ ನಂತರ, ಎರಡೂ ಇಂಜಿನ್‌ಗಳ ಫ್ಯೂಯಲ್ ಕಂಟ್ರೋಲ್ ಸ್ವಿಚ್‌ಗಳು ರನ್ ಇಂಡಿಕೇಷನ್‌ನಿಂದ ಕಟ್‌ಆಫ್ ಸಂಕೇತಕ್ಕೆ ಬದಲಾಗಿದ್ದವು. ಇದರಿಂದಾಗಿ ಎರಡೂ ಎಂಜಿನ್‌ಗಳಿಗೆ ಇಂಧನ ಪೂರೈಕೆ ಆಗುವುದು ಥಟ್ಟನೆ ನಿಂತು ಹೋಯಿತು. ಈ ಸಂದರ್ಭದಲ್ಲೇ ಒಬ್ಬ ಪೈಲಟ್, 'ನೀವೇಕೆ ಕಟ್ ಆಫ್ ಮಾಡಿದಿರಿ?' ಎಂದು ಪ್ರಶ್ನೆ ಮಾಡಿರುವುದು, ಅದಕ್ಕೆ ಇನ್ನೊಬ್ಬ ಪೈಲಟ್ 'ಇಲ್ಲಾ, ನಾನು ಹಾಗೆ ಮಾಡಿಲ್ಲ' ಎಂದು ಉತ್ತರಿಸಿರುವುದು ಧ್ವನಿಮುದ್ರಿಕೆಯಲ್ಲಿ ದಾಖಲಾಗಿದೆ. ಹಾಗಾಗಿಯೇ ಇದರಲ್ಲಿ ಪೈಲಟ್‌ಗಳ ದೋಷವಿಲ್ಲ. ಬದಲಾಗಿ ತಾಂತ್ರಿಕ ದೋಷ ಅಥವಾ ಆಕಸ್ಮಿಕವಾಗಿ ಸ್ವಿಚ್ ಆಫ್ ಆಗಿರುವ ಸಾಧ್ಯತೆ ಇದೆ ಎಂದು ಶಂಕಿಸಲಾಗಿದೆ. ಫ್ಲೈಟ್ ಡೇಟಾ ರೆಕಾರ್ಡರ್‌ನಿಂದ ಲಭ್ಯವಾಗಿರುವ ಮಾಹಿತಿ ಪ್ರಕಾರ, ಆ ಬಳಿಕ ಇಂಜಿನ್-1 ಸ್ವಯಂಚಾಲಿತವಾಗಿ ಮರುಪ್ರಾರಂಭಿಸಲು ಪ್ರಯತ್ನಿಸಿದಾಗ ಅದರಲ್ಲಿ ಯಶಸ್ಸು ಸಿಕ್ಕಿತು. ಆದರೆ, ಇಂಜಿನ್ 2 ಮರುಪ್ರಾರಂಭಗೊಳ್ಳಲಿಲ್ಲ. ಇದರಿಂದಾಗಿ 'ರ್‍ಯಾಮ್ ಏರ್ ಟರ್ಬೈನ್'(ಆರ್‌ಎಟಿ-ರ್‍ಯಾಟ್) ಅನ್ನು ತುರ್ತು ವಿದ್ಯುತ್ ಮೂಲವಾಗಿ ಬಳಸಲೆತ್ನಿಸಲಾಗಿದೆ. ಈ ಪ್ರಕ್ರಿಯೆ ವಿಮಾನ ಟೇಕಾಫ್ ಆದ ತಕ್ಷಣವೇ ಆರಂಭಗೊಳಿಸಲಾಗಿದೆ. ಇದರಿಂದಾಗಿಯೇ ಅತ್ಯಗತ್ಯವಾಗಿದ್ದ ಸಿಸ್ಟಮ್‌ಗಳಿಗೆ ವಿದ್ಯುತ್ ಪೂರೈಕೆ ಪೂರ್ಣ ಸ್ಥಗಿತಗೊಂಡಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮೇ ಡೇ: ಇದೆಲದರ ತರುವಾಯ ವಿಮಾನ ವೈದ್ಯಕೀಯ ಹಾಸ್ಟೆಲ್ ಕಟ್ಟಡದ ಮೇಲೆ ಪತನಗೊಳ್ಳುವುದಕ್ಕೂ ಕೆಲವೇ ಸೆಕೆಂಡ್ ಮೊದಲು(08:09:05) ಪೈಲಟ್‌ಗಳು ಯುಟಿಸಿಗೆ ತುರ್ತು ಕರೆ ಮಾಡಿ 'ಮೇ ಡೇ ಮೇ ಡೇ' ಸಂದೇಶ ನೀಡಿದ್ದಾರೆ.

ಎಐ 171 ಬೋಯಿಂಗ್ ವಿಮಾನ ಟೇಕಾಫ್ ಆದ ಬೆನ್ನಲ್ಲೆ 'ಆರ್‌ಎಟಿ' ಚಾಲನೆಗೊಳಿಸಿರುವುದರ ಚಿತ್ರಣ.

ತನಿಖೆ ಪ್ರಗತಿಯಲ್ಲಿದೆ: ಎಎಐಬಿ

- ಡ್ರೋನ್ ಛಾಯಾಗ್ರಹಣ/ವಿಡಿಯೋಗ್ರಫಿ ಸೇರಿದಂತೆ ಅವಶೇಷ ಸ್ಥಳದ ಚಟುವಟಿಕೆಗಳು ಪೂರ್ಣಗೊಂಡಿವೆ. ವಿಮಾನದ ಅವಶೇಷಗಳನ್ನು ವಿಮಾನ ನಿಲ್ದಾಣದ ಸಮೀಪದ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ಹೆಚ್ಚಿನ ಪರೀಕ್ಷೆ ಅಗತ್ಯವಾಗಿರುವ ಸ್ಥಳದಿಂದ ಎರಡೂ ಎಂಜಿನ್‌ಗಳನ್ನು ಹೊರತೆಗೆದು ವಿಮಾನ ನಿಲ್ದಾಣದ ಹ್ಯಾಂಗರ್‌ನಲ್ಲಿ ಪ್ರತ್ಯೇಕವಾಗಿ ಇರಿಸಲಾಗಿದೆ.
- ವಿಮಾನಕ್ಕೆ ಇಂಧನ ತುಂಬಿಸಲು ಬಳಸಲಾದ ಬೌಸರ್‌ಗಳು ಮತ್ತು ಟ್ಯಾಂಕ್‌ಗಳಿಂದ ತೆಗೆದ ಇಂಧನದ ಮಾದರಿ ಪಡೆದು 'ಡಿಜಿಸಿಎ' ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಗಿದ್ದು, ತೃಪ್ತಿಕರ ಎಂದು ಕಂಡುಬಂದಿದೆ.
- ವಿಮಾನದ ಎಡಭಾಗದ ಎಪಿಯು ಫಿಲ್ಟರ್ ಮತ್ತು ಮರುಇಂಧನ/ಜೆಟ್ಟಿಸನ್ ವಾಲ್ವ್‌ನಿಂದ ಬಹಳ ಸೀಮಿತ ಪ್ರಮಾಣದ ಇಂಧನ ಮಾದರಿಗಳನ್ನು ಹಿಂಪಡೆಯಬಹುದು. ಈ ಮಾದರಿಗಳ ಪರೀಕ್ಷೆಯನ್ನು ಸೀಮಿತ ಲಭ್ಯವಿರುವ ಪ್ರಮಾಣದಲ್ಲಿ ಪರೀಕ್ಷೆಯನ್ನು ಸೂಕ್ತ ಸೌಲಭ್ಯವಿರುವೆಡೆ ನಡೆಸಲಾಗುತ್ತದೆ.
- ಮುಂಬದಿಯ 'ಇಎಎಫ್‌ಆರ್'ನಿಂದ ಡೌನ್‌ಲೋಡ್ ಮಾಡಲಾದ ದತ್ತಾಂಶಗಳನ್ನು ವಿವರವಾಗಿ ವಿಶ್ಲೇಷಿಸಲಾಗುತ್ತಿದೆ. ದುರಂತ ಸಂದರ್ಭದ ಪ್ರತ್ಯಕ್ಷ ಸಾಕ್ಷಿಗಳು ಮತ್ತು ಬದುಕುಳಿದಿರುವ ಒಬ್ಬ ಪ್ರಯಾಣಿಕರ ಹೇಳಿಕೆ ತನಿಖಾಧಿಕಾರಿಗಳು ಪಡೆದುಕೊಂಡಿದ್ದಾರೆ.
- ವೈಮಾನಿಕ ವೈದ್ಯಕೀಯ ಸಂಶೋಧನೆಗಳನ್ನು ಎಂಜಿನಿಯರಿಂಗ್ ವಿಧಾನದಲ್ಲಿ ದೃಢೀಕರಿಸುವುದು, ಸಿಬ್ಬಂದಿ ಮತ್ತು ಪ್ರಯಾಣಿಕರ ಮರಣೋತ್ತರ ವರದಿಗಳ ಪೂರ್ಣ ವಿಶ್ಲೇಷಣೆಯನ್ನು ಸದ್ಯ ಕೈಗೊಳ್ಳಲಾಗುತ್ತಿದೆ. ಆರಂಭಿಕ ಸುಳಿವುಗಳ ಆಧಾರ ಹೆಚ್ಚುವರಿ ವಿವರ ಸಂಗ್ರಹಿಸಲಾಗುತ್ತಿದೆ.
- ತನಿಖೆ ಮುಂದುವರೆದಿದೆ. ಹೆಚ್ಚುವರಿ ಪುರಾವೆಗಳು, ದಾಖಲೆಗಳು ಮತ್ತು ಪಾಲುದಾರರಿಂದ ಪಡೆಯಲಾಗುತ್ತಿರುವ ಮಾಹಿತಿಯನ್ನು ತನಿಖಾ ತಂಡ ಪರಿಶೀಲಿಸಲಿದೆ.

ವಿಮಾನದ ಲ್ಯಾಂಡಿಗ್ ಗೇರ್ ಸುಟ್ಟಿರುವುದು, ಪಕ್ಕದಲ್ಲಿರುವುದು ಮೂಲ ಮಾದರಿ.

ಪ್ರಾಥಮಿಕ ವರದಿ-ಆತುರದ ನಿರ್ಧಾರ ಸಲ್ಲ: ಸಚಿವ ನಾಯ್ಡು

ಏರ್ ಇಂಡಿಯ 171 ವಿಮಾನ ಪತನ ಕಾರಣದ ಬಗ್ಗೆ ಆತುರದ ತೀರ್ಮಾನಗಳಿಗೆ ಸಾರ್ವಜನಿಕರು ಮತ್ತು ಮಾಧ್ಯಮಗಳು ಬರಬಾರದು. ಏಕೆಂದರೆ 'ಎಎಐಬಿ' ತನಿಖಾ ತಂಡದಿಂದ ಈಗ ಸಲ್ಲಿಕೆಯಾಗಿರುವುದು ಪ್ರಾಥಮಿಕ ವರದಿ ಅಷ್ಟೇ. ಅಂತಿಮ ವರದಿ ಬಂದ ಬಳಿಕ ಈ ಬಗ್ಗೆ ಸ್ಪಷ್ಟ ನಿರ್ಧಾರಕ್ಕೆ ಬರಬಹುದಾಗಿದೆ ಎಂದು ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಶನಿವಾರ ಹೇಳಿದ್ದಾರೆ. ಪ್ರಾಥಮಿಕ ವರದಿಯನ್ನು ಸಚಿವಾಲಯದಲ್ಲಿ ಕೂಲಂಕಷವಾಗಿ ವಿಶ್ಲೇಷಿಸುತ್ತಿದ್ದೇವೆ. ಎಎಐಬಿ ಕೂಡಾ ಅಂತಿಮ ವರದಿಯನ್ನು ಶೀಘ್ರದಲ್ಲೇ ಬಿಡುಗಡೆ ಮಾಡುವ ಸಾಧ್ಯತೆಯಿದೆ. ಆಗ ನಾವು ನಿರ್ದಿಷ್ಟ ತೀರ್ಮಾನಗಳಿಗೆ ಬರಬಹುದು ಎಂದರು. ಇದು ಪ್ರಾಥಮಿಕ ವರದಿ. ಪೂರ್ಣ ವರದಿ ಬರುವವರೆಗೂ ಸರಕಾರ ಕಾಯಲಿದೆ. ಆ ಬಳಿಕ ಸ್ಪಷ್ಟತೆಗೆ ಬರಲಿದೆ. ಮುಂದಿನ 2 ತಿಂಗಳಲ್ಲಿ ಸಮಗ್ರ ವರದಿ ನಿರೀಕ್ಷಿಸಬಹುದಾಗಿದೆ. ಎಎಐಬಿ ತನಿಖಾ ತಂಡ ಈ ವಾರ ಮತ್ತೊಮ್ಮೆ ಅಹಮದಾಬಾದ್‌ಗೆ ಭೇಟಿ ನೀಡಿದೆ. ಏಕೆಂದರೆ ಅಂತಿಮ ವರದಿ ಸಲ್ಲಿಸುವ ಮುನ್ನ ಹೆಚ್ಚಿನ ಪುರಾವೆಗಳನ್ನು ದೃಢೀಕರಿಸಬೇಕಾಗಿದೆ ಎಂದು ತನಿಖಾಧಿಕಾರಿಗಳು ಹೇಳಿದ್ದರು. ಇಂಧನ ಪೂರೈಕೆ ಸ್ವಿಚ್ ಆಫ್ ಆಗಿರುವುದು ಅಜಾಗರೂಕತೆ ಯಿಂದಲೋ ಅಥವಾ ಉದ್ದೇಶಪೂರ್ವಕವೂ ಎಂಬುದು ಆಳವಾದ ತನಿಖೆಯಿಂದ ತಿಳಿದುಬರಲಿದೆ.

ಬೋಯಿಂಗ್ ಹೇಳಿಕೆ: ಏರ್ ಇಂಡಿಯ 171 ವಿಮಾನ ಪತನದ ತನಿಖೆ ನಡೆಸುತ್ತಿರುವ 'ಎಎಐಬಿ' ತಂಡಕ್ಕೆ ಪೂರ್ಣ ಸಹಕಾರ ನೀಡುತ್ತೇವೆ. ಎಐ171 ಬೋಯಿಂಗ್ 787-8 ವಿಮಾನಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಒದಗಿಸಲು ಬದ್ಧರಾಗಿದ್ದೇವೆ ಎಂದು ಅಮೆರಿಕದ ವಿಮಾನ ತಯಾರಕ ಕಂಪನಿ 'ಬೋಯಿಂಗ್' ಶನಿವಾರ ಮುಂಜಾನೆ ಹೇಳಿದೆ.

ಏರ್ ಇಂಡಿಯಗೆ ಎಚ್ಚರಿಸಿದ್ದ ಅಮೆರಿಕ

ಬೋಯಿಂಗ್ ಡ್ರೀಮ್‌ಲೈನರ್ ಶ್ರೇಣಿ ವಿಮಾನಗಳ ಇಂಧನ ಸ್ವಿಚ್‌ಗಳಲ್ಲಿ ಸಮಸ್ಯೆ ಇರುವುದನ್ನು ಈ ಮೊದಲೇ (2018ರಲ್ಲೇ) ಅಮೆರಿಕದ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (ಎಫ್‌ಎಎ) ಸಂಸ್ಥೆ ಗುರುತಿಸಿತ್ತು. ಅದರ ಬೆನ್ನಲ್ಲೇ ಬೋಯಿಂಗ್ ಎಲ್ಲಾ ಏರ್‌ಲೈನ್ ಸಂಸ್ಥೆಗಳಿಗೂ ಎಚ್ಚರಿಕೆ ಸಂದೇಶ ರವಾನಿಸಿತ್ತು. 7 ವರ್ಷಗಳ ಹಿಂದೆಯೇ ಅಮೆರಿಕ ಸಂಸ್ಥೆ ಏರ್ ಇಂಡಿಯ ಸಂಸ್ಥೆಗೂ ಎಚ್ಚರಿಕೆ ಸಂದೇಶ ನೀಡಿತ್ತು. ಸ್ವಿಚ್‌ಗಳ ಬಗ್ಗೆ ಗಮನ ಹರಿಸಲು ಸೂಚಿಸಿತ್ತು. ಆದರೆ, ಸ್ವಿಚ್ ತಪಾಸಣೆ ಕಡ್ಡಾಯ ಎಂದು ಬೋಯಿಂಗ್ ಸೂಚಿಸಿಲ್ಲ ಎಂಬ ಕಾರಣಕ್ಕೆ ಏರ್ ಇಂಡಿಯ ಸಂಸ್ಥೆ 'ಎಫ್‌ಎಎ' ಸಂದೇಶದ ವಿಚಾರದಲ್ಲಿ ನಿರ್ಲಕ್ಷ್ಯ ತೋರಿತು ಎನ್ನಲಾಗಿದೆ.

ವೈದ್ಯಕೀಯ ಕಾಲೇಜು ಹಾಸ್ಟೆಲ್ ಕಟ್ಟಡದಲ್ಲಿ ಸಿಲುಕಿಕೊಂಡಿರುವ ವಿಮಾನದ ಬಾಲದ ಭಾಗ.

9 ಐಎಸ್‌ಐ ಏಜೆಂಟ್ಸ್, 50ಕ್ಕೂ ಹೆಚ್ಚು ಸೈನಿಕರು ಹತ

ಬಲೂಚ್ ಹೋರಾಟ ತೀವ್ರ: ಪಾಕ್‌ನಲ್ಲಿ ರಕ್ತದೋಕುಳಿ

ಇಸ್ಲಾಮಾಬಾದ್: ಬಲೂಚಿಸ್ತಾನ್ ಸೇರಿದಂತೆ ಪಾಕಿಸ್ತಾನದ ವಿವಿಧ ಪ್ರಾಂತ್ಯಗಳಲ್ಲಿ ಕಳೆದ 5 ದಿನಗಳಲ್ಲಿ ಸೇನೆ ಮತ್ತು ಗುಪ್ತಚರ ಸಂಸ್ಥೆ 'ಐಎಸ್‌ಐ' ಗುರಿಯಾಗಿಸಿಕೊಂಡು 84 ದಾಳಿಗಳು ನಡೆದಿವೆ. ಪರಿಣಾಮ, ಪಾಕ್ ಸೇನಾಪಡೆಯ 50ಕ್ಕೂ ಅಧಿಕ ಯೋಧರು ಮತ್ತು ಐಎಸ್‌ಐನ 9 ಸಿಬ್ಬಂದಿ ಹತರಾಗಿದ್ದಾರೆ.

ಈ ಎಲ್ಲಾ ದಾಳಿಗಳನ್ನೂ ತಾನೇ ಮಾಡಿರುವುದಾಗಿ ಬಲೂಚಿಸ್ತಾನ್ ಲಿಬರೇಶನ್ ಫ್ರಂಟ್ (ಬಿಎಲ್‌ಎಫ್) ಹೇಳಿಕೊಂಡಿದೆ. ದಾಳಿಗಳನ್ನು 'ಆಪರೇಷನ್ ಬಾಮ್'ನ ಭಾಗ ಎಂದು ಬಿಎಲ್‌ಎಫ್ ಹೇಳಿಕೊಂಡಿದೆ. ಪಾಕಿಸ್ತಾನ ಸರಕಾರದ ವಿರುದ್ಧ ಜು.8ರಂದು 'ಆಪರೇಷನ್ ಬಾಮ್' ಆರಂಭಿಸುವುದಾಗಿ ಘೋಷಿಸಿದ್ದೆವು. ಅದೇ ಪ್ರಕಾರವಾಗಿ ಸಂಘಟಿತ ರೂಪದಲ್ಲಿ 84 ದಾಳಿಗಳನ್ನು ಮಾಡುವ ಮೂಲಕ 5 ದಿನಗಳಲ್ಲಿ 'ಆಪರೇಷನ್ ಬಾಮ್' ಯಶಸ್ವಿಯಾಗಿ ನಡೆಸಲಾಗಿದೆ. ಪಾಕಿಸ್ತಾನ ಸೇನೆ ಮತ್ತು ಫ್ರಾಂಟಿಯರ್ ಕಾರ್ಪ್ಸ್‌ನ 50

ಯೋಧರು ಸಾವನ್ನಪ್ಪಿದ್ದಾರೆ, 50ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮುಸಾಖೇಲ್ ಪ್ರದೇಶದ ಚೆಕ್ಪಾಯಿಂಟ್‌ನಲ್ಲಿ 9 ಗುಪ್ತಚರ ಏಜೆಂಟ್‌ಗಳನ್ನು ಸೆರೆ ಹಿಡಿದು ಗಲ್ಲಿಗೇರಿಸಲಾಗಿದೆ ಎಂದು ಬಿಎಲ್‌ಎಫ್ ಮುಖಂಡರು ಅಧಿಕೃತ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಆಪರೇಷನ್ ಬಾಮ್ ಹೋರಾಟ 'ಬಲೂಚ್ ರಾಷ್ಟ್ರೀಯ ವಿಮೋಚನಾ ಹೋರಾಟ'ದ ಭಾಗವಾಗಿದೆ ಎಂದಿರುವ ಬಿಎಲ್‌ಎಫ್, ಮಕ್ರಾನ್ ಕರಾವಳಿ ಪ್ರದೇಶದಿಂದ ಕೊಹ್-ಎ-ಸುಲೈಮಾನ್ ಪರ್ವತದವರೆಗೂ ನಿರಂತರವಾಗಿ ಮಾರಕ ದಾಳಿಗಳನ್ನು ನಡೆಸುವುದಾಗಿ ಘೋಷಿಸಿದೆ.

ಶರಣಾದವರಲ್ಲಿ 3 ಜೋಡಿ ದಂಪತಿ | 9 ಮಹಿಳಾ ನಕ್ಸಲರಿಂದ ಶರಣಾಗತಿ

₹1.18 ಕೋಟಿ ಇನಾಮು: ಸುಕ್ಮಾದಲ್ಲಿ 23 ನಕ್ಸಲರ ಶರಣು

ಸುಕ್ಮಾ: ಸುಕ್ಮಾ ಜಿಲ್ಲೆಯಲ್ಲಿ ಒಟ್ಟಾರೆ 1.18 ಕೋಟಿ ರು. ಇನಾಮು ಘೋಷಿಸಲಾಗಿದ್ದ 23 ನಕ್ಸಲರು ಶನಿವಾರ ಶರಣಾಗಿದ್ದಾರೆ. ಶರಣಾಗತರಲ್ಲಿ ನಕ್ಸಲರ ಗುಂಪಿನ 11 ಹಿರಿಯ ಸದಸ್ಯರು ಸೇರಿದ್ದಾರೆ. ಅವರಲ್ಲಿ ಬಹುತೇಕರು ಪೀಪಲ್ ಲಿಬರೇಶನ್ ಗೆರಿಲ್ಲಾ ಆರ್ಮಿ(ಪಿಎಲ್‌ಜಿಎ) ಬೆಟಾಲಿಯನ್ 1ರಲ್ಲಿ ಸಕ್ರಿಯರಾಗಿದ್ದವರು. ಶರಣಾದವರಲ್ಲಿ ಮೂರು ಜೋಡಿ ದಂಪತಿಗಳಾಗಿದ್ದಾರೆ. ಶರಣಾಗತರಲ್ಲಿ ಮಹಿಳೆಯರೇ 9 ಮಂದಿ ಇದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಛತ್ತೀಸ್‌ಗಢ ರಾಜ್ಯದಲ್ಲಿ ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗುವ ನಕ್ಸಲರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ಸಾಗಿದೆ. ನಾರಾಯಣಪುರ ಜಿಲ್ಲೆಯಲ್ಲಿ ಶುಕ್ರವಾರವಷ್ಟೇ 22 ನಕ್ಸಲರು ಶರಣಾಗಿದ್ದರು.

ನಕ್ಸಲ್ ಸಿದ್ಧಾಂತ ಈಗ ಪೊಳ್ಳು ಎನಿಸುತ್ತಿದೆ. ಅಲ್ಲದೇ ಅಮಾಯಕ ಆದಿವಾಸಿಗಳ ಮೇಲೆ ನಕ್ಸಲ್ ಹೆಸರಲ್ಲಿ ದೌರ್ಜನ್ಯ ನಡೆಯುತ್ತಿದೆ, ಸಂಘಟನೆಯೊಳಗೆ ಆಂತರಿಕ ಭಿನ್ನಾಭಿಪ್ರಾಯ ಹೆಚ್ಚುತ್ತಿದೆ. ಇದೆಲ್ಲದರಿಂದ ಹತಾಶೆಗೊಂಡು ಶರಣಾಗುತ್ತಿರುವುದಾಗಿ 23 ನಕ್ಸಲರು ಹೇಳಿದ್ದಾರೆಂದು ಸುಕ್ಮಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ. ಸುಕ್ಮಾ ಮತ್ತು ಬಿಜಾಪುರ ಜಿಲ್ಲೆಗಳ ಗಡಿಯಲ್ಲಿ ಜಂಟಿ ಭದ್ರತಾ ಪಡೆಗಳು ಇತ್ತೀಚೆಗೆ ನಡೆಸುತ್ತಿರುವ ನಕ್ಸಲ್ ನಿಗ್ರಹ ಕಾರ್ಯಾಚರಣೆ ತೀವ್ರಗೊಂಡಿರುವುದರಿಂದ ನಕ್ಸಲರ ಶರಣಾಗತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂದು ಚವಾಣ್ ಹೇಳಿದ್ದಾರೆ.

ಸುಕ್ಮಾ ಜಿಲ್ಲೆಯಲ್ಲಿ 9 ಮಹಿಳೆಯರೂ ಸೇರಿದಂತೆ 23 ನಕ್ಸಲರು ಶನಿವಾರ ನಕ್ಸಲ್ ನಿಗ್ರಹ ಪಡೆ ಎದುರು ಶರಣಾದರು.

2026ರ ಮಾರ್ಚ್‌ಗೆ ನಕ್ಸಲ್‌ಮುಕ್ತ ಭಾರತ

ತಿರುವನಂತಪುರಂ: 2026ರ ಮಾರ್ಚ್ 31ರ ವೇಳೆಗೆ ಭಾರತ ನಕ್ಸಲಿಸಂ ಮುಕ್ತವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪುನರುಚ್ಚರಿಸಿದ್ದಾರೆ. ಪುತ್ತರಿಕಂಡಂ ಮೈದಾನದಲ್ಲಿ 'ವಿಕಸಿತ್ ಕೇರಳಂ ಸಮ್ಮೇಳನ'ದಲ್ಲಿ ಮಾತನಾಡಿದ ಸಚಿವ ಶಾ, ಕೇರಳದ ಅಭಿವೃದ್ಧಿ 'ವಿಕಸಿತ್ ಭಾರತ್' ಪರಿಕಲ್ಪನೆಯ ಭಾಗವಾಗಿದೆ. ಬಿಜೆಪಿ ಇಲ್ಲದೇ ವಿಕಸಿತ ಕೇರಳ ಸಾಧ್ಯವಿಲ್ಲ ಎಂದು ನಾನು ಕೇರಳದ ಜನರಿಗೆ ಹೇಳಲು ಬಂದಿದ್ದೇನೆ ಎಂದರು. ಆಡಳಿತಾರೂಢ ಎಲ್‌ಡಿಎಫ್‌ನ ಭಾಗವಾಗಿರಯವ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯ(ಮಾರ್ಕ್ಸ್‌ವಾದಿ) ವಿರುದ್ಧ ವಾಗ್ದಾಳಿ ನಡೆಸಿದರು. ಬಿಜೆಪಿ ಮತ್ತು ಸಿಪಿಐ(ಎಂ) ಎರಡೂ ಕೇಡರ್ ಆಧಾರಿತ ಪಕ್ಷಗಳೇ ಆಗಿವೆ. ಆದರೆ, ಸಿಪಿಐ(ಎಂ)ಗೆ ರಾಜ್ಯದ ಅಭಿವೃದ್ಧಿಗಿಂತ ಕೇಡರ್ ಕಲ್ಯಾಣ ಮುಖ್ಯವೆನಿಸುತ್ತದೆ. ಆದರೆ ಬಿಜೆಪಿಗೆ ಕೇಡರ್‌ಗಿಂತ ವಿಕಸಿತ ಕೇರಳ ಮುಖ್ಯವಾಗಿದೆ ಎಂದು ಪ್ರತಿಪಾದಿಸಿದರು. ಎಲ್‌ಡಿಎಫ್ ಅಥವಾ ಯುಡಿಎಫ್ ರಾಜ್ಯದಲ್ಲಿ ಬದಲಾವಣೆ ತರಲು, ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ. ಕಾಂಗ್ರೆಸ್ ಶೀಘ್ರದಲ್ಲೇ ಬಾಗಿಲು ಮುಚ್ಚಲಿರುವ ಪಕ್ಷ. ಹಾಗಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರಬೇಕು ಎಂದು ಜನರಲ್ಲಿ ಶಾ ಮನವಿ ಮಾಡಿದರು.

ತ.ನಾ ಲಾಕಪ್‌ಡೆತ್: ಸಿಬಿಐ ತನಿಖೆ ಶುರು

ದೆಹಲಿ: ಖ್ಯಾತನಟ ಸೂರ್ಯ ನಟಿಸಿದ್ದ 'ಜೈ ಭೀಮ್' ಸಿನಿಮಾ ಕಥೆಯಂತೆಯೇ ತಮಿಳುನಾಡಿನಲ್ಲೊಂದು ಲಾಕಪ್‌ಡೆತ್ ನಡೆದಿದೆ. ಶಿವಗಂಗಾ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಲಾಕಪ್ ಡೆತ್ ಪ್ರಕರಣದ ತನಿಖೆಗೆ ಕೇಂದ್ರ ತನಿಖಾ ದಳ(ಸಿಬಿಐ) ಪ್ರವೇಶವಾಗಿದೆ.

ಮಾದಾಪುರಂ ಭದ್ರಕಾಳಿಯಮ್ಮನ್ ದೇವಾಲಯ ಕಾವಲುಗಾರನಾಗಿದ್ದ ಅಜಿತ್ ಕುಮಾರ್‌ನನ್ನು ಅಕ್ರಮವಾಗಿ ಬಂಧಿಸಿ ಅಮಾನುಷವಾಗಿ ಥಳಿಸಿ ಸಾವಿಗೆ ಕಾರಣವಾದ ಆರೋಪದಡಿ 6 ಪೊಲೀಸರ ವಿರುದ್ಧ ಸಿಬಿಐ ತನಿಖೆ ಆರಂಭಿಸಿದೆ. 6 ಪೊಲೀಸರ ವಿರುದ್ಧ ಬಿಎನ್‌ಎಸ್ ಸೆಕ್ಷನ್ 103ರಡಿ(ಕೊಲೆ) ಅಪರಾಧ ಪ್ರಕರಣ ದಾಖಲಿಸಿದೆ. ಪೊಲೀಸರ ಅಮಾನುಷ ವರ್ತನೆಗೆ ರಾಜ್ಯಾದ್ಯಂತ ಭಾರೀ ಜನಾಕ್ರೋಶ ವ್ಯಕ್ತವಾಗಿದ್ದರಿಂದ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ಸರಕಾರ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿತ್ತು. ಕಾರಿನಿಂದ 10 ಗ್ರಾಂ. ಚಿನ್ನ ಕಾಣೆಯಾಗಿದೆ ಎಂದು ತಾಯಿ-ಮಗಳು ದೂರು ನೀಡಿದ್ದರಿಂದ ತನಿಖೆಗೆ ರಚಿತವಾಗಿದ್ದ ವಿಶೇಷ ಪೊಲೀಸ್ ತಂಡ, ಅಜಿತ್‌ನನ್ನು ಠಾಣೆಗೆ ಕರೆದೊಯ್ದು ಚಿತ್ರಹಿಂಸೆ ಕೊಟ್ಟಿತ್ತು. ಬಾಯಿಗೆ ಖಾರದ ಪುಡಿ ಹಾಕಿತ್ತು. ಗಂಟೆಗಟ್ಟಲೆ ಥಳಿಸಿತ್ತು. ಪೊಲೀಸ್ ದೌರ್ಜನ್ಯದ ವಿಡಿಯೊ ಕೂಡ ವೈರಲ್ ಆಗಿತ್ತು. ತಡವಾಗಿಯಾದರೂ ತಮಿಳುನಾಡು ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಶಂಕರ್ ಜಿವಾಲ್, ಲಾಕಪ್ ಡೆತ್ ವಿಚಾರವಾಗಿ ರಾಜ್ಯದ ಜನರಲ್ಲಿ ಕ್ಷಮೆ ಯಾಚಿಸಿದ್ದಾರೆ.

ಆರೋಪಿ ಕರ್ನಾಟಕ ಮೂಲದ ವಿದ್ಯಾರ್ಥಿ ಕಸ್ಟಡಿಗೆ

ಕೋಲ್ಕತ್ತ ಐಐಎಂ ಹಾಸ್ಟೆಲ್‌ಅತ್ಯಾಚಾರ: ಸೆರೆ

ಕೋಲ್ಕತ್ತ: ಕೋಲ್ಕತ್ತದಲ್ಲಿನ ಪ್ರತಿಷ್ಠಿತ ಬಿಸಿನೆಸ್ ಸ್ಕೂಲ್ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಹಾಸ್ಟೆಲ್‌ನಲ್ಲಿ ಜೂನ್ 25ರಂದು ವೈದ್ಯಕೀಯ ವೃತ್ತಿನಿರತ



ಮಹಿಳೆ ಮೇಲೆ ಅತ್ಯಾಚಾರ ನಡೆದಿದ್ದು, ಪ್ರಕರಣ ಸಂಬಂಧ 2ನೇ ವರ್ಷದ ವಿದ್ಯಾರ್ಥಿಯನ್ನು ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ.

ಹಾಸ್ಟೆಲ್ ವಿದ್ಯಾರ್ಥಿ ಜತೆ ಆಪ್ತ ಸಮಾಲೋಚನೆ ನಡೆಸಲು ನಿಯೋಜನೆಗೊಂಡಿದ್ದ ಕ್ಲಿನಿಕಲ್ ಸೈಕಾಲಜಿ ಥೆರಪಿ ತಜ್ಞೆಯ ಮೇಲೆ ಐಐಎಂ ಕಾಲೇಜಿನ 2ನೇ ವರ್ಷದ ವಿದ್ಯಾರ್ಥಿ ಕರ್ನಾಟಕ ಮೂಲದ ಮಹಾವೀರ ತೋಪಣ್ಣವರ್ ಅಲಿಯಾಸ್ ಪರಮಾನಂದ ಜೈನ್ ಅತ್ಯಾಚಾರ ಎಸಗಿದ್ದಾನೆ ಎಂದು ಹರಿದೇವ್‌ಪು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಎಫ್‌ಐಆರ್ ಆಧರಿಸಿ ಆರೋಪಿತ ವಿದ್ಯಾರ್ಥಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ನ್ಯಾಯಾಲಯ ಜುಲೈ 19ರವರೆಗೆ ಆರೋಪಿಯನ್ನು ಹೆಚ್ಚಿನ ವಿಚಾರಣೆಗೆಂದು ಪೊಲೀಸ್ ಕಸ್ಟಡಿಗೆ ನೀಡಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ.

ಕೌನ್ಸಲಿಂಗ್ ಸೆಷನ್ ನಡೆಸುವುದಕ್ಕೆಂದೇ ತನ್ನನ್ನು ನಿಯೋಜಿಸಲಾಗಿತ್ತು. ಹಾಗಾಗಿ ಹಾಸ್ಟೆಲ್‌ಗೆ ತೆರಳಿದ್ದೆ. ವಿದ್ಯಾರ್ಥಿ ತನ್ನದೇ ಕೊಠಡಿಯಲ್ಲಿ ಥೆರಪಿ ನಡೆಸಿ ಎಂದು ಕೋರಿದ್ದರಿಂದ ಕೊಠಡಿಗೆ ತೆರಳಿದ್ದೆ. ಅಲ್ಲಿ ಮಾದಕದ್ರವ್ಯ ಬೆರೆಸಿದ ಲಘುಪಾನೀಯ ನೀಡಿ ಪ್ರಜ್ಞೆ ತಪ್ಪುವಂತೆ ಮಾಡಿ ಅತ್ಯಾಚಾರ ನಡೆಸಲಾಗಿದೆ. ಎಚ್ಚರಗೊಂಡ ಬಳಿಕ ಹಾಸ್ಟೆಲ್‌ನಿಂದ ತಪ್ಪಿಸಿಕೊಂಡು ಬಂದೆ ಎಂದು ಮಹಿಳೆ ದೂರಿದ್ದಾರೆ.

ಆತಂಕ: ಕೋಲ್ಕತ್ತ ಕಾನೂನು ಕಾಲೇಜು ಕ್ಯಾಂಪಸ್‌ನ ಭದ್ರತಾ ಸಿಬ್ಬಂದಿ ಕಚೇರಿಯಲ್ಲೇ ಕಾನೂನು ವಿದ್ಯಾರ್ಥಿನಿ ಮೇಲೆ ಗುತ್ತಿಗೆ ನೌಕರ ಮತ್ತು ಇಬ್ಬರು ವಿದ್ಯಾರ್ಥಿಗಳು 15 ದಿನಗಳ ಹಿಂದೆ ಸಾಮೂಹಿಕ ಅತ್ಯಾಚಾರ ನಡೆಸಿದ್ದರು.

ಆಟೋದಿಂದ ಬಿದ್ದು ಗಾಯ

'ಯಾರೂ ತನ್ನನ್ನು ಹಿಂಸಿಸಿಲ್ಲ, ಅನುಚಿತವಾಗಿ ವರ್ತಿಸಿಲ್ಲ ಎಂದು ಮಗಳು ಹೇಳಿದ್ದಾಳೆ. ಆಟೊದಿಂದ ಬಿದ್ದು ಗಾಯಗೊಂಡವಳನ್ನು ಪೊಲೀಸರು ಆಸ್ಪತ್ರೆಗೆ ಸೇರಿಸಿದ್ದರು. ನಾನು ಹೋಗಿ ಅವಳನ್ನು ಮನೆಗೆ ಕರೆದುಕೊಂಡು ಬಂದೆ. ನಾನು ಅವಳೊಂದಿಗೆ ಹೆಚ್ಚು ಸಮಯ ಮಾತನಾಡಲು ಸಾಧ್ಯವಾಗಲಿಲ್ಲ. ಈಗ ಅವಳು ನಿದ್ರಿಸುತ್ತಿದ್ದಾಳೆ. ಅವಳು ಎಚ್ಚರವಾದ ನಂತರ ನಾನು ಅವಳೊಂದಿಗೆ ಮಾತನಾಡುತ್ತೇನೆ. ಬಂಧಿತ ವಿದ್ಯಾರ್ಥಿಗೂ ನನ್ನ ಮಗಳಿಗೂ ಯಾವುದೇ ಸಂಬಂಧವಿಲ್ಲ. ಪೊಲೀಸರ ಒತ್ತಾಯದ ಮೇರೆಗೆ ಮಗಳು ದೂರು ನೀಡಿದ್ದಾಳೆ ಎಂದು ಸಂತ್ರಸ್ತ ಮಹಿಳೆಯ ತಂದೆ ಪ್ರತಿಕ್ರಿಯಿಸಿದ್ದಾರೆ.

ನ್ಯಾಯಾಂಗ ವ್ಯವಸ್ಥೆ ಸರಿ ಮಾಡಬೇಕಿದೆ: ಸಿಜೆಐ

ಹೈದರಾಬಾದ್: ಭಾರತದ ನ್ಯಾಯಾಂಗ ಮತ್ತು ಕಾನೂನು ಪ್ರಕ್ರಿಯಾ ವ್ಯವಸ್ಥೆ ಬಹಳ ವಿಚಿತ್ರ ಸವಾಲುಗಳನ್ನು ಎದುರಿಸುತ್ತಿದೆ. ಅವುಗಳನ್ನು ಸರಿಪಡಿಸಿ ನ್ಯಾಯಾಂಗದ ಗತಿಯನ್ನು ವೇಗಗೊಳಿಸಬೇಕಾದ

ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಅಭಿಪ್ರಾಯಪಟ್ಟರು.

ಹೈದರಾಬಾದ್‌ನ ಜಸ್ಟೀಸ್ ಸಿಟಿಯಲ್ಲಿನ ನಲ್ಸಾರ್ ಕಾನೂನು ವಿಶ್ವವಿದ್ಯಾಲಯದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಶನಿವಾರ ಮಾತನಾಡಿದ ಅವರು, ಅಪರಾಧ ಪ್ರಕರಣಗಳು, ಸಿವಿಲ್ ದಾವೆಗಳ ವಿಚಾರಣೆ ಬಹಳ ವಿಳಂಬವಾಗಿ ಸಾಗುತ್ತಿದೆ. ಕೆಲವೊಮ್ಮೆ ವಿಚಾರಣೆ ಮುಗಿಯುವುದಕ್ಕೆ ದಶಕಗಳಷ್ಟು ಸಮಯ ಹಿಡಿಯುತ್ತಿದೆ. ಅಪರಾಧ ಪ್ರಕರಣಗಳಲ್ಲಿ ವಿಚಾರಣಾಧೀನ ಕೈದಿಯಾಗಿ ಜೈಲಿನಲ್ಲಿ ವರ್ಷಗಳ ಕಾಲ ಕಳೆದ ನಂತರ ಆರೋಪಿತ ವ್ಯಕ್ತಿ ನಿರಪರಾಧಿ ಎಂದು ಕಂಡುಬಂದ ಪ್ರಕರಣಗಳನ್ನೂ ನಾವು ನೋಡಿದ್ದೇವೆ. ನಮ್ಮ ನ್ಯಾಯಾಂಗ ವ್ಯವಸ್ಥೆ ಎದುರಿಸುತ್ತಿರುವ ಇಂಥ ಸಮಸ್ಯೆಗಳನ್ನು ಪರಿಹರಿಸಲು ನಮ್ಮ ಅತ್ಯುತ್ತಮ ಪ್ರತಿಭೆಗಳು ಸಹಾಯ ಮಾಡುತ್ತವೆ ಎಂಬ ನಂಬಿಕೆ ನನ್ನದಾಗಿದೆ ಎಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೇಳಿದರು. ಕಾನೂನು ವ್ಯವಸ್ಥೆಯಲ್ಲಿ ಗಂಭೀರ ಸಮಸ್ಯೆಗಳಿವೆ ಮತ್ತು ಪ್ರಮುಖ ಸುಧಾರಣೆಗಳ ಅಗತ್ಯವಿದೆ ಎಂದು ನಾನು ನಂಬಿದ್ದರೂ, ಈ ದೇಶದ ಜನರು ಮುಂದೆ ಬಂದು ಅಗತ್ಯ ಬದಲಾವಣೆಗಳನ್ನು ತರಲು ಸಹಾಯ ಮಾಡುತ್ತಾರೆ ಎಂಬ ವಿಶ್ವಾಸ ಇನ್ನೂ ನನ್ನಲ್ಲಿದೆ ಎಂದು ಸಿಜೆಐ ಗವಾಯಿ ಹೇಳಿದರು.

ಸಮಾಚಾರ ಸಣ್ಣದಲ್ಲ

ಹೆದ್ದಾರಿ ಬದಿ ವಾಹನಗಳ ನಿಲುಗಡೆ ನಿಷೇಧ : ಡಿಸಿ

ಚಾಮರಾಜನಗರ: ಗುಂಡ್ಲುಪೇಟೆ ಪಟ್ಟಣದಲ್ಲಿ ವಾಹನ ದಟ್ಟಣೆ ನಿಯಂತ್ರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಗುಂಡ್ಲುಪೇಟೆ ಪಟ್ಟಣದ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯ ಊಟಿ ಸರ್ಕಲ್‌ನಿಂದ ಸುರಭಿ ಹೋಟೆಲ್ ಬಸ್‌ಸ್ಟಾಪ್‌ವರೆಗೆ ರಸ್ತೆಯ ಇಕ್ಕೆಲಗಳಲ್ಲಿ ಎಲ್ಲಾ ರೀತಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಆದೇಶ ಹೊರಡಿಸಿದ್ದಾರೆ. ಪ್ರತಿದಿನ ತಾಲೂಕು ಕೇಂದ್ರಕ್ಕೆ ಸಾರ್ವಜನಿಕರು ವಾಹನಗಳಲ್ಲಿ ಆಗಮಿಸುತ್ತಾರೆ. ಈ ಠಾಣಾ ಸರಹದ್ದಿನಲ್ಲಿ ಗೋಪಾಲಸ್ವಾಮಿ ಬೆಟ್ಟ, ಬಂಡೀಪುರ ಉದ್ಯಾನ, ಹುಲಿ ಸಂರಕ್ಷಿತ ಅರಣ್ಯ ಇದ್ದು ಇಲ್ಲಿಗೆ ಪ್ರವಾಸಿಗರು ಕೂಡ ಆಗಮಿಸುತ್ತಿದ್ದಾರೆ. ಹೀಗಾಗಿ ಗುಂಡ್ಲುಪೇಟೆ ಪಟ್ಟಣದಲ್ಲಿ ವಾಹನ ದಟ್ಟಣೆ ನಿಯಂತ್ರಿಸುವ ಅಗತ್ಯವಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿವೇತನಕ್ಕೆ ಪೋರ್ಟಲ್ ಅವಕಾಶ

ಚಾಮರಾಜನಗರ: ಕೊಳ್ಳೇಗಾಲ ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಪರಿಶಿಷ್ಟ ಜಾತಿಯ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ರಾಜ್ಯ ವಿದ್ಯಾರ್ಥಿವೇತನದ ಪೋರ್ಟಲ್ ನಲ್ಲಿ ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಸೂಕ್ತ ದಾಖಲಾತಿಗಳೊಡನೆ ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕೊಳ್ಳೇಗಾಲ ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಸಂಪರ್ಕಿಸುವಂತೆ ತಿಳಿಸಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ನಗರ ಉಪವಿಭಾಗದ ದೊಡ್ಡರಾಯಪೇಟೆ ವಿದ್ಯುತ್ ಉಪಕೇಂದ್ರದ ಫೀಡರ್ ನಲ್ಲಿ ತುರ್ತು ಕಾಮಗಾರಿಯನ್ನು ಜುಲೈ 13ರಂದು ಹಮ್ಮಿಕೊಂಡಿದ್ದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ. ಜೋಡಿ ರಸ್ತೆ, ಕೋರ್ಟ್ ರಸ್ತೆ, ಪ್ರಗತಿ ನಗರ, ಬುದ್ದನಗರ, ಹೌಸಿಂಗ್ ಬೋರ್ಡ್, ರಾಮಸಮುದ್ರ, ಕರಿನಂಜನಪುರ, ಹೊಸ ಹೌಸಿಂಗ್ ಬೋರ್ಡ್, ಚನ್ನಿಪುರಮೋಳೆ, ದೊಡ್ಡಬೀದಿ, ತಿಬ್ಬಳ್ಳಿಕಟ್ಟೆ ರಸ್ತೆಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನಿಗಮದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ವಿಶ್ವ ಯುವ ಕೌಶಲ ದಿನಾಚರಣೆ 14ರಂದು

ಚಾಮರಾಜನಗರ : ಕ್ರೀಡಾ ಸಚಿವಾಲಯದ ಮೇರಾ ಯುವ ಭಾರತ್, ವಿಶುವಲ್ ಸಾಫ್ಟೆಕ್ ಕಂಪ್ಯೂಟರ್ ತರಬೇತಿ ಕೇಂದ್ರ, ಹಾಗೂ ವರಮಹಾಲಕ್ಷ್ಮಿ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ವಿಶ್ವ ಯುವ ಕೌಶಲ ದಿನಾಚರಣೆ ಕಾರ್ಯಕ್ರಮವನ್ನು ಜು.14 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ವಿಶುವಲ್ ಸಾಫ್ಟೆಕ್ ಕಂಪ್ಯೂಟರ್ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಉದ್ಘಾಟಿಸುವರು. ಪೌರಾಯುಕ್ತ ಎಸ್.ವಿ. ರಾಮದಾಸ್ ಬಹುಮಾನ ವಿತರಣೆ ಮಾಡುವರು. ಕಂಪ್ಯೂಟರ್ ತರಬೇತಿ ಕೇಂದ್ರದ ಪ್ರಾಂಶುಪಾಲ ಕೆ. ಬಿಳಿಗಿರಿ ರಂಗ, ಜಿಲ್ಲಾ ಯುವಜನ ಅಧಿಕಾರಿ ಅಖಿಲ್, ಮೈಸೂರಿನ ಜೆ.ಎಸ್.ಎಸ್ ಪಬ್ಲಿಕ್ ಸ್ಕೂಲ್ ಶಿಕ್ಷಕಿ ಎಂ.ಎಸ್. ಶಿಲ್ಪಾ ಭಾಗವಹಿಸುವರು.

ಹೃದಯಾಘಾತ: ನೌಕರ ಸಾವು

ತಿ.ನರಸೀಪುರ: ಪಟ್ಟಣದ ತಾಲೂಕು ಕಚೇರಿಯಲ್ಲಿ ಪಿಂಚಣಿ ವಿಷಯ ನಿರ್ವಾಹಕರಾಗಿದ್ದ ಎನ್.ಅರುಣ್ ಕುಮಾರ್ (44) ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೂಲತಃ ತುಮಕೂರು ಜಿಲ್ಲೆಯವರಾದ ಅರುಣ್ ಕುಮಾರ್ ಕಳೆದ ಐದಾರು ವರ್ಷಗಳಿಂದ ತಾಲೂಕು ಕಚೇರಿಯಲ್ಲಿ ಪಿಂಚಣಿ ನಿರ್ವಾಹಕರಾಗಿ ದ್ದರು. ಶನಿವಾರ ಬಸ್ ನಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣ ಮಾಡುವ ವೇಳೆ ಅಕಾಲಿಕ ಮೃತ್ಯು ವಿಗೆ ಬಲಿಯಾಗಿದ್ದಾರೆ. ಇವರು ಪತ್ನಿ ಲಕ್ಷ್ಮಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.



ಶಿಕ್ಷಕರಿಂದ ಅರ್ಜಿ

ಚಾಮರಾಜನಗರ: ಕೊಳ್ಳೇಗಾಲ ತಾಲೂಕಿನ ತಿಮ್ಮರಾಜಿಪುರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ತಾತ್ಕಾಲಿಕವಾಗಿ ದೈಹಿಕ ಶಿಕ್ಷಣ ವಿಷಯಕ್ಕೆ ಬಿ.ಪಿ.ಎಡ್ ವಿದ್ಯಾರ್ಹತೆ ಹೊಂದಿರುವ ಮಹಿಳಾ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಮೊರಾರ್ಜಿ ವಸತಿ ಶಾಲೆಗೆ ಜು.18ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ವಸತಿ ಶಾಲೆಯ ಪ್ರಾಂಶುಪಾಲರು ತಿಳಿಸಿದ್ದಾರೆ.

{ಡಾ.ಎಚ್.ಸಿ.ಮಹಾದೇವಪ್ಪ} ಸಚಿವರು

ಡಿಕೆಶಿ ಪಕ್ಷ ಕಟ್ಟಿದ್ದಾರೆ, ಅಧಿಕಾರಕ್ಕೆ ತರಲು ಶ್ರಮಿಸಿದ್ದಾರೆ ನಿಜ. ಪಕ್ಷ ಕಟ್ಟಿದರು ಅಂದರೆ, ಎಲ್ಲರೂ ಸೇರಿದರೆ ಅಲ್ವಾ ಅಣೆಕಟ್ಟು ಕಟ್ಟೋದು. ಅಣೆಕಟ್ಟನ್ನು ಕಲ್ಲು, ಮಣ್ಣು, ಜೆಲ್ಲಿ ಎಲ್ಲವನ್ನೂ ಸೇರಿಸಿಯೇ ಕಟ್ಟುತ್ತೇವೆ. ಹನಿಹನಿ ಗೂಡಿದರೆ ಹಳ್ಳ ಎಂಬಂತೆ ಎಲ್ಲರೂ ಸೇರಿ ಪಕ್ಷ ಕಟ್ಟಿದ್ದಾರೆ. ಅದರಲ್ಲಿ ಶಿವಕುಮಾರ್ ಪ್ರಮುಖ ಪಾತ್ರ ವಹಿಸಿದ್ದಾರೆ ಅನ್ನೋದು ನಿಜ. ಅದನ್ನು ನಾವು ಇಲ್ಲ ಅನ್ನೋಕಾಗುತ್ತಾ..?

ನೀರಾವರಿ ಸಲಹಾ ಸಮಿತಿ ಸಭೆ ನಿರ್ಣಯ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ

ಕಾಲುವೆಗೆ ಕಟ್ಟು ಪದ್ಧತಿ ನೀರು

ಮೈಸೂರು: ಜಿಲ್ಲೆಯ ಕಬಿನಿ ಜಲಾಶಯದಿಂದ ಅಚ್ಚುಕಟ್ಟು ಪ್ರದೇಶಕ್ಕೆ ಮುಂಗಾರು ಹಂಗಾಮಿಗಾಗಿ ಕಟ್ಟು ನೀರು ಪದ್ಧತಿಯಡಿ (ತಿಂಗಳಲ್ಲಿ 15 ದಿನ ಹರಿಸಿ, 10 ದಿನ ನಿಲ್ಲಿಸುವುದು) ಕಾಲುವೆಗಳಿಗೆ ನೀರು ಹರಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಕಾಡಾ ನೀರಾವರಿ ಇಲಾಖೆಯ ದಕ್ಷಿಣ ವಲಯ ಮುಖ್ಯ ಎಂಜಿನಿಯರ್ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಜುಲೈ 15ರಿಂದ ಕೆರೆಕಟ್ಟೆಗಳಿಗೆ ಹಾಗೂ ಜುಲೈ 25ರಿಂದ ಕಟ್ಟು ಪದ್ಧತಿಯ ಆಧಾರದಲ್ಲಿ ಕಬಿನಿ ಜಲಾಶಯದ ನಾಲಾ ಜಾಲಗಳಲ್ಲಿ ನೀರು ಹರಿಸುವುದಾಗಿ ಪ್ರಕಟಿಸಲಾಯಿತು. ನಾಲಾ ಜಾಲದ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ನೀರಾವರಿ ಇಲಾಖೆಯಿಂದ ಮಾಹಿತಿ ಪಡೆದ ಸಚಿವರು, ನಾಲೆಯಲ್ಲಿ ಹೂಳು ಹಾಗೂ ಜಂಗಲ್ ತೆರವುಗೊಳಿಸಿ ನಂತರ ನೀರು ಹರಿಸಲು ಅಗತ್ಯ ಕ್ರಮ ವಹಿಸುವಂತೆ ಸಚಿವರು ತಿಳಿಸಿದರು.

ನಾಲೆಗಳಲ್ಲಿ ಹೂಳು ತೆರವುಗೊಳಿಸುವ ಮೂಲಕ ಕೊನೆಯವರೆಗೂ ನೀರು ತಲುಪುವಂತೆ ನಿರ್ವಹಣೆ ಮಾಡಬೇಕು ಎಂದು ಸಭೆಯಲ್ಲಿ ಜಿಲ್ಲೆಯ ಶಾಸಕರು ತಿಳಿಸಿದರು. ಸಭೆಯಲ್ಲಿ ಎಚ್.ಡಿ.ಕೋಟೆ ಶಾಸಕರಾದ ಅನಿಲ್ ಚಿಕ್ಕಮಾದು, ಆರ್.ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಲಕ್ಷ್ಮೀ ಕಾಂತ ರೆಡ್ಡಿ, ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಸಿಇಒ ಎಸ್.ಯುಕೇಶ್ ಕುಮಾರ್, ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವಿರ್ ಆಸಿಫ್ ಹಾಗೂ ಕಬಿನಿ ಅಧೀಕ್ಷಕ ಇಂಜಿನಿಯರ್ ಮಹೇಶ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರಿನ ಕಾಡಾ ದಕ್ಷಿಣ ವಲಯ ಮುಖ್ಯ ಎಂಜಿನಿಯರ್ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ನಡೆಯಿತು.

ಅಪೂರ್ವ ಆಸ್ಪತ್ರೆ ಆರಂಭ

ಕೆ.ಆರ್.ಪೇಟೆ: ಪಟ್ಟಣದ ಮೈಸೂರು ಮುಖ್ಯ ರಸ್ತೆಯಲ್ಲಿರುವ ನ್ಯೂ ಅಪೂರ್ವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನೂತನವಾಗಿ ಆರಂಭವಾದ ಡಯಾಲಿಸಿಸ್ ಘಟಕವನ್ನು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಲೋಕಾರ್ಪಣೆಗೊಳಿಸಿದರು.

ಗ್ರಾಮೀಣ ಪ್ರದೇಶದ ಜನತೆಗಾಗಿ ಅಪೂರ್ವ ಅನಿಲ್ ಅವರು ಆರಂಭಿಸಿರುವ ನ್ಯೂ ಅಪೂರ್ವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯು ಅತ್ಯಾಧುನಿಕ ತಂತ್ರಜ್ಞಾನದ ಸೌಲಭ್ಯಗಳನ್ನು ಒಳಗೊಂಡ ಸ್ಪೆಷಾಲಿಟಿ ಆಸ್ಪತ್ರೆಯಾಗಿದ್ದು ಇಂದು ಗ್ರಾಮೀಣ ಹಾಗೂ ಪಟ್ಟಣದ ಜನತೆ ಆರೋಗ್ಯ ಸೇವೆಗೆ ಬೇಕಾಗಿರುವ ಡಯಾಲಿಸಿಸ್ ಘಟಕವನ್ನು ಆರಂಭಿಸಿರುವುದು ಒಳ್ಳೆಯ ಬೆಳವಣಿಗೆ ಎಂದು ಅಭಿಮಾನದಿಂದ ಹೇಳಿದರು.

ಮಂಡ್ಯ ಜಿಲ್ಲಾ ಕೇಂದ್ರದಿಂದ 70 ಕಿಲೋ ಮೀಟರ್ ದೂರದಲ್ಲಿರುವ ಕೆ ಆರ್ ಪೇಟೆ ಜನರು ದೂರದ ಮೈಸೂರು ಹಾಸನ ಮಂಡ್ಯ ಬೆಂಗಳೂರು ನಗರಗಳಲ್ಲಿ ಚಿಕಿತ್ಸೆಗೆ ಅವಲಂಬಿಸಿದ್ದಾರೆ. ಈಗ ಕೃಷ್ಣರಾಜಪೇಟೆ ಪಟ್ಟಣದಲ್ಲಿಯೇ ಅತ್ಯಾಧುನಿಕ ಸೌಲಭ್ಯ ಒಳಗೊಂಡಿರುವ ನ್ಯೂ ಅಪೂರ್ವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯು ಆರಂಭವಾಗಿರುವುದು ತುಂಬಾ ಅನುಕೂಲವಾಗಲಿದೆ ಎಂದು ಬಾಲದಂಡಿ ಹೇಳಿದರು.

ಆಸ್ಪತ್ರೆಯ ತಜ್ಞ ವೈದ್ಯರಾದ ಡಾ.ಕಿರಣ್ ಮಾತನಾಡಿ, ಅಪೂರ್ವ ಆಸ್ಪತ್ರೆಯಲ್ಲಿ ನವೀನ ಮಾದರಿಯ ಎಲ್ಲಾ ಬಗೆಯ ಚಿಕಿತ್ಸೆಗಳು ಸ್ಪರ್ಧಾತ್ಮಕ ದರದಲ್ಲಿ ದೊರೆಯುತ್ತವೆ ಎಂದರು. ಪಿಎಸ್‌ಐಗಳಾದ ಬಿ.ಸುಮಾರಾಣಿ, ಆನಂದೇಗೌಡ, ತಜ್ಞ ವೈದ್ಯರಾದ ಡಾ. ನಿರೂಪರಾಜ್, ಡಾ.ಪ್ರಜ್ವಲ್, ಡಾ.ಚಿರಾಗ್, ಟಿಎಚ್‌ಒ ಡಾ.ಅಜಿತ್, ಪುರಸಭೆ ಸದಸ್ಯ ಕೆ.ಎಸ್. ಪ್ರಮೋದ್ ಕುಮಾರ್, ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಅಪೂರ್ವ ಅನಿಲ್, ಅವಿನಾಶ್ ಭಾಗವಹಿಸಿದ್ದರು.

ಎಸ್ಪಿ ಆಸ್ಪತ್ರೆಯನ್ನು ಉದ್ಘಾಟಿಸಿದರು.

ವೈಭವದ ಗುರು ಪೂರ್ಣಿಮೆ ಆಚರಣೆ

ಮೈಸೂರು: ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ವತಿಯಿಂದ ಗುರು ಪೂರ್ಣಿಮೆಯನ್ನು ಮೈಸೂರು–ಬನ್ನೂರು ರಸ್ತೆ ಹಾರೋಹಳ್ಳಿ ಮತ್ತು ಬಿದರಗೂಡು ಗ್ರಾಮದ ನಡುವೆ ಇರುವ ವೇಂಕಟಾರ್ಜುನ ಧ್ಯಾನ ಮಂದಿರದಲ್ಲಿ ಅತ್ಯಂತ ವೈಭವದಿಂದ ಆಚರಿಲಾಯಿತು.

ವೆಂಕಟಾಚಲ ಅವಧೂತರ ಆಶೀರ್ವಾದ ಮತ್ತು ಅರ್ಜುನ ಅವಧೂತರ ದಿವ್ಯ ಉಪಸ್ಥಿತಿಯಲ್ಲಿ ಹಾಗೂ ಸಾವಿರಾರು ಜನರ ಸಮ್ಮುಖದಲ್ಲಿ ನಡೆದ ಗುರು ಪೂರ್ಣಿಮೆ ಕಾರ್ಯಕ್ರಮವನ್ನು ಮಾಜಿ ಸಚಿವ ಶಿವಣ್ಣ , ಮಾಜಿ ಶಾಸಕ ನಾಗೇಂದ್ರ ಉದ್ಘಾಟಿಸಿ ಗುರುಗಳ ಸಾಮಿಪ್ಯದಲ್ಲಿ ತಮಗಾದ ಅನುಭವಗಳನ್ನು ಹಂಚಿಕೊಂಡರು.

ಅರ್ಜುನ ಅವಧೂತರು ಮಾತನಾಡಿ, ಗುರು ಪೂರ್ಣಿಮೆ ಗುರುವಿನ ಹಬ್ಬವಲ್ಲ. ಶಿಷ್ಯರು ಒಂದಾಗಿ ಸೇರಿ ಆಚರಿಸುವ ಹಬ್ಬವೇ ಗುರು ಪೂರ್ಣಿಮೆ ಎಂದು ಬಣ್ಣಿಸಿದರು. ಮೊದಲಿಗೆ ಬನ್ನೂರು ಮುಖ್ಯ ರಸ್ತೆಯಿಂದ ಆಶ್ರಮದವರೆಗೂ ಬೃಹತ್ ಶೋಭಾಯಾತ್ರೆ ನಡೆಸಲಾಯಿತು.

ಇದಕ್ಕೂ ಮುನ್ನ ಗುರು ನಿವಾಸದಲ್ಲಿ ವ್ಯಾಸ ಪೂಜೆ, ಗೋ ಪೂಜೆ ನಡೆದರೆ, ಧ್ಯಾನ ಮಂದಿರದಲ್ಲಿ ಕಾಕಡಾರತಿ, ಗಣಪತಿ ಹೋಮ, ದತ್ತಾತ್ರೇಯ ಹೋಮ, ವೇಂಕಟಾಚಲ ಅವಧೂತರ ಹೋಮ, ಪಾದುಕ ಪೂಜೆ ನಡೆಯಿತು. ನಂತರ ಗುರುಗಳು ಪೂರ್ಣಾಹುತಿ ನೆರವೇರಿಸಿದರು. ಈ ವೇಳೆ ಭಕ್ತರೊಬ್ಬರು ಅರ್ಜುನ ಅವಧೂತರಿಗೆ ಬೆಳ್ಳಿ ಕಿರೀಟ ಧಾರಣೆ ಮಾಡಿದರು. ಅದನ್ನು ಗುರುಗಳು ತಮ್ಮ ಗುರುಗಳಾದ ವೇಂಕಟಾಚಲ ಅವಧೂತರಿಗೆ ಸಮರ್ಪಿಸಿದರು.ಎಲ್ಲಾ ಭಕ್ತಾದಿಗಳಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಶ್ರೀಗಳ ಸಾನ್ನಿಧ್ಯದಲ್ಲಿ ಗುರು ಪೂರ್ಣಿಮೆ ನಡೆಯಿತು.

ಹೊಸಕೋಟೆ ಗ್ರಾಪಂ ಅಧ್ಯಕ್ಷರಾಗಿ ಶೋಭಾ

ತಿ.ನರಸೀಪುರ: ತಾಲೂಕಿನ ಹೊಸಕೋಟೆ ಗ್ರಾಪಂ ನೂತನ ಅಧ್ಯಕ್ಷರಾಗಿ ಶೋಭಾ, ಉಪಾಧ್ಯಕ್ಷರಾಗಿ ಜಾನಕಮ್ಮ ಅವಿರೋಧವಾಗಿ ಆಯ್ಕೆಗೊಂಡರು.

ಗ್ರಾಪಂ ಕಚೇರಿಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶೋಭಾ, ಉಪಾಧ್ಯಕ್ಷ ಸ್ಥಾನಕ್ಕೆ ಜಾನಕಮ್ಮ ಮಾತ್ರ ತಮ್ಮ ಉಮೇದುವಾರಿಕೆ ಸಲ್ಲಿಸಿದ ಕಾರಣ ಅವರೇ ಅಧ್ಯಕ್ಷರಾಗಿ ಆಯ್ಕೆಗೊಂಡರು. ಚುನಾವಣಾಧಿಕಾರಿಯಾಗಿ ರೇಷ್ಮೆ ಇಲಾಖೆಯ ನಿಯೋಜಿತ ಅಧಿಕಾರಿ ಕೆ.ಎನ್.ಕೆಂಪರಾಜು ಕಾರ್ಯ ನಿರ್ವಹಿಸಿದರು

ಚುನಾವಣೆ ಸಭೆಯಲ್ಲಿ ಸದಸ್ಯರಾದ ಗಂಗಾಧರ್, ಕಾವ್ಯಶ್ರೀ, ಜಯಲಕ್ಷ್ಮಿ, ಎಂ. ಬಾಲಕೃಷ್ಣ, ಎಂ.ಆನಂದ್, ಚನ್ನಮ್ಮ, ನಾಗರಾಜು, ನಂದಿನಿ, ಎ.ಸತೀಶ್ ಹಾಜರಿದ್ದು ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಸಮ್ಮತಿಸಿ ಸೂಚಿಸಿದರು.

ನೂತನ ಅಧ್ಯಕ್ಷೆ ಶೋಭಾ ಮಾತನಾಡಿ, ಮೂಲ ಸೌಕರ್ಯಗಳಾದ ಕುಡಿಯುವ ನೀರು, ಬೀದಿದೀಪ, ರಸ್ತೆ ಮತ್ತು ಚರಂಡಿ ಸೌಲಭ್ಯ ಒದಗಿಸುವ ಕಡೆ ಹೆಚ್ಚು ಗಮನಹರಿಸಲಾಗುವುದು ಎಂದರು.

ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ತಿ.ನರಸೀಪುರ ಪಿಕಾರ್ಡ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಜಿಪಂ ಮಾಜಿ ಸದಸ್ಯ ಕೆ. ಮಹದೇವ, ಕಾಂಗ್ರೆಸ್ ಮುಖಂಡರಾದ ಕೆಂಪಯ್ಯನಹುಂಡಿ ಅರುಣ್,ಮನ್ನೆಹುಂಡಿ ಪರಶಿವ, ಕೆ.ಎಸ್.ಮಹೇಶ್, ಆನಂದ್, ಲೋಕೇಶ್, ಗುತ್ತಿಗೆದಾರ ಮಾಧು, ಬಸಯ್ಯ,ಆರ್.ಪಿ ಹುಂಡಿ ನಾಗರಾಜು, ಪುಟ್ಟಸ್ವಾಮಿ,ಪಿಡಿಒ ಅಮ್ಜದ್ ಪಾಶ ಇದ್ದರು.

ಹೊಸಕೋಟೆ ಗ್ರಾಪಂ ಅಧ್ಯಕ್ಷರಾಗಿ ಶೋಭಾ ಆಯ್ಕೆಗೊಂಡರು.

ಹಿತಾಸಕ್ತಿಗಳಿಂದ ಮಾಹಿತಿ ಹಕ್ಕು ದುರ್ಬಳಕೆ: ಸಚಿವ

ಮೈಸೂರು: ಮಾಹಿತಿ ಹಕ್ಕು ಕಾಯಿದೆಯನ್ನು ಕೆಲ ಪಟ್ಟಭದ್ರ ಹಿತಾಸಕ್ತಿಗಳು ದುರುಪಯೋಗ ಪಡಿಸಿಕೊಳ್ಳುತ್ತಿದ್ದು, ಇದರಿಂದ ಪರಿಣಾಮಕಾರಿಯಾದ ಕಾಯಿದೆಗೆ ಕೊಡಲಿ ಪೆಟ್ಟು ಬೀಳುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ. ಡಾ.ಎಚ್.ಸಿ.ಮಹದೇವಪ್ಪ ಬೇಸರ ವ್ಯಕ್ತಪಡಿಸಿದರು.

'ನ್ಯಾಯದ ದಿಕ್ಕು, ಮಾಹಿತಿ ಹಕ್ಕು' ವಿಷಯ ಕುರಿತು ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆ ರಾಜ್ಯ ಘಟಕ ವತಿಯಿಂದ ಶನಿವಾರ ನಗರದ ದಿ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಭ್ರಷ್ಟರಿಗೆ ಮಾಹಿತಿ ಹಕ್ಕು ಕಾಯ್ದೆ ಎಚ್ಚರಿಕೆ ಗಂಟೆಯಾಗಿದೆ. ಆದರೆ ಈ ಕಾಯ್ದೆಯನ್ನು ಕೆಲ ವ್ಯಕ್ತಿಗಳು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಪರಿಣಾಮ ಕಳಂಕ ಅಂಟುತ್ತಿದ್ದಾರೆ. ವ್ಯಕ್ತಿಯನ್ನು ವೈಯಕ್ತಿಕವಾಗಿ ತೇಜೋವಧೆ ಮಾಡಲು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಜನ ಸ್ನೇಹಿಯಾದ ಕಾಯ್ದೆಯ ಮೂಲ ಸ್ವರೂಪದ ಹಾದಿ ತಪ್ಪುತ್ತಿದೆ. ಅನ್ಯರು ತಮ್ಮ ಸ್ವಾರ್ಥಕ್ಕಾಗಿ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಳ್ಳದಂತೆ ನೋಡಿಕೊಳ್ಳುವ ಜವಾಬ್ದಾರಿ ನೈಜ ಹೋರಾಟಗಾರರ ಮೇಲೆ ಇದೆ ಎಂದು ಅಭಿಪ್ರಾಯಪಟ್ಟರು.

ವ್ಯಕ್ತಿತ್ವ ವಿಕಸನ ತರಬೇತುದಾರ ಆರ್.ಎ.ಚೇತನ್ ರಾಮ್ ಮಾತನಾಡಿ, ಸಾರ್ವಜನಿಕರು ತಪ್ಪು ಮಾಡದ ವ್ಯಕ್ತಿತ್ವ ಬೆಳಸಿಕೊಳ್ಳಬೇಕು. ಆಗಿದ್ದರಷ್ಟೆ ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣ ಸಾಧ್ಯ. ಸಮಾಜ ಸುಧಾರಣೆಗೆ ಹೋರಾಟ ಬಹಳ ಮುಖ್ಯ. ಹೋರಾಟದಿಂದಲೇ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

'ನ್ಯಾಯದ ದಿಕ್ಕು, ಮಾಹಿತಿ ಹಕ್ಕು' ಕುರಿತ ತರಬೇತಿ ಕಾರ್ಯಾಗಾರದಲ್ಲಿ ಸಚಿವ ಡಾ.ಎಚ್.ಸಿ.ಮಹಾದೇವಪ್ಪ ಅವರನ್ನು ಸನ್ಮಾನಿಸಲಾಯಿತು.

ಮನಮೋಹನ್ ಸಿಂಗ್ ಜಾರಿಗೆ ತಂದ ಕಾಯಿದೆ

ಮಾಹಿತಿ ಹಕ್ಕು ಕಾಯ್ದೆ ಅತ್ಯಂತ ಪಾರದರ್ಶಕ ಹಾಗೂ ಕ್ರಾಂತಿಕಾರಿಕ ಕಾಯ್ದೆ ಆಗಿದೆ. ಈ ಕಾಯ್ದೆ ಜಾರಿಗೆ ಬಂದ ಮೇಲೆ ಕಾನೂನು ವಿರುದ್ಧವಾಗಿ ನಡೆಯುತ್ತಿದ್ದ ಕಾರ್ಯಗಳು ನಿಯಂತ್ರಣಕ್ಕೆ ಬಂದಿದೆ. ಮಾಹಿತಿ ಹಕ್ಕು ಕಾಯ್ದೆ ಹೋರಾಟಕ್ಕೆ ನೈತಿಕತೆ ಇರಬೇಕು. ಮಾಹಿತಿ ಪಾರದರ್ಶಕವಾಗಿ ಜನರಿಗೆ ಸಿಗಬೇಕು ಎಂದು ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಇದನ್ನು ಜಾರಿಗೆ ತಂದರು ಎಂದು ಸಚಿವರು ಮಾಹಿತಿ ನೀಡಿದರು.

ಪುನರ್ವಸತಿ ಕೇಂದ್ರದ ಸಂಸ್ಥಾಪಕ ಎಸ್.ಬಸವರಾಜು ಮಾತನಾಡಿ, ಹೋರಾಟಗಾರರು ಸಮಸ್ಯೆಗಳಿಗೆ ಹೆದರಿ ಹಿಂದೆ ಸರಿಯಬಾರದು. ಹೋರಾಟ ಸರಿ ಇದ್ದರೇ ಇಡೀ ಸಮಾಜವೇ ನಿಮ್ಮ ಹಿಂದೆ ಇರುತ್ತದೆ ಎಂದು ತಿಳಿಸಿದರು.

ಮಾಹಿತಿ ಹಕ್ಕು ತಜ್ಞರಾದ ವೈ.ವಿ.ಮುರಳೀಧರನ್, ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಮುಖ್ಯಸ್ಥ ವೀರೇಶ್ ಬೆಳ್ಳೂರು, ಮಹಾರಾಜ ಕಾಲೇಜು ನಿವೃತ್ತ ಪ್ರಾಂಶುಪಾಲ ಪ್ರೊ.ಕಾಳಚೆನ್ನೇಗೌಡ, ಮಾಹಿತಿ ಹಕ್ಕು ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಹೇಮಂತ್ ನಾಗರಾಜು ಮತ್ತಿತರರು ಇದ್ದರು.

ಗ್ರಾಮೀಣ ಅಭಿವೃದ್ಧಿಗೂ ಶ್ರಮಿಸುವ ರೋಟರಿ ಸಂಸ್ಥೆ

ಮದ್ದೂರು: ರೋಟರಿ ಸಂಸ್ಥೆಯು ನಿರಂತರವಾಗಿ ಸಮಾಜಮುಖಿ ಸೇವಾ ಕಾರ್ಯಗಳೊಟ್ಟಿಗೆ ಗ್ರಾಮೀಣ ಪ್ರಗತಿಗೂ ಶ್ರಮಿಸುತ್ತಿರುವುದು ಉತ್ತಮ ಬೆಳವಣಿಗೆಯೆಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ನಿಶ್ಚಲಾನಂದ ಶ್ರೀಗಳು ತಿಳಿಸಿದರು.

ಪಟ್ಟಣದ ಜಿ.ಪಿ.ಎಸ್. ಕನ್ವೆನ್ಷನ್ ಹಾಲ್ ನಲ್ಲಿ ರೋಟರಿ ಸಂಸ್ಥೆ ಆಯೋಜಿಸಿದ್ದ ನೂತನ ಅಧ್ಯಕ್ಷರ ಪದಗ್ರಹಣ ಮತ್ತು ಅನುಸ್ಥಾಪನಾ ಸಮಾರಂಭದಲ್ಲಿ ಮಾತನಾಡಿದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ ಪುರಸ್ಕಾರದೊಟ್ಟಿಗೆ ಅತ್ಯುನ್ನತ ಶಿಕ್ಷಣ ಪಡೆಯಲು ಆರ್ಥಿಕ ನೆರವು ಒದಗಿಸುತ್ತಿರುವ ಸಂಸ್ಥೆಯ ಕಾರ್ಯ ಶ್ಲಾಘನೀಯ. ಮಕ್ಕಳು ಮೊಬೈಲ್‌ಗಳಿಗೆ ಹೆಚ್ಚಾಗಿ ಆಸಕ್ತರಾಗುತ್ತಿದ್ದು ಇದೊಂದು ಗಂಭೀರ ಸಮಸ್ಯೆಯಾಗಿದ್ದು ಮಕ್ಕಳನ್ನು ಮೊಬೈಲ್‌ನಿಂದ ದೂರವಿಟ್ಟು ಅವರಿಗೆ ಜವಾಬ್ದಾರಿಯುತ ಬದುಕಿನ ದಾರಿಗೆ ಕರೆದೊಯ್ಯಬೇಕಿದೆ, ಎಂದರು.

ನೂತನ ಅಧ್ಯಕ್ಷ ಎಸ್.ಪಿ.ಶ್ರೀನಿವಾಸ್ ಮಾತನಾಡಿ, ಸಮಾಜದ ಹಿತಕ್ಕಾಗಿ ಶಿಕ್ಷಣ, ಆರೋಗ್ಯ, ಯುವಕರ ಸಬಲೀಕರಣ, ಜಾನುವಾರುಗಳ ತಪಾಸಣಾ ಶಿಬಿರ ಇನ್ನಿತರ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಲಿದ್ದೇವೆ ಎಂದರು.

ವೈದ್ಯಕೀಯ ಕ್ಷೇತ್ರದ ಡಾ. ಆರ್. ಮನೋಹರ್, ಡಾ. ಎಂ.ವಿ.ಶೀಲಾ ರವರಿಗೆ 'ಪಬ್ಲಿಕ್ ಸರ್ವಿಸ್ ಅವಾರ್ಡ್' ನೀಡಿ ಗೌರವಿಸಲಾಯಿತು. ಈ ವೇಳೆ ಜಿಲ್ಲಾ ಪಾಲಕ ಎಲಿಜಬೆತ್ ಚೆರಿಯನ್, ಸಂಸ್ಥೆಯ ಮಾಜಿ ಅಧ್ಯಕ್ಷರಾದ ಬಿ.ಡಿ. ಹೊನ್ನೇಗೌಡ, ತಿಪ್ಪೂರು ರಾಜೇಶ್, ಬಿ.ಎಸ್.ಅನುಪಮಾ, ಬರ್ನಾಡಪ್ಪ, ಚನ್ನಾಂಕೇಗೌಡ, ಲೋಕೇಶ್ ಹಾಜರಿದ್ದರು.

ಮದ್ದೂರು ರೋಟರಿ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಶ್ರೀಗಳು ಚಾಲನೆ ನೀಡಿದರು.

ಸಮ ಸಮಾಜದ ಆಶಯ ಬಿತ್ತಿದ ವಚನಗಳು

ಮಡಿಕೇರಿ: ಕಾಯಕ ಮಹತ್ವ, ತ್ರಿವಿಧ ದಾಸೋಹ ಪರಿಕಲ್ಪನೆ, ಸಾಮಾಜಿಕ ಸಮಾನತೆ, ದಯೆ, ಧರ್ಮದ ಪರಿಕಲ್ಪನೆ, ಅನುಭಾವ, ಸಮ ಸಮಾಜದ ಆಶಯಗಳನ್ನು ಶರಣರ ವಚನಗಳಲ್ಲಿ ಕಾಣಬಹುದಾಗಿದೆ ಎಂದು ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರ ಅಭಿಪ್ರಾಯಪಟ್ಟರು.

ತೊರೆನೂರು ವಿರಕ್ತ ಮಠದಲ್ಲಿ ಮಾಸಿಕ ಪುಣ್ಣಿಮೆ ಪೂಜಾ ಕಾರ್ಯಕ್ರಮ, ಶಿವಾನುಭವ ಗೋಷ್ಠಿ ಮತ್ತು ಫ.ಗು.ಹಳಕಟ್ಟಿಯವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಹನ್ನೆರಡನೇ ಶತಮಾನದಲ್ಲಿಯೇ ಕರ್ಮಠತನದ ಸಾಮಾಜಿಕ ವ್ಯವಸ್ಥೆಯ ವರ್ಗ–ಜಾತಿ–ಲಿಂಗ ತಾರತಮ್ಯವನ್ನು ನೇರವಾಗಿ ವಿರೋಧಿಸಿ ಸಮ ಸಮಾಜದ ಮಾನವೀಯ ಮೌಲ್ಯಗಳನ್ನು ಇಡೀ ಜಗತ್ತಿಗೆ ಸಾರಿದರು. ಜನಪರವಾದ ಮತ್ತು ಲೋಕಕಲ್ಯಾಣಕರವಾದ ಚಿಂತನೆಗಳು ಬಸವಾದಿ ಶರಣರ ವಚನಗಳಲ್ಲಿ ಕಂಡುಬರುತ್ತದೆ ಎಂದರು.

ರಾವ್ ಸಾಹೇಬ್ ಎಂದೇ ಪ್ರಸಿದ್ಧರಾಗಿದ್ದ ಫ.ಗು. ಹಳಕಟ್ಟಿಯವರು ತಮ್ಮ ವಕೀಲ ವೃತ್ತಿಯನ್ನು ತ್ಯಜಿಸಿ ಇಡೀ ತಮ್ಮ ಬದುಕನ್ನು ಶರಣರ ವಚನಗಳನ್ನು ಸಂಗ್ರಹಿಸಿ ಪ್ರಕಟಿಸುವುದಕ್ಕಾಗಿ ಮುಡಿಪಾಗಿಟ್ಟವರು ಎಂದರು.

ಶ್ರೀ ಸ್ವತಂತ್ರ ಬಸವಲಿಂಗ ಸ್ವಾಮೀಜಿ ಆಶೀರ್ವಚನ ನೀಡಿ, ತಮ್ಮ ವಚನಗಳ ಮೂಲಕ ಆತ್ಮಸಾಕ್ಷಿಯಾಗಿ ಇಡೀ ಮನುಕುಲಕ್ಕೆ ಸಾರ್ಥಕ ಜೀವನದ ದಾರ್ಶನಿಕ ಮೌಲ್ಯಗಳನ್ನು ಸಾರಿದ ಶ್ರೇಯಸ್ಸು ಈ ನಾಡಿನ ಶರಣರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ತೊರೆನೂರು ವಿರಕ್ತ ಮಠದ ಪೀಠಾಧ್ಯಕ್ಷರಾದ ಶ್ರೀಮಲ್ಲೇಶ ಸ್ವಾಮಿ, ಲಿಂಗಾಯಿತ ಮಹಾಸಭಾ ಕೊಡಗು ಘಟಕದ ಅಧ್ಯಕ್ಷರಾದ ಹೆಚ್.ವಿ. ಶಿವಪ್ಪ ಹಾಗೂ ಅಕ್ಕನ ಬಳಗದವರು ಉಪಸ್ಥಿತರಿದ್ದರು.

ತೊರೆನೂರು ವಿರಕ್ತ ಮಠದ ಮಾಸಿಕ ಪುಣ್ಣಿಮೆ ಪೂಜಾ ಕಾರ್ಯಕ್ರಮದಲ್ಲಿ ಕೊಡಗು ವಿವಿ ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರ ಮಾತನಾಡಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕರಿಗೆ ಅಭಿನಂದನೆ

ಕೆ.ಆರ್.ನಗರ: ಪಿಎಲ್‌ಡಿ ಬ್ಯಾಂಕ್ ಜಿಲ್ಲಾ ನಿರ್ದೇಶಕ ತಿಮ್ಮರಾಯಿಗೌಡ ಕೆ.ಆರ್.ನಗರದ ಕಾಂಗ್ರೆಸ್ ಕಛೇರಿಯಲ್ಲಿ ಎಂಡಿಸಿಸಿ ಬ್ಯಾಂಕ್‌ನ ನಿರ್ದೇಶಕ ದೊಡ್ಡಸ್ವಾಮೇಗೌಡ ಅವರನ್ನು ಅಭಿನಂದಿಸಿದರು. ಈ ವೇಳೆ ಕೆ.ಆರ್.ನಗರ ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಪ್ರದೀಪ್, ನಿರ್ದೇಶಕರಾದ ಕೆ.ಟಿ.ಚಂದ್ರೇ ಗೌಡ, ಡಿ.ಆರ್.ರಾಹುಲ್, ಕುಳ್ಳಬೋರೇಗೌಡ, ಚಂದ್ರಹಾಸ, ದೊಡ್ಡೇಕೊಪ್ಪಲು ಗ್ರಾ.ಪಂ. ಸದಸ್ಯ ಕೆ.ಪಿ.ಜಗದೀಶ್, ಯಡತೋರೆ ಬಿಇಡಿ ಕಾಲೇಜು ವ್ಯವಸ್ಥಾಪಕ ಲೋಕೇಶ್‌ಭರಣಿ ಮತ್ತಿತರರು ಇದ್ದರು.

ಮಳೆ ಸಾಧ್ಯತೆ: ಮುನ್ನೆಚ್ಚರದ ಕ್ರಮಕ್ಕೆ ಸಚಿವರಿಂದ ಸೂಚನೆ

ಮಡಿಕೇರಿ: ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದ್ದು, ಯಾವುದೇ ಅನಾಹುತ ಸಂಭವಿಸದಂತೆ ಅಗತ್ಯ ಮುನ್ನೆಚ್ಚರ ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಸೂಚಿಸಲಾಗಿದ್ದ ಕ್ರಮಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಸಚಿವರು ಹೆಚ್ಚಿನ ಮಳೆಯಿಂದಾಗಿ ಜಿಲ್ಲೆಯಾದ್ಯಂತ ಹಲವು ರಸ್ತೆಗಳು ಗುಂಡಿ ಬಿದ್ದಿದ್ದು, ಸದ್ಯ ವೆಟ್‌ಮಿಕ್ಸ್ ಹಾಕಬೇಕು. ಶೀಘ್ರ ರಸ್ತೆ ಗುಂಡಿ ಮುಚ್ಚುವ ಕಾರ್ಯ ಆಗಬೇಕು ಎಂದರು.

ಅಂಗನವಾಡಿ, ಶಾಲೆ, ವಿದ್ಯಾರ್ಥಿ ನಿಲಯ, ವಸತಿ ಶಾಲೆಗಳ ಕಟ್ಟಡ ಸುಸ್ಥಿತಿ ಸಂಬಂಧಿಸಿದಂತೆ ವರದಿ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ ಎಂದು ಸಚಿವರು ತಿಳಿಸಿದರು. ಸಿಎಂ ಕಾನೂನು ಸಲಹೆಗಾರರಾದ ಎ.ಎಸ್.ಪೊನ್ನಣ್ಣ ಮಾತನಾಡಿ, ಕಳೆದ ಬಾರಿಯ ಮಳೆಹಾನಿ ಕಾಮಗಾರಿಯನ್ನು ಇನ್ನೂ ಕೈಗೊಂಡಿಲ್ಲ. ಸರಕಾರ ಹಣ ನೀಡಿದೆ, ಆದರೂ ಎಂಜಿನಿಯರ್ ಕೆಲಸ ನಿರ್ವಹಿಸಲು ಮುಂದಾಗುವುದಿಲ್ಲ, ಈ ರೀತಿಯಾದರೆ ಹೇಗೆ ಎಂದು ಪ್ರಶ್ನಿಸಿದರು. ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷರಾದ ಧರ್ಮಜ ಉತ್ತಪ್ಪ ಅವರು ಮಳೆಯಿಂದಾಗಿ ರಸ್ತೆಗಳು ತುಂಬಾ ಗುಂಡಿಬಿದ್ದಿದ್ದು ಇವುಗಳನ್ನು ಸರಿಪಡಿಸುವಂತಾಗಬೇಕು ಎಂದು ಹೇಳಿದರು. ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ ಉತ್ತರಿಸಿ, ರಸ್ತೆ ದುರಸ್ತಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು. ಸಚಿವರಾದ ಎನ್.ಎಸ್.ಭೋಸರಾಜು ಮಾತನಾಡಿ, 71 ಅಂಗನವಾಡಿಗಳು, 1154 ಶಾಲೆಗಳ ಸಣ್ಣ ಪುಟ್ಟ ದುರಸ್ತಿಗ್ತೆ ಗಮನಹರಿಸುವಂತೆ ಸೂಚಿಸಿದರು. ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ಸ್ಥಳೀಯ ಸಂಸ್ಥೆಗಳಲ್ಲಿ ಎನ್‌ಡಿಆರ್‌ಎಫ್ ಹಣ ಬಿಡುಗಡೆ ಮಾಡಲಾಗುವುದು, ರಸ್ತೆ ಸರಿಪಡಿಸುವಂತೆ ಸೂಚಿಸಿದರು. ಶಾಸಕರಾದ ಡಾ.ಮಂತರ್ ಗೌಡ, ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಅಭಿಷೇಕ್ ಇತರರು ಇದ್ದರು.

ಸರಕಾರದ ಸಾಧನೆಗಳ ಸಮಾವೇಶ ಜು.19ರಂದು

ಸಿಎಂ ಅಧ್ಯಕ್ಷತೆ | ಅವಳಿ ಜಿಲ್ಲೆಗಳ ಜನ ಭಾಗಿ | ಪೂರ್ವಭಾವಿ ಸಭೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಜು.19ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ಸರಕಾರದ ಸಾಧನೆಗಳ ಸಮಾವೇಶ ಮತ್ತು ವಿವಿಧ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆಯ ಬೃಹತ್ ಕಾರ್ಯಕ್ರಮ ಆಯೋಜಿಸುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಶನಿವಾರ ಸರಕಾರಿ ಅತಿಥಿಗೃಹದಲ್ಲಿ ಪೂರ್ವಭಾವಿ ಸಭೆ ನಡೆಸಿದರು.

ಮೈಸೂರು ಹಾಗೂ ಚಾಮರಾಜನಗರ ಭಾಗದ ಶಾಸಕರು, ಮಾಜಿ ಶಾಸಕರು, ನಿಗಮ, ಮಂಡಳಿ ಅಧ್ಯಕ್ಷರು, ಜನಪ್ರತಿನಿಧಿಗಳು, ಅಧಿಕಾರಿ ವರ್ಗದವರು ಹಾಗೂ ಮುಖಂಡರೊಡನೆ ಚರ್ಚಿಸಿ, ಅಭಿಪ್ರಾಯ ಸಂಗ್ರಹಿಸಿದ ಬಳಿಕ ಮಾತನಾಡಿದರು.

ಕಾರ್ಯಕ್ರಮವನ್ನು ಬಹಳ ಅಚ್ಚುಕಟ್ಟಾಗಿ ಆಯೋಜಿಸಬೇಕು. ಸುಸಜ್ಜಿತ ವೇದಿಕೆ ನಿರ್ಮಾಣ, ಆಸನದ ವ್ಯವಸ್ಥೆಯನ್ನು ಬಹಳ ವ್ಯವಸ್ಥಿತವಾಗಿ ಮಾಡಿಕೊಳ್ಳಬೇಕು. ವೇದಿಕೆಯಲ್ಲಿ ಅತಿಥಿಗಳಿಗೆ ಶಿಷ್ಟಚಾರದಂತೆ ಆಸನ ವ್ಯವಸ್ಥೆ ಮಾಡುವುದು. ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರಿಗೆ ಅಗತ್ಯ ಆಸನದ ವ್ಯವಸ್ಥೆ, ಆಗಮನ ಹಾಗೂ ನಿರ್ಗಮನಕ್ಕೆ ಪ್ರತ್ಯೇಕ ಗೇಟ್‌ಗಳು ಹಾಗೂ ಅಗತ್ಯ ಮೂಲ ಸೌಕರ್ಯಗಳ ಸಿದ್ಧತೆ ಕೈಗೊಳ್ಳಲು ಅಧಿಕಾರಿಗಳಿಗೆ ಸಲಹೆ ನೀಡಿದರು.

ಸಾವಿರಾರು ಸಂಖ್ಯೆಯಲ್ಲಿ ಬರುವ ಸಾರ್ವಜನಿಕರಿಗೆ ಕಾರ್ಯಕ್ರಮದಲ್ಲಿ ಯಾವುದೇ ಕಿರಿಕಿರಿ ಉಂಟಾಗಬಾರದು. ಇದು ಸರಕಾರಿ ಸಮಾರಂಭವಾಗಿದ್ದು, ಪಾಲ್ಗೊಳ್ಳುವ ಎಲ್ಲರಿಗೂ ಕುಡಿಯುವ ನೀರು, ಊಟ ಮತ್ತು ಸಾರಿಗೆ ವ್ಯವಸ್ಥೆ ಕೈಗೊಂಡು, ಯಾವುದಕ್ಕೂ ಕೊರತೆ ಉಂಟಾಗದಂತೆ ನಡೆಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ರಾಜ್ಯ ಹಾಗೂ ರಾಷ್ಟ್ರೀಯ ನಾಯಕರು ಭಾಗವಹಿಸಲಿದ್ದಾರೆ. ಹೀಗಾಗಿ ಮೈಸೂರು ಹಾಗೂ ಚಾಮರಾ ಜನಗರ ಜಿಲ್ಲೆಯ ಜನಪ್ರತಿನಿಧಿಗಳು, ಮುಖಂಡರು, ಕಾರ್ಯಕರ್ತರೆಲ್ಲರೂ ಸಮಾರಂಭಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಹೇಳಿದರು. ಸಭೆಯಲ್ಲಿ ಶಾಸಕರಾದ ತನ್ವೀರ್ ಸೇಠ್, ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಹರೀಶ್ ಗೌಡ, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ಎಚ್.ಪಿ.ಮಂಜುನಾಥ್, ಎಂ.ಕೆ.ಸೋಮಶೇಖರ್, ಆರ್. ನರೇಂದ್ರ, ಸುನೀತ ವೀರಪ್ಪಗೌಡ, ಕಳಲೆ ಕೇಶವಮೂರ್ತಿ, ಆಯೂಬ್ ಖಾನ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯತ್ ಸಿಇಒ ಎಸ್.ಯುಕೇಶ್ ಕುಮಾರ್, ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಇತರರು ಉಪಸ್ಥಿತರಿದ್ದರು.



ಸಚಿವ ಡಾ.ಎಚ್.ಸಿ.ಮಹಾದೇವಪ್ಪ ಪೂರ್ವಭಾವಿ ಸಭೆ ನಡೆಸಿದರು.

ಸಮಾಚಾರ ಸಣ್ಣದಲ್ಲ

ರೋಹಿತ್ ಶರ್ಮಾ ನಿವೃತ್ತಿ ಎಚ್ಚರಿಕೆ

ಮುಂಬಯಿ: ಹಾಲಿ ಟೆಸ್ಟ್ ನಾಯಕ ಶುಭ್‌ಮನ್ ಗಿಲ್ ಅವರನ್ನು ಏಕದಿನ ಕ್ರಿಕೆಟ್ ಪಂದ್ಯಕ್ಕೂ ನಾಯಕನನ್ನಾಗಿ ಮಾಡುವ ಬಗ್ಗೆ ಚರ್ಚೆ ನಡೆಯುತ್ತಿರುವ ನಡುವೆಯೇ ನಾಯಕತ್ವ ಕಳೆದುಕೊಂಡು ತಾವು ಆಡುವುದಿಲ್ಲ ಎಂದು ಕ್ರಿಕೆಟ್ ದಿಗ್ಗಜ ರೋಹಿತ್ ಶರ್ಮಾ ಸ್ಪಷ್ಟಪಡಿಸಿದ್ದಾರೆ ಎನ್ನಲಾಗಿದೆ. ಮುಖ್ಯ ಕೋಚ್ ಗೌತಮ್ ಗಂಭೀರ್ ಬಳಿ ಮಾತನಾಡುವ ವೇಳೆ, ಈ ವಿಚಾರವನ್ನು ರೋಹಿತ್ ಶರ್ಮಾ ಪ್ರಸ್ತಾವಿಸಿ, ನಿವೃತ್ತಿ ತೆಗೆದುಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿ ದ್ದಾರೆ ಎನ್ನಲಾಗಿದೆ. 38 ವರ್ಷದ ರೋಹಿತ್ ಶರ್ಮಾ ಈಗಾಗಲೇ ಟಿ20 ಮತ್ತು ಟೆಸ್ಟ್ ಕ್ರಿಕೆಟಿನಿಂದ ನಿವೃತ್ತಿಯನ್ನು ಪಡೆದಿದ್ದು, 2027ರ ಏಕದಿನ ವಿಶ್ವಕಪ್ ಕ್ರೀಡಾಕೂಟದಲ್ಲಿ ಆಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವಿನ 3 ಏಕದಿನ ಮತ್ತು 5 ಟಿ20 ಸರಣಿ ಅಕ್ಟೋಬರ್‌ನಲ್ಲಿ ಆರಂಭವಾಗ ಲಿದ್ದು, ಎರಡಕ್ಕೂ ಒಬ್ಬರನ್ನೇ ನಾಯಕರನ್ನಾಗಿ ಮಾಡುವ ಇಂಗಿತವನ್ನು ಬಿಸಿಸಿಐ ಆಯ್ಕೆ ಸಮಿತಿ ವ್ಯಕ್ತಪಡಿಸಿದೆ.

ಖಾಲಿ ಅಂಗಳದಲ್ಲಿ ಮಹಾರಾಜ ಟೂರ್ನಿ

ಬೆಂಗಳೂರು: ಐಪಿಎಲ್ ಟ್ರೋಫಿ ವಿಜಯೋತ್ಸವ ಕಾರ್ಯಕ್ರಮದ ವೇಳೆ ನಡೆದ ಕಾಲ್ತುಳಿತ ದುರ್ಘಟನೆ ಹಿನ್ನೆಲೆಯಲ್ಲಿ ಆಗಸ್ಟ್‌ನಿಂದ ಆರಂಭವಾಗಲಿರುವ ನಾಲ್ಕನೇ ಆವೃತ್ತಿಯ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಗೆ ವೀಕ್ಷಿಸಲು ಪ್ರೇಕ್ಷಕರಿಗೆ ಅವಕಾಶವಿರುವುದಿಲ್ಲ. ಪಂದ್ಯಗಳನ್ನು ಖಾಲಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ನಡೆಸುವುದಾಗಿ ಕೆಎಸ್‌ಸಿಎ ಖಚಿತಪಡಿಸಿದೆ. ಮಹಾರಾಜ ಕ್ರಿಕೆಟ್ ಟೂರ್ನಿಯು ಆಗಸ್ಟ್ 11 ರಿಂದ 27ರವರೆಗೆ ನಡೆಯಲಿದೆ. ಭಾರತ ತಂಡದ ಆಟಗಾರರಾದ ಕರುಣ್ ನಾಯರ್, ಪ್ರಸಿದ್ಧ ಕೃಷ್ಣ ಮತ್ತು ಮಯಂಕ್ ಅಗರ್ವಾಲ್ ಅವರು ಟೂರ್ನಿಯಲ್ಲಿ ಆಡಲಿದ್ದಾರೆ. ಆಟಗಾರರ ಹರಾಜು ಪ್ರಕ್ರಿಯೆಯು ಜುಲೈ 15ರಂದು ನಡೆಯಲಿದೆ. ಪ್ರತಿಯೊಂದು ತಂಡವು ಕನಿಷ್ಠ 16 ಮತ್ತು ಗರಿಷ್ಠ 18 ಆಟಗಾರರನ್ನು ಹೊಂದಬಹುದಾಗಿದೆ. ಒಟ್ಟು ಆರು ತಂಡಗಳು ಆಡಲಿದ್ದು, ಟೂರ್ನಿಯ ಎಲ್ಲ ಪಂದ್ಯಗಳೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿವೆ. ಕಾಲ್ತುಳಿತ ದುರ್ಘಟನೆ ನಡೆ ಬಳಿಕ ಕೆಎಸ್‌ಸಿಎ ಕಾರ್ಯದರ್ಶಿಯಾಗಿದ್ದ ಎ.ಶಂಕರ್ ಮತ್ತು ಖಜಾಂಚಿ ಇ.ಎಸ್. ಜಯರಾಮ್ ಅವರು ಈ ಘಟನೆಯ ನಂತರ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದರು. ಪ್ರಕರಣದ ಕುರಿತ ವಿಚಾರಣೆಯು ರಾಜ್ಯ ಹೈಕೋರ್ಟ್ ಮತ್ತು ಕೇಂದ್ರಿಯ ಆಡಳಿತಾ ತ್ಮಕ ನ್ಯಾಯಮಂಡಳಿ (ಸಿಎಟಿ)ಯಲ್ಲಿ ನಡೆಯುತ್ತಿದೆ.

ಮೊದಲ ಇನ್ನಿಂಗ್ಸ್ ಟೈ | ಪಂತ್, ಜಡೇಜಾ ಅರ್ಧಶತಕ | ಸಮಸ್ಥಿತಿಯಲ್ಲಿ 3ನೇ ಟೆಸ್ಟ್

ಭಾರತಕ್ಕೆ ಆಸರೆಯಾದ ರಾಹುಲ್

ಲಾರ್ಡ್ಸ್: ಇಂಗ್ಲೆಂಡ್ ಪ್ರವಾಸದಲ್ಲಿ ತಮ್ಮ ಅದ್ಭುತ ಬ್ಯಾಟಿಂಗ್ ಲಯ ಮುಂದುವರಿಸುವ ಮೂಲಕ ಟೀಮ್ ಇಂಡಿಯಾ ಆರಂಭಿಕ ಆಟಗಾರ ಕೆ.ಎಲ್ ರಾಹುಲ್ (100) ಭಾರತಕ್ಕೆ ಮತ್ತೊಮ್ಮೆ ಆಸರೆಯಾದರು. ರಾಹುಲ್ ಶತಕ, ವಿಕೆಟ್‌ಕೀಪರ್ ರಿಷಭ್ ಪಂತ್ (74) ಮತ್ತು ರವೀಂದ್ರ ಜಡೇಜಾ (72) ಅವರ ಅರ್ಧ ಶತಕದ ಬಲದೊಂದಿಗೆ ಇಂಗ್ಲೆಂಡ್‌ನ 387 ರನ್‌ಗಳ ಮೊದಲ ಇನ್ನಿಂಗ್ಸ್ ಮೊತ್ತವನ್ನು ಸರಿಗಟ್ಟಿರುವ ಭಾರತ ಮೂರನೇ ಟೆಸ್ಟ್ ಪಂದ್ಯದಲ್ಲಿ ಸಮಬಲದ ಪ್ರದರ್ಶನ ನೀಡಿದೆ.

ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಶತಕ ಗಳಿಸಿದ ರಾಹುಲ್ ಲಾರ್ಡ್ಸ್‌ನಲ್ಲೂ ಶತಕ ಗಳಿಸಿ ತಮ್ಮ ಟೆಸ್ಟ್ ಶತಕದ ಸಂಖ್ಯೆಯನ್ನು 10ಕ್ಕೇರಿಸಿಕೊಂಡರು. ಎರಡನೇ ದಿನದಂದು ನಿಧಾನ ಗತಿಯಲ್ಲಿ ಅರ್ಧಶತಕ ಗಳಿಸಿ 53 ರನ್‌ಗಳಲ್ಲಿ ಅಜೇಯರಾಗಿ ಉಳಿದಿದ್ದ ಮೂರನೇ ದಿನ ಆಕ್ರಮಣಕಾರಿ ಆಟ ಪ್ರದರ್ಶಿಸಿದರು.ಬ್ರೈಡನ್ ಕಾರ್ಸೆ ಅವರ ಒಂದು ಓವರ್‌ನಲ್ಲಿ ಸತತ 3 ಬೌಂಡರಿಗಳನ್ನು ಬಾರಿಸಿದ ರಾಹುಲ್‌ಗೆ ಪಂತ್ ಉತ್ತಮ ಬೆಂಬಲ ನೀಡಿದರು. ಇವರಿಬ್ಬರು ಮೊತ್ತವನ್ನು 250 ರನ್‌ಗಳ ಗಡಿ ದಾಟಿಸಿದರು.

ಆದರೆ, ಊಟಕ್ಕೆ ಮುಂಚಿನ ಕೊನೆಯ ಓವರ್‌ನಲ್ಲಿ ರಾಹುಲ್ 98 ರನ್ ಗಳಿಸಿದ್ದಾಗ ರಿಷಭ್ ಪಂತ್ ನಡುವೆ ರನ್ ಕಸಿಯುವಾಗ ಸಂವಹನ ಕೊರತೆಯಿಂದ ಪಂತ್ ರನೌಟ್ ಆದರು. ಊಟದ ವಿರಾಮದ ಬಳಿಕ ಒಂದು ರನ್ ಗಳಿಸಿದ ರಾಹುಲ್ ಶತಕ ಪೂರೈಸಿದರು. ಆದರೆ ಶತಕದ ಬೆನ್ನಿಗೇ ಶೋಯಿಬ್ ಬಶೀರ್ ಎಸೆತಕ್ಕೆ ಔಟಾದರು. ರಾಹುಲ್ 177 ಎಸೆತಗಳಲ್ಲಿ 13 ಬೌಂಡರಿಗಳ ಸಹಾಯದಿಂದ 100 ರನ್ ಗಳಿಸಿದರು.

ಧೋನಿ ದಾಖಲೆ ಸರಿಗಟ್ಟಿದ ಪಂತ್: ಕ್ರಿಸ್ ವೋಕ್ಸ್ ಬೌಲಿಂಗ್‌ನಲ್ಲಿ ಶುಭಮನ್ ಗಿಲ್ ವಿಕೆಟ್ ಒಪ್ಪಿಸಿದ ಬಳಿಕ ಕ್ರೀಸ್‌ಗೆ ಬಂದ ರಿಷಭ್ ಪಂತ್ ತಮ್ಮ ಬೆರಳು ಗಾಯದ ಹೊರತಾಗಿಯೂ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದರು. ಅರ್ಧ ಶತಕವನ್ನು ಬಾರಿಸಿ ಇಂಗ್ಲೆಂಡ್ ನೆಲದಲ್ಲಿ ಅತಿ ಹೆಚ್ಚು ಟೆಸ್ಟ್ ಅರ್ಧಶತಕಗಳನ್ನು ಸಿಡಿಸಿದ ವಿಕೆಟ್‌ಕೀಪರ್, ಮಾಜಿ ನಾಯಕ ಎಂಎಸ್ ಧೋನಿ ದಾಖಲೆ ಸರಿಗಟ್ಟಿದರು. ಧೋನಿ 23 ಇನಿಂಗ್ಸ್‌ಗಳಲ್ಲಿ 8 ಶತಕ ದಾಖಲಿಸಿದರೆ ರಿಷಭ್ ಪಂತ್ 20 ಇನಿಂಗ್ಸ್‌ಗಳಲ್ಲಿ 8 ಅರ್ಧ ಶತಕ ದಾಖಲಿಸಿದ್ದಾರೆ. ದುರದೃಷ್ಟಕರ ರೀತಿಯಲ್ಲಿ ರನ್ ಔಟ್ ಆಗುವ ಮೊದಲು ಪಂತ್, 112 ಎಸೆತಗಳಲ್ಲಿ 74 ರನ್ ಗಳಿಸಿದರು.

ಬಳಿಕ ಬಂದ ರವೀಂದ್ರ ಜಡೇಜಾ 131 ಎಸೆತಗಳಲ್ಲಿ 72 ರನ್ ಬಾರಿಸಿ ಕ್ರಿಸ್ ವೋಕ್ಸ್‌ಗೆ ವಿಕೆಟ್ ಒಪ್ಪಿಸಿದರು. ನಿತೀಶ್ ರೆಡ್ಡಿ (30) ಮತ್ತು ವಾಷಿಂಗ್ಟನ್ ಸುಂದರ್ (23) ಏಳನೇ ವಿಕೆಟ್‌ಗೆ ಹೋರಾಟ ತಂಡದ ಮೊತ್ತವನ್ನು ಹೆಚ್ಚಿಸಿದರು. ಆದರೆ ಕೊನೆಯಲ್ಲಿ ಆಕಾಶ್ ದೀಪ್ (7) ಬುಮ್ರಾ (0) ಯಾವುದೇ ಪ್ರತಿರೋಧ ತೋರಲು ವಿಫಲರಾದರು. ಸಿರಾಜ್ ರನ್ ಗಳಿಸದೆ ಔಟಾಗದೇ ಉಳಿದರು. ಎರಡನೇ ಇನ್ನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ 2 ರನ್ ಗಳಿಸಿ ನಾಲ್ಕನೇ ದಿನಕ್ಕೆ ಆಟ ಕಾದಿರಿಸಿದೆ. ಇಂಗ್ಲೆಂಡ್ ಪರ ಕ್ರಿಸ್ ವೋಕ್ಸ್ 3 ವಿಕೆಟ್ ಪಡೆದು ಮಿಂಚಿದರು.

ರಾಹುಲ್ ದಾಖಲೆ

ಇಂಗ್ಲೆಂಡ್ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಶತಕ ಗಳಿಸಿದ ಕೆ.ಎಲ್. ರಾಹುಲ್ ಲಾರ್ಡ್ಸ್ ಕ್ರೀಡಾಂಗಣದಲ್ಲಿ 2ನೇ ಶತಕ ದಾಖಲಿಸಿ ದಾಖಲೆ ಪುಸ್ತಕ ಸೇರಿದ್ದಾರೆ. ಈ ಐತಿಹಾಸಿಕ ಮೈದಾನದಲ್ಲಿ ವೆಂಗ್ ಸರ್ಕಾರ್ ಮೂರು ಶತಕಗಳನ್ನು ದಾಖಲಿಸಿದ್ದಾರೆ. ಉಳಿದ ಯಾವ ಆಟಗಾರರೂ ಒಂದಕ್ಕಿಂತ ಹೆಚ್ಚು ಟೆಸ್ಟ್ ಶತಕ ದಾಖಲಿಸಿಲ್ಲ. ಇದೀಗ ರಾಹುಲ್ ಡಬಲ್ ಶತಕದ ಸಾಧನೆ ಮಾಡಿದ್ದಾರೆ. 2021ರ ಪ್ರವಾಸದಲ್ಲಿ ರಾಹುಲ್ ಈ ಮೈದಾನದಲ್ಲಿ ಮೊದಲ ಶತಕ ಗಳಿಸಿದ್ದರು.

ಸಂಭ್ರಮಿಸದ ಬುಮ್ರಾ

ಮೊದಲ ಇನ್ನಿಂಗ್ಸ್‌ನಲ್ಲಿ ಐದು ವಿಕೆಟ್ ಪಡೆದು ಐತಿಹಾಸಿಕ ಲಾರ್ಡ್ಸ್ ಹಾನರ್ ಬೋರ್ಡ್‌ನಲ್ಲಿ ಸ್ಥಾನ ಪಡೆದರೂ ಸಂಭ್ರಮಿಸದ ಬೌಲರ್, ಜಸ್‌ಪ್ರಿತ್ ಬುಮ್ರಾ, 'ನಾನು ದಣಿದಿದ್ದರಿಂದ ಅಲ್ಲಿ ಸಂಭ್ರಮಾಚರಣೆ ಮಾಡಲಿಲ್ಲ. ಜಿಗಿಯಲು ಈಗ ನಾನು 21-22 ವಯಸ್ಸಿನವನಲ್ಲ' ರಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ವಂತಿಕಾಗೆ ರೋಚಕ ಜಯ

ಮಾಜಿ ವಿಶ್ವ ಚಾಂಪಿಯನ್‌ಗೆ ಸೋಲುಣಿಸಿದ ಅನ್ನಾ ಉಶೆನಿನಾ

ಹೊಸದಿಲ್ಲಿ: ಮಾಜಿ ವಿಶ್ವ ಚಾಂಪಿಯನ್ ಅನ್ನಾ ಉಶೆನಿನಾ ಅವರನ್ನು ಟೈ-ಬ್ರೇಕರ್‌ನಲ್ಲಿ ರೋಚಕವಾಗಿ ಮಣಿಸಿದ 23ರ ವಯಸ್ಸಿನ ಭಾರತೀಯ ಇಂಟರ್‌ನ್ಯಾಶನಲ್ ಮಾಸ್ಟರ್ ವಂತಿಕಾ ಅಗರ್ವಾಲ್ ಜಾರ್ಜಿಯಾದ ಬಟುಮಿಯಲ್ಲಿ ನಡೆದ ಫಿಡೆ ಮಹಿಳೆಯರ ವಿಶ್ವಕಪ್ 2025ರಲ್ಲಿ ಮೂರನೇ ಸುತ್ತು ತಲುಪಿದ್ದಾರೆ.

ಶುಕ್ರವಾರ ಟೈಬ್ರೇಕರ್‌ನಲ್ಲಿ ಅಂತ್ಯಗೊಂಡ ಪಂದ್ಯದಲ್ಲಿ ವಂತಿಕಾ ಅವರು ಅನ್ನಾ ಉಶೆನಿನಾರನ್ನು 4.5-3.5 ಅಂಕದ ಅಂತರದಿಂದ ಮಣಿಸಿದರು. ವಂತಿಕಾ ಹಾಗೂ ಉಶೆನಿನಾ ತಲಾ ಒಂದು ಕ್ಲಾಸಿಕಲ್ ಗೇಮ್ ಜಯಿಸಿದ ನಂತರ ಈ ಇಬ್ಬರ ನಡುವಿನ 2ನೇ ಸುತ್ತಿನ ಪಂದ್ಯವು ಟೈಬ್ರೇಕರ್‌ಗೆ ವಿಸ್ತರಣೆಯಾಯಿತು. ವಂತಿಕಾ ಮೊದಲ ರ‍್ಯಾಪಿಡ್ ಟೈಬ್ರೇಕರ್ ಜಯಿಸಿದರೆ, ಆದರೆ, 2ನೇ ಟೈಬ್ರೇಕರ್ ಅನ್ನು ಸೋತರು. ಅಂತಿಮವಾಗಿ ವಂತಿಕಾ ಅವರು ಮೊದಲ ಗೇಮ್ ನಲ್ಲಿ ಗೆಲುವು ಹಾಗೂ 2ನೇ ಗೇಮ್ ನಲ್ಲಿ ಡ್ರಾ ಸಾಧಿಸುವ ಮೂಲಕ ಮೇಲುಗೈ ಸಾಧಿಸಿದರು.

ವಂತಿಕಾ 3ನೇ ಸುತ್ತು ತಲುಪಿದ ಹಿನ್ನೆಲೆಯಲ್ಲಿ 6,750 ಡಾಲರ್ (ಸುಮಾರು 5.8 ಲಕ್ಷ ರೂ.) ಬಹುಮಾನ ಮೊತ್ತ ಗಳಿಸಿದ್ದಾರೆ. 3ನೇ ಸುತ್ತಿನಲ್ಲಿ ಮಾಜಿ ವಿಶ್ವ ರ‍್ಯಾಪಿಡ್ ಹಾಗೂ 3 ಬಾರಿಯ ವಿಶ್ವ ಬ್ಲಿಜ್ ಮಹಿಳೆಯರ ಚಾಂಪಿಯನ್ ಗ್ರ್ಯಾಂಡ್ ಮಾಸ್ಟರ್ ಕಟೆರಿನ ಲಾನ್ನೊರನ್ನು ಎದುರಿಸಲಿದ್ದಾರೆ.

2ನೇ ಸುತ್ತಿನಲ್ಲಿ ಸ್ವಿಸ್ ನ ಮಾಜಿ ವಿಶ್ವ ಚಾಂಪಿಯನ್ ಅಲೆಕ್ಸಾಂಡ್ರಾ ಕೊಸ್ಟೆನಿಕ್‌ಗೆ ಶರಣಾದ ಇಂಟರ್ ನ್ಯಾಶನಲ್ ಮಾಸ್ಟರ್ ಪದ್ಮಿನಿ ರಾವತ್ ಟೂರ್ನಿಯಿಂದ ನಿರ್ಗಮಿಸಿದರು. ಇಂಟರ್‌ನ್ಯಾಶನಲ್ ಮಾಸ್ಟರ್ ಪ್ರಿಯಾಂಕಾ ಕೆ. ಕೂಡ ಪೋಲ್ಯಾಂಡ್ ನ ಕೌಡಿಯಾ ಕುಲೋನ್ ಎದುರು ಎರಡೂ ರ‍್ಯಾಪಿಡ್ ಟೈಬ್ರೇಕ್ ಪಂದ್ಯಗಳನ್ನು ಸೋತು ಟೂರ್ನಿಯಿಂದ ಹೊರ ನಡೆದರು.

ಭಾರತದ ಇತರ ನಾಲ್ವರು ಚೆಸ್ ತಾರೆಯರು ಈಗಾಗಲೇ ಟೂರ್ನಿಯ 3ನೇ ಸುತ್ತಿಗೆ ತಲುಪಿದ್ದಾರೆ. ಕೊನೆರು ಹಂಪಿ ಪೋಲ್ಯಾಂಡ್ ನ ಕೌಡಿಯಾ ಕುಲೋನ್‌ರನ್ನು, ಹರಿಕಾ ಅವರು ಗ್ರೀಸ್ ನ ಸ್ಟಾವ್‌ಲಾ ಸೋಲಾಕಿಡೌ ಅವರನ್ನು ಎದುರಿಸಲಿದ್ದಾರೆ. ಆರ್. ವೈಶಾಲಿ ಅವರು ಅಮೆರಿಕದ ಕಾರಿಸಾ ಯಿಪ್‌ರನ್ನು, ದಿವ್ಯಾ ದೇಶ್‌ಮುಖ್ ಅವರು ಸರ್ಬಿಯದ ಟೆಯೊಡೊರಾ ವಿರುದ್ಧ 3ನೇ ಸುತ್ತಿನ ಪಂದ್ಯದಲ್ಲಿ ಸೆಣಸಾಡಲಿದ್ದಾರೆ.

ವಿಂಡೀಸ್ ಟಿ20 ಸರಣಿಗೆ: ಆಸೀಸ್ ತಂಡ ಪ್ರಕಟ

ಸಿಡ್ನಿ: ಜುಲೈ 21 ರಿಂದ ಪ್ರಾರಂಭವಾಗುವ ವೆಸ್ಟ್ ಇಂಡೀಸ್ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಗಾಗಿ ಆಸ್ಟ್ರೇಲಿಯಾ 16 ಸದಸ್ಯರ ತಂಡವನ್ನು ಪ್ರಕಟಿಸಿದೆ. ಸ್ಪೆನ್ಸರ್ ಜಾನ್ಸನ್ ಮತ್ತು ಜೋಶ್ ಹ್ಯಾಜಲ್‌ವುಡ್ ಬದಲಿಗೆ ಜೇಕ್ ಫ್ರೇಸರ್ -ಮೆಕ್‌ಗುರ್ಕ್ ಮತ್ತು ಕ್ಸೇವಿಯರ್ ಬಾರ್ಟ್ಲೆಟ್ ಸ್ಥಾನ ಪಡೆದಿದ್ದಾರೆ. ಜಾನ್ಸನ್ ಇನ್ನೂ ಬೆನ್ನು ನೋವಿನಿಂದ ಚೇತರಿಸಿಕೊಳ್ಳುತ್ತಿದ್ದು, ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಗೆ ತಯಾರಿ ನಡೆಸಲು ಹ್ಯಾಜಲ್‌ವುಡ್ ಈ ಸರಣಿಯಿಂದ ವಿಶ್ರಾಂತಿ ಪಡೆದಿದ್ದಾರೆ. ಮಿಚೆಲ್ ಮಾರ್ಷ್ ತಂಡವನ್ನು ಮುನ್ನಡೆಸಲಿದ್ದು, ಪ್ರಮುಖ ಆಟಗಾರರಾದ ಪ್ಯಾಟ್ ಕಮ್ಮಿನ್ಸ್ , ಮಿಚೆಲ್ ಸ್ಟಾರ್ಕ್ ಮತ್ತು ಟ್ರಾವಿಸ್ ಹೆಡ್ ಈ ಸರಣಿಯಲ್ಲಿ ಆಡುತ್ತಿಲ್ಲ. ಇತ್ತೀಚೆಗೆ ಏಕದಿನ ಕ್ರಿಕೆಟ್‌ಗೆ ನಿವೃತ್ತಿ ಹೇಳಿದ್ದ ಆಲ್ ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಜೋ-ಸ್ಟೆಫಾನಿಗೆ ವಿಂಬಲ್ಡನ್ ಮಿಶ್ರ ಪ್ರಶಸ್ತಿ

ಲಂಡನ್: ಜೆಕ್ ಗಣರಾಜ್ಯದ ನ ಕಟೆರಿನಾ ಸಿನಿಯಾಕೋವಾ ಹಾಗೂ ನೆದರ್‌ಲ್ಯಾಂಡ್ಸ್‌ನ ಸೆಮ್ ವರ್ಬೀಕ್ ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಶಿಪ್‌ನಲ್ಲಿ ಮಿಶ್ರ ಡಬಲ್ಸ್ ಪ್ರಶಸ್ತಿ ಜಯಿಸಿದ್ದಾರೆ. ಗುರುವಾರ ನಡೆದ ಫೈನಲ್ ಪಂದ್ಯದಲ್ಲಿ ಬ್ರಿಟನ್‌ನ ಜೋ ಸಾಲಿಸ್ಬರಿ ಹಾಗೂ ಬ್ರೆಝಿಲ್ ನ ಲುಯಿಸಾ ಸ್ಟೆಫಾನಿ ಅವರನ್ನು 7-6(3), 7-6(3) ಸೆಟ್‌ಗಳ ಅಂತರದಿಂದ ಮಣಿಸುವ ಮೂಲಕ ಈ ಸಾಧನೆ ಮಾಡಿದ್ದಾರೆ. ಸೆಂಟರ್ ಕೋರ್ಟ್‌ನಲ್ಲಿ ಸ್ಥಳೀಯ ಫೇವರಿಟ್ ಗಳಾದ ಸಾಲಿಸ್ಬರಿ ಹಾಗೂ ಸ್ಟೆಫಾನಿ ಅವರನ್ನು ಎದುರಿಸಿದ ಝೆಕ್ ಹಾಗೂ ಡಚ್ ಜೋಡಿ ಪೈಪೋಟಿಯಿಂದ ಕೂಡಿದ್ದ ಪಂದ್ಯದಲ್ಲಿ 2 ಸೆಟ್ ಗಳನ್ನು ಟೈಬ್ರೇಕರ್ ನಲ್ಲಿ ಗೆದ್ದುಕೊಂಡಿತು. ಸಿನಿಯಾಕೋವಾ ಹಾಗೂ ವರ್ಬೀಕ್ ಇದೇ ಮೊದಲ ಬಾರಿ ಒಟ್ಟಿಗೆ ಪ್ರಶಸ್ತಿಯನ್ನು ಜಯಿಸಿದ್ದಾರೆ. ಸಿನಿಯಾಕೋವಾ ತನ್ನ ಚೊಚ್ಚಲ ಮಿಶ್ರ ಡಬಲ್ಸ್ ಗ್ರ್ಯಾಂಡ್ ಸ್ಲಾಮ್ ಅನ್ನು ಗೆದ್ದುಕೊಂಡಿದ್ದಾರೆ. ವರ್ಬಿಕ್ ಕೂಡ ಇದೇ ಮೊದಲ ಬಾರಿ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿ ಜಯಿಸಿದರು.

ರಾಜನಿವಾಸದಲ್ಲಿ ಕರಾವಳಿ ಸೊಗಡು

ಕಾಂತಾರ ಸಿನಿಮಾದ ಯಶಸ್ಸಿನ ಬಳಿಕ ಸ್ಯಾಂಡಲ್‌ವುಡ್‌ನಲ್ಲಿ ಕರಾವಳಿ ಸೊಗಡಿನ ಸಿನಿಮಾಗಳು ಹೆಚ್ಚಾಗಿ ಮೂಡಿಬರುತ್ತಿವೆ. ರಾಜನಿವಾಸ ಕೂಡ ಆ ಸಿನಿಮಾಗಳ ಸಾಲಿಗೆ ಸೇರಿದೆ. ಮಿಥುನ್ ನಿರ್ದೇಶನದ ರಾಜನಿವಾಸ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಸಿನಿಮಾದ ಬಗ್ಗೆ ಕುತೂಲ ಮೂಡಿಸಿದೆ. ರಾಜ ನಿವಾಸ ಎರಡು ಕಾಲ ಘಟ್ಟದಲ್ಲಿ ಸಾಗುವ ಕಥೆಯೆಂಬದು ಟ್ರೇಲರ್‌ನಲ್ಲಿ ಕಾಣಸುತ್ತದೆ ಜತೆಗೆ ತುಳುನಾಡಿನ ದೈವಾರಾಧನೆ ಚಿತ್ರದ ಹೈಲೈಟ್ ಆಗಿದೆ. ನಂದಗ್ರಾಮಕ್ಕೆ ಬರುವ ನಾಯಕ ನಾಯಲಿ ಅಲ್ಲಿನ ನಿಗೂಢೆಯನ್ನು ಹೇಗೆ ಭೇಧಿಸುತ್ತಾರೆ ಎಂಬ ಥ್ರಿಲ್ಲಿಂಗ್ ಸ್ಟೋರಿಯೂ ಇಲ್ಲಿದೆ. ಲವ್, ಸೆಂಟಿಮೆಂಟ್ ಜತೆಗೆ ಆ್ಯಕ್ಷನ್ ಕೂಡ ಬೆರೆತಿದೆ. ರಾಘವ್ ನಾಯಕ್ ನಾಯಕನಾಗಿ ನಟಿಸಿದ್ದು ಕೃತಿಕಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸಂದೇಶನಗರ ಕಿಟ್ಟಿ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ನೀನಾಸಂ ಅಶ್ವತ್, ಯಮುನಾ ಸಂದೇಶನಿಧಿ, ಸಹನಾ ಮುಂತಾದವರು ತಾರಾಬಳಗದಲ್ಲಿದ್ದಾರೆ.

ರಾಜನಿವಾಸ ಚಿತ್ರದ ಟ್ರೇಲರ್ ನೋಡಿದಾಗ ಕೆಲವರಿಗೆ ಕಾಂತಾರ ಚಿತ್ರ ನೆನಪಾಗಬಹುದು. ಆದರೆ ಇದು ಕಾಂತಾರ ಚಿತ್ರಕ್ಕೂ ಮೊದಲೇ ಆರಂಭವಾದ ಚಿತ್ರ. ಕಾಂತಾರ ಬಿಡುಗಡೆಯಾದ ಬಳಿಕ ನಮ್ಮ ಚಿತ್ರದಲ್ಲಿ ಸಾಕಷ್ಟು ಬದಲಾವಣೆ ಮಾಡಿದ್ದೇವೆ. ಈಗ ನಮ್ಮ ಚಿತ್ರ ತೆರಗೆ ಬರಲು ಸಿದ್ದವಾಗಿದೆ. ಕನ್ನಡ, ತಮಿಳು, ತೆಲುಗು, ಮಲೆಯಾಳಂ ಸೇರಿದಂತೆ ನಾಲ್ಕು ಭಾಷೆಗಳಲ್ಲಿ ನಮ್ಮ ಚಿತ್ರ ಬಿಡುಗಡೆಯಾಗಲಿದೆ. ಸದ್ಯದಲ್ಲಿಯೇ ಮೊದಲ ಹಾಡು ರಿಲೀಸ್ ಆಗಲಿದೆ ಎಂದು ನಿರ್ದೇಶಕ ಮಿಥುನ್ ಹೇಳಿದರು.

ನಾನು ಕಲಾಮಂದಿರದ ವಿದ್ಯಾರ್ಥಿಯಾಗಿದ್ದೆ, ಹಾಗಾಗಿ ನಟನೆಯ ಜತೆಗೆ ಒಳ್ಳೆಯ ಸಿನಿಮಾ ನಿರ್ಮಾಣ ಮಾಡಬೇಕು ಎಂಬ ಆಸೆಯಿತ್ತು. ಅದೇ ವೇಳೆಯಲ್ಲಿ ನಿರ್ದೇಶಕರು ಬಂದು ಕಥೆ ಹೇಳಿದರು, ಸ್ಟೋರಿ ಮನಸನ್ನು ಕಾಡಿತು, ಚಿತ್ರ ನಿರ್ಮಾಣ ಮಾಡಲು ಸಮ್ಮತಿಸಿದೆ. ಎಲ್ಲರ ಶ್ರಮದಿಂದ ರಾಜನಿವಾಸ ಅದ್ಭುತವಾಗಿ ಮೂಡಿಬಂದಿದೆ. ನಮ್ಮ ರಾಜ್ಯ ಮಾತ್ರವಲ್ಲದೆ ಎಲ್ಲಾ ಕಡೆಯೂ ನಮ್ಮ ಚಿತ್ರಕ್ಕೆ ಮೆಚ್ಚುಗೆ ವ್ಯಕ್ತವಾಗಲಿದೆ ಎಂಬ ನಂಬಿಕೆ ನನಗಿದೆ ಎಂದು ನಿರ್ಮಾಪಕ ಆಂಜನಪ್ಪ ವಿಶ್ವಾಸ ವ್ಯಕ್ತಪಡಿಸಿದರು. ವಿಜಯ್ ಯಾರ್ಡ್ಲಿ ಸಂಗೀತ ಸಂಯೋಜಿಸಿದ್ದಾರೆ.

ಜೂನಿಯರ್ ಟೀಸರ್ ರಿಲೀಸ್

ಕಿರೀಟಿ ನಟನೆಯ ಚೊಚ್ಚಲ ಸಿನಿಮಾ ಮುಂದಿನ ವಾರ ಅದ್ದೂರಿಯಾಗಿ ತೆರೆಗೆ ಬರಲಿದೆ. ಹಾಡಿನಲ್ಲಿ ಮನಗೆದ್ದ ಜೂನಯರ್ ಈಗ ಟೀಸರ್ ಮೂಲಕವೂ ಗಮನಸೆಳೆದಿದ್ದಾನೆ. ಮನಸ್ಸು ಮುಟ್ಟುವ ಕಥೆ ಟ್ರೇಲರ್‌ನಲ್ಲಿದೆ. ಆ್ಯಕ್ಷನ್, ಎಮೋಷನ್, ಲವ್, ಫ್ಯಾಮಿಲಿ ಕಂಟೆಂಟ್ ಎಲ್ಲವನ್ನೂ ಟ್ರೇಲರ್‌ನಲ್ಲಿ ಬೆರೆತಿದೆ. ಜೂನಿಯರ್‌ನಲ್ಲಿ ಕಿರೀಟಿ ಆಲ್ ರೌಂಡರ್ ಆಗಿ ಕಾಣಿಸಿಕೊಂಡಿದ್ದಾರೆ. ಡ್ಯಾನ್ಸ್, ಫೈಟಿಂಗ್‌ನಲ್ಲಿ ಮನಗೆದ್ದಿದ್ದಾರೆ. ತಮ್ಮ ಪಾತ್ರಕ್ಕೆ ಅಗತ್ಯವಾದ ಮನೋಭಾವವನ್ನು ಅದ್ಭುತವಾಗಿ ನಿಭಾಯಿಸಿದ್ದು, ತಮ್ಮ ಕಾಮಿಡಿ ಮೂಲಕವೂ ಕಮಾಲ್ ಮಾಡಿದ್ದಾರೆ. ಹಾಗಾಗಿ ಕಿರೀಟಿಗೆ ಇದು ಚೊಚ್ಚಲ ಸಿನಿಮಾ ಅನಿಸುವುದಿಲ್ಲ. ಶ್ರೀಲೀಲಾ ನಾಯಕಿಯಾಗಿ ಕಾಣಿಸಿಕೊಂಡಿದ್ದು, ನಾಯಕನ ತಂದೆಯ ಪಾತ್ರದಲ್ಲಿ ರವಿಚಂದ್ರನ್ ನಟಿಸಿದ್ದಾರೆ. ಸುಧಾರಾಣಿ, ಜೆನಿಲಿಯಾ ಡಿಸೋಜಾ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಉಳಿದಂತೆ ರಾವ್ ರಮೇಶ್, ಅಚ್ಯುತ್ ಕುಮಾರ್, ಸತ್ಯ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ರಾಧಾಕೃಷ್ಣ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಕೆ.ಕೆ.ಸೆಂಥಿಲ್ ಕುಮಾರ್ ಛಾಯಾಗ್ರಹಣ ಅದ್ಭುತವಾಗಿದ್ದು, ರಾಕ್‌ಸ್ಟಾರ್ ದೇವಿ ಸಂದೇಶಪ್ರಸಾದ್ ಸಂಗೀತ ಚಿತ್ರದ ಹೈಲೈಟ್ ಆಗಿದೆ. ಜೂನಿಯರ್‌ನಲ್ಲಿ ರೋಮಾಂಚನಗೊಳಿಸುವ ಸಾಹಸ ದೃಶ್ಯಗಳಿದ್ದು, ಪೀಟರ್ ಹೆನ್ಸ್ ಸಾಹಸ ನಿರ್ದೇಶನ ಮಾಡಿದ್ದಾರೆ. ವಾರಾಹಿ ಬ್ಯಾನರ್‌ನಲ್ಲಿ ರಜನಿ ಕೊರ್ರಪಾಟಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಜೂನಿಯರ್ ಕನ್ನಡ, ತೆಲುಗು, ತಮಿಳು ಹಾಗೂ ಮಲೆಯಾಳಂಲ್ಲಿ ನಿರ್ಮಾಣವಾಗಿದ್ದು ಎಲ್ಲಾ ಭಾಷೆಗಳಲ್ಲಿಯೂ ಏಕಕಾಲಕ್ಕೆ ಬಿಡುಗಡೆಯಾಗಲಿದೆ.

ವಿಟಾಕೀಸ್





ಹುಟ್ಟುಹಬ್ಬದ ಸಂಭ್ರಮದಲ್ಲಿ ಶಿವಣ್ಣ

ಸೆಟ್ಟೇರಿದವು ಸಾಲು ಸಾಲು ಸಿನಿಮಾ

ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಅರವತ್ತ ಮೂರನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಶಿವಣ್ಣ ಅವರಿಗೆ ಅಭಿಮಾನಿಗಳು ಗಣ್ಯರು, ಚಿತ್ರರಂಗದ ಕಲಾವಿದರು ಶುಭಕೋರಿ ಸಂಭ್ರಮಿಸಿದ್ದಾರೆ. ಚಿತ್ರರಂಗದಲ್ಲಿಯೂ ನಲವತ್ತು ವರ್ಷ ಪೂರೈಸಿರುವ ಶಿವಣ್ಣ ಇಂದಿಗೂ ಬೇಡಿಕೆಯ ನಟರಾಗಿ ಗುರುತಿಸಿಕೊಂಡಿದ್ದಾರೆ. ಶಿವಣ್ಣ ಸಿನಿಮಾ ಎಂದರೆ ಅಲ್ಲಿ ಹೊಸತನ ಇದ್ದೇ ಇರುತ್ತದೆ. ಶಿವಣ್ಣ ಅವರಿಗೆ ಶಿವಣ್ಣನೆ ಸಾಟಿ. ಹಾಗಾಗಿ ಸೆಂಚೂರಿ ಸ್ಟಾರ್‌ಗಾಗಿ ಒಂದೇ ಒಂದು ಸಿನಿಮಾ ನಿರ್ದೇಶನ ಮಾಡಬೇಕು ಎಂಬುದು ಹಿರಿಯ ನಿರ್ದೇಶಕರಿಂದ ಹಿಡಿದು ಕಿರಿಯ ನಿರ್ದೇಶಕರವರೆಗೂ ಆಸೆಯಿದೆ. ಪ್ರತಿ ವರ್ಷವೂ ಶಿವಣ್ಣನ ಹುಟ್ಟುಹಬ್ಬದಂದು ಸಾಲು ಸಾಲು ಸಾಲು ಸಿನಿಮಾಗಳು ಸೆಟ್ಟೇರುತ್ತವೆ. ಅದು ಈ ವರ್ಷವೂ ಮುಂದುವರಿದಿದೆ. ಕರುನಾಡ ಚಕ್ರವರ್ತಿಗೆ ಸಿನಿಮಾ ನಿರ್ದೇಶನ ಮಾಡಲು ಹಲವರು ತುದಿಗಾಲಲ್ಲಿ ನಿಂತಿದ್ದಾರೆ. ಕೆಲವು ನಿರ್ದೇಶಕರು ಶಿವಣ್ಣ ಅಭಿನಯದ ಸಿನಿಮಾವನ್ನು ಘೋಷಿಸಿದ್ದಾರೆ.

ಸದ್ಯ ಶಿವರಾಜ್ ಕುಮಾರ್ ಸಂದೇಶನಿ ನಿರ್ದೇಶನದ ಎ ಫಾರ್ ಆನಂದ್, ಹೇಮಂತ್ ಎಂ.ರಾವ್ ನಿರ್ದೇಶನದ 666 ಆಪರೇಷನ್ ಡ್ರೀಮ್ ಥಿಯೇಟರ್, ಭೈರವನ ಕೊನೆಯ ಪಾಠ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಇದರ ಜತೆಗೆ ಸೆಂಚೂರಿ ಸ್ಟಾರ್ ತೆಲುಗಿನ ಪೆದ್ದಿ ಚಿತ್ರದಲ್ಲಿಯೂ ಪ್ರಮುಖ ಪಾತ್ರವೊಂದರಲ್ಲಿ ಬಣ್ಣಹಚ್ಚುತ್ತಿದ್ದಾರೆ. ಶಿವಣ್ಣ ಬರ್ತ್‌ಡೇ ದಿನವೇ ಪೆದ್ದಿ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದೆ. ಈ ಚಿತ್ರದಲ್ಲಿ ಶಿವಣ್ಣ, ಗೌರ್ ನಾಯ್ಡು ಪಾತ್ರದಲ್ಲಿ ನಟಿಸುತ್ತಿದ್ದು, ದಪ್ಪ ಮೀಸೆ ಬಿಟ್ಟು ಉಗ್ರ ಅವತಾರದಲ್ಲಿ ರಗಡ್ ಆಗಿ ಕಾಣಿಸಿಕೊಂಡಿದ್ದಾರೆ. ಇದು ಪವರ್ ಫುಲ್ ಪಾತ್ರ ಎಂಬುದು ಪೋಸ್ಟರ್‌ನಲ್ಲಿ ತಿಳಿಯುತ್ತದೆ.

ಖಾಕಿ ತೊಟ್ಟ ಶಿವಣ್ಣ

ಶ್ರಿತಿಕ್ ಮೋಷನ್ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಶಿವರಾಜ್ ಕುಮಾರ್ ಅಭಿನಯಿಸಲಿರುವ ಹೊಸ ಸಿನಿಮಾ ಮೂಡಿಬರುತ್ತಿದೆ. ಬಾಲಾಜಿ ಮಾಧವನ್ ಕಥೆ ಬರೆದು ಈ ಚಿತ್ರವನ್ನು ನಿರ್ದೇಶನ ಮಾಡತ್ತಿದ್ದು, ಈ ಸಿನಿಮಾದ ಪೋಸ್ಟರ್ ಅನಾವರಣವಾಗಿದೆ. ಮರ್ಡರ್ ಮಿಸ್ಟ್ರಿ ಸ್ಟೋರಿಯ ಈ ಸಿನಿಮಾದಲ್ಲಿ ಹ್ಯಾಟ್ರಿಕ್ ಹೀರೊ, ಪೊಲೀಸ್ ಇನ್‌ಸ್ಪೆಕ್ಟರ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಬೆಂಗಳೂರಿನಲ್ಲಿ ಅದ್ದೂರಿಯಾಗಿ ನಡೆಯಲಿರುವ ಚಿತ್ರದ ಮುಹೂರ್ತ ಕಾರ್ಯಕ್ರಮದಲ್ಲಿ ಈ ಸಿನಿಮಾದ ಅಧಿಕೃತ ಶೀರ್ಷಿಕೆ ಬಿಡುಗಡೆಯಾಗಲಿದೆ. ಈ ವರ್ಷಾಂತ್ಯದಲ್ಲಿ ಚಿತ್ರೀಕರಣವೂ ಪ್ರಾರಂಭವಾಗಲಿದೆ.

ಸೀಕ್ವೆಲ್ ಸಂಭ್ರಮ

ಮಫ್ತಿ ಚಿತ್ರದಲ್ಲಿ ಭೈರತಿ ರಣಗಲ್ ಆಗಿ ಮಿಂಚಿದ್ದ ಶಿವರಾಜ್ ಕುಮಾರ್ ಅವರನ್ನು ಕಂಡು ಅಭಿಮಾನಿಗಳು ಬಹುಪರಾಕ್ ಎಂದಿದ್ದರು. ಬಳಿಕ ಮಫ್ತಿಯ ಪ್ರೀಕ್ವೆಲ್ ಆಧರಿಸಿ ಭೈರತಿ ರಣಗಲ್ ಚಿತ್ರ ತೆರೆಗೆ ಬಂದು ಭರ್ಜರಿ ಯಶಸ್ಸು ಕಂಡಿತು. ಈಗ ಸೀಕ್ವೆಲ್ ಸಂಭ್ರಮ ಶುರುವಾಗಿದೆ. ಶಿವಣ್ಣ ಅಭಿನಯದ ಹಲವು ಚಿತ್ರಗಳು ಸೂಪರ್ ಹಿಟ್ ಆಗಿದ್ದವು, ಈಗ ಅದೇ ಸಿನಿಮಾಗಳ ಸೀಕ್ವೆಲ್ ಆಧರಿಸಿ ಸಿನಿಮಾಗಳು ಮೂಡಿಬರುತ್ತಿವೆ. ಅದರಲ್ಲಿ ಸೂರಿ ನಿರ್ದೇಶನದ ಟಗರು ಚಿತ್ರವೂ ಒಂದು, ಮುಂದೆ ಟಗರು 2 ಬರುವುದು ಖಚಿತವಾಗಿದ್ದು, ಈ ಸಿನಿಮಾ ಪೋಸ್ಟರ್ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಕೈಯಲ್ಲಿ ಮಚ್ಚು ಹಿಡಿದು ಶಿವಣ್ಣ ಕಂಗೊಳಿಸಿದ್ದಾರೆ. ಇದರ ಜತೆಗೆ ರಜನಿಕಾಂತ್ ಅವರ ಜತೆಗೆ ಜೈಲರ್ ಚಿತ್ರದಲ್ಲಿಯೂ ಶಿವರಾಜ್ ಕುಮಾರ್ ಅಭಿನಯಿಸಿದ್ದರು. ಈ ಚಿತ್ರದಲ್ಲಿ ಶಿವಣ್ಣ ಲುಕ್‌ನಲ್ಲಿ ನೋಡಿ ಸಿನಿಪ್ರಿಯರು ಖುಷಿಪಟ್ಟಿದ್ದರು. ಈಗ ಜೈಲರ್ ಸೀಕ್ವೆಲ್ ಆಧರಿಸಿ ಜೈಲರ್ 2 ಕೂಡ ಮೂಡಿಬರಲಿದೆ.

ಸ್ವಪ್ನ ಮಂಟಪದಲ್ಲಿ ರಾಘು

ಖ್ಯಾತ ನಿರ್ದೇಶಕ ಬರಗೂರು ರಾಮಚಂದ್ರಪ್ಪ ನಿರ್ದೇಶಿಸಿರುವ ಸ್ವಪ್ನ ಮಂಟಪ ಮುಂದಿನ ವಾರ ತೆರೆಗೆ ಬರಲಿದೆ. ಬರಗೂರು ರಾಮಚಂದ್ರಪ್ಪ ಅವರೇ ರಚಿಸಿರುವ ಕಾದಂಬರಿ ಇದಾಗಿದ್ದು, ಸಾಮಾಜಿಕ ಸಂದೇಶವನ್ನು ಹೊತ್ತು ಬರುತ್ತಿದೆ. ವಿಜಯ್ ರಾಘವೇಂದ್ರ ನಾಯಕನಾಗಿ ನಟಿಸಿದ್ದು, ರಂಜನಿ ರಾಘವನ್ ನಾಯಕಿಯಾಗಿ ಅಭಿನಯಸಿದ್ದಾರೆ.

ನಾನು ಇಪ್ಪತ್ತೈದು ವರ್ಷಗಳ ಹಿಂದೆ ಬರೆದಿದ್ದ ಸ್ವಪ್ನ ಮಂಟಪ ಕಾದಂಬರಿ ಈಗ ಸಿನಿಮಾ ರೂಪದಲ್ಲಿ ತೆರೆಗೆ ಬರುತ್ತಿದೆ. ಇದು ಪಾರಂಪರಿಕ ಸ್ಥಳಗಳ ಸಂರಕ್ಷಣೆಯನ್ನು ಪ್ರತಿಪಾದಿಸುವ ಚಿತ್ರವಾಗಿದೆ. ಹಿಂದೆ ರಾಜ ತನ್ನ ಎರಡನೇ ಹೆಂಡತಿಗಾಗಿ ನಿರ್ಮಿಸುತ್ತಿದ್ದ ಮಂಟಪವನ್ನು ಸ್ವಪ್ನ ಮಂಟಪ ಎಂದು ಕರೆಯುತ್ತಿದ್ದರು. ಒಂದು ಹಳ್ಳಿಯಲ್ಲಿ ರಾಜನೊಬ್ಬ ನಿರ್ಮಿಸಿದ ಸ್ವಪ್ನಮಂಟಪವನ್ನು ಕೆಲವರು ಕೆಡವಿ ಅನ್ಯ ಕಾರ್ಯಗಳಿಗೆ ಬಳಸಲು ಯತ್ನಿಸಿದಾಗ ನಾಯಕ ಮತ್ತು ನಾಯಕಿ, ಜನರಲ್ಲಿ ಜಾಗೃತಿ ಮೂಡಿಸಿ ಆ ಪಾರಂಪರಿಕ ಸ್ಥಳವನ್ನು ಉಳಿಸುವುದೆ ಚಿತ್ರದ ಪ್ರಮುಖ ಕಥಾಹಂದರ

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿದಂತೆ ಅನೇಕ ಚಿತ್ರೋತ್ಸವಗಳಲ್ಲಿ ನಮ್ಮ ಸಿನಿಮಾ ಪ್ರದರ್ಶನಗೊಂಡಿದ್ದು ಮೆಚ್ಚುಗೆ ಪಡೆದಿದೆ. ಎಂದು ನಿರ್ದೇಶಕ ಬರಗೂರು ರಾಮಚಂದ್ರಪ್ಪ ಹೇಳಿದರು.

ನನಗೆ ಬರಗೂರು ರಾಮಚಂದ್ರಪ್ಪ ಅವರ ನಿರ್ದೇಶನದ ಸಿನಿಮಾದಲ್ಲಿ ನಟಿಸಬೇಕೆಂಬ ಆಸೆಯಿತ್ತು. ಅದು ಈ ಚಿತ್ರದ ಮೂಲಕ ಈಡೇರಿದೆ, ಈ ಚಿತ್ರದ ಒಂದು ಹಾಡಿಗೂ ದನಿಯಾಗಿದ್ದೇನೆ ಎಂದು ವಿಜಯ ರಾಘವೇಂದ್ರ ಸಂತಸದಿಂದ ನುಡಿದರು. ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನ, ಸುರೇಶ್ ಅರಸ್ ಸಂಕಲನ ಹಾಗೂ ನಾಗರಾಜ್ ಆದವಾನಿ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಕನ್ನಡದಲ್ಲಿ ಹಲವು ಪ್ರಯೋಗಾತ್ಮಕ ಸಿನಿಮಾಗಳು ಮೂಡಿಬರುತ್ತಿವೆ. ಇಂತಹ ಚಿತ್ರಗಳನ್ನು ಉತ್ತೇಜಿಸಲು ಸರಕಾರ ಪ್ರತಿ ಜಿಲ್ಲೆಯಲ್ಲೂ ನೂರಾ ಐವತ್ತು ಆಸನಗಳ ಚಿತ್ರಮಂದಿರಗಳನ್ನು ತೆರೆಯಬೇಕು. ಆ ಚಿತ್ರಮಂದಿರಗಳಲ್ಲಿ ಟಿಕೆಟ್ ದರ ನೂರು ರೂಪಾಯಿಗಳನ್ನು ಮೀರಬಾರದು. ಆಗ ಹೆಚ್ಚಿನ ಜನರು ಸಿನಿಮಾ ನೋಡಲು ಬರುತ್ತಾರೆ. ನಾನು ಈ ಸಲಹೆಯನ್ನು ಮುಖ್ಯಮಂತ್ರಿಗಳಿಗೆ ನೀಡಿದ್ದೇನೆ. ಸರಕಾರ ಶೀಘ್ರ ಚಿತ್ರಮಂದಿರಗಳನ್ನು ತೆರೆಯಬೇಕು.

-ಬರಗೂರು ರಾಮಚಂದ್ರಪ್ಪ ನಿರ್ದೇಶಕ

ವಿಶ್ವವಾಣಿ
13.07.2025
ಭಾನುವಾರ

ವಿರಾಮ

ಮಗ ಬರೆದ ಅಪ್ಪನ ಆತ್ಮಕಥೆ!

ಪ್ರೇಮ ಕವಿ, 'ಮೈಸೂರು ಮಲ್ಲಿಗೆ'ಯ ಕವಿ ಎಂಬ ವಿಶೇಷಣಗಳಿಂದ ಪ್ರಸಿದ್ಧರಾಗಿರುವ ಕೆ.ಎಸ್.ನರಸಿಂಹ ಸ್ವಾಮಿ ಅವರನ್ನು ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಿದರೆ, ಅದು ಅವರ ಕಾವ್ಯಕ್ಕೆ, ಬದುಕಿಗೆ ಮಾಡಿದ ಅಪಚಾರ ಎಂದೇ ಹೇಳಬೇಕು. 'ಮೈಸೂರು ಮಲ್ಲಿಗೆ' ಕವನ ಸಂಕಲನದ ಮೂಲಕ ನಮ್ಮ ರಾಜ್ಯದ ಮೂಲೆ ಮೂಲೆಗಳಲ್ಲೂ ಪರಿಚಿತಗೊಂಡ ಕೆ.ಎಸ್.ನ. ಅವರು, 'ತೆರೆದ ಬಾಗಿಲು' ಮೊದಲಾದ ಅರ್ಥಪೂರ್ಣ ಕವನ ಸಂಕಲನಗಳನ್ನೂ ಹೊರತಂದಿದ್ದಾರೆ. ಅವರು ಕನ್ನಡ ಕಂಡ ಅಪರೂಪದ ಮತ್ತು ಪ್ರಸಿದ್ಧ ಕವಿ ಯಾದರೂ, ಸರಳ ಜೀವಿ; ಜತೆಗೆ ಅಮಾಯಕರೂ ಸಹ. ಅವರ ಸರಳ ಬದುಕು ಕಾವ್ಯಪ್ರೇಮಿಗಳನ್ನು ಬೆರಗು ಗೊಳಿಸಿದ್ದೂ ಇದೆ; ಪ್ರೇಮಗೀತೆಗಳ ಸರಮಾಲೆಯನ್ನೇ ಓದುಗರಿಗೆ ನೀಡಿದ ಕೆ.ಎಸ್.ನ. ಅವರ ವೈಯಕ್ತಿಕ ಬದುಕನ್ನು ಹತ್ತಿರದಿಂದ ನೋಡಿದ ಅವರ ಮಗ, ಕೆ.ಎನ್. ಮಹಾಬಲ ಅವರು, 'ನನ್ನ ಅಪ್ಪ ಕೆ.ಎಸ್.ನ.' ಎಂಬ ಪುಸ್ತಕವನ್ನು ಈಗ ಹೊರತಂದಿದ್ದಾರೆ; 'ಮೈಸೂರು ಮಲ್ಲಿಗೆ'ಯ ಹಾಡುಗಳನ್ನು ಕೇಳಿದವ ರಿಗೆ, ಕೆ.ಎಸ್.ನ.ಅವರ ಕಾವ್ಯವನ್ನು ಮೆಚ್ಚಿದವರಿಗೆ ಈ ಪುಸ್ತಕದಲ್ಲಿನ ಪುಟ್ಟ ಪುಟ್ಟ ಲೇಖನಗಳು ಆಪ್ತವಾಗ ಬಲ್ಲವು!



ಕೆ ಎನ್ ಮಹಾಬಲ

ಕವಿಯ ಮಗ ರಚಿಸಿದ ಪುಸ್ತಕ!

'ನನ್ನ ಅಪ್ಪ ಕೆ.ಎಸ್.ನ.' ಪುಸ್ತಕವನ್ನು ರಚಿಸಿದ, ಕೆ.ಎಸ್.ನ. ಅವರ ಮಗ ಕೆ.ಎನ್.ಮಹಾಬಲ ಅವರು ಸಾಹಿತ್ಯಾಸಕ್ತರು; ಗದ್ಯ ಬರಹಗಳನ್ನು ಬರೆಯುವುದು ಅವರ ಗಂಭೀರ ಹವ್ಯಾಸ. ನಿವೃತ್ತ ಬ್ಯಾಂಕ್ ಉದ್ಯೋಗಿ ಯಾಗಿರುವ ಕೆ. ಎನ್.ಮಹಾ ಬಲ ಅವರು ಇದೀಗ ಹೊರತಂದಿರುವ, ಅವರ ತಂದೆಯ ಕುರಿತಾದ ಹೊಸ ಪುಸ್ತಕವು, ಆ ಪ್ರೆಮಕವಿಯ ಬದುಕಿನ ಒಳನೋಟಗಳನ್ನು ನೀಡುವುದ ರಿಂದಾಗಿ, ಸಾಹಿತ್ಯಾಸಕ್ತರ ಗಮನ ಸೆಳೆದಿದೆ.

» ಕೆ. ಜನಾರ್ದನ ತುಂಗ

ನಮ್ಮ ನಾಡಿನ ಹೆಸರಾಂತ ಕವಿ, ಕೆ.ಎಸ್.ನರಸಿಂಹಸ್ವಾಮಿ (ಕೆ.ಎಸ್.ನ.) ಅವರು ತಮ್ಮ ಆತ್ಮಕಥೆಯನ್ನು ಬರೆಯಲಿಲ್ಲ. ಹತ್ತಿರಹತ್ತಿರ ಅಜ್ಞೇಯತಾವಾದಿಯಾಗಿದ್ದ ಕೆ ಎಸ್ ನ ಸಾವೇ ಬದುಕಿನ ಕೊನೆ ಎಂದು ಭಾವಿಸಿ ಆತ್ಮಕಥೆಯ ಮೂಲಕ ಸಾವಿನ ನಂತರವೂ ತಮ್ಮ ಬದುಕನ್ನು ವಿಸ್ತರಿಸುವುದು ಬೇಡ ಎಂದು ಭಾವಿಸಿದ್ದಿರಬೇಕು. ಆದರೆ ಕವಿಯ ವೈಯಕ್ತಿಕ ಬದುಕಿನ ಬಗ್ಗೆ ತಿಳಿಯಬೇಕೆಂಬ ಕುತೂಹಲ ಅಭಿಮಾನಿ ಓದುಗರಿಗೆ ಇದ್ದೇ ಇರುತ್ತದೆ. ಹೀಗಾಗಿ, ಕವಿಯ ಬಗ್ಗೆ ಬರೆಯಿರಿ ಎಂದು ಅವರ ಮಗ ಕೆ.ಎನ್. ಮಹಾಬಲ ಅವರಿಗೆ ಗೆಳೆಯರು ಒತ್ತಾಯಿಸುತ್ತಲೇ ಇರುತ್ತಿದ್ದರು.

ಅಪ್ಪ, ಮಕ್ಕಳು ತಮ್ಮ ಕೌಟುಂಬಿಕ ನೆಲೆಯ ವಾಸ್ತವ ಪ್ರಪಂಚದಲ್ಲಿ ಮಾತ್ರವಲ್ಲದೆ, ಭಾವನಾ ಪ್ರಪಂಚ ದಲ್ಲಿಯೂ ಇರುತ್ತಾರೆ. ಅಪ್ಪನ ಬಗ್ಗೆ ಪ್ರಾಮಾಣಿಕವಾಗಿ ಬರೆಯಿರಿ ಎಂದರೆ, ಮಕ್ಕಳಿಗೆ ಬಲುಕಷ್ಟ. ತೀರಾ ಪ್ರಾಮಾ ಣಿಕವಾಗಿ ಬರೆಯುವಾಗ ಅದೆಲ್ಲಿಯೋ ತನ್ನನ್ನೂ ಪ್ರತಿನಿಧಿ ಸುತ್ತದೆ

ಕವಿ ಕೆ.ಎಸ್.ನ. ಅವರ ಜತೆ ಪಿ.ಶೇಷಾದ್ರಿ ಮತ್ತು ಟಿ.ಎನ್.ಸೀತಾರಾಂ, 'ಮಾಯಾಮೃಗ' ಚಿತ್ರೀಕರಣದ ಸಂದರ್ಭದಲ್ಲಿ.

ಎಂಬ ಹಿಂಜರಿಕೆಯೂ ಇರುತ್ತದೆ. ಈ ಸಂದಿಗ್ಧತೆಯು, ಕೆ. ಎಸ್.ನ. ಅವರ ಮಗ ಮಹಾಬಲ ರನ್ನೂ ಕಾಡಿರಬೇಕು. ಸಾಮಾನ್ಯವಾಗಿ ವಸ್ತುನಿಷ್ಠವಾಗಿ ಬದುಕನ್ನು ಗಮನಿಸುವ ಮಹಾಬಲರು ಅಪ್ಪನ ಬಗ್ಗೆ ಬರೆಯಲು ತೃತೀಯ ಮಾರ್ಗವನ್ನು ಹುಡುಕಿಕೊಂಡರು; ಅಪ್ಪನ ಒಡನಾಟಗಳ ಮೂಲಕ ಅಪ್ಪನ ಬಗ್ಗೆ ಚಿತ್ರಣವನ್ನು ಕಟ್ಟಿಕೊಡಲು ಪ್ರಯತ್ನಿಸಿದರು. 'ನನ್ನ ಅಪ್ಪ ಕೆ ಎಸ್ ನ' ಎಂಬ ಪುಸ್ತಕವನ್ನು ಬರೆದು ಯಶಸ್ವಿಯೂ ಆದರು.

ಪ್ರಾಮಾಣಿಕತೆಯ ಸ್ಪರ್ಶ

ಸುಮಾರು ನಲವತ್ತಕ್ಕೂ ಹೆಚ್ಚು ಸಮಕಾಲೀನರ ಜೊತೆ ಕವಿಯ ಒಡನಾಟವನ್ನು ಒಳಗಿನವರಾಗಿ ಗಮನಿಸಿದ್ದರೂ, ಅವುಗಳನ್ನು ಹೊರಗಿನವರಾಗಿ ದಾಖಲಿಸಿದ್ದಾರೆ. ಇದರಿಂದಾಗಿ ಇಲ್ಲಿನ ಬರಹಕ್ಕೆ ಪ್ರಾಮಾಣಿಕತೆಯ ಸ್ಪರ್ಶ ಏದೆ. ಅವರೆಲ್ಲರ ಜೊತೆ ಕವಿಯ ಒಡನಾಟವನ್ನು ಗುರುತಿಸುತ್ತ ಮಹಾಬಲ ಕವಿಯ ಒಂದು ಸಮಗ್ರ ಚಿತ್ರವನ್ನು ನಮ್ಮ ಕಣ್ಣೆದುರು ತಂದು ನಿಲ್ಲಿಸುತ್ತಾರೆ.

ನವಿರಾದ ದಾಂಪತ್ಯಗೀತೆಗಳನ್ನು ಬರೆದ ಕೆ ಎಸ್ ನ ತುಂಬ ಮೃದುಸ್ವಭಾವದವರು ಎಂಬುದೇನೋ ಸರಿ, ಆದರೆ ಅವರು ನಿರ್ದಾಕ್ಷಿಣ್ಯವಾಗಿಯೂ ವರ್ತಿಸಬಲ್ಲರು ಎಂಬುದನ್ನು 'ಶವರ್ ಬಾತ್ ಕೊಟ್ಟೆ, ಪ್ರಶಸ್ತಿಗಾಗಿ ಜೀವ ಇಟ್ಟುಕೋ ಅಂತೀಯಾ' ಲೇಖನಗಳು ತಿಳಿಸಿದರೆ, ಅವರ ಪ್ರಖರ ಸ್ವಾಭಿಮಾನದ ಬಗ್ಗೆ, ಪಾಪ ಅಭಿಮಾನಿ ಮತ್ತು ಶವರ್ ಬಾತ್ ಕೊಟ್ಟೆ ಎಂಬ ಶೀರ್ಷಿಕೆಯ ಲೇಖನಗಳು ಸೂಚನೆ ಕೊಡುತ್ತವೆ. ಕೆ ಎಸ್ ನ ಸ್ನೇಹಕ್ಕೆ ತುಂಬಾ ಬೆಲೆ ಕೊಡುತ್ತಾರೆ ಎಂಬುದನ್ನು ತಿಳಿಯಲು ಅವರ ನಡಿಗೆ ಬೆತ್ತದ ಕಥೆಯೊಂದೇ ಸಾಕು. ನಮ್ಮ ನಾಡಿನ ಇನ್ನೊಬ್ಬ ಪ್ರಮುಖ ಕವಿ ಗೋಪಾಲಕೃಷ್ಣ ಅಡಿಗ ಮತ್ತು ಕೆಎಸ್‌ನ ನಡುವಣ ಜುಗಲ್ ಬಂದಿಯೂ ಸ್ವಾರಸ್ಯಕರ.

- 1942ರಲ್ಲಿ ಪ್ರಕಟಗೊಂಡ 'ಮೈಸೂರು ಮಲ್ಲಿಗೆ' ಕೆ.ಎಸ್.ನ. (1915-2003) ಅವರ ಮೊದಲ ಕವನ ಸಂಕಲನ. ನಂತರದ ವರ್ಷಗಳಲ್ಲಿ ಅವರು ಸುಮಾರು 20 ಕವನ ಸಂಕಲನಗಳನ್ನು ಹೊರತಂದಿದಿದ್ದಾರೆ; ಜತೆಗೆ ಇತರ ಆರೆಂಟು ಗದ್ಯ ಕೃತಿಗಳನ್ನೂ ಬರೆದಿದ್ದಾರೆ.
- 1977ರಲ್ಲಿ 'ತೆರೆದ ಬಾಗಿಲು' ಕವನಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದರು
- 1986ರಲ್ಲಿ ಮೈಸೂರು ಮಲ್ಲಿಗೆ ಧ್ವನಿಸುರುಳಿ ಬಿಡುಗಡೆ
- 1993ರಲ್ಲಿ ಮೈಸೂರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
- 1991ರಲ್ಲಿ ಮೈಸೂರು ಮಲ್ಲಿಗೆ ಚಲನಚಿತ್ರ ಬಿಡುಗಡೆ
- 1997ರಲ್ಲಿ ಪಂಪ ಪ್ರಶಸ್ತಿಗೆ ಭಾಜನರಾದರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಇತರ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಕೆ ಎಸ್ ನ ಒಡತನಕ್ಕೆ ಬೇಸರಿಸದವರು, ಗುರುಹಿರಿಯರ ಬಗ್ಗೆ ಭಕ್ತಿಭಾವ ಹೊಂದಿದವರು, ಕುಟುಂಬ ಜೀವಿ, ಸ್ವಾಭಿಮಾನಿ, ಪುಸ್ತಕ ಪ್ರಕಟಣೆಯ ವಿಷಯದಲ್ಲಿ ವ್ಯವಹಾರ ಜ್ಞಾನವಿಲ್ಲದ ವ್ಯಕ್ತಿ, ಸರಕಾರಿ ಸವಲತ್ತುಗಳ ಬಗ್ಗೆ ನಿರಾಸಕ್ತಿ, ಯಾರಿಗೂ ಕೇಡೆಣಿಸದ ಸಜ್ಜನ, ಸ್ನೇಹಜೀವಿ, ರಾಜಕಾರಣದ ಬಗ್ಗೆ ನಿರ್ಲಕ್ಷ್ಯ ಎಂಬುದೇ ಮುಂತಾದ ಹಲವಾರು ಗುಣಗಳ ಖನಿ ಎಂಬ ಭಾವನೆ ಇಡೀ ಪುಸ್ತಕವನ್ನು ಓದಿ ಮುಗಿಸುವಾಗ ಅನಿಸಿದರೆ ಅಚ್ಚರಿಯೇನಲ್ಲ. ಅವರ ಕೋಪದ ವೈಖರಿ, ನಶ್ಯ ಮತ್ತು ಕಾಫಿಪ್ರೇಮ, ಅತಿಥಿಸತ್ಕಾರ.. ಒಂದೊಂದು ಅಧ್ಯಾಯವನ್ನು ಓದುವಾಗಲೂ ಕವಿಯ ಒಂದೊಂದು ಮುಖ ಅನಾವರಣವಾಗುತ್ತದೆ, ಅನನ್ಯ ಓದಿನ ಅನುಭವವಾಗುತ್ತದೆ.

ಈ ಎಲ್ಲ ಒಡನಾಟಗಳನ್ನು ದಾಖಲಿಸಿರುವ ಮಹಾಬಲರು ಎಲ್ಲಿಯೂ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಹೋಗಿಲ್ಲ ಎನ್ನುವುದು ಅವರ ಹೆಚ್ಚುಗಾರಿಕೆ. ಅಪ್ಪನ ಬಗ್ಗೆ ತಮ್ಮದೇ ಆದ ಅನುಭವಗಳನ್ನು ಮಂಡಿಸುವಾಗಲೂ ಸಂಯಮವನ್ನು ಪಾಲಿಸಿದ್ದಾರೆ.

ನಲವತ್ತೊಂಬತ್ತು ಲೇಖನಗಳ ಗುಚ್ಛ, ಈ ಪುಸ್ತಕ. ಇಲ್ಲಿನ ಯಾವ ಲೇಖನವೂ ಮೂರು ಪುಟಗಳಿಗಿಂತ ದೊಡ್ಡದಿಲ್ಲ. ಮೊದಲ ನೋಟಕ್ಕೇ ಓದಿಗೆಳೆಯುವ ಆಕರ್ಷಕ ತಲೆಬರಹ ಹೊತ್ತ ಲೇಖನಗಳು. ಉದಾಹರಣೆಗೆ 'ಆಹಾ! ಹೀರೇಕಾಯಿ ಬೋಂಡಾ, ನಿಮ್ಮಪ್ಪ ಕಿಲಾಡಿ ಕಣಯ್ಯ' ಇತ್ಯಾದಿ. ಆಡಂಬರವಿಲ್ಲದ ಸರಳ ನೇರ ಭಾಷೆ. ಪ್ರತಿಯೊಂದು ಎಪಿಸೋಡಿಗೂ ಮೊದಲು ಕವಿಯ ಆಕರ್ಷಕ ರೇಖಾಚಿತ್ರ. ನಂಜುಂಡಸ್ವಾಮಿಯವರ ರೇಖೆಗಳಲ್ಲಿ ಪಡಿಮೂಡಿದ ಕವಿಯ ಆಕರ್ಷಕ ಕ್ಯಾರಿಕೇಚರ್ ಮುಖಪುಟದಲ್ಲಿ; ಸುಂದರ ಅಕ್ಷರಶೈಲಿ, ಆಕರ್ಷಕ ವಿನ್ಯಾಸ, ಅಚ್ಚುಕಟ್ಟಾದ ಮುದ್ರಣ (ಬೆಂಗಳೂರಿನ ಬಹುರೂಪಿ.ಆನ್‌ಲೈನ್ ಮೂಲಕ ಪ್ರಕಟಗೊಂಡಿದೆ) ಹೊಂದಿರುವ ಈ ಪುಸ್ತಕ ಎಲ್ಲರ ಸಂಗ್ರಹದಲ್ಲಿಯೂ ಇರಬೇಕು, ಅದರಲ್ಲೂ ಮುಖ್ಯವಾಗಿ ಕೆಎಸ್‌ನ ಅವರ ಮೈಸೂರು ಮಲ್ಲಿಗೆ ಕವನಗಳಿಗೆ ಮಾರುಹೋದವರ ಬಳಿ ಇರಲೇಬೇಕು.

ನಿಮ್ಮನ್ನು ನಿಮಗಿಂತ ನಿಮ್ಮ ಸ್ನೇಹಿತರೇ ಚೆನ್ನಾಗಿ ತಿಳಿದುಕೊಂಡಿರುತ್ತಾರೆ ಎಂಬ ಮಾತನ್ನು ಸಮರ್ಥಿಸುವಂತಿರುವ ಈ ಪುಸ್ತಕ, ಮಲ್ಲಿಗೆಯಂತೆಯೇ ಗಮಗಮಿಸುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ!

ನೆರೆ ನೀರಿದ್ದರೂ ಗಂಗಾರತಿ!

» ಎ.ಎಸ್.ಎನ್.ಹೆಬ್ಬಾರ್

ನಾವು ಕಾಶಿಗೆ ಬಂದಿಳಿದದ್ದು ತಾ. 08.07.2025ರ ಸಂಜೆ. ಅಲ್ಲಿಯ ಗಂಗಾರತಿಯ ವೈಭವ, ರಮಣೀಯತೆ ಕೇಳಿ, ಅದನ್ನು ಇವತ್ತೇ ಕಾಣುವ ಹಂಬಲ ನಮಗೆ. ಬೇಗ ಹೋದರೆ ಗಂಗಾತಟದಲ್ಲಿ ಕೂತು ಗಂಗಾರತಿಯನ್ನು ಕಣ್ತುಂಬ ಕಂಡು ಧನ್ಯರಾಗಬಹುದು. ಹಾಗಂತ ವಿಚಾರಿಸಿದಾಗ ಕೂತು ಕಾಣಲು, ವಿಪರೀತ ಜನಸಂದಣಿಯ ಕಾರಣ ಕಷ್ಟ ಎಂದು ತಿಳಿಯಿತು.

ಹಿಂದಿನ ದಿನ, ಅಯೋಧ್ಯೆಯಲ್ಲಿ 'ಸರಯೂ ಆರತಿ' ಕಾಣಲು ಹೋಗಿ ದಂಡೆಯಲ್ಲಿ ಕಾದು ಕುಳಿತು ಹಣ್ಣಾದ ಅನುಭವ ಹಸಿಯಾಗಿಯೇ ಇತ್ತು. ಆ ನೂಕುನುಗ್ಗಲಿನಲ್ಲಿ ಗಾಲಿ ಕುರ್ಚಿಯಲ್ಲಿ ಮೇಲ್ದಂಡೆಯಲ್ಲೇ ಕುಳಿತು ಕಾಣುತ್ತಿದ್ದ ಸುಧಾಳ ಗಾಲಿಕುರ್ಚಿಯನ್ನೇ ಜನಗಳು ದೂಡಿ, ಆಕೆ ಕುರ್ಚಿ ಸಮೇತ ನೀರುಪಾಲಾಗುವ ಭೀತಿ ಇದ್ದಿತ್ತು. ನಾನಂತೂ ಇಕ್ಕಟ್ಟಿನಲ್ಲಿ ಮೆಟ್ಟಲ ಮೇಲೆ ಕೂತವನ ಪಕ್ಕವೇ ಒಬ್ಬಳು ಲಂಕಿಣಿಯೋ, ಪೂತನಿಯೋ ತರಹ ಕಾಣುತ್ತಿದ್ದ ಧಡೂತಿ ವ್ಯಕ್ತಿಯು, ಮೇಲಿನ ಮೆಟ್ಟಲಿನಿಂದ ಮೊದಲು ನನ್ನ ಬದಿ, ಕಾಲು ತೂರಿಸಿ ಅದು ಯಶಸ್ವಿಯಾಗುತ್ತಲೂ ನಂತರ ತನ್ನ ದಪ್ಪನೆ ದೇಹವನ್ನು ಅಖಂಡ ಪ್ರಷ್ಠಗಳ ಸಹಿತ ಹೇಗೋ ನನ್ನ ಮತ್ತು ರಘುವಿನ ಪ್ರತಿಭಟನೆಗಳನ್ನು ಎಳ್ಳಷ್ಟಾದರೂ ಲೆಕ್ಕಿಸದೇ ಹೊಗ್ಗಿಸಿ ಕೂತ ಕಾರಣ ನನ್ನ ಪಕ್ಕೆಲುಬುಗಳು ಮುರಿಯುತ್ತವೋ ಎಂಬಂತಾಗಿ ನನ್ನ ಕಾಲುಗಳು ಒತ್ತಡಕ್ಕೆ ಸಿಲುಕಿ ಮರಗಟ್ಟುವಂತಾದಾಗ ಉಸಿರುಗಟ್ಟಿದ ನಾನು, ಆ

ಮಳೆ ಸುರಿಯಲಿ ಬಿಡಲಿ, ನದಿಯಲ್ಲಿ ನೆರೆ ಏರಲಿ, ಇಲ್ಲದೆಯೂ ಇರಲಿ, ಗಂಗಾ ನದಿಗೆ ಭಕ್ತಿಯಿಂದ ಮಾಡುವ ಗಂಗಾರತಿ ನಿಲ್ಲುವುದಿಲ್ಲ! ಗಂಗಾ ನದಿಯಲ್ಲಿ ನೆರೆ ಬಂದಾಗ, ಗಂಗಾರತಿ ನಿಲ್ಲುವ ಸಂಭವ ಇತ್ತು; ಆದರೆ, ಹಾಗಾಗಲಿಲ್ಲ, ನೀರು ಏರಿದ್ದರೂ, ಆ ಸಂಜೆ ಗಂಗೆಯ ಆರತಿ ಎಂದಿನಂತೆ ನಡೆಯಿತು!

ವ್ಯಕ್ತಿಯ ಸಂಗವೇ ಬೇಡ ಎಂತ ಏಳಲೂ ಸಾಧ್ಯವಾಗದಿದ್ದರೂ, ಕಷ್ಟಪಟ್ಟು ಸ್ಫೋಟಗೊಂಡಂತೆ ಎದ್ದು ಆ ಅಸೀಮ ಒತ್ತಡದಿಂದ ಪಾರಾಗಿ ಬದುಕಿದೆಯಾ ಬಡಜೀವವೇ ಎಂತ ಛಂಗನೆ ಹಾರಿ ಮೇಲೆ ಹೋಗಿ ನಿಂತು ಬಚಾವಾದವ. ಪುಣ್ಯಕ್ಕೆ ನನ್ನ ಪಂಚೆ ಬಿಚ್ಚಿಹೋಗದೇ ಭದ್ರವಾಗೇ ಇದ್ದಿತ್ತು! ಇಕ್ಕಟ್ಟಿನಲ್ಲಿ ಕುಳಿತು ಜೋಮು ಹಿಡಿದಿದ್ದ ಕಾಲು ಸರಿಯಾಗಬೇಕಾದರೆ ಎರಡು 'ಕುಮ್ಚಟ್' ತೆಗೆಯಬೇಕಾಗಿ ಬಂದಿತ್ತು. ಹಾಗಾಗಿ ಗಂಗಾರತಿಯಲ್ಲಿ ಆಪಾಟಿ ಜನಗಳ ಎಡೆಯಲ್ಲಿ ಸಿಕ್ಕಿ ಚಟ್ಟಾಗುವುದು ಬೇಡ ಅಂತ ಮಾಡಿದೆವು. ಆದರೆ ಕಾಶಿಯ ಗಂಗಾರತಿ ಕಾಣಲೇ ಬೇಕಲ್ಲ!

ನದಿಯಲ್ಲಿ ಪ್ರವಾಹ!

ದೋಣಿಯಲ್ಲಿ ಕುಳಿತು ನದಿಯಿಂದಲೇ ಕಾಣುವ ವ್ಯವಸ್ಥೆ ಇದೆ ಎಂತ ತಿಳಿಯಿತು. ರಘು ಅದಕ್ಕಾಗಿ ಗೂಗಲ್ ನಲ್ಲಿ, ಇಂಟರ್‌ನೆಟ್‌ನಲ್ಲಿ ತಡಕಾಡಿದಾಗ ಇವತ್ತು ಗಂಗೆಯಲ್ಲಿ ನೆರೆ ಬಂದ ಕಾರಣ ದೋಣಿಗಳನ್ನು ಬಿಡುವುದಿಲ್ಲ, ಪೋಲೀಸರು ನಿಷೇಧಿಸಿದ್ದಾರೆ ಎಂಬ ಸಮಾಚಾರ ದೊರೆಯಿತು. ಪ್ರವಾಸದ ಏಜಂಟರೂ ದೋಣಿ ವ್ಯವಸ್ಥೆ ಇದ್ದಿತ್ತು, 'ಪ್ರವಾಹದ ಕಾರಣ ಇವತ್ತು ಇಲ್ಲ' ಎಂದರು. ರಘು ಬಿಡಬೇಕಲ್ಲ, ಏನಾದರೂ ಯತ್ನ ಮಾಡಿ ದೋಣಿ ಏರ್ಪಾಡು ಮಾಡು ಎಂದ ನಮ್ಮ ಗೈಡಿಗೆ. ಅಂತೆಯೇ ಆತ ನೇರ ದೋಣಿಯವನನ್ನೇ ಸಂಪರ್ಕಿಸಿದಾಗ ಗಂಗಾರತಿ ಕಾಣಲು ದೋಣಿ ವ್ಯವಸ್ಥೆ ಮಾಮೂಲಿನಂತೆ ಇದೆ, ಯಾರೂ ನಿರ್ಬಂಧಿಸಿಲ್ಲ. ನೀವು ಕೂಡಲೇ ಬನ್ನಿ, ತಡಮಾಡಬೇಡಿ ಎಂದ ದೋಣಿಯವ ನಮಗಾಗಿ ಬರೇ ಮೂರು ಕುರ್ಚಿಗಳನ್ನು ಹಾಕಿದ ನಮಗಾಗಿರುವ ಪ್ರತ್ಯೇಕ ವಿಶೇಷ ದೋಣಿ ನೀಡಿ ಗಂಗಾರತಿ ತೋರಿಸುತ್ತೇನೆ ಎಂದು ಭರವಸೆ ಕೊಟ್ಟ. ತಕ್ಷಣ ನಾವು ಕಾರಿನಲ್ಲಿ ಗಂಗಾತಟಕ್ಕೆ ಧಾವಿಸಿದ್ದೂ ಆಯಿತು, ನಮಗಾಗಿ ಸಿದ್ಧಪಡಿಸಿದ್ದ ದೋಣಿ ಏರಿ ಮೂರು ಸುಖಾಸೀನ ಆಸನಗಳಲ್ಲಿ ಕುಳಿತು ನದಿಪಯಣದುದ್ದಕ್ಕೂ ವಿವಿಧ ಘಾಟ್‌ಗಳನ್ನು ಕಾಣುತ್ತಾ, ಮಣಿಕರ್ಣಿಕಾ ಘಾಟ್‌ನಲ್ಲಿ ಶವಗಳನ್ನು ಸುಡುತ್ತಿರುವುದನ್ನೂ ವೀಕ್ಷಿಸುತ್ತಾ, ಐತಿಹಾಸಿಕ ಸೌಧಗಳನ್ನು ದೋಣಿಗೈಡ್ ಬಣ್ಣಿಸುತ್ತಿದ್ದುದನ್ನು ಕೇಳುತ್ತಾ ಮುಖ್ಯ ಗಂಗಾರತಿ ತಟ ಸೇರಿದ್ದೂ ಆಯಿತು.

ಅಲ್ಲಿ ಆಗಲೇ ಭಾರೀ ಜನಸಂದಣಿಯೇ ತಟಗಳ ಮೇಲಿತ್ತು. ಮಾತ್ರವಲ್ಲ ನಮಗಿಂತ ಮುಂಚೆ ಬಂದ ಪ್ರವಾಸಿಗಳನ್ನು ಹೊತ್ತ ನೌಕೆಗಳವರು ಲಂಗರು ಹಾಕಿ ಜಾಗ ಸ್ಥಾಪನೆ ಮಾಡಿಕೊಂಡಿದ್ದರು. ಆದರೂ ನಮ್ಮ ದೋಣಿಯವ ಚಾಕಚಕ್ಯತೆಯಿಂದ ನಮ್ಮನ್ನು ಆದಷ್ಟು ಹತ್ತಿರಕ್ಕೆ ಕೊಂಡೊಯ್ದು ಗಂಗಾರತಿ ಸ್ಪಷ್ಟವಾಗಿ ಕಾಣುವಂತೆ ದೋಣಿಯನ್ನು ನಿಲ್ಲಿಸಿದ. ಇದಕ್ಕೆಲ್ಲ ತುಂಬ ಶ್ರಮ, ಕುಶಲತೆ, ಸಾಹಸ, ಧೈರ್ಯ ಬೇಕು. ಸತ್ಯಕ್ಕೆಂದರೆ, ಗಂಗೆಯಲ್ಲಿ ನೀರು ಏರಿದ್ದೂ ಹೌದಂತೆ, ದೋಣಿಗಳಿಗೆ ನಿರ್ಬಂಧ ವಿಧಿಸಿದ್ದೂ ಹೌದಂತೆ. ಆದರೆ ನೆರೆ ನೀರಿನ ಜಾಗ ಬಿಟ್ಟು ದೂರದಲ್ಲಿ ಗಂಗಾರತಿ ವ್ಯವಸ್ಥೆ ಮಾಡಿದ ಕಾರಣ ದೋಣಿಗಳವರಿಗೆ ಅಡ್ಡಿ ಆಗಲಿಲ್ಲವಂತೆ. ಧ್ವನಿವರ್ಧಕಗಳಲ್ಲಿ ಓಂ ನಮಃ ಶಿವಾಯ ಎಂದಿತ್ಯಾದಿ ಮಂತ್ರ, ಶ್ಲೋಕ, ಭಜನೆ ಮೊಳಗುತ್ತಿದ್ದಂತೆ ಗಂಗಾರತಿಗೆ ಸಂಬಂಧಿಸಿದಂತೆ ಗಂಗಾತಟದಲ್ಲಿ ಪೂಜೆಗಳು ಶುರುವಾದುವು. ನಾವು ತದೇಕಚಿತ್ತದಿಂದ ಆರತಿಯನ್ನು ಎದುರು ನೋಡುತ್ತಿದ್ದೆವು.

ನಮ್ಮ 'ದೋಣಿ ಗೈಡ್' ನದಿಗೆ ಕೈಹಾಕಿ ಗಂಗಾಜಲ ಬೊಗಸೆಯಲ್ಲಿ ಹಿಡಿದು ನಮ್ಮ ಮೇಲೆ ಪ್ರೋಕ್ಷಿಸಿ ಗಂಗಾಮಾಯೀಕೀ ಜೈ ಎಂದಾಗ ರೋಮಾಂಚಿತರಾದ ನಾವೂ ಜೈ ಗಂಗಾ ಮಾಯೀ ಎಂದೆವು. ಸುತ್ತಮುತ್ತಲೆಲ್ಲ ಸೈನ್ಯದ ತುಕಡಿಗಳಂತೆ ವಿವಿಧ ಆಕಾರದ ದೋಣಿಗಳು ನಮ್ಮಂತೇ ಬಂದು ಸ್ಥಾಪನೆಗೊಂಡಿದ್ದುವು. ಕ್ರೂಸರ್ ಹೆಸರಿನ ಪ್ರವಾಸಿ ನೌಕೆಗಳು ದೇದೀಪ್ಯಮಾನವಾಗಿ ಬಂದಿದ್ದುವು. ಅವುಗಳ ಮಾಳಿಗೆಗಳ ಮೇಲೆ ಸುಖಾಸೀನರಾಗಿ ಕುಳಿತು ಗಂಗಾರತಿಗೆ ಕಾಯುವ 'ದೊಡ್ಡ ಮನುಷ್ಯ'ರೆಂಬವರಿದ್ದರು. ಅಚ್ಚರಿಯೆಂದರೆ ನದಿಯ ಮೇಲೂ ಹೊಟ್ಟೆಪಾಡಿಗೋ, ಜೀವನೋತ್ಸಾಹದಿಂದಲೋ, ಸಾಹಸಪಟ್ಟು ದುಡಿಯುವ ಅಲ್ಲಿನ ಯುವಜನತೆ, ಕಾರ್ಯನಿರತರಾಗಿದ್ದದ್ದು! ಅವರ ಶ್ರಮಜೀವನ ನಿಜವಾಗಿಯೂ ಮೆಚ್ಚುವಂತಿತ್ತು.

ದೋಣಿಯಲ್ಲೂ ಚಾಯ್‌ವಾಲಾ!

ಓರ್ವ ಯುವಕ ಏನನ್ನೋ ಎರಡೂ ಕೈಗಳಲ್ಲಿ ನೇತಾಡಿಸಿಕೊಂಡು, ತಾಗಿ ತಾಗಿ ಲಂಗರು ಹಾಕಿದ್ದ ದೋಣಿಯಿಂದ ದೋಣಿಗೆ ಹಾರುತ್ತ ಬರುತ್ತಲಿದ್ದ. ನಮ್ಮ ದೋಣಿಗೂ ಕಾಲಿಟ್ಟು ಒಳಗಿಳಿದ ಆತ ಚಾಯಾ ಚಾಯಾ ಎಂದಾಗಲೇ ಈತ ಈ ದೇಶದ ನಾಯಕನಾಗುವವ ಎಂತ ಗೊತ್ತಾದದ್ದು! ಈ ಚಾಯ್ ವಾಲಾನ ಒಂದು ಕೈಯಲ್ಲಿ ಬಿಸಿ ಉಕ್ಕುವ ನೀರಿನದ್ದೋ, ಚಾಯ್‌ನದ್ದೋ ಹೂಜೆ ಇತ್ತು. ಹೂಜೆಯ ಕೆಳಗೆ ಅದಕ್ಕಂಟಿಕೊಂಡಂತೆ ನಿಗಿ ನಿಗಿ ಕೆಂಡ ಉರಿಯುವ ಬೆಂಕಿ ಒಲೆ ಇತ್ತು. ಇನ್ನೊಂದು ಕೈಯಲ್ಲಿ ಚಹಾಪುಡಿ ಪೊಟ್ಟಣಗಳು, ಹಾಲಿನ ಪೊಟ್ಟಣಗಳು, ಕಾಗದದ ಕಪ್ ಇತ್ಯಾದಿ ಹೊತ್ತ ಬಕೇಟು! ಗಂಗಾರತಿಗಾಗಿ ಕಾದು ಬಸವಳಿದವರ ಪಾಲಿಗೆ ಈತ ದೇವರಂತೆ ಕಂಡು ಚಹಾ ಖರೀದಿಸಿ ಹೀರುತ್ತಿದ್ದರು. ಒಂದು ದೋಣಿಯವರಿಗೆ ಚಾ ಕುಡಿಸಿ ಈ ಯುವಕ ಇನ್ನೊಂದು ದೋಣಿಗೆ ನೆಗೆಯುತ್ತಿದ್ದ. ಇವನ ದಣಿವರಿಯದ ದಂಧೆ ಕಂಡು ಅಭಿಮಾನವುಂಟಾಯಿತು.

ದೀಪ ಬೆಳಗುವ ತಟ್ಟೆ

ಈ ಯುವಕ ಅತ್ತ ಹೋಗುತ್ತಲೇ ಇದೇ ರೀತಿ ದೋಣಿಯಿಂದ ದೋಣಿಗೆ ನೆಗೆಯುತ್ತಿದ್ದ ಬಂದವಳು ಓರ್ವ ಎಳೆ ಯುವತಿ. ಪುಷ್ಪ ರಾಣಿ ಈಕೆ ಎನ್ನಿಸಿತು. ಯಾಕೆಂದರೆ ಅವಳ ಕೈಯಲ್ಲಿದ್ದದ್ದು ಪುಟ್ಟ ತಟ್ಟೆ ತುಂಬ ಹೂಗಳು, ಬೆಂಕಿಪೆಟ್ಟಿಗೆ ಮತ್ತು ಮೇಣದಬತ್ತಿ ದೀಪ ತುಂಬಿದ ಬುಟ್ಟಿ. ಅಲ್ಲಲ್ಲಿ ಪ್ರವಾಸಿಗಳ ಎದುರು ಬುಟ್ಟಿ ಇಳಿಸಿ ಹೂವು, ದೀಪ, ಬೆಂಕಿಪೆಟ್ಟಿಗೆ ಇದ್ದ ತಟ್ಟೆ ಮಾರಾಟ ಇವಳ ಕಾಯಕ.

» ಮೂರನೇ ಪುಟಕ್ಕೆ

ಕರುಣೆಯಿಂದ ಕೂಡಿದ ಕಾವ್ಯಭಾಷೆ

» ಡಾ. ವೆಂಕಟಗಿರಿ ದಳವಾಯಿ

ನಮ್ಮ ಕಾಲದ ಅಪರೂಪದ ಲೇಖಕಿ ಪಿ.ಚಂದ್ರಿಕಾ ಅವರು. ಪ್ರಯೋಗಶೀಲತೆ ಎನ್ನುವುದು ಅವರ ಆಯ್ಕೆ. ಅದು ಸಾಹಿತ್ಯ ಆಗಿರಬಹುದು, ಪ್ರಕಾಶನ ಆಗಿರಬಹುದು, ಇಲ್ಲವೇ ರಾಗಿ ಬೆಳೆ ಬೆಳೆಯುವುದೂ ಆಗಿರಬಹುದು. ಈಗ ಅದಕ್ಕೆ ಹೊಸ ಸೇರ್ಪಡೆ ಸಿನಿಮಾ ಎಂಬ ತೆರೆಯ ಮೇಲಿನ ಜಗತ್ತು. ಆದರೆ ಇಲ್ಲಿ ಸಿನಿಮಾದ ಕಥೆ ಇಲ್ಲ, ಪಾತ್ರಗಳಿಲ್ಲ. ಚಿತ್ರಣವಷ್ಟೇ ಇಲ್ಲ. ಚಿತ್ರೀಕರಣಗೊಳ್ಳುತ್ತಿರುವುದು ಮಾನವೀಯ ಸಂಬಂಧಗಳು. ಆ ಸಂಬಂಧಗಳು ತೆರೆಯ ಮೇಲೆ ಬಂದು ಹೋಗುವ ಪಾತ್ರಗಳಾಗಿಯಷ್ಟೇ ಉಳಿಯದೇ ಬದುಕಿನ ಫಿಲಾಸಫಿಗಳಾಗಿಯೇ ನಮ್ಮನ್ನು ಕಾಡುತ್ತವೆ.

ಇಲ್ಲಿಯ ಬರಹಕ್ಕೆ ಒಂದು ಆರ್ದ್ರತೆ ಇದೆ. ಆ ಆರ್ದ್ರತೆ ಭಾಷೆ, ಜನಾಂಗ, ಧರ್ಮ, ಅದರ ಆಳದಲ್ಲಿರುವ ಹಿಂಸೆ ಎಲ್ಲ ವನ್ನು ಮೀರಿದ್ದು. ಈ 'ಮೂವರು ಮಹಮದರು' ಕೃತಿ ವಿಶಿಷ್ಟವಾಗುವುದು ಈ ಮನುಷ್ಯ ಸಂಬಂಧಗಳನ್ನು ಕಾಪಿಟ್ಟುಕೊಳ್ಳುವ ಕಾರಣಕ್ಕಾಗಿ. ತೆರೆಯ ಮೇಲಿನ ಭವ್ಯತೆ, ಸಂಭ್ರಮಗಳಿಗಷ್ಟೇ ಸಿನಿಮಾ ಸಾಕ್ಷಿಯಾಗುವುದಿಲ್ಲ. ಅದರ ಹಿಂದಿರುವ ಸಂಕಟಗಳು, ಸಂಘರ್ಷಗಳು ಮನುಷ್ಯನನ್ನು ಮತ್ತಷ್ಟು ಮಾನವಂತನನ್ನಾಗಿ ಮಾಡುತ್ತವೆ ಎನ್ನುವುದನ್ನು ಪ್ರತಿ ಅಂಕಣದಲ್ಲಿಯೂ ಇದು ಪ್ರತಿಪಾದಿಸುತ್ತದೆ. ಹಾಗೆ ನೋಡಿದರೆ, ಈ ಮೂವರು ಮಹಮದರ ಜೊತೆಗೆ ನಾಲ್ಕನೆಯ ಮಹಮದರಾಗಿ ಲೇಖಕರು ಕಾಣಿಸಿಕೊಳ್ಳುತ್ತಾರೆ.

ಕಲಾಪ್ರಕಾರವನ್ನು ಜನಪ್ರಿಯವಾಗಿ ನೋಡುವುದಕ್ಕೂ, ಜೀವಪರವಾಗಿ ನೋಡುವುದಕ್ಕೂ ವ್ಯತ್ಯಾಸವಿದೆ. ಒಬ್ಬ ಕಲಾವಿದನಿಗೆ ಸೃಜನಶೀಲ ತತ್ತ್ವಗಳು ಗೊತ್ತಿದ್ದಾಗ, ಆ ಅಭಿನಯದ ಅಭಿವ್ಯಕ್ತಿಯೇ ಭಿನ್ನವಾಗಿರುತ್ತದೆ. ಅಂತಹ ಅಭಿವ್ಯಕ್ತಿಯ ಆಶಯವನ್ನು ಹೊಂದಿರುವ ಚಿತ್ರತಂಡ ಪಡುವ ಸಂಕಷ್ಟಗಳು, ಎದುರಿಸುವ ಸಮಸ್ಯೆಗಳು, ಪಡೆದ ಅನುಭವಗಳನ್ನು ಈ ಕೃತಿಯು ದಾಖಲಿಸುತ್ತದೆ. ಸಿನಿಮಾಕ್ಕೆ ಸಂಬಂಧಿಸಿದಂತೆ, ನಟರಿಗೆ ಸಂಬಂಧಿಸಿದಂತೆ ಅನೇಕ ಕೃತಿಗಳು, ಲೇಖನಗಳು, ಸಾಕ್ಷ್ಯಚಿತ್ರಗಳು ಬಂದಿವೆ. ಆದರೆ, ಸಿನಿಮಾ ಚಿತ್ರೀಕರಣಕ್ಕೆ ಸಂಬಂಧಿಸಿದಂತೆ ಮತ್ತು ಆ ಸಂದರ್ಭದಲ್ಲಿ ಎದುರಾಗುವ ಘಟನೆಗಳ ಬಗ್ಗೆ ಪುಸ್ತಕಗಳು ಬಂದಿರುವುದು ಕಡಿಮೆ. ಅಂತಹ ಕೊರತೆಯನ್ನು ಈ ಕೃತಿ ನೀಗಿಸಿದೆ.

ಹೆಣ್ಣಿನ ದೃಷ್ಟಿಕೋನ

ಲೇಖಕಿ ಹೊರಟಿರುವುದು ಚಿತ್ರೀಕರಣಕ್ಕಾದರೂ, ಅಲ್ಲಿ ಸಾಮಾನ್ಯರಿಂದ ಪಡೆದ ಪ್ರೀತಿ ಪ್ರತ್ಯೇಕ ಡಾಕ್ಯುಮೆಂಟರೀ ಆಗುವಷ್ಟಿದೆ. ಅವರೊಂದಿಗಿನ ಲೇಖಕರ ಒಡನಾಟ, ಅವರನ್ನು ಗ್ರಹಿಸುವ ರೀತಿ ಮನಕ್ಕೆ ತಾಕುತ್ತವೆ. ಅದು ಬರೀ ವಿವರಣೆಗಳಾಗಿ, ಚಿತ್ರೀಕರಣವಾಗಿ ತೋರುವುದಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಹೆಣ್ಣಿನ ದೃಷ್ಟಿಕೋನ. ಅದು ಲೋಕವನ್ನು ಗ್ರಹಿಸುವ ಬಗೆ. ಬಹುಶಃ ಇದೇ ಚಿತ್ರೀಕರಣದ ಕುರಿತು ಗಂಡು ಬರೆದರೆ, ಅದರಲ್ಲಿ ಅನೇಕ ಸಂಗತಿಗಳು ಗೈರುಹಾಜರಿಯಾಗುತ್ತವೆ. ಅಂತಹ ಗೈರುಹಾಜರಿಗಳನ್ನು ದಾಖಲಿಸುವ ಮಹತ್ವದ, ಅಪರೂಪದ ಕೃತಿಯಾಗಿ 'ಮೂವರು ಮಹಮದರು' ಕೃತಿ ಇದೆ.

ಸಿನಿಮಾ ಎಂಬ ಪಯಣಕ್ಕೆ ಒಂದು ಲಯವಿರುತ್ತದೆ. ಆದರೆ ಆ ಲಯ ತೆರೆಯ ಮೇಲೆ ಕಾಣಿಸುವಂತದ್ದಲ್ಲ. ಆ ಲಯಗಳನ್ನು ಒಂದು ಸೃಜನಶೀಲ ಮನಸ್ಸುಗಳು ಮಾತ್ರ ಗ್ರಹಿಸಬಲ್ಲವು. ಇಲ್ಲದಿದ್ದರೆ ಇಲ್ಲಿ ಜಕ್ಕು ಮಹಮದ, ಸಲಾಂ ಸಾಬ್, ಬ್ರಿಟೀಷ್ ಮಹಮದ, ಅಲೀಮಮ್ಮ, ಹಸೀನಮ್ಮ, ಫ್ರೀಡಾದಂತಹ ವಾಸ್ತವದ ಪಾತ್ರಗಳು ಕೃತಿಯ ಕೇಂದ್ರವಾಗುತ್ತಿರಲಿಲ್ಲ. ಲೇಖಕರು ಇಲ್ಲಿ ತೋರಿದ ಕಾಳಜಿ ಸಿನಿಮಾಗೆ ಮಾತ್ರ ಮೀಸಲಾಗದೆ, ಬದುಕಿಗೂ, ಅಲ್ಲಿಯ ಜನರಿಗೂ ಸಂಬಂಧಿಸಿದೆ. ಈ ಕಾರಣಕ್ಕಾಗಿಯೇ ಇದು ಅಪರೂಪದ ಪಠ್ಯವಾಗಿದೆ. ಅದರಲ್ಲೂ ಸಾಹಿತ್ಯೇತರ ಮನಸ್ಸುಗಳಿಗೆ, ಸಾಹಿತ್ಯಿಕ ಮನಸ್ಸು ಒಂದು ಸಮಸ್ಯೆಯನ್ನು ಹೇಗೆ ಮುಖಾಮುಖಿ ಮಾಡುತ್ತದೆ ಎನ್ನುವುದನ್ನು ತಿಳಿಸಿಕೊಡುವಲ್ಲಿ ನೆರವಾಗುತ್ತದೆ.

ಕಮರ್ಷಿಯಲ್ ಸಿನಿಮಾಗಳಿಗೂ-ಕಲಾತ್ಮಕ ಚಿತ್ರಗಳಿಗೂ ಇರುವ ಅಗಾಧವಾದ ವ್ಯತ್ಯಾಸವನ್ನು ಇಲ್ಲಿಯ ಬರೆಹ ಪ್ರತಿ ಹಂತದಲ್ಲೂ ವಿವರಿಸುತ್ತದೆ. ಹಾಗೆ ನೋಡಿದರೆ ಲೇಖಕರೇನೂ ನಿರ್ಮಾಪಕರಲ್ಲ, ನಿರ್ದೇಶಕರಲ್ಲ. ಬರೀ ಕಥೆಗಾರರು ಅಷ್ಟೇ. ಬರೀ ಕಥೆಗಾರರಾಗಿ ಹೋಗಿದ್ದರೆ, ಈ ಅನುಭವಗಳು ಅವರಿಗೆ ಸಿಗಲು ಸಾಧ್ಯವಿರಲಿಲ್ಲ. ಬದಲಾಗಿ ಈ ಸಾಮಾನ್ಯರ ಒಡನಾಟದಿಂದ ಪಡೆದ ಅನುಭವ ಫಿಲಾಸಫಿಯನ್ನು ಜತನದಿಂದ ಇಲ್ಲಿ ದಾಖಲಿಸಿದ್ದಾರೆ. ಅದಕ್ಕೆ ಉದಾಹರಣೆಯಾಗಿವೆ ಈ ಸಾಲುಗಳು ''ಈಗಲೂ ಆ ಕಡಲ ತಡಿ, ತಡೆಗೋಡೆ, ಸಮುದ್ರದ ಮೊರೆತ, ಆ ಜನರ ನಗು ನನ್ನ ಮನಸ್ಸಿನಿಂದ ಅಳಿಸಲಿಕ್ಕೆ ಆಗುತ್ತಲೇ ಇಲ್ಲ. ನಾನು ಕಡಲ ತುದಿಯ ಬಂಡೆಯ ಮೇಲೆ ಕುಳಿತಿರುತ್ತೇನೆ. ನನ್ನ ಮನಸ್ಸಿನಲ್ಲಿ ಯಾಕೋ ದುಃಖವಿದೆ. ನಿರ್ದಿಷ್ಟ ಕಾರಣಗಳು ಯಾವಾಗಲೂ ಇರುವುದಿಲ್ಲ. ಆಗ ಒಂದಿಷ್ಟು ಜನ ಬುರ್ಕಾಧಾರಿ ಹೆಣ್ಣುಮಕ್ಕಳು ಅಲ್ಲಿಗೆ ಬರುತ್ತಾರೆ. ನಾನು ಅವರನ್ನು ನೋಡಿ ದುಃಖಿಸುತ್ತೇನೆ. ನನಗೆ ಗೊತ್ತಿದೆ ಆ ಬುರ್ಖಾದ ಹಿಂದೆ ಅಲೀಮಮ್ಮ, ಹಸೀನಮ್ಮ, ಪಾತುಮ್ಮ, ನುಸ್ರತ್, ಶಹಜಾನಾ, ನೂರುನ್ನೀಸಾ... ಹೀಗೆ ನನ್ನ ಪರಿಚಯದ ಎಲ್ಲಾ ಹೆಣ್ಣುಮಕ್ಕಳೂ ಇದ್ದಾರೆ ಎಂದು. ಅವರೆಲ್ಲಾ ನನ್ನ ಮುತ್ತಿಕೊಳ್ಳುತ್ತಾರೆ. ನಾನು ಕಾಣದಾಗುತ್ತೇನೆ. ಕಪ್ಪು ಕಪ್ಪು ಬುರ್ಕಾದ ಮಧ್ಯದಿಂದ ಒಂದು ಬಿಳಿಯ ಪಾರಿವಾಳ ಹಾರಿ ಹೋಗುತ್ತದೆ. ಈ ಕನಸು ನನ್ನನ್ನು ಆಗಾಗ ಕಾಡುತ್ತಲೇ ಇರುತ್ತದೆ'' (ಪುಟ 201-02).

ಈ ಪುಸ್ತಕದಲ್ಲಿ ಬಳಕೆಗೊಂಡ ಭಾಷೆಗೂ ಒಂದು ವಿಶೇಷತೆ ಇದೆ. ಅದು ಕಾವ್ಯಭಾಷೆಯಾದರೂ, ಅದಕ್ಕೊಂದು ತಾಯ್ತನವಿದೆ. ಇಡೀ ಬರಹವೇ ಕರುಣೆಯಿಂದ ಕೂಡಿದೆ.



ಮೂವರು ಮಹಮದರು
ಲೇ: ಪಿ. ಚಂದ್ರಿಕಾ
ಪ್ರ: ಬಹುರೂಪಿ ಬೆಂಗಳೂರು

ಬಡಜನರ ಸಿರಿವಂತಿಕೆ

ಈ ಸಾಲುಗಳು ಇಡೀ ಕೃತಿಯ ಪ್ರಬಂಧ ಧ್ವನಿಯಾಗಿದೆ. ಮಾಧ್ಯಮಗಳು ಒಂದು ಧರ್ಮವನ್ನು ಜನಾಂಗವನ್ನು ಅನಾವರಣ ಮಾಡುತ್ತಿರುವ ರೀತಿಗೂ, ಈ ಕೃತಿ ಕಂಡುಕೊಂಡ ಸತ್ಯಗಳಿಗೂ ಅಪಾರವಾದ ವ್ಯತ್ಯಾಸಗಳಿವೆ. ಈ ಕೃತಿಯ ಓದಿನ ಅಗತ್ಯವಿರುವುದು ಇದೇ ಕಾರಣಕ್ಕಾಗಿ. ದೊಡ್ಡ ಜನರ ಬಡತನ ಒಂದೆಡೆಯಾದರೆ, ಬಡಜನರ ಶ್ರೀಮಂತಿಕೆಯನ್ನು ಕಾಣಿಸುವ ಹಂಬಲ ಇಲ್ಲಿಯ ಬರೆಹಕ್ಕಿದೆ. ಕೆಲದಿನಗಳ ಈ ಒಡನಾಟ ಬರೆಹಕ್ಕೆ ಒಂದು ಅನನ್ಯತೆಯನ್ನು ತಂದುಕೊಟ್ಟಿದೆ. ಅಷ್ಟೇ ಅಲ್ಲ ಲೋಕ ವಿವರಣೆಗೆ ಭಿನ್ನತೆಯನ್ನು ತಂದುಕೊಟ್ಟಿದೆ. ಲೇಖಕರ ಮತ್ತು ಅಲೀಮಮ್ಮರ ಸಂಬಂಧ ಇದಕ್ಕೆ ಸದಾ ಸಾಕ್ಷಿಯಾಗಿ ನಿಲ್ಲುತ್ತದೆ. ಲೇಖಕಿ ಚಿತ್ರೀಕರಣ ಮುಗಿಸಿಕೊಂಡು ಹೊರಡುವ ಮುನ್ನಾ ದಿನ ಅಲೀಮಮ್ಮನನ್ನು ಕಂಡಾಗ, 'ಅಯ್ಯೋ ನೀವು ಹೊರಟೇ ಬಿಡುತ್ತೀರಾ?' ಹೋಗುವುದು ಎನ್ನುವ ಮಾತು ಎಷ್ಟು ಜೋರಾಗಿ ಕೇಳುತ್ತೆ ಅಲ್ಲವಾ? 'ಇದ್ದಕ್ಕಿದ್ದ ಹಾಗೆ ನನ್ನ ಕೈಗಳನ್ನು ಹಿಡಿದುಕೊಂಡು ನೀವು ನಮ್ಮ ಜಾತಿಯಲ್ಲಿ ಹುಟ್ಟಬೇಕಿತ್ತು ಎಂದುಬಿಟ್ಟರು. ಈ ಮಾತುಗಳನ್ನು ಕೇಳಿ ಕ್ಷಣಕಾಲ ದಿಗ್ಭ್ರಾಂತಳಾದೆ. ದಿಕ್ಕು ತೋಚಲಿಲ್ಲ. ಅಲೀಮಮ್ಮ ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಿಯಾಗಿತ್ತು. ಅವರ ಮನಸ್ಸಿನ ಭಾರ ನನ್ನ ಮನಸ್ಸಿಗೆ ವರ್ಗಾವಣೆಯಾಗಿತ್ತು. ಇಂಥದ್ದೊಂದು ಕ್ಷಣ ನನ್ನ ಜೀವನದಲ್ಲಿ ಬರುತ್ತೆ ಎಂದುಕೊಳ್ಳಲಿಕ್ಕೆ ಸಾಧ್ಯವೇ ಇರಲಿಲ್ಲ. ನನ್ನ ಕಣ್ಣಲ್ಲಿ ಅಯಾಚಿತವಾಗಿ ನೀರು ಬಂದಿತ್ತು. ಅವರ ಕೈಗಳನ್ನು ಬಿಗಿ ಮಾಡುತ್ತಾ ಅಲೀಮಮ್ಮ ಈಗಲೂ ನಾನು ನಿಮ್ಮವಳೇ ಎಂದಿದ್ದೆ. ಭೂಮಿ, ಆಕಾಶ, ನೀರು ಕೊನೆಗೆ ಆಡುತ್ತಿದ್ದ ಉಸಿರೂ ಭಾರವೇ. ಕಳಕೊಳ್ಳುವ ನೋವು ಕೂಡಿಕೊಳ್ಳುವ ಸುಖವನ್ನು ಇಲ್ಲವಾಗಿಸುತ್ತದೆ. ಅಲೀಮಮ್ಮನಿಗೆ ನಾನು ಯಾರೆಂದು ಸರಿಯಾಗಿ ಗೊತ್ತಿಲ್ಲ. ಆದರೆ ತನ್ನ ಧರ್ಮದವಳಲ್ಲವೆಂದು ಸ್ಪಷ್ಟವಾಗಿ ಗೊತ್ತಿದೆ. ಆದರೂ ನನ್ನನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕು ಅನ್ನಿಸಿತ್ತಲ್ಲ, ಅದು ದಿವ್ಯತೆಯದ್ದು. ಹುಟ್ಟಬೇಕಿತ್ತು ಎನ್ನುವುದು ಆಕೆಯ ಇಚ್ಛೆಯೇ ಆಗಿದ್ದರೆ ನಾನು ಅವರ ಧರ್ಮದವಳೇ.'' (ಪುಟ 191)

ಇಂತಹ ಪುಟಗಳು ಇಲ್ಲಿ ಅನೇಕ. ಚಂದ್ರಿಗೆ ಅವರ ಜರ್ನಿ ಕೇವಲ ಸಿನಿಮಾವನ್ನು ಒಳಗೊಂಡಿಲ್ಲ; ಧರ್ಮ, ರಾಜಕಾರಣ, ಬಡತನ, ದುಡಿಮೆ, ಆಹಾರ ಪದ್ಧತಿ, ಮಹಿಳೆ, ಮಕ್ಕಳನ್ನೂ ಒಳಗೊಂಡಿದೆ. ಇಲ್ಲೆಲ್ಲಾ ಬಳಕೆಗೊಂಡ ಭಾಷೆಗೂ ಒಂದು ವಿಶೇಷತೆ ಇದೆ. ಅದು ಕಾವ್ಯಭಾಷೆಯಾದರೂ, ಅದಕ್ಕೊಂದು ತಾಯ್ತನವಿದೆ. ಇಡೀ ಬರಹವೇ ಕರುಣೆಯಿಂದ ಕೂಡಿದೆ. ಸಮಾಜವನ್ನು, ಧರ್ಮವನ್ನು, ಪುರುಷನನ್ನು ಮಹಿಳಾ ನೆಲೆಯಲ್ಲಿ ಅಭಿವ್ಯಕ್ತಿಸಿದ ಅಪರೂಪದ ಅಂಕಣ ಬರಹಗಳ ಕೃತಿಯಾಗಿ 'ಮೂವರು ಮಹಮದರು' ಕೃತಿ ಇದೆ.

ಸ್ತ್ರೀ ಸಂವೇದಿ ಕಥೆಗಳು

ಕಳೆದ ನಾಲ್ಕು ದಶಕಗಳಿಂದ ಸಣ್ಣ ಕಥೆಗಳನ್ನು ಬರೆಯುತ್ತಾ ಬಂದಿರುವ ಕೇಶವ ರೆಡ್ಡಿ ಹಂದ್ರಾಳ ಅವರು ಸುಮಾರು 500 ಕಥೆಗಳನ್ನು ಬರೆದಿದ್ದಾರೆ. ಈ ಕಥೆಗಳಲ್ಲಿ, ಸ್ತ್ರೀ ಸಂವೇದನೆಯಿರುವ ಇಪ್ಪತ್ತು ಕಥೆಗಳನ್ನು ಆಯ್ದು ಈ ಸಂಕಲನ ರೂಪಿಸಿರುವುದು, ಈ ಸಂಕಲನದ ಕುರಿತು ನಿರೀಕ್ಷೆಗಳನ್ನು ಹೆಚ್ಚಿಸುತ್ತದೆ. ತಮ್ಮ ಹೆಚ್ಚಿನ ಕೃತಿಗಳಲ್ಲಿ ಮುಖ್ಯವಾಗಿ ಗ್ರಾಮೀಣ ಬದುಕನ್ನು ಚಿತ್ರಿಸಿರುವ ಹಂದ್ರಾಳರು, ಈ ಸಂಕಲನಕ್ಕೆ ಆಯ್ಕೆ ಮಾಡಿದ ಕಥೆಗಳಲ್ಲಿ ನಗರ ಕೇಂದ್ರಿತ ಸಂವೇದನೆಗಳನ್ನೂ ಕಟ್ಟಿಕೊಟ್ಟಿರುವುದು ವಿಶೇಷ.

''ನಲವತ್ತು ವರ್ಷಗಳಿಂದಲೂ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ಕಥೆ, ಪ್ರಬಂಧ, ಕಾದಂಬರಿ, ಲೇಖನಗಳ ಕೃಷಿಯಲ್ಲಿ ತೊಡಗಿಕೊಂಡಿರುವ ಕೇಶವರೆಡ್ಡಿ ಹಂದ್ರಾಳರು ಈಗಲೂ ದಣಿವರಿಯದೆ ಬರೆಯುತ್ತಿರುವುದು ಅವರ ಕ್ರಿಯಾ ಶೀಲ ಸಾಹಿತ್ಯ ಕೃಷಿಯ ನಿರಂತರ ಅನನ್ಯತೆಗೆ ಸಾಕ್ಷಿಯಾಗಿದೆ. ಹಂದ್ರಾಳರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತೊಡಗಿಸಿ ಕೊಂಡಿದ್ದರೂ ಓದುಗರನ್ನು ದಟ್ಟವಾಗಿ ಆವರಿಸಿಕೊಳ್ಳುವುದು ಅವರ ಕಥನ ಕಲೆಯ ಮೂಲಕವೇ. ಹೆಣ್ಣು, ಕಣ್ಣೀರು, ಹಸಿವು ಮತ್ತು ಕಾಮ ಹಂದ್ರಾಳರ ಕಥನ ಕ್ರಿಯೆಯ ಮೂಲದ್ರವ್ಯಗಳೆಂಬುದು ಅವರ ಸಾಹಿತ್ಯದಲ್ಲಿ ಪ್ರಕಟವಾದ ಸತ್ಯ. ಅತ್ಯಂತ ವಾಸ್ತವ ನೆಲೆಗಟ್ಟಿನಲ್ಲಿ ಅವರು ಹೆಣ್ಣನ್ನು ಚಿತ್ರಿಸುವ ಪರಿ ನಿಜಕ್ಕೂ ಇದುವರೆಗಿನ ಸ್ತ್ರೀ ಸಾಹಿತ್ಯಕ್ಕೂ ಸಾಧ್ಯವಾಗಿಲ್ಲವೆನಿಸುತ್ತದೆ! ಕಥೆಗಳ ಮೂಲಕ ಹೆಣ್ಣಿನ ಲೋಕವನ್ನು ಪ್ರವೇಶಿಸಿ, ಹೆಣ್ಣಿನ ಸಮಗ್ರ ಭಾವನೆಗಳನ್ನು ಸಮರ್ಥವಾಗಿ ಅಭಿವ್ಯಕ್ತಗೊಳಿಸುವ ಹಂದ್ರಾಳರಿಗೆ ಹಂದ್ರಾಳರೇ ಸಾಟಿ. ಇವರ ಕಥನಶೈಲಿ ಸೂಕ್ಷ್ಮವೂ ವೈನೋದಿಕವೂ ಆಗಿರುವುದನ್ನು ಕಾಣಬಹುದು.' '(ಬೆನ್ನುಡಿಯಲ್ಲಿ ಸಿರಿಧರೆ ಗೀತಾ ನಾಗರಾಜ್)



ವರ್ಣಭೇದ
ಲೇ: ಕೇಶವರೆಡ್ಡಿ ಹಂದ್ರಾಳ
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಬೆಲೆ ರು.295/-

ಬದುಕಿಗೆ ಪ್ರೇರಣಾ ಕಥಾನಕ

» ರಾಜೀವ ಅಜ್ಜೀಬಳ

ಒಮ್ಮೆ ಓದಲು ಪ್ರಾರಂಭಿಸಿದರೆ ಕೊನೆ ಹಾಯಿಸಿಬಿಡುವ ಆಕರ್ಷಕ ಶೈಲಿ ಇವರದು. ಯಾವುದೇ ಸಾಧಕರ ಕುರಿತು ಬರೆಯಲಿ ಅವರ ಬಗೆಗೆ ಸಮಗ್ರ ಮಾಹಿತಿಯನ್ನು ಕಲೆ ಹಾಕದೇ ಇವರು ಬರೆಯುವುದಿಲ್ಲ.

ಅಕ್ಷರಲೋಕದ ಅಚ್ಚರಿ ವಿಶ್ವೇಶ್ವರ ಭಟ್, ಪ್ರಾಣಿ, ಪಕ್ಷಿಗಳಿಗೆ ಆಸರೆ ನೀಡಿರುವ ಶಿರಸಿಯ ಪೂಜಾ ರಾಜೇಂದ್ರ ಶಿರಸಿಕರ ದಂಪತಿಯ ಪ್ರಾಣಿದಯೆ, ಕ್ಯಾನ್ಸರ್ ರೋಗವನ್ನು ಗೆದ್ದ ಪತ್ರಕರ್ತೆ ಕೃಷ್ಣಿ ಶಿರೂರರ ಅನುಭವ, ಹೊನ್ನಾವರದ ಸಾಂಸ್ಕೃತಿಕ ಸೌರಭ ಕಿರಣ ಕುಮಾರ್ ನಾಯ್ಕ್, ಮದ್ದಳೆ ವಾದನವನ್ನು ಶಾಸ್ತ್ರೀಯವಾಗಿ ತೆಂಕು ಹಾಗೂ ಬಡಗು ತಿಟ್ಟುಗಳಲ್ಲಿ ಕಲಿತು ಸಿದ್ದಿಸಿಕೊಂಡ ಕಡತೋಕದ ಸುನೀಲ್ ಭಂಡಾರಿ, ನಿರಂತರ ಪರಿಸರ ಪ್ರೀತಿಯ ಸಂದೇಶ ಸಾರುವ ಶಿವಾನಂದ ಕಳವೆ ಹೀಗೇ ಓದುಗರ ಬದುಕಿಗೂ ಸ್ಫೂರ್ತಿ ನೀಡುವ ಸ್ಫೂರ್ತಿವಂತರ ಪ್ರೇರಣಾ ಕಥಾನಕ ಈ ಕೃತಿಯಲ್ಲಿ ಸಿಗುವುದು ವಿಶೇಷ.

ಆಯ್ದ ಸಾಧಕರ ಬಗೆಗೆ ಬರೆಯುವಾಗ ಅಡಕಳ್ಳಿ ಅವರ ಸ್ವವಿವರಗಳಿಗಷ್ಟೇ ಸೀಮಿತಗೊಳಿಸದೇ ಅವರ ಹವ್ಯಾಸ, ಗುರಿ ಸಾಧನೆಯ ಪಥದಲ್ಲಿ ಎದುರಿಸಿದ ಸೋಲು, ಗೆಲುವು, ಕೌಟುಂಬಿಕ ಹಿನ್ನಲೆ, ಕಲೆ, ಸಾಮಾಜಿಕ, ಸಾಂಸ್ಕೃತಿಕ ಕಾಳಜಿ, ಅವರ ಗಮನಾರ್ಹ ಕಾಣ್ಕೆಗಳನ್ನು ದಾಖಲಿಸುತ್ತಾರೆ. ಬಾಂಗ್ಲಾ ಯುದ್ಧದಲ್ಲಿ ಗಾಯಾಳು ಸೈನಿಕರಿಗೆ ಚಿಕಿತ್ಸೆ ನೀಡಿದ ಅಜ್ಜಿಬಾಳದ ಡಾ. ಪ್ರಭಾಕರ್, ಕೃಷಿ ವಿಜ್ಞಾನಿ ರಾಜೇಂದ್ರ ಹೆಗಡೆ, ಭುವನ ಸುಂದರಿ ಶ್ರುತಿ, ಅಸ್ತ್ರ ಒಲೆಯ ಅರುಣ್ ಜೋಶಿ, ಸಾಹಿತ್ಯ ಲೋಕದ ಮೆಹೆಂದಳೆ, ಸಂಗೀತ ಸಪ್ತಕದ ಜಿ. ಎಸ್ ದಂಪತಿ, ರಂಗಭೂಮಿಯ ಸವ್ಯಸಾಚಿ ಶ್ರೀಪಾದ ಭಟ್, ಹೀಗೇ ಇಲ್ಲಿಯ 33ಸಾಧಕರ ಬಗೆಗಿನ ವಿವರಗಳೂ ಅಪೂರ್ವವೇ.

ಕಾಡು, ಹಸಿರು, ಪರಿಸರಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ಬಗ್ಗೆ ಬರೆಯುವಾಗ ಅಡಕಳ್ಳಿ ಭಾಷೆ ಕಾವ್ಯಮಯವಾಗುವುದು ವಿಶೇಷ. ಇವರ ಬರಹಗಳಲ್ಲಿ ಗ್ರಾಮೀಣ ಸೊಗಡು, ಜಾನಪದ, ಗಾದೆ ಮಾತು, ಲಘು ಹಾಸ್ಯ ಲಹರಿ, ಜಾಣ್ನುಡಿ, ವಿಡಂಬನೆಗಳಿಂದ ಇಡೀ ಬರಹವೇ ರಸಪಾಕವಾಗಿ ಓದುಗರಿಗೆ ಮುದ ನೀಡುತ್ತದೆ. ಅಡಕಳ್ಳಿಯವರ ಬರಹದ ಇನ್ನೊಂದು ವಿಶೇಷವೆಂದರೆ ಅಲ್ಲಲ್ಲಿ ಸಹಜವಾಗಿ ನುಸುಳಿ ಬರುವ ಆಡುಭಾಷೆ, 'ಹವಿಗನ್ನಡ'. ಬಳಸದೇ ನೇಪಥ್ಯಕ್ಕೆ ಸೇರಿಹೋದ ಶಬ್ದಗಳನ್ನು ಈ ಕೃತಿ ಯಲ್ಲಿ ಬಳಸಿ ಪುನಃ ಚೇತನ ಗೊಳಿಸಿದ್ದಾರೆ. ಉದಾಹರಣೆಗೆ: ದಾಮಡ್ವು, ಅಸಡ್ಡಾಳ, ವರಾತ, ಜನ್ನೆ ಮಜ್ಜಿಗೆ, ತಾಪಡತೋಪ, ತೊಳ ಸಂಬಟ್ಟೆ, ದುಪ್ಪಾಳ, ಜಂಪೇ ರಾಗ, ಸೊರಟೆ ಎಮ್ಮೆ, ನಯ ಗೋರಿತನ, ದಣಪೆ, ಇತ್ಯಾದಿ. ಮರ ಪೇತಲ, ಗಿಡಪೇತಲ ಮುಂತಾದ ಹೊಸ ಶಬ್ದಗಳನ್ನೂ ಅಡಕಳ್ಳಿ ಕಟ್ಟಿಕೊಟ್ಟಿದ್ದಾರೆ. ಈಚಿನ ದಿನಗಳಲ್ಲಿ ಅಂಕಣ ಬರಹಕ್ಕೆ ಲವಲವಿಕೆಯ ಹೊಸತನ ನೀಡಿ, ಅದೊಂದು ಪ್ರಬಂಧವೆಂಬತೆ ಓದಿಸಿಕೊಂಡು ಹೋಗುವ ಗುಣ ರಾಜು ಅಡಕಳ್ಳಿ ಅವರ ಬರಹದಲ್ಲಿ ಎದ್ದು ಕಾಣುತ್ತದೆ ಹಾಗೂ ಓದುಗರ ಮನದಲ್ಲಿ ಉಳಿಯುತ್ತದೆ.



ಸ್ಫೂರ್ತಿವಂತರು
ಲೇ: ರಾಜು ಅಡಕಳ್ಳಿ
ಪ್ರ: ಸಾಹಿತ್ಯ ಲೋಕ ಪಬ್ಲಿಕೇಶನ್, ಬೆಂಗಳೂರು. ಬೆಲೆ : ರು. 245/-

ಆರ್ಯ ಮತ್ತು ದ್ರಾವಿಡರ ಕುರಿತು

ಹರಪ್ಪಾ, ಮೊಹೆಂಜದಾರೋ ಪ್ರದೇಶದಲ್ಲಿ ಕಂಡುಬಂದ ಪುರಾತನ 'ಸಿಂಧೂ ಕಣಿವೆಯ ನಾಗರಿಕತೆ'ಯ ಕುರಿತು ಹೆಚ್ಚಿನ ಅಧ್ಯಯನ ನಡೆದು, ಅದರ ವಿವರಗಳು ಬೆಳಕಿಗೆ ಬಂದದ್ದು 1920ರ ದಶಕದ ನಂತರ! ಬ್ರಿಟಿಷರು ರೈಲು ಮಾರ್ಗ ನಿರ್ಮಿಸುವಾಗ ಆ ಭಾಗದಲ್ಲಿ ದೊರಕಿದ ಪುರಾತನ ಇಟ್ಟಿಗೆಗಳು, ಮಣ್ಣಿನ ಮೊಹರುಗಳು, ಅದರ ಮೇಲಿದ್ದ ಅಕ್ಷರಗಳು, ವಿವಿಧ ಆಕೃತಿಗಳು ಇವೆಲ್ಲವನ್ನೂ ಮೊದಲಿಗೆ ಅಧ್ಯಯನಕ್ಕೆ ಒಳಪಡಿಸಿದಾತ ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಮ್. ನಂತರದ ಈ ಒಂದು ಶತಮಾನದಲ್ಲಿ ಆ ನಾಗರಿಕತೆಯ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಅದಕ್ಕಿಂತ ಪುರಾತನ ಎನಿಸಿದ ಮೆಹರ್‌ಘರ್‌ನಲ್ಲೂ ಅಧ್ಯಯನ ನಡೆದಿವೆ. ಈ ನಾಗರಿಕತೆಯನ್ನು ರೂಪಿಸಿದ ಜನರು ಮತ್ತು ಇತರ ಪುರಾತನ ನಾಗರಿಕತೆಗಳ ಕೊಡು ಕೊಳುವಿಕೆಯನ್ನು ಅಧ್ಯಯನಕ್ಕೆ ಒಳಪಡಿಸಲಾಯಿತು. ಹರಪ್ಪ ಮೊದಲಾದ ಪ್ರದೇಶಗಳಲ್ಲಿ ನಾಗರಿಕತೆಯನ್ನು ಕಟ್ಟಿದವರಾರು ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ, ಅಲ್ಲಿದ್ದ ದ್ರಾವಿಡರನ್ನು ಹೊರಗಿನಿಂದ ಬಂದ ಆರ್ಯರು ದಕ್ಷಿಣ ಭಾರತಕ್ಕೆ ದೂಡಿದರೇ ಎಂಬ ಪ್ರಮುಖ ಪ್ರಶ್ನೆಯ ಉತ್ತರ ಹುಡುಕುತ್ತಾ, ಎನ್.ಕೆ.ಮೋಹನರಾಂ ಅವರು ಈ ಪುಸ್ತಕದಲ್ಲಿ ಮಹತ್ವಪೂರ್ಣ ಚರ್ಚೆಯನ್ನು ನಡೆಸಿದ್ದಾರೆ. ಆರ್ಯನರು ಹೊರಗಿನಿಂದ ಬಂದವರೇ, ಅಲ್ಲವೇ ಎಂಬ ವಿಚಾರದ ಕುರಿತು ಈಚಿನ ಒಂದು ದಶಕದಲ್ಲಿ ನಮ್ಮ ದೇಶದಲ್ಲಿ ಬಿಸಿ ಬಿಸಿ ಚರ್ಚೆಗಳಾಗಿವೆ. ಆರ್ಯನ್ ಜನಾಂಗವು ಹರಪ್ಪ ಮೊದಲಾದ ಪ್ರದೇಶಕ್ಕೆ ಬರುವ ಮೊದಲೇ, ಅಲ್ಲಿ ನಾಗರಿಕತೆ ಕಟ್ಟಿ, ಬಹು ದೂರದ ದೇಶಗಳಿಗೆ ಸಮುದ್ರ ಮಾರ್ಗದಲ್ಲಿ ತೆರಳಿ ವ್ಯವಹಾರ ನಡೆಸುತ್ತಿದ್ದವರು ದ್ರಾವಿಡರು ಎಂಬ ಕುರಿತು ಇಲ್ಲಿ ಹಲವು ಮಹತ್ವದ ವಿಚಾರಗಳನ್ನು ಪ್ರಸ್ತುತಪಡಿಸಲಾಗಿದೆ. ಜತೆಗೆ, ಸಿಂಧೂ ಕಣಿವೆಯಲ್ಲಿ ದೊರಕಿದ ಮೊಹರುಗಳ ಮೇಲಿನ ಲಿಪಿಯಲ್ಲಿ ದ್ರಾವಿಡ ಮೂಲದ ಭಾಷೆಯನ್ನೇ ಬಳಸಿರಬೇಕು ಎಂಬ ಕುರಿತು ಸಹ ಚರ್ಚೆಗಳಿವೆ, ದಾಖಲೆಗಳಿವೆ. ಅವೆಸ್ತಾ ಮತ್ತು ವೇದಕಾಲದ ಗ್ರಂಥಗಳ ಸಾಮ್ಯತೆಯನ್ನು ಚರ್ಚಿಸಲಾಗಿದೆ. ಹಲವು ಮೂಲಗಳಿಂದ ಸಂಗ್ರಹಿಸಿದ ಅಧ್ಯಯನ ಸಾರಾಂಶಗಳು, ದಾಖಲೆಗಳನ್ನು ಒದಗಿಸುವ ಈ ಪುಸ್ತಕವು, ಆರ್ಯ ಮತ್ತು ದ್ರಾವಿಡ ಸಿದ್ಧಾಂತದ ಕುರಿತು ಸ್ಪಷ್ಟ ನಿಲುವುಗಳನ್ನು ಹೊಂದಿರುವುದರ ಜತೆಯಲ್ಲೇ, ಇನ್ನಷ್ಟು ಸಂಶೋಧನೆ ನಡೆಯುವ ಅವಶ್ಯಕತೆಯನ್ನು ಸಹ ಸೂಚಿಸುತ್ತದೆ. ಇದರ ಬೆನ್ನುಡಿಯಲ್ಲಿ ಉದ್ಧರಿಸಿದ ಸಾಲುಗಳು ಹೀಗಿವೆ: ''ನಾನು ರಾಜಾಧಿರಾಜ ಡೇರಿಯಸ್. ಸರ್ವಜನ ದೇಶದ ಮಹಿಪಾಲ ಬಹು ದೂರದವರೆಗಿನ ಈ ಧರೆಯ ಒಡೆಯ ಅಚೆಮೆನಿಕ್ ಹಿಸ್ಟಾಸ್‌ಸ್ಟೆಸ್‌ನ ವಂಶಜ. ನಾನು ಪರ್ಷಿಯನ್. ಪರ್ಷಿಯನ್ ಸಂಜಾತ ನಾನು ಆರಿಯ. ಆರ್ಯನ್ ಕುಲೋದ್ಧಾರಕ.' ಈ ಶಾಸನ ಇಂದಿನ ಇರಾನ್ ನ ನಕ್ಷ್-ಎ ರೊಸ್ತಂನಲ್ಲಿರುವ ಡೇರಿಯಸ್-1ನ ಸಮಾಧಿಯ ಬಳಿ ಇದೆ. ಅಂದರೆ ಇಂದಿನ ಇರಾನಿಯರು ಮತ್ತು ಭಾರತದ ಆರ್ಯರು ಒಂದೇ ಮೂಲದವರು. ಸಾವಿರಕ್ಕೂ ಹೆಚ್ಚು ವರ್ಷ ಒಂದೇ ಪ್ರದೇಶದಲ್ಲಿ ವಾಸವಿದ್ದವರು. ಒಂದೇ ದೇವರು, ಧರ್ಮಗ್ರಂಥ, ಸಂಪ್ರದಾಯ, ಆಚರಣೆ. ಆಹಾರಗಳೊಡನೆ ಒಂದೇ ಭಾಷೆಯನ್ನು ಮಾತಾಡಿದವರು. ಅದು ಇಂಡೋ-ಇರಾನಿಯನ್ ಭಾಷೆ. ಒಟ್ಟಿಗೆ ಪ್ರಾಣಿ, ಪಶುಪಾಲನೆ ಮಾಡಿದವರು. ಒಂದೇ ರೀತಿಯ ಕೃಷಿ ನಡೆಸಿದವರು. ಎರಡೂ ಗುಂಪಿನವರು ದನದ ಮಾಂಸ ಮತ್ತು ಹಾಲನ್ನು ಮನುಷ್ಯನ ಪೋಷಕಾಂಶಕ್ಕೆ ಅತ್ಯಗತ್ಯವೆಂದು ತಿಳಿದವರು.'' ನಮ್ಮ ದೇಶದ ಇತಿಹಾಸ ಮತ್ತು ಪರಂಪರೆಯ ಕುರಿತು ಆಸಕ್ತಿ ಇರುವವರೆಲ್ಲರೂ ಅಗತ್ಯವಾಗಿ ಓದಬಹುದಾದ ಪುಸ್ತಕವಿದು.



ಬೆಂಕಿ ಮತ್ತು ನೀರು
ಲೇ: ಎನ್.ಕೆ. ಮೋಹನ್‌ರಾಂ
ಪ್ರ: ಆಕ್ರಾಂತ ಪ್ರಕಾಶನ ಬೆಂಗಳೂರು
9620402737, ಬೆಲೆ ರು.170/-

ಜೀವರತಿ

ಲೇಖಕಿ ಜ.ನಾ.ತೇಜಶ್ರೀ ಅವರು ತಮ್ಮ ಮೊದಲ ಕಾದಂಬರಿಯನ್ನು ಹೊರತಂದಿದ್ದಾರೆ. ಈ ಕಾದಂಬರಿಯನ್ನು ಸುಮಾರು ಆರು ವರ್ಷಗಳ ಕಾಲ ಬೇಕಾಯಿತು ಎಂದು ಅವರು ಹೇಳಿಕೊಂಡಿದ್ದಾರೆ. ದೊಡ್ಡ ಗಾತ್ರದ ಈ ಕಾದಂಬರಿಯು ತನ್ನ ಗೇಯಗುಣದಿಂದ ಎಲ್ಲರ ಗಮನ ಸೆಳೆದಿದೆ. ಬೆಂಗಳೂರಿನ ಅಮೂಲ್ಯ ಪುಸ್ತಕ ಹೊರತಂದಿರುವ ಈ ಕಾದಂಬರಿಯು ಆನ್‌ಲೈನ್‌ನಲ್ಲೂ ಲಭ್ಯ. ಕಾದಂಬರಿಯ ಬೆನ್ನುಡಿಯ ಆಯ್ದ ಸಾಲುಗಳು ನಮ್ಮ ಓದುಗರಿಗಾಗಿ ಇಲ್ಲಿವೆ ''ಈಗ ದೊಡ್ಡ ಮಾವಿನ ಮರದಿಂದ ಹೊಸಮನೆವರೆಗೆ ಅಚ್ಚುಕಟ್ಟಾದ ಸಪಾಟು ಮಣ್ಣಿನ ರಸ್ತೆಯಿದೆ. ಹಾಗಾಗಿ 'ದೊಡ್ಡಮನೆ'ಯ ರಸ್ತೆಯನ್ನು ಅಷ್ಟಾಗಿ ಯಾರೂ ಬಳಸುವುದಿಲ್ಲ, 'ದೊಡ್ಡಮನೆ'ಯ ಸುತ್ತಲಿನ ಅಷ್ಟೂ ಜಾಗದಲ್ಲಿ ಥರಾವರಿ ಗಿಡಗಂಟೆಗಳು, ಕಾಡುಪೊದೆ, ಕುರುಚಲು. ಮುಂಭಾಗದ ಮಾವಿನಮರ, ಹಿಂಭಾಗದ ಸೀಬೆಮರಗಳು ಹಾಗೇ ಇವೆ, ಕಾಲಕಾಲಕ್ಕೆ ಹಣ್ಣು ಬಿಡುತ್ತ, ಹಕ್ಕಿ, ಹುಳಹುಪ್ಪಟೆಗಳಿಗೆ ಆಶ್ರಯವಾಗಿ. ಮನೆ ಅಳಿದಂತೆ ಕಾಣುತ್ತದೆ- ಆ ಊರಿನ ಅವಶೇಷವನ್ನು ಹಿಂದಿನ ವೈಭೋಗವನ್ನು ಒಟ್ಟಿಗೆ ನೆನಪಿಸುತ್ತ. ಪೂರ್ವಕ್ಕೆ ಮುಖ ಮಾಡಿದ ಮನೆಯ ಬಲ ಭಾಗಕ್ಕೆ ಹಳೆಯ ದಾರಿ ಇದೆ. ಹಾದಿಯನ್ನೂ ಮುಚ್ಚಿ ಬಿಡುವಂತೆ ಅದರ ಅಕ್ಕಪಕ್ಕ ಕಾಫಿಗಿಡಗಳು ಒತ್ತರಿಸಿಕೊಂಡು ನಿಂತಿವೆ. ಅಲ್ಲೊಂದು ರಸ್ತೆ ಇತ್ತು ಎಂದು ಗೊತ್ತಿಲ್ಲದೆ ಹೋದರೆ ಅದು ಗೊತ್ತೇ ಆಗುವುದಿಲ್ಲ, ಮನುಷ್ಯನ ಮನಸ್ಸು ಎಲ್ಲವನ್ನೂ ಅಷ್ಟೊಂದು ಒತ್ತರಿಸಿದೆ. ಆಕ್ರಮಿಸಿದೆ ಅನ್ನುವುದಕ್ಕೆ ಸಾಕ್ಷಿಯೆಂಬಂತೆ! ರಸ್ತೆಯ ಕೊನೆಗೆ ಸ್ಮಶಾನ. ಮನೆಯ ಜೀವ, ಜೀವಂತಿಕೆಯಿಂದಲೇ ಸಾವಿನ ನಿರಂತರ ನಂಟು ಎನ್ನುವ ಹಾಗೆ...

ಕಣ್ಣಿಟ್ಟು ನೋಡಿದರೆ ಯಾರಿಗೂ ಕಾಣುವುದು, ಕಿವಿಗೊಟ್ಟು ಆಲಿಸಿದರೆ ಕರುಳು ಮಿಡಿಯುವುದು. ಮನೆ ಅಳಿಯುತ್ತದೆ, ಅದರೊಳಗಿನ ಬಾಳು? ಯಾರೂ ಅಳಿಯಬಹುದು, ಆದರೆ ದನಿ? ಮನೆಯ ಗೋಡೆ ಬಿರುಕಲ್ಲಿ ಅರಳೀಮರದ ಕೆಂಪು ಚಿಗುರು ತಲೆಯೆತ್ತಿ ಆಕಾಶದೆಡೆಗೆ ಚಾಚಿಕೊಂಡು ಮೇಲೇರುತ್ತಿದೆ.

ರತಿಯು ಬೇಲಿ ದಾಟಿ ನಾಲ್ಕು ದಾಪು ನಡೆದು ಬಾವಿ ತಲುಪಿ ಕಟ್ಟೆಯ ಹಸಿರು ಮೆತ್ತೆ ಮೇಲೆ ಕುಳಿತಳು. ಪಾಚಿಯನ್ನು ನೇವರಿಸಿದಳು. ಸಮಾಧಾನವೆನ್ನಿಸಿತು. ನೀರಿನ ಮೇಲೆಯು ಗಾಳಿಗೆ ಕಂಪಿಸುತ್ತ ತರಂಗಗಳು ಹುಟ್ಟಿ, ಬೆಳೆದು, ಮತ್ತೆ ಹುಟ್ಟಿ ಬೆಳೆದು ಅಂತರ್ಧಾನ ಆಗುವುದನ್ನು ನೋಡತೊಡಗಿದಳು. ಅದೊಂದು ಮುಗಿಯದ ವರ್ತುಲವಾಗಿ ಯಾವುದು ಶುರು, ಎಲ್ಲಿಗೆ ಕೊನೆ-ಎಂದು ಅವಳಿಗೆ ಬಗೆಹರಿಯಲಿಲ್ಲ. ಬಿಸಿಲು ಇಳಿಯುತ್ತಿತ್ತು. ಕುಳಿತಿದ್ದ ರತಿ ಎದ್ದಳು. ಅವಳು ಇನ್ನೂ ನೀರಿನ ಮೈಯನ್ನೇ ನೋಡುತ್ತಿದ್ದಳು. ತಿಳಿಬಣ್ಣದ ನೀರು ಮರದ ನೆರಳು, ಸಂಜೆಯ ಛಾಯೆಯಾ ಜೊತೆ ಸೇರಿಕೊಂಡು ಕಪ್ಪಾಗಿ ಕಾಣುತ್ತಿತ್ತು. ರತಿಯ ಕಣ್ಣಿಗೆ ಗಳಿಗೆ ಗಳಿಗೆಗೂ ಆ ಕಪ್ಪು ಗಾಢವಾಗುತ್ತ ಹೋದಂತೆನಿಸಿ, ಒಂದು ಹಂತದಲ್ಲಿ ಎಲ್ಲ ಕಡೆ ಕಪ್ಪು ಆವರಿಸಿಕೊಂಡುಬಿಟ್ಟಿತು. ಆ ಕ್ಷಣ ಸುತ್ತಲ ಶಬ್ದಗಳೂ ಸದ್ದಡಗಿ, ಕತ್ತಲ ಸುರಂಗದೊಳಗೆ ಹೋಗುತ್ತಿರುವ ಅನುಭವವಾಯಿತಷ್ಟೆ.''



ಜೀವರತಿ
ಲೇ: ಜ.ನಾ.ತೇಜಶ್ರೀ
ಪ್ರ: ಅಮೂಲ ಪುಸ್ತಕ ಬೆಂಗಳೂರು
ಬೆಲೆ ರು.450/-

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಎದೆಯ ಹಣತೆ
(ಮಾನವೀಯ ಮೌಲ್ಯಗಳನು ಎತ್ತಿ ಹಿಡಿಯುವ 13 ಕಥೆಗಳ ಸಂಕಲನ ಈಗ ಬೂಕರ್ ಪ್ರಶಸ್ತಿ ಪುರಸ್ಕಾರದೊಂದಿಗೆ)
ಲೇ: ಬಾನು ಮುಷ್ತಾಕ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ : ರೂ 250/-

2
ರಾಮಾಯಣ ,ಮಹಾಭಾರತ
('ರಾಮಾಯಣ' ಆಸೆಯ ಕೇಡನ್ನು ಕುರಿತು ಮಾತನಾಡಿದರೆ,'ಮಹಾಭಾರತ' ಸೇಡಿನ ಕೇಡನ್ನು ಕುರಿತು ಮಾತನಾಡುತ್ತದೆ-ಈ ಕುರಿತು ವಿಸ್ತೃತವಾಗಿ ಇಲ್ಲಿ ಚರ್ಚಿಸಿದ್ದಾರೆ.)
ಲೇ: ದೇವದತ್ತ ಪಟ್ಟನಾಯಕ
ಅನು : ಪದ್ಮರಾಜ ದಂಡಾವತಿ
ಪ್ರ: ಅರವಿಂದ್ ಇಂಡಿಯಾ, ಬೆಂಗಳೂರು
ಬೆಲೆ : ರೂ 325/-



3
ಶ್..! ಇಲ್ಯಾರೋ ಇದ್ದಾರೆ ..!!
(ತಮ್ಮ ಥ್ರಿಲ್ಲರ್ ಕಿರುಗತೆಗಳಿಗೆ ಈಗ ಚಿತ್ರಗಳನ್ನೂ ಸೇರಿಸಿ ಓದುಗರನ್ನು ಹೆದರಿಸುತ್ತಿದ್ದಾರೆ ಕೊಡ್ಗಣಿಯವರು. ಹೆದರಬೇಡಿ, ಓದಿ)
ಲೇ: ಗುರುರಾಜ್ ಕೊಡ್ಕಣಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 175/-

4
ಬಹುತ್ವ ಕರ್ನಾಟಕ
(ನಾಡಿನ ಭೂಗೋಳ, ಸಮಾಜ, ಕಸುಬು,ರಾಜಕಾರಣ, ಧರ್ಮ, ದರ್ಶನ, ನಾಟಕ, ಸಂಗೀತ, ಭಾಷೆ ಇತ್ಯಾದಿ ಎಳೆಗಳನ್ನು ಹುಡುಕಿ ಇಲ್ಲಿ ಬಹುತ್ವದ ಬಟ್ಟೆಯನ್ನು ನೇಯಲಾಗಿದೆ)
ಲೇ: ರಹಮತ್ ತರೀಕೆರೆ
ಪ್ರ: ಅಭಿನವ, ಬೆಂಗಳೂರು
ಬೆಲೆ : ರೂ 300/-



5
ದೇವ ಸನ್ನಿಧಿ
(ಮನುಷ್ಯನ ತಿರುಗಾಟಕ್ಕೊಂದು ಅಧ್ಯಾತ್ಮಿಕ ಸ್ಪರ್ಶ ನೀಡುವುದೇ ತೀರ್ಥಯಾತ್ರೆ. ಪ್ರವಾಸ ಲೌಕಿಕ ಅನುಭವವನ್ನು ಕೊಟ್ಟರೆ ತೀರ್ಥಯಾತ್ರೆ ಅಲೌಕಿಕ ಅನುಭವವನ್ನು ತಂದುಕೊಡುತ್ತದೆ) ಲೇ: ಗಿರಿಜಾ ರೈಕ್ವ
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 250/-



6
ವಾರೆನ್ ಬಫೆಟ್
(ಷೇರುಗಳಲ್ಲಿ ಹೂಡಿಕೆ ಮಾಡಿ ಕೋಟ್ಯಂತರ ಗಳಿಸಿದ ಬಫೆಟ್‌ನ ಹೂಡಿಕೆ ತಂತ್ರಗಳು ಇಲ್ಲಿವೆ, ಷೇರು ಹೂಡಿಕೆದಾರರು ಗಮನಿಸಲೇಬೇಕಾದ ಪುಸ್ತಕವಿದು)
ಲೇ: ಚಂದ್ರಶೇಖರ ಮದಭಾವಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 200/-

7
ಜಂಕ್ಷನ್ ಪಾಯಿಂಟ್
(ಇದು ಲೇಖಕನೂ ಸೇರಿದಂತೆ ಹಲವು ಜನರ ಕಷ್ಟ ಕೋಟಲೆಗಳು, ದುಗುಡ ದುಮ್ಮಾನಗಳು, ಭಾವನೆಗಳು ಬದುಕಿನ ಬಗೆಗಿನ ಹಲವು ಗ್ರಹಿಕೆಗಳು ಸಂಧಿಸುವ ಜಂಕ್ಷನ್ ಪಾಯಿಂಟ್)
ಲೇ: ದಾದಾಪೀರ್ ಜೈಮನ್
ಪ್ರ: ಹರಿವು ಬುಕ್ಸ್, ಬೆಂಗಳೂರು
ಬೆಲೆ : ರೂ 180/-

8
ಆರ್ಟಿಫೀಶಿಯಲ್ ಇಂಟೆಲಿಜೆನ್ಸ್
(ಇದೀಗ ಹೆಚ್ಚಾಗಿ ಚಾಲ್ತಿಯಲ್ಲಿರುವ ವಿಜ್ಞಾನ. ಬದುಕಿನ ದಿಕ್ಕನ್ನೇ ಬದಲಿಸುವ ಈ ಂಖ ತಂತ್ರಜ್ಞಾನ ಕುರಿತ ಹೆಚ್ಚಿನ ಓದಿಗೆ ಇಲ್ಲಿ ಬನ್ನಿ), ಲೇ: ಮಧು ವೈ.ಎನ್
ಪ್ರ: ನೆಲಮುಗಿಲು ಪ್ರಕಾಶನ, ಬೆಂಗಳೂರು, ಬೆಲೆ : ರೂ 170/-



9
ವಿಧಿಗೆ ಸವಾಲು
(ಶಿವಾಜಿ ಎಂದು ಕರೆಯಲ್ಪಡುವ ನಿಗೂಢವ್ಯಕ್ತಿಯ ಸಂಕ್ಷಿಪ್ತ ಮತ್ತು ಸಮಗ್ರ ಚಿತ್ರಣ. ಇತಿಹಾಸ ಪ್ರಿಯರು ಮತ್ತು ವಿದ್ವಾಂಸರು ಓದಲೇ ಬೇಕಾದ ಕೃತಿ)
ಲೇ: ಮೇಧಾ ದೇಶಮುಖ್ ಭಾಸ್ಕರನ್
ಅನು : ಆರ್.ಎಸ್. ಹಬ್ಬು
ಪ್ರ: ಪ್ರಿಸಂ ಬುಕ್ಸ್, ಬೆಂಗಳೂರು
ಬೆಲೆ : ರೂ 499/-



10
ಭುಗಿಲು
(1975ರ ತುರ್ತು ಪರಿಸ್ಥಿತಿಯ ಸರ್ವಾಧಿಕಾರಿ ಆಡಳಿತದ ವಿರುದ್ಧ ಹೋರಾಟದ ಸತ್ಯಕಥೆ - ಈಗ ಪುನರ್ ಮುದ್ರಣವಾಗಿದೆ), ಸಂ : ಹೊ.ವೆ. ಶೇಷಾದ್ರಿ, ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, 1ಬೆಲೆ : ರೂ 750/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಸಂಕಲ್ಪ ಸಿದ್ಧಿ

ಕೆಲಸ ಕಳೆದುಕೊಂಡು ಹಳ್ಳಿ ಸೇರಿದ ಕಥಾನಾಯಕ, ಕೊನೆಗೊಂದು ದಿನ ರಫ್ತು ವ್ಯವಹಾರದಲ್ಲಿ ಸಾಮಗ್ರಿ ಪೂರೈಸುವ ಮಟ್ಟಕ್ಕೆ ಏರಿದ್ದು ಹೇಗೆ?

ಹೊಸ ಕಥೆ

» ಅ. ಸು. ರವೀಂದ್ರ

ಊರಿನ ಬಸ್ಸು ಏರಿ ಹೊರಟ ಉಪಮನ್ಯುವಿಗೆ ನಿದ್ರೆ ಬರುತಿಲ್ಲ. ಬಸ್ಸು ನೆಲಮಂಗಲ ದಾಟಿ ತುಮಕೂರಿನಿಂದ ಶಿವಮೊಗ್ಗದೆಡೆಗೆ ಧಾವಿಸುತ್ತಿತ್ತು. ಮನಸ್ಸೆಲ್ಲಾ ಮಧ್ಯಾಹ್ನ ನಡೆದ ಘಟನೆಗಳನ್ನೇ ಮೆಲುಕು ಹಾಕುತ್ತಿತ್ತು. ಏಳು ವರ್ಷ ಸರ್ವೀಸ್ ಮಾಡಿದ ನನಗೆ ಹೀಗಂದುಬಿಟ್ನಲ್ಲ ಬಾಸ್. ಹೌದು ನನ್ನಿಂದಲೂ ತಪ್ಪಾಗಿತ್ತು. ಬೇಕೆಂದೇ ಅದುದಲ್ಲ. ಸೌಂದರ್ಯ ಸಾಧನಗಳನ್ನು ವಿವಿಧೆಡೆ ರಫ್ತು ಮಾಡುವ ಕಂಪನಿ. ಅವುಗಳ ಪ್ಯಾಕಿಂಗ್, ರವಾನೆ ಲೆಕ್ಕ ಪತ್ರಗಳನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನದೇ. ಅಂದು ಮಾಲುಗಳನ್ನೆಲ್ಲಾ ಲೋಡ್ ಮಾಡುತ್ತಿದ್ದಾಗ ಮತ್ತೊಂದಿಷ್ಟು ಬಾಕ್ಸ್ ಗಳನ್ನು ತಂದಿಟ್ಟ ಕೆಲಸಗಾರ ಇದನ್ನು ಇವತ್ತೇ ಕಳಿಸಬೇಕಂತೆ ಅಂದ. ಅವಸರದಲ್ಲಿ ಅದಕ್ಕೆ ವಿಮೆ ಮಾಡಿಸಿಲ್ಲದಿದ್ದುದು ಮರೆತುಹೋಗಿತ್ತು. ಪಾರ್ಸೆಲ್ ರೈಲಿಗೆ ಕಳಿಸಿದ ಮೇಲೆ ನೆನಪಾಯಿತಾದರೂ ಉಳಿದವುಗಳೊಂದಿಗೆ ಇದೂ ಸುರಕ್ಷಿತವಾಗಿ ಸೇರುತ್ತದೆ, ಯಾವಾಗಲೂ ಹೋಗುವುದಿಲ್ಲವೇ? ಸುಮ್ಮನೆ ವಿಮೆ ಖರ್ಚು. ಅದೂ ಸ್ವಲ್ಪ ಅಲ್ಲ. ಬಾಕ್ಸಿಗೆ ಐದು ಸಾವಿರ. ಮಾಲುಗಳ ಮೌಲ್ಯವೂ ಕಡಿಮೆ ಇರಲಿಲ್ಲ. ಪ್ರತೀ ಬಾಕ್ಸೂ ಲಕ್ಷಾಂತರ ಮೌಲ್ಯದ್ದು. ಕಂಪನಿಗೂ ಒಳ್ಳೆಯ ಲಾಭ ಬರುತ್ತಿತ್ತು. ಅದರೊಂದಿಗೆ ಈ ವಿಮೆಯ ಖರ್ಚೂ ಉಳಿದು ಇನ್ನಷ್ಟು ಲಾಭ ಬಂದು ಬಾಸ್ ಖುಷಿಯಾಗಬಹುದು ಎನ್ನಿಸಿತ್ತು.

ಒಟ್ಟಿನಲ್ಲಿ ಇವನ ಗ್ರಹಚಾರ ಸರಿಯಿರಲಿಲ್ಲ ಅನ್ನಿಸುತ್ತೆ. ರೈಲು, ಶ್ರೀಶೈಲ ಬಳಿಯ ಸೇತುವೆ ಕುಸಿದು,ಬೋಗಿ ಕೆಳಗೆ ತುಂಬಿ ಹರಿಯುತ್ತಿದ್ದ ಕೃಷ್ಣಾ ನದಿ ಪಾಲಾಗಿತ್ತು. ಜನರ ಪ್ರಾಣದ ಜೊತೆಗೆ ರೈಲಿನಲ್ಲಿದ್ದ ವಸ್ತುಗಳೆಲ್ಲಾ ನೀರು ಪಾಲಾಗಿದವು. ನಮ್ಮ ಕಂಪನಿಯ ಮಾಲುಗಳಿಗೆ ವಿಮೆ ಏನೋ ದೊರೆಯಿತು ಆದರೆ ಅವಸರದಲ್ಲಿ ವಿಮೆ ಮಾಡಿಸಿರದಿದ್ದ ಮಾಲುಗಳಿಗೆ ಪರಿಹಾರ ದೊರೆಯದೆ ಕಂಪನಿಗೆ ಲಕ್ಷಾಂತರ ನಷ್ಟವಾಯಿತು. ಸಮಯಕ್ಕೆ ಸರಿಯಾಗಿ ಮಾಲು ತಲುಪದ ಕಾರಣ ನಮ್ಮ ಆಮದುದಾರ ಸಂಸ್ಥೆ ಒಡಂಬಡಿಕೆಯಿಂದ ಹಿಂದೆ ಸರಿಯಿತು.

ಇದರಿಂದ ಕಂಪನಿಯ ಭವಿಷ್ಯಕ್ಕೆ ಭಾರಿ ಹೊಡೆತ ಬಿತ್ತು. ಬಾಸ್ ಮೊದಲೇ ಮುಂಗೋಪಿ. ಕರೋನಾ ಸಮಯದಲ್ಲಿ ಹಳ್ಳ ಹಿಡಿದಿದ್ದ ಕಂಪನಿ ಈಗ ಚೇತರಿಸಿಕೊಳ್ಳುತ್ತಿತ್ತು. ಈಗ ಈ ಹೊಡೆತವನ್ನು ಸಹಿಸುವುದು ಕಷ್ಟವಾಗಿತ್ತು. ಸಾಲ ಕೊಟ್ಟ ಬ್ಯಾಂಕು ಕೂಡಾ ಕರುಣೆ ತೋರಿಸುವ ನಂಬಿಕೆ ಇರಲಿಲ್ಲ. ಅದಕ್ಕೆ ಎಲ್ಲಾ ಸಿಟ್ಟನ್ನೂ ನನ್ನ ಮೇಲೆ ತೀರಿಸಿಕೊಂಡಿದ್ದರು.

'ನೋಡಿದ್ರಾ ಮಿ.ಉಪಮನ್ಯು? ನಿಮ್ಮ ಬೇಜವಾಬ್ದಾರಿತನದಿಂದಾಗಿ ನಾವಿಂದು ಬೀದಿಗೆ ಬರುವಂತಾಗಿದೆ. ಈ ನಷ್ಟವನ್ನು ಯಾರು ತುಂಬಿಕೊಡುತ್ತಾರೆ? ನಿಮ್ಮ ನಾಲಾಯಕ್ ತನವನ್ನು ಸಹಿಸಿಕೊಂಡಿರುವುದು ಸಾಧ್ಯವಿಲ್ಲ. ಯು ಆರ್ ಫೈರ್ಡ್. ನಿಮ್ಮಿಂದಾಗಿ ಕಂಪನಿಗಾಗಿರುವ ನಷ್ಟಕ್ಕೆ ನಿಮಗೆ ಪಿ.ಎಫ್, ಗ್ರಾಚ್ಯುಟಿ ಯಾವುದೂ ಸಿಗುವುದಿಲ್ಲ, ಗೆಟ್ ಲಾಸ್ಟ್' ಎಂದು ಗುಡುಗಿದ್ದ ಬಾಸ್ ಮೇಲೆ ಎಲ್ಲಿಲ್ಲದ ಕೋಪ ಬಂತು. 'ಆಯ್ತು ಸರ್, ಬರ್ತೀನಿ. ನನಗೂ ಈ ಸಲಾಂ ಹೊಡೆದುಕೊಂಡಿರುವ ಕೆಲಸ ಸಾಕಾಗಿದೆ. ನಿಮ್ಮ ಕಂಪನಿ ಇದ್ದರೇನೆ ಬೆಳಗಾಗುವುದಲ್ಲ. ನಿಮ್ಮ ಕಣ್ಣ ಮುಂದೆಯೇ ನಾನೇನು ಮಾಡಬಲ್ಲೆ ಎಂಬುದನ್ನು ತೋರಿಸುತ್ತೇನೆ' ಎಂದು ಚೇಂಬರಿನಿಂದ ಹೊರಬಂದಿದ್ದ.

ಸೀದಾ ಬಂದವನೇ ಗೆಳೆಯ ಭಾಸ್ಕರ ಪಾಟೀಲ್ ರೂಮಿಗೆ ಹೋಗಿದ್ದ. ಅವನಿಗೆ ನೈಟ್ ಶಿಫ್ಟ್ ಇದ್ದುದರಿಂದ ಮನೆಯಲ್ಲಿಯೇ ಇದ್ದ. ಅವನೂ ಸಾಂತ್ವನ ಹೇಳಿದ. 'ನೋಡು ಉಪ್ಪಿ, ಈ ನೌಕರಿಗಳೇ ಹೀಗೆ. ಇಲ್ಲಿ ಬಾಸ್ ಈಸ್ ಆಲ್ವೇಸ್ ರೈಟ್. ನನಗೂ ಈ ಗುಲಾಮಗಿರಿ ಸಾಕಾಗಿದೆ. ಆದರೆ ಏನು ಮಾಡುವುದು ಹೇಳು. ನನ್ನದೂ ಎಂಬ ಆಸ್ತಿ ಇಲ್ಲ. ತಂಗಿಯರ ಮದುವೆ ಜವಾಬ್ದಾರಿ ಇದೆ. ಅಪ್ಪ ರಿಟೈರ್ ಆಗಿದ್ದಾರೆ. ನಿನಗೋ ಮೂರು ಎಕರೆ ಜಮೀನಿದೆ. ಅಪ್ಪ ಅಮ್ಮ ಅಲ್ಲಿಯೇ ಇದ್ದಾರೆ. ಮನಸ್ಸು ಮಾಡಿದರೆ ಅಲ್ಲಿಯೇ ನೀನು ರಾಜನಂತೆ ಇರಬಹುದು ಈ ಚಾಕರಿಗಿಂತ ಸ್ವತಂತ್ರವಾಗಿ ನನ್ನದೂ ಎಂಬ ದುಡಿಮೆ ಒಳ್ಳೆದಲ್ಲವೇ?' ಎಂದ. ಹಿಂದೆ ಅನೇಕ ಬಾರಿ ಅವನು ಈ ರೀತಿ ಹೇಳಿದ್ದರೂ ಇವನು ಕಿವಿಗೊಟ್ಟಿರಲಿಲ್ಲ. ಈಗ ಹೌದು ಎನ್ನಿಸತೊಡಗಿತು. ಹೌದಲ್ವಾ? ಯಾಕೆ ಹೀಗಾಗಬಾರದು? ಅಪ್ಪ ಖುಷಿಯಾಗುತ್ತಾರೆ, ಅಮ್ಮ ಇಲ್ಲಿದ್ರೆ, ಹೆಣ್ಣು ಸಿಗಲ್ಲ ಕಣೋ ಅಂತ ಗೋಳಾಡಬಹುದು, ಇಲ್ಲಿಯೇ ಇದ್ರೂ, ನಮಗೊಪ್ಪುವ ಹೆಣ್ಣು ಸಿಗುತ್ತೆ ಎಂಬ ಗ್ಯಾರಂಟಿ ಏನು? ನಿರ್ಧಾರ ಬಲವಾಯಿತು. ಇದ್ದ ಬದ್ದ ಸಾಮಾನುಗಳನ್ನು ಬ್ಯಾಗಿಗೆ ತುಂಬಿ ರಾತ್ರಿ ಬಸ್ಸಿಗೇ ಊರಿಗೆ ಹೊರಟು ನಿಂತ.

ಬಸ್ಸು ಭದ್ರಾವತಿ ದಾಟಿರಬೇಕು ಜನರೆಲ್ಲಾ ಇಳಿಯಲು ಸಿದ್ಧವಾಗತೊಡಗಿದರು. ನಿಲ್ದಾಣದಲ್ಲಿ ಇಳಿದವನೇ ಅಲ್ಲಿಯೇ ಕಾಫಿ ಕುಡಿದು ಅವರ ಹಳ್ಳಿ ಬಸ್ ಏರಿದ. ಇದ್ದಕ್ಕಿದ್ದಂತೆ ಬಂದಿಳಿದವನನ್ನು ನೋಡಿ ಅಪ್ಪ ಅಮ್ಮನಿಗೆ ಅಚ್ಚರಿ. 'ಇನ್ನು ಗಣಪತಿ ಹಬ್ಬಕ್ಕೇ ಬರುವುದು ಅಂದಿದ್ದೀಯಲ್ಲೋ! ಒಂದು ಫೋನೂ ಇಲ್ಲ, ಈಗಲೇ ಬಂದ್ಬಿಟ್ಟಿಯಾ ಬಾ' ಎಂದು ಅಪ್ಪ ಆದರಿಸಿದಾಗ ಮಾತನಾಡದೆ ಒಳಹೊಕ್ಕ. ಅಮ್ಮ ಆಗಲೇ ಕಾಫಿ ಕೈಯಲ್ಲಿ ಹಿಡಿದು ನಿಂತಿದ್ದಳು. 'ನೀನು ಬರ್ತೀ ಅಂತ ಗೊತ್ತಿದ್ದರೆ ಪತ್ರೊಡೆ ಮಾಡಬಹುದಿತ್ತು. ಇರಲಿ ನಾಳೆ ಮಾಡ್ತೀನಿ. ದೋಸೆ ಹಿಟ್ಟು ಇದೆ, ಅಮಟೆ ಕಾಯಿ ಚಟ್ನಿ ಮಾಡ್ತೀನಿ ಆಗುತ್ತಾ? ಸ್ನಾನ ಮಾಡಿಕೊಂಡು ಬಾ' ಎಂದಳು. ಆಯ್ತಮ್ಮ ಎಂದು ಎಲ್ಲಾ ಕೆಲಸ ಮುಗಿಸಿ ತಿಂಡಿಗೆ ಕೂತಾಗ ಅಪ್ಪನೂ ಬಂದು ಕೂತರು. ಅವರಿಗೂ ಎಲ್ಲಾ ವಿಷಯ ತಿಳಿಸಿದ. 'ನನಗೂ ವಯಸ್ಸಾಗುತ್ತಿದೆ ಉಪ್ಪಿ, ತೋಟ ಸುತ್ತಿ ಬರುವುದರಲ್ಲಿ ಸುಸ್ತಾಗುತ್ತೆ. ಈ ಕೆಲಸದವರೊಡನೆ ಏಗುವುದು ಆಗುವುದಿಲ್ಲ. ಈ ಬಾರಿಯೂ ಚೇಣಿ ಕೊಡುವುದು ಅಂದುಕೊಂಡಿದ್ದೆ, ನೀನು ಬಂದಿದ್ದು ಒಳ್ಳೆಯದಾಯ್ತು' ಎಂದರು. 'ಹಳ್ಳಿಯಲ್ಲಿರುವವರನ್ನು ಈಗಿನ ಹುಡುಗಿಯರು ಒಪ್ಪೋದಿಲ್ಲ ಕಣೋ ನಿನಗೂ ಕಾರ್ತೀಕಕ್ಕೆ ಮೂವತ್ತಾಗುತ್ತೆ, ಏನೋಪ್ಪಾ ಆ ದೇವರಿಟ್ಟಂತೆ ಆಗುತ್ತದೆ ಇನ್ನೊಂದು ಸ್ವಲ್ಪ ಚಟ್ನಿ ಹಾಕ್ಲಾ? ಜೋನಿ ಬೆಲ್ಲ ಬೇಕೇನೋ?' ಎಂದು ಒಳ ನಡೆದರು.

ಮಧ್ಯಾಹ್ನದ ಮೇಲೆ ಅಪ್ಪನೊಂದಿಗೆ ತೋಟ ಎಲ್ಲಾ ಸುತ್ತಿ ಬರಲು ಹೊರಟ. ಒಂದೂವರೆ ಎಕರೆ ಅಡಿಕೆ ತೋಟ, ಒಂದು ಮೂವತ್ತು ತೆಂಗಿನ ಮರ. ತೋಟಕ್ಕೆ ಲಗತ್ತಾದ ಜಾಗದಲ್ಲಿ ಒಂದೂವರೆ ಎಕರೆ ಬ್ಯಾಣದಲ್ಲಿ ಗೇರಿನ ಗಿಡ ಹಾಕಿದ್ದರೂ ಮಂಗಗಳ ಕಾಟಕ್ಕೆ ಹಣ್ಣೇ ಬಿಡುತ್ತಿರಲಿಲ್ಲ. ಒಂದಷ್ಟು ಲೋಳೆಸರದ ಗಿಡಗಳು ಹಬ್ಬಿಕ್ಕೊಂಡಿತ್ತು. ತೋಟಕ್ಕೆ ಒಂದಷ್ಟು ಮೆಣಸು ಏಲಕ್ಕಿ ಹಬ್ಬಿಸಬಹುದಲ್ವ ಅಪ್ಪಾ? ಎಂದಾಗ ಅಪ್ಪ ಹೌದೂ ಆದರೆ ಈ ಮಂಗನ ಕಾಟಕ್ಕೆ ಏನು ಮಾಡೋಣ ಹೇಳು ಎಂದರು. ತಲೆಯಲ್ಲಿ ಏನೇನೋ ಯೋಚನೆಗಳು. ಮನೆಗೆ ಬಂದವನೇ ಮೊಬೈಲ್ ನಲ್ಲಿ ನೆಟ್ ಸರ್ಚ್ ಮಾಡತೊಡಗಿದ.

ಮರುದಿನ ಮತ್ತೆ ತೋಟದ ಸುತ್ತ ತಿರುಗುತಿದ್ದಾಗ ಗೇರು ತೋಟದ ಇಳಿಜಾರಿನ ಜಾಗ ಕಣ್ಣಿಗೆ ಬಿತ್ತು. ಇಲ್ಲಿ ಯಾಕೆ ಸೌರ ಘಟಕ ಸ್ಥಾಪಿಸಿ ವಿದ್ಯುತ್ ಉತ್ಪಾದಿಸಬಾರದು ಎನ್ನಿಸಿತು. ಹೆಚ್ಚಿನ ಲಾಭವಿರದಿದ್ದರೂ ಕೃಷಿ ಬಳಕೆಗೆ ಸೌರ ವಿದ್ಯುತ್ ಉಪಯೋಗಿಸಿ ಬಹಳಷ್ಟು ಕೆಲಸ ಮಾಡಬಹುದು ಎನ್ನಿಸಿತು. ಪಕ್ಕದ ತೋಟದಲ್ಲಿ ಮಂಗನನ್ನು ಓಡಿಸಲು ಪಟಾಕಿ ಹೊಡೆಯುತ್ತಿದ್ದರು. ಆದರೂ ಮಂಗಗಳು ಮರ ಬಿಟ್ಟು ಕೆಳಗಿಳಿಯದೆ ಅಲ್ಲಿಂದಲೇ ಗುರ್ ಅನ್ನುತ್ತಿದ್ದವು. ಬೆಂಗಳೂರಿನ ಗೆಳೆಯ ಭಾಸ್ಕರನ ಆಫೀಸಿನ ಬಳಿಯಿದ್ದ ಡ್ರೋನ್ ಕಂಪನಿಯೊಂದಿಗೆ ವಿಚಾರಿಸಿ ಒಂದು ಡ್ರೋನ್ ತರಿಸಿದ. ಅದಕ್ಕೆ ಪಟಾಕಿ ಸರವನ್ನು ಕಟ್ಟಿ ಮಂಗಗಳು ಬಂದಾಗ ಅದನ್ನು ಹಾರಿಸಿ ಸಿಡಿಸಿದ. ತಮ್ಮ ಬಳಿಯೇ ಸಿಡಿಮದ್ದು ಸಿಡಿದಂತಾದಾಗ ಮಂಗಗಳು ಹೆದರಿ ಓಡಿದವು.

ಹೊಸ ಪ್ರಯೋಗವನ್ನು ಅಡಿಕೆಗೆ ಔಷಧ ಸಿಂಪಡಿಸಲೂ ಬಳಸಿ ಯಶಸ್ವಿ ಆದ. ಸುತ್ತಮುತ್ತಲಿನ ತೋಟದವರೆಲ್ಲಾ ಇವನನ್ನು ಹುಡುಕಿಕೊಂಡು ಬಂದು ವಿವರ ಕೇಳತೊಡಗಿದರು. ಕಂಪನಿಯೊಡನೆ ಮಾತನಾಡಿ ಸಗಟು ದರದಲ್ಲಿ ಡ್ರೋನ್ ತರಿಸಿ ಅವರೆಲ್ಲರಿಗೆ ಮಾರಿದ. ಲಾಭವೂ ಬಂತು. ಗದ್ದೆಗೆ ನೆಟ್ಟಿ, ಔಷಧ ಸಿಂಪಡಣೆ ಇತ್ಯಾದಿಗಳಿಗೂ ಇದು ಉಪಯುಕ್ತ ಎಂಬುದನ್ನು ವಿವರಿಸಿದಾಗ ಪಕ್ಕದ ಹಳ್ಳಿಯವರೂ ಗಿರಾಕಿಗಳಾದರು.

'ಲಕ್ ಪತಿ ದೀದಿ' ಎಂಬ ಕೇಂದ್ರ ಸರ್ಕಾರದ ಯೋಜನೆ ಜಾರಿಯಲ್ಲಿದ್ದರೂ ರಾಜ್ಯ ಸರ್ಕಾರದ ನಿದ್ದಂಡಿತನದಿಂದಾಗಿ ಅದು ಹೆಚ್ಚು ಪ್ರಚಾರ ಪಡೆದುಕೊಂಡಿರಲಿಲ್ಲ. ಕೇಂದ್ರ ಯೋಜನೆಗಳ ಬಗ್ಗೆ ಹೆಚ್ಚೆಚ್ಚು ಪ್ರಚಾರ ಮಾಡಬೇಕೆಂಬ ಪ್ರಧಾನಿಯವರ ತಾಕೀತಿನಿಂದಾಗಿ ಸ್ಥಳೀಯ ಸಂಸತ್ ಸದಸ್ಯರೂ ಇವನನ್ನು ಸಂಪರ್ಕಿಸಿ ಸಹಾಯಧನ ಕೊಡಿಸುವ ಭರವಸೆಯಿತ್ತರು. ಗೇರು ತೋಟದ ಬಳಿ ಸುಮ್ಮನೆ ಹುಟ್ಟಿಕೊಂಡಿದ್ದ ಲೋಳೆಸರದ ಗಿಡಗಳಿಂದ ಆದಾಯ ಸಂಪಾದಿಸುವ ಬಗ್ಗೆ ಯೋಚಿಸತೊಡಗಿದ. ಇದನ್ನು ಸೌಂದರ್ಯವರ್ಧಕ, ಕೇಶವರ್ಧಕಗಳಲ್ಲಿ ಬಳಸುವ ಬಗ್ಗೆ ಮಾಹಿತಿ ಗೊತ್ತಿತ್ತು. ಹೇಗೂ ಹಿಂದೆ ಕೆಲಸ ಆಡುತಿದ್ದ ಕಂಪನಿ ಇದೇ ರೀತಿಯ ಉತ್ಪನ್ನಗಳನ್ನು ಮಾರಾಟ ಮಾಡುತ್ತಿತು. ಮೊದಲಿನಿಂದಲೂ ಪರಿಚಯವಿದ್ದ ಇದರ ತಯಾರಕರಿಗೆ

ಇದನ್ನು ಕಚ್ಚಾ ವಸ್ತುಗಳ ರೂಪದಲ್ಲಿ ಮಾರಾಟ ಮಾಡುವುದು ಕಷ್ಟವಿರಲಿಲ್ಲ. ಕತೆಗೆ ದೊಡ್ಡ ಪ್ರಮಾಣದಲ್ಲಿ ಕಚ್ಚಾ ವಸ್ತುಗಳನ್ನು ರಫ್ತು ಮಾಡುವ ಯೋಜನೆ ತಯಾರಾಯಿತು. ಆ ಪೊದೆಗಳ ಮಧ್ಯದಲ್ಲಿ ದಾಸವಾಳದ ಗಿಡಗಳನ್ನೂ ಬೆಳೆಸಿ ಅದನ್ನೂ ಕೇಶವರ್ಧಕದಲ್ಲಿ ಉಪಯೋಗಿಸಲು ನಿರ್ಧರಿಸಿದ.

ಒಟ್ಟಿನಲ್ಲಿ ಬೆಂಗಳೂರಿನ ಕೆಲಸ ಬಿಟ್ಟು ಬಂದುದು ಒಳ್ಳೆಯದೇ ಆಯಿತು. ನೋಡನೋಡುತ್ತಿದ್ದಂತೆ ಆದಾಯ ವೃದ್ಧಿಗೊಂಡಿತ್ತು. ಮಾಲುಗಳನ್ನು ಸಾಗಿಸಿ ಶಿವಮೊಗ್ಗದ ಲಾರಿ ಆಫೀಸ್, ರೈಲ್ವೆ ಸ್ಟೇಷನ್ ತಲುಪಿಸಲು ಒಂದು ಮಾರುತಿ ವ್ಯಾನ್ ಕೊಂಡು ಕೆಲವೊಮ್ಮೆ ಅದರಲ್ಲಿಯೇ ಬೆಂಗಳೂರಿಗೂ ಹೋಗಿ ಸರಬರಾಜು ಮಾಡುತ್ತಿದ್ದ. ಇವನ ಸಾಮಾಜಿಕ ಅಂತಸ್ತೂ ಏರತೊಡಗಿತು. ಸ್ಥಳೀಯ ಖಾಸಗಿ ಶಾಲಾ ಮಂಡಳಿಯಲ್ಲಿ ಧರ್ಮದರ್ಶಿಗಳ ಹುದ್ದೆಯೂ ದೊರಕಿತು. ಅಮ್ಮ ಮಾತ್ರ ಆಗಾಗ 'ನಿನ್ನ ಮದುವೆ ಯಾವಾಗ್ಲೋ?' ಅನ್ನುವುದನ್ನು ಬಿಡಲಿಲ್ಲ.

• • •

ಲ್ಯಾಪ್ ಟಾಪಿನಲ್ಲಿ ಈಮೇಯ್ಲ್ ಓಪನ್ ಮಾಡುತ್ತಿದ್ದಂತೆ, ಕಂಪೆನಿಯಿಂದ ಬಂದಿದ್ದ ಈಮೇಲ್ ಕಂಡು ವಾರಿಧಿಗೆ ಶಾಕ್ ಆಯ್ತು. 'ಅಮೆರಿಕ ಸರ್ಕಾರದ ಹೊಸನೀತಿಯಿಂದಾಗಿ ನಿಮ್ಮ ಅಮೆರಿಕ ವಾಸ್ತವ್ಯವು ನಿಗದಿತ ಅವಧಿ ಮೀರಿದ್ದು ಇನ್ನು ಮುಂದೆ ನಿಮ್ಮನ್ನು ನಮ್ಮ ಕಂಪನಿಯಲ್ಲಿ ನಿಯೋಜಿಸಿಕೊಳ್ಳಲು ಸಾಧ್ಯವಿಲ್ಲ, ತಾವು ಮುಂದಿನ ತಿಂಗಳೊಳಗೆ ಇಲ್ಲಿಯ ಹುದ್ದೆಯಿಂದ ನಿವೃತ್ತಿ ಪಡೆಯಬೇಕೆಂದು ಆದೇಶಿಸಲಾಗಿದೆ' ಎಂಬ ಸಂದೇಶ ಅದರಲ್ಲಿತ್ತು. ಅಮ್ಮನಿಗೆ ಇಷ್ಟವಿರದಿದ್ದರೂ ಅತ್ತಿಗೆ ಮೇಲಿನ ಛಲಕ್ಕೆ ಅಮೆರಿಕ ಸೇರಿ ಎಂ.ಎಸ್. ಮಾಡಿ ಇಲ್ಲಿಯೇ ಕೆಲಸಕ್ಕೆ ಸೇರಿದ್ದೂ ಆಗಿತ್ತು. ಈಗ ಈ ರೀತಿಯಾಯಿತಲ್ಲ ಎಂಬ ಬೇಸರದೊಂದಿಗೆ ಮುಂದಿನ ಸಿದ್ಧತೆ ಮಾಡತೊಡಗಿದಳು. ಬೆಂಗಳೂರಿಗೆ ಬಂದಾಗ ಅಮ್ಮನಿಗಂತೂ ಖುಷಿಯಾಗಿತ್ತು. ವಾರಿಧಿ ಬಂದು ಎರಡು – ಮೂರು ತಿಂಗಳು ಕಳೆದರೂ ಬೇರೆಡೆಗೆ ಕೆಲಸ ಸಿಕ್ಕಿರಲಿಲ್ಲ. ಗಂಡು ನೋಡುತ್ತೇನೆ ಎಂದು ಅಮ್ಮ ಅಂದಾಗ ಕೆಲಸ ಸಿಕ್ಕಲಿ ಬಿಡಮ್ಮಾ ಎನ್ನುತ್ತಿದ್ದಳು ವಾರಿಧಿ. ಅವಳಿಗೂ ಇಪ್ಪತ್ತೇಳಾಗುತ್ತಿತ್ತು.

ಭಜನೆಗೆ ಹೋದಾಗ ಸ್ನೇಹಿತೆ ಕಾವೇರಮ್ಮ 'ತೀರ್ಥಹಳ್ಳಿ ಬಳಿ ನನ್ನ ಓರಗಿತ್ತಿ ಮನೆ ಇದೆ. ಅಲ್ಲಿ ಒಂದು ದುರ್ಗಾಂಬಾ ದೇವಸ್ಥಾನ ಇದೆ. ಅಲ್ಲಿ ಹರಸಿಕೊಂಡರೆ ಮೂರು ತಿಂಗಳೊಳಗೆ ಮದುವೆ ಆಗುತ್ತಂತೆ' ಅಂದಾಗ ವನಜಾಕ್ಷಮ್ಮನ ಆಸೆ ಚಿಗುರೊಡೆದಿತ್ತು. ಅಲ್ಲಿಯ ವಿಳಾಸ ಕೇಳಿದಾಗ ಕೊಟ್ಟ ಸ್ನೇಹಿತೆ 'ಅಲ್ಲಿ ಇದೇ ತಿಂಗಳಲ್ಲಿ ಚಂಡಿ ಹೋಮವಿದೆಯಂತೆ, ನಾವು ಈ ವರ್ಷ ಹೋಗಲಾಗುತ್ತಿಲ್ಲ, ನೀವು ಹೋಗಿ ಬನ್ನಿ. ಶಿವಮೊಗ್ಗಕ್ಕೆ ರೈಲಿನಲ್ಲಿ ಹೋದರೆ ಅಲ್ಲಿಂದ ಬಸ್ಸಿದೆ. ನಮ್ಮ ಉಪಮನ್ಯುವಿಗೆ ಹೇಳಿರ್ತೀನಿ, ಕರ್ಕೊಂಡು ಹೋಗ್ತಾನೆ' ಎಂದರು. ವನಜಾಕ್ಷಮ್ಮ ಮಗಳೊಂದಿಗೆ ಹೋಗಿ ಬರಲು ನಿರ್ಧರಿಸಿದರು. ಬೆಳಿಗ್ಗೆ ಬಸ್ಸಿನಿಂದ ಇಳಿದವರನ್ನು ಉಪಮನ್ಯುವೇ ಸ್ವಾಗತಿಸಿ, ತನ್ನ ಕಾರಿನಲ್ಲಿ ಕರೆದುಕೊಂಡು ಹೋದ. ಬಂದವರಿಗೆ ಕಾಫಿ ಕೊಟ್ಟ ಪಂಕಜಮ್ಮ 'ನೀವು ಸ್ನಾನ ಗೀನ ಮಾಡಿ ಬನ್ನಿ ನಾನು ತಿಂಡಿ ಮಾಡುತ್ತೇನೆ, ನಿಮಗೆ ನೀರುದೋಸೆ ಆಗುತ್ತಲ್ವಾ? ಚಂಡಿ ಹೋಮ ಶುರುವಾಗೋದು ಹನ್ನೊಂದಾಗುತ್ತೆ, ಅಷ್ಟರಲ್ಲಿ ನೀವು ಸಿದ್ಧವಾದರೆ ಹೋಗಿ ಬರಬಹುದು' ಎಂದರು. ಅವರ ಆತ್ಮೀಯ ನುಡಿಗಳಿಗೆ ವಾರಿಧಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ಈ ಮಲೆನಾಡಿನವರು ಗುರುತು ಪರಿಚಯವಿಲ್ಲದವರೊಂದಿಗೂ ಎಷ್ಟೊಂದು ಸಲೀಸಾಗಿ ಬೆರೆಯುತ್ತಾರಲ್ಲಾ ಎಂದು ಬೆರಗಾದಳು.

ಚಂಡಿ ಹೋಮ ಶುರುವಾಯಿತು. ಪಂಕಜಮ್ಮನೇ ವಾರಿಧಿ ಹೆಸರಲ್ಲಿ ಸಹಸ್ರಾರ್ಚನೆ ಮಾಡಿಸಿದರು. ಸಂಜೆ ವೇಳೆಗೆ ಮನೆಗೆ ಬಂದ ಉಪಮನ್ಯು 'ಸಾರಿ, ಬೆಳಿಗ್ಗೆಯಿಂದ ನಿಮ್ಮನ್ನು ಮಾತನಾಡಿಸಲು ಆಗಲಿಲ್ಲ. ಇವತ್ತು ತೋಟಕ್ಕೆ ಔಷಧಿ ಹೊಡೆಸಬೇಕಿತ್ತು. ನಮ್ಮ ತೋಟ ಎಲ್ಲಾ ನೋಡಿಕೊಂಡು ಬರೋಣ ಬನ್ನಿ' ಎಂದು ಆಹ್ವಾನಿಸಿದ. 'ನನಗೆ ಕಾಲು ನೋವು; ವಾರಿಧಿಯನ್ನು ಕರೆದುಕೊಂಡು ಹೋಗು, ಅವಳಿಗೆ ಇದೆಲ್ಲಾ ಹೊಸದು' ಎಂದರು ವನಜಾಕ್ಷಮ್ಮ. ಉಪಮನ್ಯುನೊಂದಿಗೆ ತೋಟ ಎಲ್ಲಾ ಸುತ್ತಾಡಿ ಬಂದ ಅಲ್ಲಿಯ ಆಹ್ಲಾದಕರ ವಾತಾವರಣ ಹಿಡಿಸಿತು. ದಾರಿಯಲ್ಲಿ ಉಪಮನ್ಯು ತನ್ನ ಕತೆಯನೆಲ್ಲಾ ಸಂಕ್ಷಿಪ್ತವಾಗಿ ಹೇಳಿದ. ವಾರಿಧಿಯೂ ತನ್ನ ವಿಷಯ ಹಂಚಿಕೊಂಡಳು. ಉಪಮನ್ಯು ಹೇಳುತ್ತಿದ್ದ 'ಇಲ್ಲಿ ಹಳ್ಳಿ ಎನ್ನುವುದೊಂದು ಬಿಟ್ಟರೆ ಪೇಟೆಯಲ್ಲಿ ಸಿಗುವುದೆಲ್ಲಾ ಸಿಗುತ್ತದೆ. ಮನೆಯವರೆಗೂ ರಸ್ತೆ ಇದೆ. ಮನೆಯಲ್ಲಿ ಫ್ರಿಡ್ಜ್, ವಾಶಿಂಗ್ ಮೆಶಿನ್ ಟಿ.ವಿ. ಮಿಕ್ಸಿ ಇವೆ. ಮೊಬೈಲ್ ನೆಟ್ ವರ್ಕೂ ಪರವಾಗಿಲ್ಲ. ಸೋಲಾರ್ ಇರುವುದರಿಂದ ಕರೆಂಟಿಗೂ ತೊಂದರೆ ಇಲ್ಲ' ಎಂದು ನಕ್ಕ. ವಾರಿಧಿಗೂ ಹೌದು ಎನ್ನಿಸಿತು.

ಮರುದಿನ ಬೆಳಿಗ್ಗೆ ಪಂಕಜಮ್ಮ ಒತ್ತು ಶ್ಯಾವಿಗೆ ಮಾಡಿದ್ದರು. ಕಾಯಿತುರಿಗೆ ಗಸಗಸೆ- ಜೋನಿಬೆಲ್ಲ ಹಾಕಿದ ಕಾಯಿ ಹಾಲ, ನಂಜಿಕೊಳ್ಳಲು ಎಲೆತುದಿಗೆ ದಿಂಡಿನಕಾಯಿ ಗೊಜ್ಜೂ ಇತ್ತು. ವಾರಿಧಿಗೆ ಇದೆಲ್ಲಾ ಹೊಸದು. ರುಚಿ ರುಚಿಯಾಗಿದೆ ಎಂದು ಮತ್ತೊಮ್ಮೆ ಹಾಕಿಸಿಕೊಂಡಳಾದರೂ ತಾನು ಹೀಗೆ ತಿನ್ನುವುದು ನೋಡಿ ಅವರೇನುಕೊಂಡರೋ ಎಂಬ ಕಸಿವಿಸಿಯೂ ಆಗದಿರಲಿಲ್ಲ. ಮಧ್ಯಾಹ್ನ ಊಟ ಮಾಡಿದ ಮೇಲೆ ಉಪಮನ್ಯುವೇ ನನಗೆ ಶಿವಮೊಗ್ಗದಲ್ಲಿ ಕೆಲಸ ಉಂಟು ನಿಮ್ಮನ್ನು ಮೂರುಮುಕ್ಕಾಲು ಟ್ರೈನಿಗೆ ಹತ್ತಿಸುತ್ತೇನೆ ಎಂದ.

ಮುಂದಿನ ವಾರವೇ ಕಾವೇರಮ್ಮ ಪಂಕಜಮ್ಮನಿಗೆ ಫೋನ್ ಮಾಡಿದರು. 'ಅಕ್ಕ ಉಪ್ಪಿ ಫೋನಿಗೆ ಹುಡುಗಿ ಜಾತಕವೊಂದನ್ನು ವ್ಯಾಟ್ಸಪ್ ಮಾಡಿದ್ದೀನಿ. ಅದೇ ಹೋದವಾರ ನಿಮ್ಮನೆಗೆ ಬಂದಿದ್ದರಲ್ಲ. ಆ ಹುಡುಗಿ. ಅವಳಿಗೇನೂ ಅಭ್ಯಂತರವಿಲ್ಲವಂತೆ. ಭಾವನಿಗೆ ತೋರಿಸಿ, ಉಪ್ಪಿಗೂ ಕೇಳಿ' ಎಂದಳು. ಪಂಕಜಮ್ಮನ ಮುಖ ಇಷ್ಟಗಲವಾಯಿತು. ಮಧ್ಯಾಹ್ನ ಊಟಕ್ಕೆ ಕುಳಿತಾಗ ಅಪ್ಪ-ಮಕ್ಕಳಿಗಿಬ್ಬರಿಗೂ ವಿಷಯ ತಿಳಿಸಿದರು. ಉಪಮನ್ಯು 'ಹೌದೇನಮ್ಮಾ ನಾನು ಮೊಬೈಲ್ ತೆಗೆದುಕೊಂಡೇ ಹೋಗಿರಲಿಲ್ಲ, ಊಟವಾದ ಮೇಲೆ ನೋಡ್ತೀನಿ' ಅಂದ. ಜಾತಕ ಗೀತಕ ಏತಕ್ಕೇ? ಹುಡುಗ-ಹುಡುಗಿ ಒಪ್ಪಿದರಾಯಿತು ಎಂದರು ಗೋವರ್ಧನರಾಯರು. ನಗುತ್ತಿದ್ದ ಉಪಮನ್ಯುವಿನ ಮುಖ ಸಮ್ಮತಿ ಸೂಚಿಸುವಂತಿತ್ತು. ನಾನು ಅವರೊಂದಿಗೆ ಸ್ವಲ್ಪ ಮಾತನಾಡಬೇಕು ಎಂದು ವ್ಯಾಟ್ಸಪ್ಪಿನಲ್ಲಿಯೇ ಎಲ್ಲಾ ವಿಷಯಗಳನ್ನೂ ವಿಶದವಾಗಿ ಹೇಳಿದ. ಅವಳಿಗೂ ಇವನ ಫ್ರಾಂಕ್ ನೆಸ್ ಇಷ್ಟವಾಯಿತು. ಕಾವೇರಮ್ಮನಿಗೆ ಫೋನ್ ಹೋಯಿತು. ಮರುವಾರವೇ ಬೆಂಗಳೂರಿನಲ್ಲಿ ನಿಶ್ಚಿತಾರ್ಥಕ್ಕೆ ಬರುವುದಾಗಿ ತಿಳಿಸಿದರು. ಮದುವೆ ಬೆಂಗಳೂರಿನಲ್ಲಿ ಬೇಡ, ಖರ್ಚೂ ಜಾಸ್ತಿ, ನಮ್ಮ ಕಡೆ ಬಳಗದವರಿಗೂ ಅನುಕೂಲ ಆಗುತ್ತೆ, ಮೃಗವಧೆ ದೇವಸ್ಥಾನದಲ್ಲಿ ಇಟ್ಟುಕೊಳ್ಳೋಣ' ಅಂತ ಗೋವರ್ಧನರಾಯರು ಹೇಳಿದಾಗ ಹೆಣ್ಣಿನ ಕಡೆಯವರು ಒಪ್ಪದೆ ವಿಧಿಯಿರಲಿಲ್ಲ. ಮದುವೆ ಆಯಿತು. ಮರುದಿನ ಬೀಗರ ಔತಣವನ್ನು ಅಲ್ಲಿಯೇ ಇಟ್ಟುಕೊಂಡರು. ವಾರಿಧಿ ಹಳ್ಳಿ ಮನೆ ಸೇರಿದಳು.

• • •

ಒಂದೆರಡು ತಿಂಗಳು ಕಳೆಯುವಾಗ ವಾರಿಧಿಗೆ ಹೊತ್ತು ಕಳೆಯುವುದು ಕಷ್ಟ ಎನಿಸತೊಡಗಿತು. ಅದಕ್ಕೂ ಉಪಮನ್ಯುವೇ ಉಪಾಯ ಸೂಚಿಸಿದ. ಇಲ್ಲಿಯ ಖಾಸಗಿ ಶಾಲೆಯಲ್ಲಿ ಸೈನ್ಸ್ ಟೀಚರ್ ಹುದ್ದೆ ಖಾಲಿಯಾಗಿದೆ. ಈಗೀಗ ಕಡಿಮೆ ಸಂಬಳ ಎಂದು ಟೀಚರ್‌ಗಳು ಹೆಚ್ಚುದಿನ ಇರುತ್ತಿಲ್ಲ ಎಂದು ಮೊನ್ನೆ ಮೀಟಿಂಗ್‌ನಲ್ಲಿ ಈ ವರ್ಷದಿಂದ ಸಂಬಳ ಮೂವತ್ತರಿಂದ ನಲವತ್ತು ಸಾವಿರಕ್ಕೇರಿಸಲು ನಿರ್ಧರಿಸಲಾಗಿದೆ. ನಿನಗೊಪ್ಪಿಗೆ ಇದ್ದರೆ ಮಾತನಾಡುತ್ತೇನೆ' ಎಂದ. ವಾರಿಧಿಯೂ ಸಂತೋಷದಿಂದ ಸಮ್ಮತಿಸಿದಳು. ಉಪಮನ್ಯುವಿನ ವಹಿವಾಟಿನ ಲೆಕ್ಕಪತ್ರಗಳ ವ್ಯವಹಾರವನ್ನೆಲ್ಲಾ ಇವಳೇ ವಹಿಸಿಕೊಂಡಿದ್ದಳು. ನಂತರ ಉಪಮನ್ಯುವೇ ನಿಮ್ಮ ಅಮ್ಮನಿಗೂ ಇಲ್ಲಿಯೇ ಬಂದಿರಲು ಹೇಳು ಹೇಗೂ ಶಾಲೆಯ ಕೊಠಡಿಯಲ್ಲಿಯೇ ಸಂಜೆ ವೇಳೆ ಸಂಗೀತ ಪಾಠ ನಡೆಸಲು ಉದ್ದೇಶಿಸಲಾಗಿದೆ. ಅದಕ್ಕೆ ಹೇಗೂ ಒಬ್ಬ ಟೀಚರ್ ಬೇಕು. ದೇವಸ್ಥಾನದಲ್ಲಿ ಹಾಡು ಹಸೆ ನಡೆಸಬಹುದು ಅವರಿಗೂ ಹೊತ್ತು ಹೋಗುತ್ತೆ ಮಗಳೊಂದಿಗೆ ಇದ್ದಂತೆಯೂ ಆಗುತ್ತೆ ಎಂದ. ವಾರಿಧಿಗೂ ಸರಿಯೆನಿಸಿತು. ಮುಂದಿನ ತಿಂಗಳೇ ವನಜಾಕ್ಷಮ್ಮ ಬಂದು ಇಲ್ಲಿಯೇ ನೆಲೆಯೂರಿದರು.

'ಬೆಂಗಳೂರಿನಿಂದ ಒಂದು ಈ ಮೇಯ್ಲ್ ಬಂದಿದೆ ಅವರದು ಜಪಾನ್ ಕಂಪನಿಯೊಡನೆ ಸಹಯೋಗ ಉಂಟಂತೆ ನೀವು ಒಪ್ಪುವುದಾದರೆ ನಿಮ್ಮ ಕೇಶವರ್ಧಕ ಕಚ್ಚಾವಸ್ತುಗಳನ್ನು ಸಗಟಾಗಿ ನಾವೇ ಕೊಳ್ಳುತ್ತೇವೆ. ಮಾರುಕಟ್ಟೆ ಬೆಲೆಗಿಂತ ಅರ್ಧಪಟ್ಟು ಹೆಚ್ಚು ಬೆಲೆ ಕೊಡುತ್ತೇವೆ ಸಾಗಾಣಿಕೆ ವೆಚ್ಚ ನಮ್ಮದೇ, ಒಪ್ಪಿಗೆ ಇದ್ದಲ್ಲಿ ನಮ್ಮ ಬೆಂಗಳೂರಿನ ವಿಳಾಸದಲ್ಲಿ ಭೇಟಿಯಾಗಿ ಎಂದು ಬರೆದಿದ್ದಾರೆ' ಎಂದು ವಾರಿಧಿ ಹೇಳಿದಾಗ ಉಪಮನ್ಯುವೂ ಮೇಯ್ಲನ್ನು ಓದಿದ. ಓಕೆ ಎನ್ನಿಸಿತು ಮರುದಿನವೇ ಬೆಂಗಳೂರಿಗೆ ಹೊರಟಾಗ ವಾರಿಧಿ ತಾನೂ ಬರುವೆ ಎಂದಳು. ಅತ್ತೆನೂ ಬರ್ತಾರಾ ಕೇಳು. ನಿಮ್ಮ ಅಣ್ಣನ ಮನೆಗೂ ಹೋಗಿ ಬಂದರಾಯಿತು ಎಂದ. ವಾರಿಧಿ ಕೇಳಿದಾಗ ವನಜಾಕ್ಷಮ್ಮ ಇಲ್ಲ ಎನ್ನಲಿಲ್ಲ. ಮರುದಿನ ಬೆಳಿಗ್ಗೆ ಮುಂಚೆಯೇ ಬೆಂಗಳೂರಿಗೆ ಹೊರಟು ಮಧ್ಯಾಹ್ನದ ಒಳಗೆ ಅಲ್ಲಿ ತಲುಪಿ ಮಡದಿ-ಅತ್ತೆಯರನ್ನು ಭಾವನ ಮನೆಯಲ್ಲಿ ಬಿಟ್ಟು ಈ ಮೇಯ್ಲಲ್ಲಿದ್ದ ವಿಳಾಸದ ಕಡೆ ನೋಡಿದ.

ಅರೆ ಇದು ನನ್ನ ಹಳೆ ಕಛೇರಿ ವಿಳಾಸವೇ ಇದ್ದಂತಿದೆಯಲ್ಲಾ? ಆ ಕಂಪನಿ ಮುಚ್ಚಿದರೂ ಅಂತ ಕಾಣುತ್ತೆ ಎಂದು ಭಾಸ್ಕರ ಒಮ್ಮೆ ಫೋನ್ ಮಾಡಿದಾಗ ಹೇಳಿದ್ದು ನೆನಪಾಯಿತು. ಈಗ ಬೇರೆಯವರು ಬಂದಿರಬಹುದು ಎಂದು ಕೊಂಡ. ಒಳಗೆ ಪ್ರವೇಶಿಸುತ್ತಿದ್ದಂತೆ ಉಪಮನ್ಯುವಿಗೆ ಶಾಕ್. ತನ್ನ ಹಳೆ ಬಾಸ್. 'ಅರೆ ಉಪಮನ್ಯು ನೀವಾ? ಯು.ಜಿ. ಎಂಟರ್‌ಪ್ರೈಸಸ್ ಅಂದರೆ ನಿಮ್ದೇನಾ? ಸಾರಿ ಮಿ.ಉಪಮನ್ಯು, ಅವತ್ತು ನಾನು ಕೋಪದಲ್ಲಿ ಆ ರೀತಿ ಮಾಡಬಾರದಿತ್ತು. ಮುಂದೆ ಏನಾಯ್ತು ಗೊತ್ತಾ? ಅ ರೈಲು ಅಪಘಾತ ನಕ್ಸಲೀಯರ ದುಷ್ಕೃತ್ಯ ಎಂದು ಸಾಬೀತಾದ ಮೇಲೆ ಸರ್ಕಾರ ರೈಲಿನಲ್ಲಿದ್ದ ಎಲ್ಲಾ ಸರಕಿಗೂ ಅದರ ಮೌಲ್ಯ ಪಾವತಿಸಿತು. ಹಾಗಾಗಿ ಕಂಪನಿಗೆ ಆಗಿದ್ದ ನಷ್ಟ ತಪ್ಪಿತು. ನಂತರ ನಮ್ಮ ಕಂಪನಿ ಹೆಸರನ್ನೇ ಬದಲಿಸಿ ವ್ಯವಹಾರ ಶುರು ಮಾಡಿದೆವು. ವಿದೇಶಿ ಕಂಪನಿಗಳೊಂದಿಗಿನ ಸಹಯೋಗದಿಂದಾಗಿ ನಮ್ಮ ಕಂಪನಿ ಈಗ ಮೇಲಕ್ಕೇರಿದೆ. ದೊಡ್ಡ ದೊಡ್ಡ ಆರ್ಡರ್‌ಗಳು ಬರುತ್ತಿವೆ. ನಿಮ್ಮ ಬಾಕಿ ಇರುವ ಪಿ.ಎಫ್, ಗ್ರಾಚ್ಯುಟಿ ಹಣವನು ತೆಗೆದುಕೊಂಡು ಹೋಗಿ, ನೀವು ನಮ್ಮೊಂದಿಗೆ ವ್ಯವಹಾರ ಮುಂದುವರಿಸಿದರೆ ನಮಗೂ ಸಂತೋಷ' ಎಂದರು.

ಉಪಮನ್ಯು 'ಇರಲಿ ಬಿಡಿ ಸಾರ್, ಇದು ಆಗಬೇಕೆಂದಿತ್ತು ಅಂತ ಕಾಣುತ್ತೆ. ನಾವೆಲ್ಲಾ ನಿಮಿತ್ತ ಮಾತ್ರ. ಆ ದೇವರು ನಮಗೆ ಅವಕಾಶಗಳನ್ನು ಕೊಡುತ್ತಾನೆ, ಅದನ್ನು ಉಪಯೋಗಿಸಿಕೊಳ್ಳುವುದು ಬಿಡುವುದು ನಮ್ಮ ಬಳಿಯೇ ಇರುತ್ತದೆ. ಏನೇ ಆಗಲಿ ಆಗುವುದೆಲ್ಲಾ ಒಳ್ಳೆಯದಕ್ಕೇ ಎಂದು ಹಿರಿಯರು ಹೇಳಿಲ್ಲವೇ? ನಿಮ್ಮ ಒಪ್ಪಂದದ ಷರತ್ತುಗಳು ನನಗೊಪ್ಪಿಗೆ ಇದೆ. ಪೇಪರ್ಸ್ ಕಳಿಸಿಕೊಡಿ' ಎಂದು ಹೇಳಿ ಹೊರಟ.

ಊರಿಗೆ ಹೊರಟಾಗ ದಾರಿಯಲ್ಲಿ 'ವಾರಿಧಿ ಏನು ಸಾಹೇಬ್ರು ಬಹಳ ಖುಷಿಯಾಗಿರುವಂತಿದೆ ಕಾರಣ ಕೇಳಬಹುದಾ?' ಎಂದಾಗ 'ವಾರಿ, ನಾನು ಗೆದ್ದು ಬಿಟ್ಟೆ ಕಣೆ ನಾನು ಏನು ಅಂತ ಸಾಧಿಸಿಬಿಟ್ಟೆ. ಅಂದು ನೀವು ನಾಲಾಯಕ್ ಎಂದವನೇ ಇಂದು ಕೈಕುಲುಕಿ ಒಪ್ಪಂದಕ್ಕೆ ಬಂದಿದಾನೆ ಎಂದರೆ ನಾನು ಗ್ರೇಟ್ ಅಲ್ವಾ?' ಎಂದ. 'ನಿಜವಾಗಲೂ ನನಗೂ ನಿಮ್ಮ ಬಗ್ಗೆ ಹೆಮ್ಮೆಯಾಗುತ್ತಿದೆ. ಆದರೆ ಈಗ ನೋಡಿಕೊಂಡು ಗಾಡಿ ಓಡಿಸಿ' ಎಂದಳಾಕೆ. ಉಪಮನ್ಯು ನಿಧಾನವಾಗಿ ಗಾಡಿ ಓಡಿಸತೊಡಗಿದ.

ನೆರೆ ನೀರಿದ್ದರೂ ಗಂಗಾರತಿ!

« ಮೊದಲ ಪುಟದಿಂದ

ಗಂಗಾರತಿಯಾದ ನಂತರ ಪ್ರವಾಸಿಗಳು ಆಕೆ ನೀಡಿದ ತಟ್ಟೆಯಲ್ಲಿ ದೀಪ ಹಚ್ಚಿಟ್ಟು ಹೂವುಗಳ ಸಹಿತ ಗಂಗೆಯ ಮೇಲೆ ತೇಲಿ ಬಿಡುವ ಕ್ರಮ. ಅವಳನ್ನೂ, ಅವಳ ಶ್ರಮವನ್ನೂ, ಈ ಕ್ರಮವನ್ನೂ ಮೆಚ್ಚಿ ನಾವೂ ತಲಾ ಮೂವತ್ತು ರೂಪಾಯಿ ನೀಡಿ ಮೂರು ತಟ್ಟೆಗಳನ್ನು ಕೊಂಡುಕೊಂಡೆವು. ಇಷ್ಟಾಗುವಾಗ ಗಂಗಾರತಿ ಆರಂಭಗೊಂಡಿತು. ಓಂ ಜೈ ಜಗದೀಶ ಹರೇ ಎನ್ನುವ ಗಾನ ಮೊಳಗುತ್ತಿದ್ದಂತೆ ಬೃಹತ್ ಆರತಿಗಳು ಪ್ರಜ್ವಲಿಸುತ್ತಾ ಅರ್ಚಕರ ಕೈಯಲ್ಲಿ ಮೇಲೇರಿಸಿ ಕೆಳಗಿಳಿಸುತ್ತಾ ಮತ್ತೆ ಮೇಲೇರುತ್ತಾ ಕಣ್ಣಿಗೆ ಹಬ್ಬ ಉಂಟು ಮಾಡಿದುವು. ನಮ್ಮ ಎದುರಿನ ಘಾಟ್ ಮುಖ್ಯವಾಗಿದ್ದು, ಅದೇ ರೀತಿಯ ಇತರ ಘಾಟ್‌ಗಳೂ ನದೀ ತೀರದುದ್ದಕ್ಕೂ ಇದ್ದು ಅಲ್ಲೆಲ್ಲಾ ಕಡೆ ಹೀಗೆಯೇ ಆರತಿಗಳು ಕಂಗೊಳಿಸಿದುವು.

ಅಪ್ಪಯ್ಯನಿಗೆ ಕಿತಾಪತಿ ಬೇಡ!

ರಘು ಅವನ್ನೆಲ್ಲ ತನ್ನ ಮೊಬೈಲ್‌ನಲ್ಲಿ ಸೆರೆಹಿಡಿಯುತ್ತಲಿದ್ದ. ಜಾಗ್ರತೆ ರಘು ಎಂತ ಸುಧಾ ಹೇಳುತ್ತಲೇ ಇದ್ದಳಾದರೂ ಆತ ಸಾಹಸದಿಂದ ಮೇಲ್ಪದರದ ಹಲಗೆ ಹತ್ತಿ ದೂರದಿಂದಲೇ ಎಲ್ಲವನ್ನೂ ದಾಖಲಿಸುವ ಹವಣಿಕೆಯಲ್ಲಿದ್ದ. ಅದನ್ನು ಕಂಡು ನಾನೂ ಉಮೇದಿನಿಂದ ಮೇಲೆದ್ದರೆ ನೀವು ಸುಮ್ಮನೇ ಕೂತುಕೊಳ್ಳಿ ನೋಡುವ ಎಂತ ನನ್ನಾಕೆ ಗದರಿದರೆ ಅಪ್ಪಯ್ಯ, ನೀವು ಕಿತಾಪತಿ ಮಾಡಬೇಡಿ ಎಂತ ರಘು ಹೇಳುತ್ತಲಿದ್ದ. ಆದರೆ ಒಳ್ಳೇ ಮಾತು ಕೇಳುವ ಜಾಯಮಾನವೇ ನಂದು? ಅಂತೂ ಗಂಗಾರತಿ ಕಾಣುವ ಹಂಬಲ ಕೈಗೂಡಿ ವಾಪಾಸು ಹೊರಟಾಗ, 'ಪುಷ್ಪರಾಣಿ' ನೀಡಿದ ಹೂವಿನ ತಟ್ಟೆಗಳಲ್ಲಿ ದೀಪ ಹೊತ್ತಿಸಿಟ್ಟು ನಾವು ಮೂವರೂ ಅವುಗಳನ್ನು ಗಂಗೆಯ ಮೇಲೆ ತೇಲಿಸಿಬಿಟ್ಟು ಧನ್ಯ ಧನ್ಯ ಎಂದುಕೊಂಡೆವು. ನಾವು ದೋಣಿ ಹತ್ತಿದ ದಡದಲ್ಲಿ ನಮೋ ಗಂಗಾ ಎಂಬ ರೀತಿ ಪ್ರಧಾನಿ ಮೋದಿ ಪ್ರೇರಣೆಯಿಂದ ದೊಡ್ಡ ದೊಡ್ಡ ಸುಂದರ ಕಾಂಕ್ರೀಟ್ ಕೈಗಳು ಮೇಲಕ್ಕೆದ್ದಿದ್ದುವು. ನಾವೂ ಗಂಗೆಗೆ ಅದೇ ರೀತಿ ನಮಾಮಿ ಗಂಗಾ ಎಂದು ಕೈಮುಗಿದು, ಸವಿ ನೆನಹುಗಳೊಂದಿಗೆ ವಾಪಸಾದೆವು.

ಎಮ್ಮೆಗೆ ಮಾತು ಬರುತ್ತಾ?

ಮನೆಯವರು ಆಡಿದ ಮಾತುಗಳನ್ನು ಅರ್ಥಮಾಡಿಕೊಂಡವರಂತೆ, ಎಮ್ಮೆ ವರ್ತಿಸುತ್ತಿತ್ತು! ಹಾಗಾದರೆ, ಎಮ್ಮೆಗೆ ನಮ್ಮ ಮಾತು ತಿಳಿಯುತ್ತದೆಯೇ?

» ಗೊರೂರು ಶಿವೇಶ್

ಕನ್ನಡ ಹಾಸ್ಯದಾಗಸದಲ್ಲಿ ನಗೆಚಂದ್ರಮನಾಗಿ ಬೆಳಗಿದ ಗೊರೂರು ರಾಮಸ್ವಾಮಿ ಅಯ್ಯಂಗಾರರ (ಜುಲೈ 4, 1904– ಸಪ್ಟಂಬರ್ 28, 1991) ಪ್ರಖ್ಯಾತ ಕೃತಿಯ ಹೆಸರು 'ನಮ್ಮ ಊರಿನ ರಸಿಕರು'. ಅವರು ತಮ್ಮ ಇತರ ರಚನೆಗಳಾದ ಬೈಲಹಳ್ಳಿಯ ಸರ್ವೆ, ಹಳ್ಳಿಯ ಚಿತ್ರಗಳು ಮುಂತಾದ ಕೃತಿಗಳಲ್ಲಿ ಮಲ್ಲಿಗೆಹಳ್ಳಿ ಎಂಬ ಹೆಸರಿನಲ್ಲಿ ನಮ್ಮೂರನ್ನು ಪರಿಚಯಿಸಿದ್ದಾರೆ! ಆದ್ದರಿಂದ ನನಗೆ ಅವರೆಂದರೆ ಅಪಾರ ಅಭಿಮಾನ. ಜತೆಯಲ್ಲೇ, ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟ ಕೃತಿಯ ಹೆಸರು ಕೂಡಾ 'ಅಮೆರಿಕಾದಲ್ಲಿ ಗೊರೂರು!'. ಈ ಮೂಲಕ, ಹಾಸನ ಜಿಲ್ಲೆಯ ಗೊರೂರು ಎಂಬ ಪುಟ್ಟ ಹಳ್ಳಿಗೆ ಬಹು ದೊಡ್ಡ ಹೆಸರನ್ನು ಗಳಿಸಿಕೊಟ್ಟಿದ್ದಾರೆ.

'ಭೂತಯನ್ನ ಮಗ ಅಯ್ಯು' ಚಲನಚಿತ್ರಕ್ಕೆ ಸ್ಫೂರ್ತಿ ನೀಡಿದ ಕಥೆಯೂ ಇವರೇ ಬರೆದದ್ದು. ಅದರಲ್ಲಿನ ಒಂದು ಹಾಸ್ಯ ಘಟನೆ ನಮ್ಮ ನಾಡಿನ ಎಲ್ಲಾ ರಸಿಕರನ್ನೂ ಸೆಳೆದಿದೆ! ಫುಲ್ ಮೀಲ್ಸ್ ಎಂದು ಒಂದೇ ಊಟ ಪಡೆದು, ಅದರಲ್ಲೇ ಚಹರೆ ಮರೆಮಾಚಿದ ನಾಲ್ಕದು ಜನ ಉಂಡಿದ್ದಲ್ಲದೆ, ತರಲೆ ಮಾಡಿ ಬಿಲ್ ಹಣವನ್ನು ವಾಪಸ್ ಪಡೆದು ಬರುವ ಕಿಲಾಡಿತನದ ಹಾಸ್ಯದೃಶ್ಯ ಕನ್ನಡ ಚಲನಚಿತ್ರರಂಗ ಇತಿಹಾಸದಲ್ಲೇ ಸದಭಿರುಚಿಯ ಹಾಸ್ಯ!

ಅದೇ ಚಿತ್ರದ ಶತದಿನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಡಾ. ರಾಜ್‌ಕುಮಾರ್ ರವರನ್ನು ಅವರಿಗೆ ಪರಿಚಯಿಸಿದಾಗ ಅವರನ್ನು ಗೊರೂರರು ಮಿಕಿ ಮಿಕಿ ನೋಡಿದರಂತೆ. ರಾಜ್‌ಕುಮಾರ್ 'ಯಾಕ್ ಸ್ವಾಮಿ ಹಾಗೆ ನೋಡ್ತೀರಿ?' ಎನ್ನಲು 'ರಾಜ ಕುಮಾರ ಎನ್ತೀರಿ, ಕಿರೀಟ, ಭುಜಕೀರ್ತಿ ಏನೂ ಇಲ್ವಲ್ಲ!' ಅಂದರಂತೆ.

'ಅಮೆರಿಕದಲ್ಲಿ ಗೊರೂರು' ಕೃತಿಯಲ್ಲಿ ಅವರ ಪಡಿಪಾಟಲಿನ ಜೊತೆಗೆ ಅವರ ಕಿಲಾಡಿತನದ ಅನೇಕ ರಸಪ್ರಸಂಗಗಳಿವೆ. ಇದಲ್ಲದೇ, ಅವರ ಕೃತಿಯಲ್ಲಿ ಕಾಣಿಸದೇ ಇರುವಂತಹ ಅನೇಕ ರಸಪ್ರಸಂಗಗಳನ್ನು, ಗೊರೂರು ಹಳ್ಳಿಯಲ್ಲಿದ್ದ ಅವರ ಒಡನಾಡಿಗಳು, ಸಂಪರ್ಕದಲ್ಲಿದ್ದವರು ಹೇಳಿದ್ದನ್ನು ಕೇಳಿದ್ದೇನೆ. ಹಾಸನದಲ್ಲಿ ನಡೆದ ಗೊರೂರು ಸ್ಮರಣೆ ಕಾರ್ಯಕ್ರಮದಲ್ಲಿ ಡಾ. ಎಸ್.ಎಲ್ ಭೈರಪ್ಪ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಹಂ.ಪ.ನಾರವರು ಅಂತಹ ಕೆಲವು ರಸಪ್ರಸಂಗಗಳನ್ನು ಜ್ಞಾಪಿಸಿಕೊಂಡರು. ಹಂ.ಪ.ನಾವರು ಬೆಂಗಳೂರಿನ ರಾಜಾಜಿನಗರದ ಅವರ ಮನೆಗೆ ಭೇಟಿನೀಡಿದಾಗ ಮಾತನಾಡುತ್ತಾ 'ನಿಮ್ಮ ಮನೆ ಮಾರ್ಕೆಟಿಗೆ, ಬಸ್‌ಸ್ಟ್ಯಾಂಡಿಗೆ, ದೇವಸ್ಥಾನಕ್ಕೆ ಹೀಗೆ ಎಲ್ಲದಕ್ಕೂ ಹತ್ತಿರವಾಗಿದೆ' ಎಂದಾಗ 'ನೀನು ಹೇಳಿದ್ದು ಸರಿ, ಅದೇ ರೀತಿ, ಹರಿಶ್ಚಂದ್ರ ಘಾಟ್‌ಗೂ ಹತ್ತಿರವಾಗಿದೆ' ಎಂದು ಗೊರೂರರು ನಗೆ ಚಿಮ್ಮಿಸಿದರಂತೆ.

'ನಮ್ಮ ಎಮ್ಮೆಗೆ ಮಾತು ತಿಳಿಯುವುದೆ?' ಅವರ ಒಂದು ಸುಂದರ ಪ್ರಬಂಧ. ನಮ್ಮ ನಾಡು ಎಮ್ಮೆಯ ನಾಡು ಎಂದೆ ಪ್ರಬಂಧ ಪ್ರಾರಂಭವಾಗುತ್ತದೆ. ಹಿರೇಗೌಡನಹಳ್ಳಿ ಇಂದ ತಂದ ಎಮ್ಮೆ, ಅದರ ತಳಿಗಳು ಬೆಳೆದು ಮನೆಯ ತುಂಬಾ ಎಮ್ಮೆಗಳಾಗಿವೆ. ನಿಂತುಕೊಂಡೆ ಕರು ಹಾಕುವುದು ಆ ಎಮ್ಮೆಯ ಅಭ್ಯಾಸ. ಅದನ್ನು ನಿವಾರಿಸಲು ಲೇಖಕರು ಮತ್ತು ಮನೆಯ ಆಳು ತೂರ ಇಬ್ಬರೂ ಪಡುವ ಪಡಿಪಾಟಲು ಪ್ರಬಂಧದಲ್ಲಿ ರಸಮಯವಾಗಿ ಮೂಡಿ ಬಂದಿದೆ. ಆ ಎಮ್ಮೆಯ ಹಾಲನ್ನು ಲೇಖಕರ ಹೆಂಡತಿಯೇ ಕರೆಯುವ ಅಭ್ಯಾಸವಿತ್ತು. ಆದರೆ ಒಮ್ಮೆ ಹೆಂಡತಿ ನರಸೀಪುರದ ತೇರಿಗೆ ಹೋದಾಗ ಲೇಖಕರು ಹಾಲು ಕರೆಯಲು ಹೋದಾಗ ಕೈಯಲ್ಲಿ ಹಿಡಿದಿದ್ದ ಪಾತ್ರೆ, ಬೀಳುವಂತೆ ಪಟಾರನೇ ಒದೆಯುತ್ತದೆ. ಲೇಖಕರು ಉಪಾಯ ಮಾಡಿ ಹೆಂಡತಿಯ ಸೀರೆಯನ್ನು ಮೈತುಂಬ ಹೊದೆದುಕೊಂಡು ಎಮ್ಮೆಯ ಮುಂದೆ ಹಾಲು ಕರೆಯಲು ಕೂಡುತ್ತಾರೆ. ಎಮ್ಮೆಗೆ ಲೇಖಕರ ಈ ನಾಟಕ, ಮೋಸ ಗೊತ್ತಾಗುವುದಿಲ್ಲ! ಹಾಲು ಕೊಡುತ್ತದೆ.

ಇದನ್ನು ನೋಡಿದ ತೂರನು, 'ಹಸು ಆಗಿದ್ರೆ, ವಾಸನೆ ಹಿಡಿದು ಒದ್ದು ಬಿಡುವುದು, ಇದು ಎಮ್ಮೆ ಜಾತಿ, ಬುದ್ಧಿ ಇಲ್ಲ' ಎನ್ನುತ್ತಾನೆ. ಅದಕ್ಕೆ ಲೇಖಕರು ಹೆಂಡತಿಯ ದನಿಯಂತೆ ದನಿ ಮಾಡಿಕೊಂಡು 'ಇದಕ್ಕೆ ಬುದ್ಧಿ ಇದೆ' ಎನ್ನುತ್ತಾರೆ. ತಕ್ಷಣ ಎಮ್ಮೆ ಜಾಡಿಸಿ ಒದೆಯುತ್ತದೆ. ಹಾಗಿದ್ದಾಗ, ಎಮ್ಮೆಗೆ ನಮ್ಮ ಮಾತುಗಳು ಅರ್ಥವಾಗುತ್ತವೆ ಎಂದಾಯಿತಲ್ಲವೆ! ಈ ಘಟನೆಯನ್ನು ಸಹ 'ಭೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ಒಂದು ಹಾಸ್ಯ ಪ್ರಸಂಗವಾಗಿ ಬಳಸಿಕೊಳ್ಳಲಾಗಿದೆ.

ಕಾಲುಬಾಯಿ ಜ್ವರ

ಒಮ್ಮೆ ಎಮ್ಮೆಗೆ ಕಾಲು ಬಾಯಿ ಜ್ವರ ಬಂದಾಗ ಅವರ ಹೆಂಡತಿ ಇದನ್ನು ಹಿಡಿದುಕೊಂಡು ಗಂಟಲಿಗೆ ಗೊಟ್ಟ ಹಾಕಿ ಔಷಧಿ ಉಯ್ಯುವುದು ಕಷ್ಟ, ಅಂಬಲಿಗೆ ಸೇರಿಸಿ ಕೊಟ್ಟುಬಿಡೋಣ ಎಂದು ಅಪಾಯ ಮಾಡಿ ಕೊಟ್ಟಾಗ ಅಂಬಲಿಯ ಮೂಲಕ ಔಷಧಿಯನ್ನು ಕುಡಿಯುತ್ತದೆ. ದನದ ವೈದ್ಯರು ಮನೆಗೆ ಬಂದು ಎಮ್ಮೆ ಪರೀಕ್ಷಿಸಿ ಇದಕ್ಕೆ ಔಷಧಿ ಹೇಗೆ ಕೊಡಿಸುತ್ತೀರಿ? ಎಂದಾಗ ಅಂಬಲಿ ಒಳಗೆ ಕುಡಿಯುತ್ತದೆ ಎಂದು ತೂರ ಹೇಳುತ್ತಾನೆ. ಅಂದಿನಿಂದ ಆ ಎಮ್ಮೆ ಅಂಬಲಿ ಕುಡಿಯುವುದನ್ನು ಬಿಡುತ್ತದೆ. ಆದರೆ ವೈದ್ಯರು ಇದಕ್ಕೆ ಔಷಧಿ ಕುಡಿಸಲೇಬೇಕು ಎನ್ನುತ್ತಾರೆ. ಆಗ ತೂರ ಮಲಗಿರುವಾಗ ಕಾಲು ಕಟ್ಟಿ ಗೊಟ್ಟದಲ್ಲಿ ಹುಯ್ಯಬೇಕು ಎನ್ನುತ್ತಾನೆ. ಎಮ್ಮೆ ಒಮ್ಮೆಲೆ ಎದ್ದು ನಿಂತುಕೊಳ್ಳುತ್ತದೆ. ತೂರ ಮನೆಯಲ್ಲಿ ಇರುವವರೆಗೂ ಅದು ಮಲಗುತ್ತಲೇ ಇರಲಿಲ್ಲ. ತೂರ 11 ಗಂಟೆಗೆ ದನಗಳನ್ನು ಬೋರೆಗೆ ಹೊಡೆದುಕೊಂಡು ಹೋದ ಮೇಲೆ ಅದು ಮಲಗುತ್ತಿತ್ತು. ತೂರ ಬೋರೆಯಿಂದ ಸಾಯಂಕಾಲ ಬಂದ ನಂತರ ಉಳಿದ ದನಗಳು ಒಳಗೆ ಬಂದ ಕೂಡಲೇ ಎದ್ದುನಿಂತುಕೊಳ್ಳುತ್ತಿತ್ತು! ರಾತ್ರಿ ಎಲ್ಲರೂ ಮಲಗಿದಾಗ ಅದು ಮಲಗುತ್ತಿತ್ತು. ಬೆಳಗ್ಗೆ ಮನೆಯವರ ಮುಖ ಕಂಡ ಕೂಡಲೇ ಎದ್ದು ನಿಂತು ಬಿಡುತ್ತಿತ್ತು' ಎಂದು ಅನೇಕ ರಸ ಪ್ರಸಂಗಗಳನ್ನು ಎಮ್ಮೆಗೆ ಮಾತು ತಿಳಿಯುತ್ತದೆ ಎನ್ನುವುದಕ್ಕೆ ಪೂರಕವಾಗಿ ಒದಗಿಸುತ್ತ ಹೋಗುತ್ತಾರೆ.

ಸದಭಿರುಚಿಯ ಹಾಸ್ಯ ಎಂದರೆ ತಮ್ಮನ್ನು ತಾವು ಹಾಸ್ಯಮಾಡಿಕೊಳ್ಳುವುದು ಎಂಬುದಕ್ಕೆ ಉದಾಹರಣೆಯಾಗಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ತಮ್ಮ ಸಾಹಿತ್ಯ ಕೃತಿಗಳಲ್ಲಿ ನಿರೂಪಿಸಿದ ಹಾಸ್ಯ ಪ್ರಸಂಗಗಳು ಮಾದರಿಯಾಗಿವೆ.

ನಿಮ್ಮ ಹೃದಯ ಜೋಪಾನ!

» ಡಾ. ಶ್ರೀಲತಾ ಪದ್ಯಾಣ

ನಮ್ಮೆಲ್ಲರ ದೇಹದಲ್ಲೂ ಒಂದು ಯಂತ್ರವಿದೆ, ಗೊತ್ತೇ? ಅದುವೇ, ನಿರಂತರವಾಗಿ 'ಲಬ್ ಡಬ್' ಸದ್ದು ಮಾಡುತ್ತಾ ಇರುವ ಹೃದಯ. ಶರೀರವೆಂಬ ಪಾತ್ರಧಾರಿಗೆ ಹೃದಯವು ಸೂತ್ರಧಾರಿಯಿದ್ದಂತೆ. ಮುಷ್ಟಿ ಗಾತ್ರದ ಈ ಪುಟ್ಟ ಯಂತ್ರವು ತನ್ನ ಬಡಿತ ನಿಲ್ಲಿಸಿದರೆ, ಅದಕ್ಕೆ ಆಶ್ರಯ ನೀಡಿರುವ ಶರೀರವೇ ಕುಸಿದು ಬೀಳುತ್ತದೆ! ನಮ್ಮ ಶರೀರವನ್ನು ನಿರಂತರ ಚಲನೆಯಲ್ಲಿಟ್ಟಿರುವ ಜೀವಂತ ಯಂತ್ರವಾದ ಹೃದಯವನ್ನು ನಾವು ಜೋಪಾನವಾಗಿ ನೋಡಿಕೊಳ್ಳಬೇಕು! ಈ ಆಧುನಿಕ ಯುಗದಲ್ಲಿ, ನಾನಾ ರೀತಿಯ ಚಟುವಟಿಕೆಗಳಲ್ಲಿ ಮುಳುಗಿ ಹೋಗಿರುವ ಸಂದರ್ಭದಲ್ಲಿ, ಹೃದಯವನ್ನು ಜೋಪಾನ ಮಾಡುವುದು ನಮ್ಮ ಕರ್ತವ್ಯವೂ ಹೌದು.

ಹೃದಯ ಸರಿಯಾಗಿ ಕಾರ್ಯ ನಿರ್ವಹಿಸಲು ಅಸಾಧ್ಯವಾದಾಗ ಅಥವಾ ಸಮರ್ಪಕವಾಗಿ ರಕ್ತ ಸಂಚಾರವಾಗದಿದ್ದಾಗ ಅದು ತನ್ನ ಕಾರ್ಯವನ್ನು ನಿಧಾನಗೊಳಿಸುತ್ತದೆ. ರಕ್ತ ನಾಳಗಳಲ್ಲಿ ಕೊಬ್ಬಿನಂಶ, ಕೊಲೆಸ್ಟ್ರಾಲ್ ಸೇರ್ಪಡೆಯಾದರೆ ರಕ್ತ ಸಂಚಾರ ಹಾಗೂ ಆಮ್ಲಜನಕದ ವಿತರಣೆಯಲ್ಲಿ ಏರುಪೇರಾಗುತ್ತದೆ. ಇದರಿಂದ ಎದೆನೋವು ಅಥವಾ ಎಡ ದವಡೆಯ ಕೆಳಭಾಗ, ಎಡಗೈ, ನೋವು ಕಾಣಿಸಿಕೊಳ್ಳಬಹುದು. ಇದರಿಂದ ವ್ಯಕ್ತಿ ಬೆವರಲಾರಾಂಭಿಸುತ್ತಾನೆ; ಕೆಲವರು ಬಸವಳಿಯಬಹುದು, ಇನ್ನು ಕೆಲವರು ಇದ್ದಕ್ಕಿದ್ದಂತೆ ಕುಸಿದು ಬೀಳುತ್ತಾನೆ ಅಥವಾ ಹೃದಯಘಾತವಾಗಬಹುದು. ಕ್ರಮೇಣ ಆಮ್ಲಜನಕದ ಕೊರತೆಯಿಂದಾಗಿ ಉಸಿರಾಟ ನಿಧಾನವಾಗುತ್ತಾ ಹೋಗುತ್ತದೆ. ಮೆದುಳು ಕೂಡಾ ಕಾರ್ಯಸ್ಥಗಿತ ಮಾಡುಬಹುದು; ಹಾಗೆಯೇ ಮುಂದುವರಿದು ಸಾವು ಸಂಭವಿಸುವ ಸಾಧ್ಯತೆಯೂ ಇರುತ್ತದೆ.

ಸಾಮಾನ್ಯವಾಗಿ ಮಧುಮೇಹ, ರಕ್ತದೊತ್ತಡ, ಅಧಿಕ ಕೊಲೆಸ್ಟ್ರಾಲ್ ಸಮಸ್ಯೆ ಇರುವವರಲ್ಲಿ ಹೃದಯದ ಸಮಸ್ಯೆಗಳು ಕಂಡುಬರುತ್ತವೆ. ಹೃದಯಘಾತದ ಲಕ್ಷಣಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರಬಹುದು. ಎದೆ ಭಾರವಾಗುವುದು ಅಥವಾ ಎದೆ ಹಿಂಡಿದಂತಾಗುವುದು ಸಾಮಾನ್ಯ ಲಕ್ಷಣವೆನ್ನಬಹುದು. ಇನ್ನು ಎದೆ ನೋವಿನಿಂದ ಉಸಿರಾಟದ ತೊಂದರೆ, ಆಯಾಸ, ಬೆವರುವಿಕೆ , ಅಸ್ವಸ್ಥತೆ ಕಾಣಿಸಿಕೊಳ್ಳುತ್ತದೆ. ಈ ಲಕ್ಷಣಗಳು ಕಂಡುಬಂದಾಗ ತುರ್ತಾಗಿ ವೈದ್ಯರನ್ನು ಭೇಟಿ ಮಾಡಬೇಕು.

ಹೃದಯಾಘಾತಕ್ಕೆ ನಿರ್ದಿಷ್ಟ ಕಾರಣಗಳೆಂದಿಲ್ಲ. ಏಕೆಂದರೆ ಹೃದಯ ಬಡಿತವು ವ್ಯಕ್ತಿಯ ವಯಸ್ಸು ,ಆಹಾರ, ನಿದ್ರೆ, ಒತ್ತಡ, ಜೀವನ ಶೈಲಿಗಳ ಮೇಲೆ ಅವಲಂಬಿತವಾಗಿದೆ. ಈಚಿನ ವರ್ಷಗಳಲ್ಲಿ ಎಳೆಯ ವಯಸ್ಸಿನಲ್ಲೇ ಹೃದಯದ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಒಂದೆರಡು ದಶಕಗಳ ಹಿಂದೆ, ಈ ಸಮಸ್ಯೆಯು 50 ಮೀರಿದವರದ್ದು ಎಂಬ ಭಾವನೆ ಇತ್ತು; ಕಳೆದ ಒಂದು ದಶಕದಿಂದ 20 – 30 ವಯಸ್ಸಿನವರಿಗೂ ಹೃದಯದ ಸಮಸ್ಯೆಗಳು, ಹೃದಯಾಘಾತ ಕಾಣಿಸಿಕೊಳ್ಳುತ್ತಿದ್ದು, ಇದಕ್ಕೆ ನಮ್ಮ ಬದಲಾದ ಜೀವನ ಶೈಲಿಯೇ ಕಾರಣ!

ಕಾರಣಗಳೇನು?

- ಮೊದಲನೆಯ ಮುಖ್ಯ ಕಾರಣವೆಂದರೆ ಆಧುನಿಕ ಬದುಕು! ಈಗಿನ ಬದುಕಿನಲ್ಲಿ ನಮಗೆ ಈ ಎರಡೂ ಬೇಕಾದವುಗಳೇ ಆಗಿವೆ. ಒಂದು ಯೋಗ ಜೀವನ, ಇನ್ನೊಂದು ಭೋಗ ಜೀವನ. ನೆಮ್ಮದಿಯ ಬದುಕಿಗಾಗಿ ಅತಿ ಆಸೆ ಆಕಾಂಕ್ಷೆಗಳಿಗೆ ಕಡಿವಾಣ ಹಾಕಿ ಇದ್ದುದರಲ್ಲಿ ತೃಪ್ತಿ ಪಟ್ಟು ಶಾಂತ ಮನಸ್ಸು ಹೊಂದುವುದು ಯೋಗ ಜೀವನವಾದರೆ, ಆ ಘಟ್ಟವನ್ನು ಮೀರಿ ಈಗಿನ ಕಾಲಕ್ಕೆ ತಕ್ಕಂತೆ ನಡೆಯಬೇಕೆಂದು ಇತಿ ಮಿತಿಗಳನ್ನು ದಾಟಿ ಭೋಗ ಜೀವನಕ್ಕೆ ದಾಸರಾಗುತ್ತಿರುವುದು ನಾವೇ ಅಲ್ಲವೇ. ಆಧುನಿಕತೆಯ ಗುಂಗಿನಲ್ಲಿ ನಮ್ಮನ್ನು ನಾವೇ ಮರೆತಿರುವಂತೆ ಶೋಕಿ ಜೀವನ ನಡೆಸುತ್ತಿರುವುದೂ ಹೃದಯದ ಆರೋಗ್ಯದ ದುಷ್ಪರಿಣಾಮಗಳಿಗೆ ಕಾರಣವಾಗಿದೆ. ಪ್ಯಾಕ್‌ನಲ್ಲಿರುವ ಆಹಾರ ಸೇವನೆ, ಅಧಿಕ ಸಕ್ಕರೆ ಬೆರೆಸಿದ ಕೋಲಾ ಪಾನೀಯಗಳ ಸೇವನೆ, ಪದೇ ಪದೇ ಸಕ್ಕರೆ ಬೆರೆಸಿದ ಕಾಫಿ, ಚಹಾ ಸೇವನೆ ಮೊದಲಾದ 'ಆಧುನಿಕ ಜನರ' ಅಭ್ಯಾಸವು, ಅವರಿಗೆ ಗೊತ್ತಿಲ್ಲದಂತೆ ನಿಧಾನವಾಗಿ ಹೃದಯದ ಕಾರ್ಯಕ್ಷಮತೆಯನ್ನು ಕಡಿಮೆಮಾಡಬಲ್ಲದು!
- ಎರಡನೆಯ ಮುಖ್ಯ ಕಾರಣವೆಂದರೆ ಬದಲಾದ ಜೀವನಶೈಲಿ. ಸ್ವಲ್ಪ ಹಿಂದಿನ ಕಾಲಕ್ಕೆ ಹೋದರೆ, ಕೆಲವು ದಶಕಗಳ ಹಿಂದೆ ಜನರು ವಾಕಿಂಗ್ ಮಾಡಲು ಬೇರೆ ಸಮಯವನ್ನು ನಿಗದಿ ಮಾಡುತ್ತಿರಲಿಲ್ಲ. ಬದಲಿಗೆ ಅವರು ಮಾಡುವ ಪ್ರತಿ ಕೆಲಸವೂ ವಾಕಿಂಗ್‌ನ್ನು ಒಳಗೊಳ್ಳುತ್ತಿತ್ತು! ಅಂದರೆ ತಮಗೆ ಗೊತ್ತಿಲ್ಲದೇ, ನಡಿಗೆ ಎಂಬ ಉತ್ತಮ ವ್ಯಾಯಾಮವನ್ನು ಎಲ್ಲರೂ ಮಾಡುತ್ತಿದ್ದರು! ಪಕ್ಕದ ಮನೆಗೆ, ಪಕ್ಕದ ಬೀದಿಯ ಗೆಳೆಯರ ಮನೆಗೆ, ಅಂಗಡಿಗಳಿಗೆ, ಶಾಲೆಗಳಿಗೆ ಬಹುಪಾಲು ಜನರು ನಡೆದುಕೊಂಡೇ ಹೋಗುತ್ತಿದ್ದರು. ಅದು ಅನಿವಾರ್ಯವೂ ಆಗಿತ್ತು! ಆಗಿನ ದಿನಗಳಲ್ಲಿ ಪೆಟ್ರೋಲ್ ಚಾಲಿತ ವಾಹನಗಳ ಸಂಖ್ಯೆ ಕಡಿಮೆ ಇತ್ತು. ಇಂದು ಹಾಗಲ್ಲ, ಪ್ರತಿಯೊಂದು ಕೆಲಸ ಕಾರ್ಯಗಳಿಗೂ ಮನೆಯಿಂದ ಹೊರ ಹೋಗಲು ಬೈಕ್ ಕಾರುಗಳು ಬೇಕೇ ಬೇಕು. ಮನೆಯ ಬಾಗಿಲಿನಲ್ಲಿ ಸ್ಕೂಟರ್ ಹತ್ತಿದರೆ, ಕಚೇರಿಯ ಬಾಗಿಲಿನ ತನಕ ಹೋಗುತ್ತಾರೆ; ಹಗಲಿಡೀ ಕಚೇರಿಯಲ್ಲಿ ಒತ್ತಡಭರಿತ ವಾತಾವರಣದಲ್ಲಿ ಕೆಲಸ ಮಾಡುತ್ತಾರೆ; ಸಂಜೆ, ಆ ದಿನದ ಕೆಲಸ ಮುಗಿಸಿ, ಕಚೇರಿಯ ಬಾಗಿಲಿನಲ್ಲಿ ಸ್ಕೂಟರ್ ಹತ್ತಿ, ಮನೆಯ ಬಾಗಿಲಿನಲ್ಲಿ ಇಳಿಯುತ್ತಾರೆ! ಇಲ್ಲೆಲ್ಲೂ ವಾಕಿಂಗ್ ಅಥವಾ ದೈಹಿಕ ಚಟುವಟಿಕೆ ಇಲ್ಲವೇ ಇಲ್ಲ! ಆಧುನಿಕ ಜೀವನ ಶೈಲಿಯಿಂದ ಅಷ್ಟರ ಮಟ್ಟಿಗೆ ದೇಹಕ್ಕೆ ಸಹಜ ವ್ಯಾಯಾಮದ ಕೊರತೆಯಾಯಿತು.
- ಹಾಗಾಗಿ ವಾಕಿಂಗ್‌ಗೆ ಇಂದಿನ ದಿನಗಳಲ್ಲಿ ಬೇರೆಯದೇ ಸಮಯವನ್ನು ನಿಗದಿಮಾಡಿಕೊಳ್ಳಬೇಕಾಗಿದೆ. ಇದು ನಾವು ಒತ್ತಡ ಹೇರಿ ಮಾಡುವ ಒಂದು ಕಾರ್ಯ, ಆದರೂ ಇದನ್ನು ಮರೆತರೆ, ನಮ್ಮ ಹೃದಯದ ಕಾರ್ಯಕ್ಷಮತೆ ನಿಧಾನವಾಗಿ ಕುಸಿಯುತ್ತದೆ, ಇದರಲ್ಲಿ ಅನುಮಾನವೇ ಇಲ್ಲ! ದೈಹಿಕ ಚಟುವಟಿಕೆ ಇಲ್ಲದ ವ್ಯಕ್ತಿಗಳ ಆರೋಗ್ಯ ಹದಗೆಡುವುದು ಸಹಜ ಮತ್ತು ಸುಲಭ ಎಂಬುದು ವೈಜ್ಞಾನಿಕವಾಗಿಯೂ ಋಜುವಾತಾಗಿದೆ.

ಪರಿಹಾರವೇನು?

ಹೃದಯವನ್ನು ಕಾಪಾಡಿಕೊಳ್ಳಲು, ಪ್ರತಿದಿನ ದೈಹಿಕ ಚಟುವಟಿಕೆ ಬಹಳ ಮುಖ್ಯ. ದೇಹದ ಸದೃಢತೆಗೆ, ಕನಿಷ್ಠ 30 ನಿಮಿಷಗಳ ನಡಿಗೆ, ಯೋಗಾಭ್ಯಾಸ, ಸರಳ ವ್ಯಾಯಾಮ, ಉಸಿರಾಟದ ವ್ಯಾಯಾಮಗಳ ಮೊರೆ ಹೋಗುವುದು ಬಹಳ ಉತ್ತಮ. ಜಿಮ್ ವರ್ಕೌಟ್ ಇತ್ತೀಚಿಗೆ ಬಂದಿರುವ ಒಂದು ಯಾಂತ್ರಿಕ ಮತ್ತು ತಂತ್ರಜ್ಞಾನಾಧಾರಿತ ವ್ಯಾಯಾಮ. ಆದರೆ ಇದನ್ನು ಮಾಡಲು ಸಾಕಷ್ಟು ನಿಯಮಗಳಿವೆ, ಸಾಕಷ್ಟು ಸೌಕರ್ಯಗಳೂ ಬೇಕು, ಮುಖ್ಯವಾಗಿ ಜಿಮ್ ಮಾಡುವ ಸಾಧನಗಳ ಲಭ್ಯತೆಯೂ ಅಗತ್ಯ. ಎಲ್ಲವನ್ನೂ ಅರಿತರೂ ಇದು ಅವರವರ ಸಾಮರ್ಥ್ಯದ ಮೇಲೆ ಅವಲಂಬಿತವಾಗುತ್ತದೆ; ಜಿಮ್ ತರಬೇತಿಗೆ ಹೋಗುವವರು, ಸೂಕ್ತ ಶಿಫಾರಸಿನ ಮೇರೆಗೆ ಸೇವಿಸುವ ಪೌಷ್ಟಿಕಾಂಶದ ಪೇಯಗಳಿಂದಲೂ ಹಾನಿಯಾಗಬಹುದು ಎಂದು ಕೆಲವು ಅಧ್ಯಯನಗಳು ತಿಳಿಸಿವೆ. ಜಿಮ್ ಆಗಲಿ, ಬೇರಾವುದೇ ವ್ಯಾಯಾಮಗಳಾಗಲಿ, ಸರಾಸರಿ ವ್ಯಕ್ತಿಯು ಒಂದು ಗಂಟೆಯಿಂದ ಹೆಚ್ಚು ಮಾಡುವ ಅವಶ್ಯಕತೆ ಇರುವುದಿಲ್ಲ. ನುರಿತ ಗುರುಗಳಿಂದ ಯೋಗಾಭ್ಯಾಸದ ಪದ್ಧತಿಗಳನ್ನು ಕಲಿತು, ದಿನವೂ ಮಾಡುವುದು ಉತ್ತಮ ಅಭ್ಯಾಸಗಳಲ್ಲಿ ಒಂದು.

ಆಹಾರ ಪದ್ಧತಿ

ಧೂಮಪಾನ, ಮದ್ಯಪಾನ, ಜಂಕ್ ಆಹಾರಗಳಿಂದ ದೂರವಿರುವುದು ಅಗತ್ಯ; ಇದರಿಂದ ನಮ್ಮ ಹೃದಯವು ಸುಸ್ಥಿತಿಯಲ್ಲಿರುವುದು ಸುಲಭವಾಗುತ್ತದೆ. ಸರಳ ಮತ್ತು ಸಾತ್ವಿಕ ಆಹಾರವೇ ಶ್ರೇಷ್ಠವೆಂದು ತಿಳಿದರೆ ಆರೋಗ್ಯದಲ್ಲಿ ಸಮತೋಲನವಿರುತ್ತದೆ. ಆದರೆ ಈಗಾಗಲೇ ಹಲವು ವರ್ಷಗಳ ಜೀವನಶೈಲಿಯಿಂದ, ವ್ಯಾಯಾಮರಹಿತ ದಿನಚರಿಯಿಂದ, ಹೃದಯದ ಕಾರ್ಯಕ್ಷಮತೆ ಕುಸಿದಿದ್ದರೆ, ಅಂತಹ ಸಮಸ್ಯೆಗಳಿಗೆ ಇದು ಒಂದು ಅಳವಡಿಸಿಕೊಳ್ಳಬಹುದಾದ ಅಂಶವೇ ಹೊರತು ಅದರಿಂದಲೇ ಪರಿಹಾರವಲ್ಲ. ಆದರೆ ಇದರಿಂದ ಆರೋಗ್ಯವನ್ನು ತಕ್ಕಮಟ್ಟಿಗೆ ಕಾಪಾಡಿಕೊಳ್ಳಲು ಖಂಡಿತ ಸಾಧ್ಯ; ಹೆಚ್ಚಿನ ವಿಚಾರ ತಿಳಿಯಲು ತಜ್ಞವೈದ್ಯರ ಸಲಹೆ, ಮಾರ್ಗದರ್ಶನ ಖಂಡಿತಾ ಅಗತ್ಯ.

ದೇಹ ಬಾಹ್ಯವಾಗಿ ಪುಷ್ಟಿಯಾಗಿದ್ದರೆ ಸಾಕೆ? ಆಂತರಿಕ ಅಂಗಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ, ನಿರ್ವಹಿಸುವ ಸಾಮರ್ಥ್ಯದಲ್ಲಿವೆಯಾ ಎಂಬುದೂ ಮುಖ್ಯವಾಗಿರುತ್ತವೆ. ಮನಸ್ಸು ಹೇಳಿದಂತೆ ಕೇಳುವ ಸ್ಥಿತಿಯಲ್ಲಿ ದೇಹವಿದ್ದರೆ ಮಾಡುವ ಪ್ರತಿ ಕಾರ್ಯಗಳು ದೈಹಿಕ ಹಾಗೂ ಮಾನಸಿಕ ಕ್ರಿಯೆಗಳಿಗೆ ಆಘಾತವಾಗದಂತೆ ಮಾಡುತ್ತವೆ. ವಯಸ್ಸಿಗೆ ತಕ್ಕುದಾಗಿ ಆಹಾರ ಕ್ರಮಗಳು, ನಿದ್ರೆ, ವ್ಯಾಯಾಮ ಚಟುವಟಿಕೆಗಳು, ಆರೋಗ್ಯಕರ ಕಾರ್ಯಕ್ಷಮತೆಯಿದ್ದರೆ ಹೃದಯವನ್ನು ಜೋಪಾನವಾಗಿರಿಸಬಹುದು.

(ಈ ಬರಹದ ವಿಚಾರಗಳು ಸ್ವಯಂವೈದ್ಯವನ್ನು ಪ್ರೋತ್ಸಾಹಿಸುವುದಿಲ್ಲ. ಹೃದಯದ ಆರೋಗ್ಯವೂ ಸೇರಿದಂತೆ, ಯಾವುದೇ ಆರೋಗ್ಯದ ಸಮಸ್ಯೆಗಳು ಇದ್ದಲ್ಲಿ ತಜ್ಞವೈದ್ಯರ ಸಲಹೆ ಪಡೆಯುವುದು ಅತಿ ಅವಶ್ಯ.)

ಸರಳ ಆಹಾರ ನಮ್ಮದಾಗಲಿ!

» ಬಸವರಾಜ ಶಿವಪ್ಪ ಗಿರಗಾಂವಿ

ಮಾಧ್ಯಮಗಳಲ್ಲಿ ವರದಿಯಾಗುತ್ತಿರುವಂತೆ, ಕಿರಿಯ ವಯಸ್ಸಿನಲ್ಲಿ ಹಲವರು ಹೃದಯಾಘಾತಕ್ಕೆ ಒಳಗಾಗುತ್ತಿದ್ದಾರೆ. ಮಧುಮೇಹ ಸಮಸ್ಯೆ ಸಾಮಾನ್ಯ ಎನಿಸಿದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಈಚಿನ ದಶಕಗಳಲ್ಲಿ ಬದಲಾದ ಆಹಾರ ಪದ್ಧತಿ. ಜಂಕ್‌ಫುಡ್, ಸಕ್ಕರೆ ಮಿಶ್ರಿತ ಪಾನೀಯಗಳ ಸೇವನೆ ಅಧಿಕವಾಗಿದೆ; ದೈಹಿಕ ಶ್ರಮ ಕಡಿಮೆಯಾಗಿದೆ!

ಬಿಸಿರೊಟ್ಟಿ, ಪುಂಡಿಪಲ್ಯ, ಕೆಂಪು ಖಾರ ಮತ್ತು ಅದರಲ್ಲಿ ಒಂದಿಷ್ಟು ತುಪ್ಪ ಅಥವಾ ಬೆಣ್ಣೆ, ಅದರಂತೆ ಮುದ್ದೆ ಅಥವಾ ಬಿಸಿರೊಟ್ಟಿ ಬಳ್ಳೊಳ್ಳಿ–ಜೀರಿಗೆ ಮಿಶ್ರಿತ ಖಾರ ಹಾಗೂ ಬೆಣ್ಣೆ ಅಥವಾ ತುಪ್ಪದಿಂದ ಮಿಶ್ರಣ ಮಾಡಿದ ಮುಟಿಗಿ. ಜೋಳದ ನುಚ್ಚು ಹಾಗೂ ಕೆನೆಯಿಂದ ಕಡೆದ ತಕ್ಷಣ ದೊರೆಯುವ ತಾಜಾ ಮಜ್ಜಿಗೆಯ ಸ್ವಾಧ. ಇಂತಹ ಮಜ್ಜಿಗೆಯಲ್ಲಿಯೆ ನೆನೆಸಿದ ಕಡಕರೊಟ್ಟಿ. ಜೋಳ, ರಾಗಿ ಹಾಗೂ ಹುರುಳಿ ಧಾನ್ಯಗಳ ಅಂಬಲಿಗಳು. ಆಹಾ! ಇವುಗಳಲ್ಲಿ ಖಾದ್ಯ ತೈಲಗಳ ಬಳಕೆ ಕಡಿಮೆ; ಮಸಾಲೆಗಳಿಲ್ಲ, ಕೃತಕ ಬಣ್ಣಗಳಿಲ್ಲ ಹಾಗೂ ಅತಿಯಾದ ಖರ್ಚು ಸಹವಿಲ್ಲ. ಇವುಗಳಲ್ಲಿ ಆರೋಗ್ಯಕರ ಬದುಕಿಗೆ ಅವಶ್ಯವಿರುವ ಹಾಗೂ ಹವಾಮಾನಕ್ಕೆ ತಕ್ಕಂತಹ ಕಾರ್ಬೋಹೈಡ್ರೇಡ್, ಪ್ರೋಟೀನ್‌ಗಳು ಮತ್ತು ಖನಿಜಗಳು ಹೇರಳವಾಗಿವೆ. ಇವುಗಳನ್ನು ದಿನನಿತ್ಯ ತಿಂದು, ದೈಹಿಕ ಶ್ರಮದ ಕೆಲಸ ನಿರ್ವಹಿಸಿ ಕಣ್ತುಂಬ ನಿದ್ರಿಸುತ್ತಿದ್ದ ಹಿಂದಿನವರ ಬದುಕು ಹಿತವಾಗಿತ್ತು ಎಂಬುದು ವಿಶೇಷ.

ಕಳೆದ ಹಲವಾರು ವರ್ಷಗಳಿಂದ ಹೊಸ ರೋಗಗಳು ಮನುಕುಲದ ಬದುಕಿನಲ್ಲಿ ದಾಂಗುಡಿಯಿಡುತ್ತಿವೆ. ಇಂದಿನ ಕಾಲಘಟ್ಟದಲ್ಲಿ ಸಹನೆಯಿಲ್ಲದ ಒತ್ತಡಮಯ ಬದುಕು ಹೆಚ್ಚಾಗುತ್ತಿದೆ; ಎಳೆಯ ವಯಸ್ಸಿನಲ್ಲೇ ಹೃದಯಾಘಾತ, ಮಧುಮೇಹದ ಸಮಸ್ಯೆ ಕಾಡುತ್ತಿದೆ. ಇಂದಿನ ಬಹುತೇಕ ಜನತೆಯ ದೈನಂದಿನ ಬದುಕು ಮಾನಸಿಕ ಶ್ರಮದೊಂದಿಗೆ ಪ್ರಾರಂಭವಾಗಿ ಮಾನಸಿಕ ಶ್ರಮದಿಂದಲೆ ಕೊನೆಗೊಳ್ಳುತ್ತದೆ, ಹೊರತು ದೈಹಿಕ ಶ್ರಮವೇ ಇಲ್ಲದಂತಹ ಸ್ಥಿತಿ ಬಂದಿದೆ. ಇಂತಹ ಸಂದರ್ಭದಲ್ಲಿ ಉತ್ತಮ ಆರೋಗ್ಯಕ್ಕಾಗಿ ನಮ್ಮ ಆಹಾರವು ಪ್ರಮುಖ ಪಾತ್ರವಹಿಸುತ್ತದೆ ಎಂಬುದು ಅರಿವಿದ್ದರೂ, ಸುಲಭವಾಗಿ ಪಾಲಿಸಲಾಗದಿರುವುದು ದುರಂತ. ಬಾಯಿರುಚಿಯ ಮತ್ತು ಅವಸರದಲ್ಲಿ ಸವಿಯುವ ಆಹಾರಗಳು ಶರೀರವನ್ನು ನಾಶಗೊಳಿಸುತ್ತಿವೆ.

ಹಿಂದಿನ ತಲೆಮಾರಿನವರ ಆರೋಗ್ಯದ ಗುಟ್ಟು ಎಂದರೆ, ಇದ್ದುದರಲ್ಲಿಯೆ ತೃಪ್ತಿಪಡುವುದು, ಪ್ರತಿದಿನ ದೈಹಿಕ ಶ್ರಮ ಮಾಡುವುದು, ದೇಸಿ ಪದ್ಧತಿಯ ಆಹಾರಗಳನ್ನು ಸೇವಿಸುವುದು, ಬೇಗ ಮಲಗುವುದು ಹಾಗೂ ಬೇಗ ಏಳುವುದ! ಆದರೆ ಪ್ರಸ್ತುತ ದಿನಮಾನಗಳಲ್ಲಿ ಇವು ಪಾಲನೆಯಾಗುತ್ತಿಲ್ಲ, ಹೀಗಾಗಿ ಶರೀರದಲ್ಲಿನ ಅಂಗಗಳಿಗೆ ರೋಗಗಳು ಅಂಟಿಕೊಳ್ಳುತ್ತಿರುವುದು ಸಾಮಾನ್ಯವಾಗಿದೆ. ಚಿಕ್ಕವಯಸ್ಸಿನಲ್ಲಿ ಸಕ್ಕರೆ ಖಾಯಿಲೆ, ರಕ್ತದೊತ್ತಡ ಮತ್ತು ಹೃದ್ರೋಗದಂತಹ ತೊಂದರೆಗಳು ಉಂಟಾಗುತ್ತಿರುವುದಕ್ಕೆ ಮುಖ್ಯ ಕಾರಣವು ವ್ಯಾಯಾಮರಹಿತ ಜೀವನಶೈಲಿ ಮತ್ತು ಜಂಕ್ ಫುಡ್, ಸಕ್ಕರೆ ಮಿಶ್ರಿತ ಆಹಾರ ಎಂಬುದು ಋಜುವಾತಾಗಿದೆ.

ಇಂದಿನ ಅವೈಜ್ಞಾನಿಕ ತರಹೇವಾರಿ ಆಹಾರ ಪದಾರ್ಥಗಳು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ಗೊತ್ತಿದ್ದರೂ, ಅದರ ಬಳಕೆಯ ಪ್ರಮಾಣವು ಹೆಚ್ಚಾಗುತ್ತಿದೆ! ಇದಕ್ಕೆ ಮುಖ್ಯ ಕಾರಣ ಇಂದಿನ ಬಾಯಿರುಚಿಯ ಆಹಾರ ಪದ್ಧತಿ! ಇಂದು ಮುಂಜಾನೆ ಎಷ್ಟೋ ಜನರು ಊಟ ಅಥವಾ ಅಲ್ಪೋಪಹಾರವನ್ನೂ ಮಾಡುವುದಿಲ್ಲ; ಆರೋಗ್ಯಕ್ಕೆ ಹಾನಿಮಾಡಬಲ್ಲ ಸಕ್ಕರೆ ಮಿಶ್ರಿತ ಚಹಾ, ಕಾಫಿ, ಬಿಸ್ಕತ್ತು ಮೊದಲಾದವುಗಳನ್ನು ಸೇವಿಸುತ್ತಾರೆ! ಮಧ್ಯಾಹ್ನ ಹೊಟೇಲಿನ ತಿಂಡಿಯೊಂದಿಗೆ ಮುಗಿಸಿ, ರಾತ್ರಿ ಹೊತ್ತಿನಲ್ಲಿ ವೇಳೆಯ ಮಿತಿಯಿಲ್ಲದೆ ಮದ್ಯಪಾನ, ಧೂಮ್ರಪಾನ ಮತ್ತು ಅತಿಯಾದ ಮಸಾಲೆಯ ಮಾಂಸಾಹಾರವನ್ನು ಸೇವಿಸಿ ಮಲಗಿಕೊಳ್ಳುವುದು ಇಂದಿನ ಪಟ್ಟಣಗಳ ಹಲವು ಜನರ ದಿನಚರಿಯಾಗಿದೆ! ಮುಂಜಾನೆ ಏಳುವುದು ಒಂಬತ್ತು ಗಂಟೆಯ ನಂತರವಾದ್ದರಿಂದ ಮುಂಜಾನೆಯ ಆಹಾರವನ್ನು ತ್ಯಜಿಸಲಾಗುತ್ತಿದೆ! ಕಳೆದ ದಶಕದಿಂದ ಸಾಯಂಕಾಲದ ಸ್ನ್ಯಾಕ್ಸ್ ಹೆಸರಿನಲ್ಲಿ, ಸಕ್ಕರೆ, ಮಸಾಲೆ, ಉಪ್ಪು ಅಧಿಕ ಬಳಕೆಯ, ರುಚಿಕರ ಆಹಾರಗಳಿಂದ ಹೊಟ್ಟೆತುಂಬಿಸಲಾಗುತ್ತಿದೆ. ಇದು ಬಹಳ ಅನಾರೋಗ್ಯಕರ ಬೆಳವಣಿಗೆಯಾಗಿದೆ. ಮುಂಜಾನೆ ತಡವಾಗಿ ಏಳುವ ಹಾಗೂ ಮುಂಜಾನೆಯ ಆಹಾರ ತ್ಯಜಿಸುವ ವ್ಯಕ್ತಿಗಳು ಕ್ರಮೇಣ ಅನಾರೋಗ್ಯ ಪೀಡಿತರಾಗುತ್ತಿದ್ದಾರೆ.

ಇಂದು ದಿನನಿತ್ಯ ಗೋಧಿ ಮತ್ತು ಪಾಲಿಶ್ ಮಾಡಿದ ಅಕ್ಕಿಯ ಸೇವನೆ ಸಾಮಾನ್ಯವಾಗಿರುವುದು ದುರದೃಷ್ಟಕರವಾಗಿದೆ. ಹಿಂದೆ ಹೊಟೇಲ್ ಊಟವನ್ನು ವರ್ಷದಲ್ಲಿ ಒಂದೆರಡು ಸೇವಿಸಲಾ ಗುತ್ತಿತ್ತು; ಇಂದು ಅದು ವ್ಯಾಪಕವಾಗಿದೆ. ಪಟ್ಟಣಗಳಲ್ಲಿರುವ ಬಹುತೇಕ ಜನರು ದಿನನಿತ್ಯ ಒಂದಿಲ್ಲೊಂದು ಹೊಟೇಲ್ ತಿಂಡಿಯನ್ನು ತಿನ್ನುತ್ತಾರೆ! ಇದು ಆರೋಗ್ಯಕ್ಕೆ ಹಾನಿ ತರಬಲ್ಲದು. ಹಿಂದಿನ ಹಿರಿಯರ ದೇಸಿ ಆಹಾರಗಳೆಂದರೆ ಪ್ರತಿದಿನದ ಮೂರು ಹೊತ್ತಿನಲ್ಲಿ ವಿವಿಧ ರೊಟ್ಟಿ ಅಥವಾ ಮುದ್ದೆ, ನುಚ್ಚು (ಜೋಳ, ಗೋವಿನ ಜೋಳ) ಅಥವಾ ನೆವನಕ್ಕೆ ಆಹಾರ, ಕಾಯಿಪಲ್ಯ ಮತ್ತು ತೊಪ್ಪಲು ಪಲ್ಯಗಳು ಸಾಮಾನ್ಯವಾಗಿದ್ದವು; ದಿನವೂ ನಾಲ್ಕಾರು ಕಿ.ಮೀ. ನಡೆದಾಡುತ್ತಿದ್ದರು, ದೈಹಿಕ ಶ್ರಮ ಮಾಡುತ್ತಿದ್ದರು. ಆದ್ದರಿಂದ ಉತ್ತಮ ಬದುಕು, ಪರಿಶುದ್ಧ ಮನಸ್ಸು, ಗುಣಮಟ್ಟದ ಆರೋಗ್ಯಕ್ಕಾಗಿ ದೇಶೀಯ ಹಾಗೂ ಮೂಲ ಆಹಾರಗಳತ್ತ ಭಾರತೀಯರು ಮರಳಬೇಕು. ಇದನ್ನು ಎಲ್ಲರೂ ಅನುಸರಿಸಿದರೆ, ಕ್ರಮೇಣ ಎಳೆಯ ವಯಸ್ಸಿನ ಹೃದಯಾಘಾತ, ಮಧುಮೇಹ ಮತ್ತು ಇತರ ಆರೋಗ್ಯ ಸಮಸ್ಯೆಗಳು ಖಂಡಿತವಾಗಿಯೂ ಕಡಿಮೆಯಾಗುತ್ತವೆ.

ಸಣ್ಣ ಸಂಗತಿಗಳಿಂದ ಖುಷಿ ಹೇಗೆ ಸಿಗುತ್ತದೆ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಹನುಮಂತರಾಯ ಕುಂದಗೋಳ, ಹುಬ್ಬಳ್ಳಿ

- **ಸಂಪಾದಕರೇ, ನಿಮ್ಮ ಬರವಣಿಗೆಗಳನ್ನು ನಾನು ಕಳೆದ 20 ವರ್ಷಗಳಿಂದ ನಿರಂತರವಾಗಿ ಓದುತ್ತಾ ಬಂದಿದ್ದೇನೆ. ನಿಮ್ಮ ಕೆಲವು ಲೇಖನಗಳಲ್ಲಿ ಸಣ್ಣ ಸಣ್ಣ ಸಂಗತಿಗಳಿಂದ ಜೀವನದಲ್ಲಿ ಖುಷಿ ಅನುಭವಿಸಬಹುದು ಎಂದು ಬರೆದಿದ್ದೀರಿ. ನನ್ನ ಪ್ರಶ್ನೆ ಏನೆಂದರೆ, ಆ ರೀತಿಯ ಸಣ್ಣ ಸಣ್ಣ ಸಂಗತಿಗಳು ಯಾವುವು ಎಂಬುದನ್ನು ತಿಳಿಸಿಕೊಡುತ್ತೀರಾ?**

–ಹನುಮಂತರಾಯ ಅವರೇ, ಹೌದು, ನಾನು ಹತ್ತಾರು ಸಂದರ್ಭಗಳಲ್ಲಿ, ಜೀವನದಲ್ಲಿ ಸಂತೋಷ ಅಂದ್ರೆ, ಹಿಮಾಲಯ ಪರ್ವತದ ಮೇಲಿಲ್ಲ, ಅದು ದುಬೈ, ನ್ಯೂಯಾರ್ಕ್ ನಗರಗಳಲ್ಲಿ ಸಿಗುವಂಥದ್ದಲ್ಲ, ಅದು ಬಹಳ ದುಬಾರಿಯೂ ಅಲ್ಲ, ಅದು ನಮ್ಮ ಜತೆಯೇ ಇರುವಂಥದ್ದು, ಸಣ್ಣ ಸಣ್ಣ ಸಂಗತಿಗಳಲ್ಲಿ ಸಂತಸ ಇದೆ. ಅವನ್ನು ನಮ್ಮದಾಗಿಸಿಕೊಳ್ಳಬೇಕಷ್ಟೆ ಎಂದು ಬರೆದಿದ್ದೇನೆ. ಅದು ನನ್ನ ಅನುಭವವೂ ಹೌದು. ನಾನು ಅಂಥ ಸಂತಸಗಳನ್ನು ಎಂದೂ ತಪ್ಪಿಸಿಕೊಳ್ಳುವುದಿಲ್ಲ. ಇತ್ತೀಚೆಗೆ ನಾನು ನನ್ನ ಸ್ನೇಹಿತರೊಬ್ಬರ ಮನೆಗೆ ಹೋಗಿದ್ದೆ. ಅವರು ತಮ್ಮ ಬರೆಯುವ ಟೇಬಲ್ ಮೇಲೆ ಒಂದು ಮರದ ಗೊರಿಲ್ಲಾ ಗೊಂಬೆಯನ್ನು ಇಟ್ಟಿದ್ದರು. ತಕ್ಷಣ ಇದನ್ನು ಎಲ್ಲೋ ನೋಡಿದಂತಿದೆಯಲ್ಲ ಎಂದು ಅನಿಸಿತು. ಆಗ ಅವರು, ನೀವು ಸುಮಾರು ಹದಿನೈದು ವರ್ಷಗಳ ಹಿಂದೆ ನನಗೆ ಕೊಟ್ಟಿದ್ದಿರಿ. ಇದನ್ನು ನೀವು ರವಾಂಡದಿಂದ ತಂದಿದ್ದಿರಿ. ಅಂದು ನಾನು ನಿಮ್ಮ ಆಫೀಸಿಗೆ ಬಂದಿದ್ದೆ. ನೀವು ನನಗೆ ಇದನ್ನು ಕೊಟ್ಟಿರಿ. ಅಂದಿನಿಂದ ಇದನ್ನು ನನ್ನ ಟೇಬಲ್ ಮೇಲೆ ಇದೆ ಎಂದು ಹೇಳಿದರು.

ಈ ಗೊರಿಲ್ಲಾ ನೋಡಿದಾಗಲೆಲ್ಲ ನಿಮಗೆ ನನ್ನ ನೆನಪು ಬರುತ್ತಿರಬೇಕು, ಅಲ್ವಾ? ಎಂದು ಕೇಳಿದೆ. ಇಬ್ಬರೂ ಜೋರಾಗಿ ನಕ್ಕೆವು. ನಾನು ನೂರಾರು ಜನರಿಗೆ ಇದನ್ನು ತೋರಿಸಿ, ನಮ್ಮ ಭಟ್ರು ಕೊಟ್ಟಿದ್ದು ಎಂದು ಹೇಳಿದ್ದೇನೆ ಎಂದು ಎಂದರು. ನಾನು ಅವರಿಗೆ ಅದನ್ನು ಕೊಟ್ಟಿದ್ದು ಮರೆತೇ ಹೋಗಿತ್ತು. ಇದು ಎಷ್ಟು ಸಣ್ಣ ಸಂಗತಿ ಅಲ್ಲವಾ? ನನಗೆ ಖುಷಿಯಾಯಿತು. ಬೇರೆಯವರ ನೆನಪು, ಯೋಚನೆಗಳಲ್ಲಿ ನಾವು ನೆಲೆಸುವುದು ನಿಜಕ್ಕೂ ಖುಷಿ ಕೊಡುವ ವಿಷಯವೇ.

ಬೆಳಗ್ಗೆ ಎದ್ದು ಸುಮ್ಮನೆ ಮೂರು ನಿಮಿಷ ಸೂರ್ಯೋದಯವನ್ನು ವೀಕ್ಷಿಸಿ. ಶಾಂತ ಬೆಳಗಿನ ರಶ್ಮಿಗಳು ನಿಮ್ಮ ಮನಸ್ಸಿಗೆ ತಾಜಾತನ, ಶುದ್ಧತೆಯನ್ನು ನೀಡುತ್ತದೆ. ಇದಕ್ಕೆ ಏನಾದರೂ ಖರ್ಚಾಗುವುದಾ? ಉಹುಂ.. ಇಲ್ಲವೇ ಇಲ್ಲ. ಪ್ರೀತಿಪಾತ್ರ ಇಬ್ಬರು ವ್ಯಕ್ತಿಗಳಿಗೆ ಹಾಸ್ಯಭರಿತ ಅಥವಾ ತಮಾಷೆಯ ಸಂದೇಶವೊಂದನ್ನು ಕಳಿಸಿ. ನಿಮಗೂ ಸಂತೋಷ ಮತ್ತು ನಿಮ್ಮ ಸ್ನೇಹಿತರಿಗೆ ನಗೆ ಹಂಚಿದ ಸಂತಸ ನಿಮ್ಮದಾಗುತ್ತದೆ. ಇದಕ್ಕೂ ಏನೂ ಖರ್ಚಿಲ್ಲ. ಆ ಅಕ್ಷರ ನಗೆ ಇಡೀ ದಿನವನ್ನೇ ಪ್ರಕಾಶಮಾನಗೊಳಿಸಬಹುದು.

ಸುಮ್ಮನೆ ಆಕಾಶವನ್ನು ದಿಟ್ಟಿಸುತ್ತಾ ಚಹಾ ಅಥವಾ ಕಾಫಿ ಕುಡಿಯಿರಿ. ಅದರಲ್ಲೊಂದು ನೆಮ್ಮದಿ, ತಾತ್ಕಾಲಿಕ ತೃಪ್ತಿ ಸಿಗುತ್ತದೆ. ಬೆಳಗ್ಗೆ ಎದ್ದ ತಕ್ಷಣ ನಿಮಗಿಷ್ಟವಾದ ಸಂಗೀತಗಾರರ ಹಾಡನ್ನು ಐದು ನಿಮಿಷ ಕೇಳಿ. ಮನಸ್ಸು ಪ್ರಫುಲ್ಲಿತವಾಗುತ್ತದೆ.

ಯಾರಿಗಾದರೂ ಸಹಾಯ ಮಾಡಿ. ಅವರು ಧನ್ಯವಾದ ಹೇಳಿದಾಗ ನಿಮ್ಮ ಹೃದಯ ತುಂಬಿ ಬರದಿದ್ದರೆ ಕೇಳಿ. ಸುಮ್ಮನೆ ಹಾಡು ಕೇಳುತ್ತಾ ಕಿಟಕಿಯಿಂದ ಮಳೆಬಿಲ್ಲು ನೋಡಿ. ನಿಮ್ಮ ಚಿಂತೆಗಳೆಲ್ಲ ಮಾಯವಾಗಿರುತ್ತದೆ. ಅಲ್ಲಿ ಇರುವ ಸಮಾಧಾನ, ಮಂತ್ರಮುಗ್ಧ ಸಹಜತೆ ಸಂತೋಷದ ಮೂಲವಲ್ಲವೇ? ಇಸ್ತ್ರಿ ಮಾಡಿದ ಶರ್ಟಿನಲ್ಲಿರುವ ಹಳೆ ಪತ್ರಿಕೆಯ ತುಣುಕನ್ನು ಸುಮ್ಮನೆ ಓದಿ. ನಿಮಗೊಂದು ಹೊಸ ವಿಷಯ, ಹಳೆ ವಿಷಯದ ನೆನಪು ದಕ್ಕಬಹುದು. ಪುಟಾಣಿ ಮಗುವೊಂದು ನಿಮ್ಮ ಬೆರಳನ್ನು ಹಿಡಿದು ನಕ್ಕರೆ, ಅದರಿಂದ ನಿಮಗೆ ಸಿಗುವ ಸಂತೋಷಕ್ಕೆ ಬೆಲೆ ಕಟ್ಟಲಾದೀತೆ? ನಮ್ಮ ಜೀವನದಲ್ಲಿ ಯಾವತ್ತೂ ಲಾಟರಿ ಹೊಡೆಯುವುದಿಲ್ಲ. ನಿತ್ಯವೂ ನಮಗೆ ಸಂಬಳ ಜಾಸ್ತಿ ಆಗುವುದಿಲ್ಲ, ದಿನವೂ ಆಫೀಸಿನಲ್ಲಿ ಬಾಸ್ ಶಹಬ್ಬಾಸ್ ಎನ್ನುವುದಿಲ್ಲ. ಬದುಕಿನಲ್ಲಿ ನಿತ್ಯವೂ ದೊಡ್ಡ ಸಂಗತಿಗಳು ಜರುಗುವುದಿಲ್ಲ. ಹೀಗಾಗಿ ಸಣ್ಣ ಸಣ್ಣ ಸಂಗತಿಗಳಲ್ಲಿ ಸಂತಸಪಡುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು, ಅವು ಸಹ ನಮ್ಮ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತವೆ. ನಮಗೆ ಆ ಕ್ಷಣಕ್ಕೆ ಬೇಕಾದ ಕಿಕ್ ಕೊಡಬಲ್ಲವು. ಸಂತೋಷ ಎಂದರೆ ದೊಡ್ಡದ್ದರಿಂದ ಮಾತ್ರ ಬರುವುದಲ್ಲ. ಅದು ನಮ್ಮ ನಿತ್ಯ ಜೀವನದ ನಗು, ನೆಮ್ಮದಿ, ಸಹಾನುಭೂತಿ ಮತ್ತು ಕೃತಜ್ಞತೆಯಲ್ಲೂ ಇವೆ.

ಗುರುರಾಜ ಪಿ.ಕೆ., (ಇಮೇಲ್ ಮೂಲಕ)

- **ಭಟ್ರೇ, ಕೆಲ ದಿನಗಳ ಹಿಂದೆ, 'ವಿಶ್ವವಾಣಿ' ಪತ್ರಿಕೆಯಲ್ಲಿ ಷೇರು ಹೂಡಿಕೆಯಿಂದ ಹಣ ಮಾಡುವುದು ಹೇಗೆ? ಎಂಬ ಲೇಖನ ಓದಿ, ನಾನು ಹಣ ಹೂಡಿಕೆ ಮಾಡಿ, ಸುಮಾರು ಇಪ್ಪತ್ತು ಸಾವಿರ ರುಪಾಯಿ ಕಳೆದುಕೊಂಡೆ. ನನಗಾದ ಈ ನಷ್ಟವನ್ನು ನೀವು ಭರಿಸುತ್ತೀರಾ?**

–ಗುರುರಾಜ ಅವರೇ, ನಾನು ಆ ಲೇಖನವನ್ನು ಸಂಪೂರ್ಣವಾಗಿ ಓದಿಯೇ ಪ್ರಕಟಿಸಿದ್ದೇನೆ. ಆ ಲೇಖನದಲ್ಲಿ ಇಂಥದೇ ಸಂಸ್ಥೆಯ ಅಥವಾ ಕಂಪನಿಯ ಷೇರುಗಳನ್ನು ಖರೀದಿಸಿ ಎಂದು ಲೇಖಕರು ಹೇಳಿಲ್ಲ. ಆ ರೀತಿಯ ಶಿಫಾರಸುಗಳನ್ನು ನಾವು ಮಾಡುವುದೂ ಇಲ್ಲ. ಮಾರುಕಟ್ಟೆಯ ಟ್ರೆಂಡ್ ಹೇಗಿದೆ, ಯಾವ ರಂಗದ, ಕಂಪನಿಗಳ ಷೇರುಗಳು ಮಾರುಕಟ್ಟೆಯಲ್ಲಿ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆಯನ್ನು ಪಡೆದುಕೊಳ್ಳುತ್ತಿವೆ, ಷೇರುಗಳನ್ನು ಆಯ್ಕೆ ಮಾಡುವುದು ಹೇಗೆ ಎಂಬುದರ ಬಗ್ಗೆ ಮಾತ್ರ ಆ ಲೇಖನ ಸೀಮಿತವಾಗಿತ್ತು. ಇಂಥದೇ ಕಂಪನಿಯ ಷೇರುಗಳನ್ನು ಖರೀದಿಸಿ ಎಂದು ವಕಾಲತ್ ಮಾಡಲು ನಾವ್ಯಾರು? ಹೀಗಿರುವಾಗ ನೀವು ಹೂಡಿಕೆ ಮಾಡಿದ ಷೇರಿಗೆ ಉತ್ತಮ ಬೆಲೆ ಬರದಿದ್ದರೆ, ಆ ಮೂಲಕ ಹಣ ಕಳೆದುಕೊಂಡರೆ ಅದಕ್ಕೆ ನಾನು ಜವಾಬ್ದಾರಿನಲ್ಲ, ನೀವು ಷೇರಿನ ಮೇಲೆ ಹಣ ಹೂಡುವಾಗ ನನ್ನನ್ನು ಕೇಳಿದ್ದರೆ ಅದು ಬೇರೆ ಮಾತು. ಇಂಥದೇ ಷೇರು ಖರೀದಿಸಿ ಎಂದು ಹೇಳುವ ಷೇರು ತಜ್ಞರೂ ಸಹ ಹೊಣೆಗಾರಿಕೆ ಹೊರುವುದಿಲ್ಲ.

ಇಂಥ ಕುದುರೆ ಡರ್ಬಿ ರೇಸಿನಲ್ಲಿ ಎಲ್ಲಕ್ಕಿಂತ ಮುಂದೆ ಓಡಬಹುದು ಎಂದು ಉಳಿದ ಕುದುರೆಗಳ ಜತೆ ಹೋಲಿಸಿ ವಿಶ್ಲೇಷಣೆ ಮಾಡಿ ಬರೆಯುತ್ತೇವೆ. ಅದು ಆ ದಿನ ಆ ಕುದುರೆ ಮೊದಲ ಸ್ಥಾನ ಗಳಿಸಲು ವಿಫಲವಾಗಬಹುದು. ಭಟ್ರೇ, ಆ ಕುದುರೆ ಮೇಲೆ ಹಣ ಕಟ್ಟಿ ನಾನು ಹಣ ಕಳೆದುಕೊಂಡೆ, ಆ ಹಣವನ್ನು ನೀವು ಭರಿಸಬೇಕು ಅಂದಂಗಾಯ್ತು ನಿಮ್ಮ ಕತೆ. ಒಂದು ವೇಳೆ ಆ ಕುದುರೆ ಜಾಕ್ ಪಾಟ್ ಹೊಡೆಯಿತು ಎನ್ನಿ. ಆಗ ನೀವು ಹೇಳಿದ್ದರಿಂದಲೇ ನಾನು ಆ ಕುದುರೆ ಮೇಲೆ ಹಣ ಕಟ್ಟಿದೆ. ನನಗೆ ಎರಡು ಲಕ್ಷ ಬಂತು. ಭಟ್ರೇ, ನೀವು ಒಂದು ಲಕ್ಷ ಇಟ್ಟುಕೊಳ್ಳಿ ಅಂತ ನೀವು ಹೇಳ್ತಾ ಇದ್ರಾ? ಹೇಳಿ. ಇಲ್ಲ ತಾನೇ?

ನಮ್ಮ ಪತ್ರಿಕೆಯಲ್ಲಿ ಜೀವನದಲ್ಲಿ ಸಂತೋಷ ಪಡುವುದು ಹೇಗೆ? ನಿತ್ಯ ಆನಂದ ಗಳಿಸುವುದು ಹೇಗೆ? ಉತ್ತಮ ಮನುಷ್ಯನಾಗುವುದು ಹೇಗೆ? ಮುಂತಾದ ಲೇಖನಗಳನ್ನೂ ಪ್ರಕಟಿಸಿದ್ದೇವೆ. ಆ ಲೇಖನವನ್ನು ಓದಿಯೇ ನೀವು ಉತ್ತಮ ಮನುಷ್ಯರಾಗಿದ್ದೀರಿ. ಅದಕ್ಕಾಗಿ ಇದು ನಮ್ಮ ಫೀಸು ಎಂದು ಹೇಳಿ ಬಿಲ್ ಕಳುಹಿಸಿದರೆ, ಕೊಡ್ತೀರಾ?

ಇರಲಿ, ನೀವು ಹಣ ಕಳೆದುಕೊಂಡಿರುವುದಕ್ಕೆ ನನ್ನ ವಿಷಾದವಿದೆ. ನಾವು ಏನನ್ನಾದರೂ ಎಲ್ಲಿ ಕಳೆದುಕೊಂಡಿದ್ದೇವೋ, ಅಲ್ಲಿಯೇ ಪಡೆಯಬೇಕು. ಇಪ್ಪತ್ತು ಸಾವಿರ ರುಪಾಯಿ ಬಹಳ ದೊಡ್ಡ ಮೊತ್ತವೇನಲ್ಲ. ಧೈರ್ಯ ಕಳೆದುಕೊಳ್ಳಬೇಡಿ. ಏಕೆಂದರೆ ಹಣ ಕಳೆದುಹೋದರೂ, ಅನುಭವ ದೊರೆತಿದೆ.ನೀವು ಮೊದಲಿಗಿಂತ ಹೆಚ್ಚು ಬುದ್ಧಿವಂತರಾಗಿದ್ದೀರಿ. ಹಣ ಕಳೆದುಕೊಳ್ಳುವುದರಿಂದಲೂ ಶ್ರೀಮಂತರಾಗಬಹುದು. ಕಳೆದುಕೊಂಡ ಹಣವನ್ನು ವಾಪಸ್ ಪಡೆಯಬಹುದು.

ಉಮೇಶ ಹೂಗಾರ, ಬೆಳಗಾವಿ

- **ಸಂಪಾದಕರೇ, ನನಗೆ 47 ವರ್ಷ ವಯಸ್ಸು. ನಾನು ಜೀವನದಲ್ಲಿ ಯಾವ ತಪ್ಪನ್ನು ಮಾಡಿದ್ದೆನೋ ಗೊತ್ತಿಲ್ಲ, ನನಗಿನ್ನೂ ಮದುವೆ ಆಗಿಲ್ಲ. ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದೇನೆ. ನಿನಗೆ ಈ ಜನ್ಮದಲ್ಲಿ ಮದುವೆ ಇಲ್ಲ ಎಂದು ನನ್ನ ಸ್ನೇಹಿತರು ಹೇಳುತ್ತಾರೆ. ಇದು ನಿಜವಾ? ಒಂದು ವೇಳೆ ಮದುವೆಯೇ ಆಗದಿದ್ದರೆ, ನಾನು ನನ್ನ ಮುಂದಿನ ಜೀವನವನ್ನು ಹೇಗೆ ಸಾಗಿಸಬೇಕು? ದಯವಿಟ್ಟು ನನಗೆ ಮಾರ್ಗದರ್ಶನ ಮಾಡಿ.**

–ಉಮೇಶ ಅವರೇ, ನಿಮ್ಮ ಮನದ ಮಾತು ಇಷ್ಟು ಪ್ರಾಮಾಣಿಕವಾಗಿ ಹಂಚಿಕೊಂಡಿದ್ದೀರಿ. ಇದು ಸುಲಭವಾಗಿ ಹೇಳಿಕೊಳ್ಳಲಾಗದ ವಿಷಯ. ಮದುವೆ ಅಂದರೆ ವೈಯಕ್ತಿಕ ಆಯ್ಕೆ. ಹಾಗಂತ ಅದು ಕಡ್ಡಾಯ ಅಲ್ಲ. ಜೀವನದಲ್ಲಿ ಮದುವೆಯಾಗದಿದ್ದರೆ ಅದು ಅಸಹಜವೂ ಅಲ್ಲ, ಅಪರಾಧವೂ ಅಲ್ಲ. ಅದೆಷ್ಟೋ ಸನ್ಯಾಸಿಗಳು, ದಾರ್ಶನಿಕರು, ತತ್ವಜ್ಞಾನಿಗಳು, ಮಹಾಪುರುಷರು ಜೀವನದಲ್ಲಿ ಮದುವೆಯಾಗಿಲ್ಲ. ಜೀವನದಲ್ಲಿ ವೈಯಕ್ತಿಕ ಸಾಧನೆಗೂ, ವಿವಾಹಕ್ಕೂ ಸಂಬಂಧವೇ ಇಲ್ಲ. ಐಸಾಕ್ ನ್ಯೂಟನ್, ಡಾ.ಅಬ್ದುಲ್ ಕಲಾಂ, ಅಟಲ್ ಬಿಹಾರಿ ವಾಜಪೇಯಿ, ಮಮತಾ ಬ್ಯಾನರ್ಜಿ, ಜಯಲಲಿತಾ, ಮಾಯಾವತಿ, ಲತಾ ಮಂಗೇಶ್ಕರ್, ಸ್ವಾಮಿ ರಾಮದೇವ್, ಆಚಾರ್ಯ ಬಾಲಕೃಷ್ಣ, ಅಣ್ಣಾ ಹಜಾರೆ, ರತನ್ ಟಾಟಾ, ನಟಿ ರೇಖಾ, ತಬು, ಸುಶ್ಮಿತಾ ಸೆನ್, ಓಪ್ರಾಹ್ ವಿನ್ಪ್ರೆ... ಮುಂತಾದವರು ಮನಸ್ಸು ಮಾಡಿದ್ದರೆ ಅವರನ್ನು ವರಿಸಲು ಯಾರು ಬೇಕಾದರೂ ಮುಂದೆ ಬರುತ್ತಿದ್ದರು. ಪ್ರಧಾನಿ ನರೇಂದ್ರ ಮೋದಿಯವರು ಮದುವೆಯಾಗಿಯೂ, ಮದುವೆ ಆಗದವರಂತೆ ಜೀವನ ಕಳೆದಿಲ್ಲವೇ? ಅದರಿಂದ ಅವರ ವೈಯಕ್ತಿಕ ಸಾಧನೆಗೆ ಸ್ವಲ್ಪವೂ ಧಕ್ಕೆಯಾಗಿಲ್ಲವಲ್ಲ?

ಮದುವೆ ಆಗಿಲ್ಲ ಎಂದ ಮಾತ್ರಕ್ಕೆ ನೀವೇನೋ ತಪ್ಪು ಮಾಡಿದ್ದೀರಿ ಅಥವಾ ನಿಮ್ಮಲ್ಲಿ ಏನೋ ಐಬು ಇದೆ ಎಂದು ಭಾವಿಸಬೇಕಿಲ್ಲ. ಕೆಲವರು ಮದುವೆ ಆಗಿ ಸಂತೋಷವಾಗಿರುತ್ತಾರೆ, ಇನ್ನು ಕೆಲವರು ಮದುವೆಯಾಗದೇ ತಮ್ಮ ಜೀವನವನ್ನು ಸಮೃದ್ಧಗೊಳಿಸಿಕೊಂಡಿರುತ್ತಾರೆ. ನೀವು ಯಾವ ತಪ್ಪನ್ನೂ ಮಾಡಿಲ್ಲ. ನಿಮ್ಮ ಅರ್ಧ ಆಯುಷ್ಯವನ್ನು ಮದುವೆಯಾಗದೇ ಕಳೆದಿದ್ದೀರಿ. ನಿಮ್ಮ ಆತ್ಮಸಂತಸವನ್ನು ಮದುವೆಯ ಹೊರಗಿನ ಮಾರ್ಗದಿಂದ ಕಂಡುಕೊಂಡಿದ್ದೀರಿ. ಮದುವೆ ಆಗದಿದ್ದರೆ, ಅದು ಆಗಿಲ್ಲ ಎಂಬುದೊಂದೇ ಚಿಂತೆ; ಮದುವೆ ಆದರೆ ನೂರೆಂಟು ಚಿಂತೆ ಎಂಬ ಮಾತನ್ನು ಕೇಳಿರಬಹುದು. ಮದುವೆಯಾದರೆ ಮಕ್ಕಳು, ಅವರ ಶಿಕ್ಷಣ, ಅವರ ಮದುವೆ, ಮೊಮ್ಮಕ್ಕಳು.. ಹೀಗೆ ಸಂಸಾರ ಬೆಳೆಯುತ್ತಲೇ ಹೋಗುತ್ತದೆ. ಸಂಸಾರ ತಾಪತ್ರಯಗಳಲ್ಲಿ ನೀವು ಹಣ್ಣಾಗಿಬಿಡುತ್ತೀರಿ. ಈಗ ಹಾಗಲ್ಲ. ನೀವು ಒಬ್ಬರೇ ಹಾಯಾಗಿದ್ದೀರಿ. ಅದನ್ನು ನೋಡಲಾಗದ ನಿಮ್ಮ ಸ್ನೇಹಿತರು, ನಿನಗೆ ಈ ಜನ್ಮದಲ್ಲಿ ಮದುವೆ ಇಲ್ಲ ಎಂದು ವ್ಯಂಗ್ಯವಾಡುತ್ತಿರಬಹುದು. ಅಷ್ಟಕ್ಕೂ ಅದು ವ್ಯಂಗ್ಯವಲ್ಲ, ಅಸೂಯೆ.

ಒಂದು ವೇಳೆ ನಿಮಗೆ ಮದುವೆ ಯೋಗ ಇಲ್ಲ ಎನ್ನಿ, ಅದಕ್ಕೆ ಬೇಸರ ಮಾಡಿಕೊಳ್ಳಬೇಕಿಲ್ಲ. ನಿಮ್ಮ ಬದುಕಿಗೆ ವಿಶೇಷ ಅರ್ಥ ಮತ್ತು ಉದ್ದೇಶವನ್ನು ಹೊಂದಲು ಪ್ರಯತ್ನಿಸಿ. ನೀವು ಉದ್ಯೋಗದಲ್ಲಿದ್ದೀರಿ. ಉತ್ತಮ ಜೀವನ ಶೈಲಿ, ಸ್ವಂತ ಹವ್ಯಾಸ, ಆಸಕ್ತಿ, ಸಮಾಜದ ಸೇವೆ, ಕಲಿಕೆಗೆ ನೀವು ತೆರೆದುಕೊಳ್ಳಬಹುದು. ಒಂಟಿತನವಲ್ಲ, ಏಕಾಂಗಿತನವನ್ನು ನಿಮ್ಮ ಸಂಪತ್ತು ಎಂದು ಭಾವಿಸಿ. ನಾನು ಒಬ್ಬನೇ ಎನ್ನುವ ಬದಲು ನಾನು ನನ್ನ ಸಮಯದ ಮಾಲೀಕ ಎಂಬ ಭಾವನೆಯಿಂದ ಬದುಕಿ. ಪುಸ್ತಕ ಓದಿ, ಪ್ರವಾಸ ಹೋಗಿ, ಹೊಸ ಅಭಿರುಚಿ ಬೆಳೆಸಿಕೊಳ್ಳಿ. ನಿಮಗೆ ನೀವೇ ಉತ್ತಮ ಗೆಳೆಯರಾಗಿ.

ಪರಿವಾರ, ಗೆಳೆಯರು, ಸಹೋದ್ಯೋಗಿಗಳು ಮುಂತಾದವರೊಂದಿಗೆ ಉತ್ತಮ ಸಂಬಂಧ ಬೆಳೆಸುವುದು ಬಹುಮುಖವಾಗಿರುವ ಮದುವೆಗಿಂತಲೂ ಸಂತೋಷ ತರಬಲ್ಲದು. ಆಧ್ಯಾತ್ಮದೆಡೆಗೆ ಒಲವಿದ್ದರೆ, ಮದುವೆಯಿಲ್ಲದ ಜೀವಿತವೂ ಸಮೃದ್ಧವಾಗಬಹುದು. ಧ್ಯಾನ, ಪ್ರಾರ್ಥನೆ, ಸಾಧನೆ ಇವು ಮನಸ್ಸಿಗೆ ದಿಕ್ಕು ನೀಡುತ್ತವೆ. ಅನಾಥ ಮಕ್ಕಳಿಗೆ ಸಹಾಯಮಾಡಿ, ವೃದ್ಧಾಶ್ರಮಕ್ಕೆ ಭೇಟಿ ನೀಡಿ, ಬೇರೆಯವರ ಜೀವನದಲ್ಲಿ ನೆಲೆಸುವುದರಿಂದ ಹೆಚ್ಚಿನ ಆತ್ಮತೃಪ್ತಿ ಪಡೆಯಬಹುದು. ಹೀಗೆ ಮಾಡಿದರೆ, ಜೀವನದ ಉದ್ದೇಶ ಮತ್ತಷ್ಟು ಉಜ್ವಲವಾಗುತ್ತದೆ.

ಮದುವೆಯಿಲ್ಲದ ಬದುಕು 'ಅಪೂರ್ಣ' ಅಲ್ಲ. ಅದು ಸಹ ಅನನ್ಯವೇ. ನಿಮ್ಮ ಬದುಕು ಇನ್ನೂ ಬದಲಾಯಿಸಬಹುದಾದ ಬಣ್ಣಗಳಿರುವ ಚಿತ್ರ. ಜೀವನದಲ್ಲಿ ಒಂದು ಬಾಗಿಲು ಮುಚ್ಚಿದರೆ ಮತ್ತೊಂದು ಬಾಗಿಲು ತೆರೆದುಕೊಳ್ಳುತ್ತದೆ. ನಾನೊಬ್ಬ ವಿಶೇಷ ವ್ಯಕ್ತಿ ಎಂದು ಭಾವಿಸಿ. ನಿಮ್ಮ ಉದ್ದೇಶ, ಶಕ್ತಿ ಹಾಗೂ ಆತ್ಮವಿಶ್ವಾಸ ನಿಮ್ಮ ನಿಜವಾದ ಸಂಗಾತಿ. ಈ ಮಧ್ಯೆ, ನಿಮಗಾಗಿ ಯಾರೋ ಇಷ್ಟು ವರ್ಷಗಳಿಂದ ಕಾಯುತ್ತಲೂ ಇರಬಹುದು. Being single is pretty good. It's just like being married, but without the spouse ಎಂಬ ಮಾತನ್ನು ಕೇಳಿರಬಹುದು. ಹಾಗೆಯೇ I am not single, I'm just romantically challenged. ಹಾಗೆಯೇ ಇನ್ನೊಂದು ಮಾತನ್ನು ಕೇಳಿರಬಹುದು – I'm single, so I have more time to focus on myself. ನಾಣ್ಯ ಹೇಗೆ ಬಿದ್ದರೂ, ನಿಮ್ಮಕೈ ಮೇಲು ಎಂಬುದು ಗೊತ್ತಿರಲಿ.

ಅರವಿಂದ ಬಾಣಲಿ, ಬೆಂಗಳೂರು

- **ಭಟ್ರೇ, ನನ್ನ ಅಪ್ಪ ನಾನು ಏನು ಹೇಳಿದರೂ ಕೊಡಿಸುತ್ತಾರೆ. ಅವರಿಗೆ ಹಣಕ್ಕೆ ಕೊರತೆಯಿಲ್ಲ. ನಾನೊಂದು ದುಬಾರಿ ಕ್ಯಾಮೆರಾ ಖರೀದಿಸಬೇಕೆಂದಿರುವೆ. ಯಾವ ಬ್ರಾಂಡಿನ ಕ್ಯಾಮೆರಾ ಖರೀದಿಸಲಿ?**

–ಅರವಿಂದ ಅವರೇ, ಮೊದಲು, ನೀವು ಉತ್ತಮ ಫೋಟೋಗ್ರಾಫರ್ ಆಗುವುದು ಮುಖ್ಯ. ಅದಕ್ಕೆ ಕ್ಯಾಮೆರಾ ಒಂದೇ ಮುಖ್ಯ ಅಲ್ಲ. ನನ್ನ ಅನೇಕ ಸ್ನೇಹಿತರ ಬಳಿ ಉತ್ತಮ ಮತ್ತು ಬೆಲೆ ಬಾಳುವ ಕ್ಯಾಮೆರಾಗಳಿವೆ.

ಆದರೆ ಅವರು ಕೆಟ್ಟ ಫೋಟೋ ತೆಗೆಯುವುದರಲ್ಲಿ ನಿಸ್ಸೀಮರು. ಒಳ್ಳೆಯ ಫೋಟೋ ತೆಗೆಯಲು ಕಣ್ಣು ಮತ್ತು ಮನಸ್ಸು ಮುಖ್ಯ. ನರಳು ಮತ್ತು ಬೆಳಕಿನ ಜ್ಞಾನವೂ ಮುಖ್ಯ. ಅಪ್ಪನ ಹಣವನ್ನು ಹುಡಿ ಮಾಡಬೇಕು ಎಂಬುದೇ ನಿಮ್ಮ ಧ್ಯೇಯವಿದ್ದಂತಿದೆ. ಹಾಗಿದ್ದರೆ ಸೋನಿ ಕಂಪನಿಯ ಅಲ್ಫಾ ಸೀರಿಸ್‌ನಲ್ಲಿರುವ ಹೈ ರೇಂಜ್ ಕ್ಯಾಮೆರಾ ಖರೀದಿಸಿ.

ಶೈಲಜಾ, (ಇಮೇಲ್ ಮೂಲಕ)

- **ಭಟ್ರೇ, ನನಗೆ ಇಪ್ಪತ್ತೆರಡು ವರ್ಷ ವಯಸ್ಸು. ಇನ್ನೂ ಓದುತ್ತಿದ್ದೇನೆ. ಮುಖದ ತುಂಬಾ ಮೊಡವೆಗಳು. ಸೆಲ್ಫಿ ತೆಗೆಯಲು ಮನಸಾಗುವುದಿಲ್ಲ. ನನ್ನ ಸ್ನೇಹಿತೆಯರು ದಿನವೂ ಹತ್ತಾರು ಸೆಲ್ಫಿ ತೆಗೆದು ನನಗೆ ಕಳಿಸುತ್ತಾರೆ. ಅಷ್ಟೇ ಅಲ್ಲ, ಸೋಷಿಯಲ್ ಮೀಡಿಯಾದಲ್ಲಿ ಅಪ್ಲೋಡ್ ಮಾಡುತ್ತಾರೆ. ಆದರೆ ನನಗೆ ಈ ಅದೃಷ್ಟ ಇಲ್ಲವಲ್ಲ ಎಂದು ಬೇಸರವಾಗುತ್ತಿದೆ. ನನಗೆ ನಿಮ್ಮ ಸಲಹೆ ಬೇಕು ಸಾರ್.**

–ಶೈಲಜಾ ಅವರೇ, ನೀವು ಹಂಚಿಕೊಂಡಿರುವ ವಿಷಯ ತೀರಾ ಗಹನವಾದುದಲ್ಲ. ಇದು ಈ ವಯಸ್ಸಿನಲ್ಲಿ ಸಹಜ. ಅದಕ್ಕೆ ನೀವು ಖಿನ್ನಮನಸ್ಕರಾಗಬೇಕಿಲ್ಲ. ನನಗೆ ಉತ್ತಮ ಚಪ್ಪಲಿ, ಶೂ ಇಲ್ಲ ಎಂದು ಪರಿತಪಿಸುವವನಿಗೆ, ಕಾಲುಗಳೇ ಇಲ್ಲದ ವ್ಯಕ್ತಿಯನ್ನು ನೋಡಿದಾಗ ಏನು ಅನುಭವಿಸಬಹುದು ಎಂದು ಯೋಚಿಸಿದ್ದೀರಾ? ಒಂದು ಕ್ಷಣ ನಿಮ್ಮನ್ನು ಅಂಥ ಕ್ಷಣದಲ್ಲಿ ಚಿತ್ರಿಸಿಕೊಳ್ಳಿ. ಆಗ ಚಪ್ಪಲಿ ಇಲ್ಲದಿದ್ದರೆ ಏನಾಯ್ತು ಎಂದು ಸಮಾಧಾನ ಮಾಡಿಕೊಳ್ಳುತ್ತೀರಿ. ನಿಮ್ಮ ಚರ್ಮ ನಿಮ್ಮ ವ್ಯಕ್ತಿತ್ವ, ಯೋಗ್ಯತೆಯನ್ನು ನಿರ್ಧರಿಸುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಿ. ಅಷ್ಟಕ್ಕೂ ನೀವು ರೂಪದರ್ಶಿಯಾಗ ಬಯಸಿದ್ದೀರಾ?

ಮೊಡವೆ ಸಮಸ್ಯೆ ನಿವಾರಣೆಗೆ ಚರ್ಮ ತಜ್ಞರನ್ನು ಭೇಟಿಯಾಗಿ ತಜ್ಞ ಸಲಹೆ ಪಡೆದುಕೊಳ್ಳುವುದು ಒಳ್ಳೆಯದು. ಮೊಡವೆಗಳು ಗಂಭೀರವಾಗಿದ್ದರೆ, ವೈದ್ಯಕೀಯ ಸಲಹೆ ಬಹಳ ಅಗತ್ಯ. ಒಬ್ಬ ಡರ್ಮಟಾಲಜಿಸ್ಟ್ (ಚರ್ಮ ತಜ್ಞ) ನಿಮಗೆ ಸೂಕ್ತ ಔಷಧ, ಮುಖದ ಕ್ಲೀನರ್ ಮತ್ತು ಚರ್ಮಕ್ಕೆ ತಕ್ಕ ಪರಿಹಾರ ಸೂಚಿಸಬಹುದು. ಕೆಲವು ವೇಳೆ ಇದು ಹಾರ್ಮೋನಲ್ ಸಮಸ್ಯೆಯೂ ಆಗಿರಬಹುದು. ಸಾಧ್ಯವಾದರೆ ಮೃದುವಾದ ಫೇಸ್ ವಾಶ್ ಬಳಸಿ. ದಿನಕ್ಕೆ ಮೂರ್ನಾಲ್ಕು ಬಾರಿ ಮುಖ ತೊಳೆಯಿರಿ. ಹಾಸಿಗೆ ಹೊದಿಕೆ, ಹ್ಯಾಂಡ್ ಟವೆಲ್ ಇತ್ಯಾದಿಗಳನ್ನು ಶುಚಿಯಾಗಿಟ್ಟುಕೊಳ್ಳಿ. ಅತಿಯಾದ ಸ್ಪೈಸಿ ಅಥವಾ ಎಣ್ಣೆ ಪದಾರ್ಥ ಸೇವನೆ ಕಡಿಮೆ ಮಾಡಿ. ಹೆಚ್ಚು ನೀರು ಕುಡಿಯುವುದು, ಹಣ್ಣುಗಳ ಸೇವನೆ ಹೆಚ್ಚಿಸುವುದು ಸಹಕಾರಿ. ಮಾಸ್ಕ್ ಮತ್ತು ಮೇಕಪ್ ಕಡಿಮೆ ಬಳಸಿ. ಮಾಸ್ಕ್‌ನಿಂದ ತ್ವಚೆಗೆ ಒತ್ತಡ ಬೀಳಬಹುದು. ಹೆಚ್ಚಿನ ಮೇಕಪ್ ಸಹ ರಂಧ್ರಗಳನ್ನು ಮುಚ್ಚಿ ಮೊಡವೆ ಹೆಚ್ಚಿಸಬಹುದು.

ನಿಮ್ಮ ನಿಜವಾದ ಸೌಂದರ್ಯ ನಿಮ್ಮ ನಗೆಯಲ್ಲಿ, ವ್ಯಕ್ತಿತ್ವದಲ್ಲಿ, ಸಾಧನೆಯಲ್ಲಿ ಹಾಗೂ ನಿಮ್ಮ ಉದ್ದೇಶಗಳಲ್ಲಿ ಇರುತ್ತದೆ. ಸೆಲ್ಫಿಯಲ್ಲಿ ಮೊಡವೆ ಕಾಣಬಹುದು, ಆದರೆ ನಿಮ್ಮ ಹೃದಯದ ಆತ್ಮವಿಶ್ವಾಸ ಮಾತ್ರ ಫಿಲ್ಟರ್‌ಗಳಿಂದ ಮುಚ್ಚಲಾಗದು. ದಯವಿಟ್ಟು ಸೋಷಿಯಲ್ ಮೀಡಿಯಾ ಹೋಲಿಕೆಗೆ ಬಲಿಯಾಗಬೇಡಿ. ನಿಮ್ಮ ಸ್ನೇಹಿತೆಯರು ಹಾಕಿದ ಸೆಲ್ಫಿಗಳು 10 ಫಿಲ್ಟರ್‌ಗಳ, 30 ಲೈಕ್ಸ್ ಮತ್ತು 5 ಕಾಮೆಂಟ್‌ಗಳ ನಾಟಕದ ಫಲ. ನೀವು ನಿಜವಾಗಿರುವಿರಿ. ನಿಜವಾದವರು ಹೆಚ್ಚು ಶಕ್ತಿಶಾಲಿ. ನಿಮ್ಮ ಈಗಿನ ಸ್ಥಿತಿ ಕೂಡ ಕಾಲಕಳೆದಂತೆ ಬದಲಾಗುತ್ತದೆ. ಮೊಡವೆಗಳ ಜೀವಿತ ಅವಧಿ ಹೆಚ್ಚಲ್ಲ. ಕೆಲವು ತಿಂಗಳುಗಳಲ್ಲಿ ಅಥವಾ ಒಂದೆರಡು ವರ್ಷಗಳಲ್ಲಿ, ನೀವು ಕೂಡ ಸೆಲ್ಫಿ ಕಳುಹಿಸಬಹುದು. ನೀವು ಬಾಳಲ್ಲಿ ಸಾಧಿಸಬಹುದಾದ ಸಾಮರ್ಥ್ಯ ನಿಮ್ಮ ಮುಖದ ಚರ್ಮದಿಂದ ನಿರ್ಧಾರವಾಗುವುದಿಲ್ಲ. Dear pimples, if you are going to live on my face, I need to see some rent ಎಂದು ನಿಮ್ಮನ್ನೇ ನೋಡಿ ತಮಾಷೆ ಮಾಡಿಕೊಳ್ಳಿ. Even my skin has a sense of humor ಎಂದು ಸ್ನೇಹಿತೆಯರ ಮುಂದೆ ನಿಮ್ಮನ್ನೇ ಗೇಲಿ ಮಾಡಿಕೊಳ್ಳಿ.